# ಮೈಸೂರ ಮಲ್ಲಿಗೆ

ಚಿತ್ರಕಥೆ

(ನಿರ್ದೇಶಕರ ಟಿಪ್ಪಣಿ ಮತ್ತು ಚಿತ್ರೀಕರಣದ ವಿವರಗಳೊಂದಿಗೆ)

ನಿರ್ದೇಶನ

**ಟಿ.ಎಸ್. ನಾಗಾಭರಣ**

ಚಿತ್ರಕಥೆ

**ಟಿ.ಎಸ್.ನಾಗಾಭರಣ**

**ಸಿ. ಅಶ್ವಥ್**

**ಬಸವರಾಜು**

Sirivara

ಸಿರಿವರ ಪ್ರಕಾಶನ

ಮೈಸೂರ ಮಲ್ಲಿಗೆ: ಚಿತ್ರಕಥೆ
(ನಿರ್ದೇಶಕರ ಟಿಪ್ಪಣಿ ಮತ್ತು ಚಿತ್ರೀಕರಣದ ವಿವರಗಳೊಂದಿಗೆ)
**Mysore Mallige**
Writer : **T.S. Nagabharana**
"Shruthalaya" No. 61,
3rd Cross, S.B.M. Colony
Bangalore - 560 050, Mob: 9845277408
E-mail: shruthalaya@gmail.com

---

Published by **Sirivara Prakashana**
No. M37/B, 8th Crosss
Lakshminarayanapura, Bangalore - 560 021
Mob: 98441 09706 - email -ravisirivara@gmail.com
www.sirivaraculturalacademy.blogspot.com

---

| | |
|---|---|
| Pages | : 176 |
| Price | : Rs.135/- |
| Fist Impression | : 2015 |
| Copies | : 1000 |
| Rights | : Author |
| Paper | : N S Maplitho 70 GSM |
| D.T.P | : Prasanna Kumar. R |
| Cover page art | : Mohan Kamakshi |
| ISBN | : 978-93-81846-62-9 |
| Advisary Board | : Pro. S G Siddaramaiah |
| | : Dr. N Damodarashetty |
| | : Lakshmipathykolar |
| | : Dr. Banjagere Jaiprakash |
| | : Dr. M S Murthy |
| | : Dr. H V Venugopal |
| | : S Manjunath |
| Publisher | : Ravindranath Sirivara |
| Printed at | : Swara Print and Publication<br>#1, 3rd Cross, Shankarappa Garden,<br>Magadi Road, Bengaluru-560 023<br>Mob: 9844109706 |

# ಮುನ್ನುಡಿ

ಕನ್ನಡ ಚಲನಚಿತ್ರ ಕ್ಷೇತ್ರದಲ್ಲಿ ತಮ್ಮ ಅಸಾಧಾರಣ ಪ್ರತಿಭೆ ಹಾಗೂ ಸ್ವೋಪಜ್ಞತೆಯಿಂದ ಪ್ರಸಿದ್ಧವಾಗಿರುವ ಕೆಲವೇ ಕೆಲವು ಶ್ರೇಷ್ಠ ನಿರ್ದೇಶಕರಲ್ಲಿ ಟಿ. ಎಸ್. ನಾಗಾಭರಣ ಒಬ್ಬರು. ಕಳೆದ ಮೂರು ದಶಕಗಳಿಂದ ಕ್ರಿಯಾಶೀಲರಾಗಿರುವ ನಾಗಾಭರಣ ಇದುವರೆಗೆ ಸುಮಾರು 34 ಚಿತ್ರಗಳನ್ನು, ಟಿವಿ ಧಾರಾವಾಹಿಗಳನ್ನು ಮತ್ತು ನಾಟಕಗಳನ್ನು ಯಶಸ್ವಿಯಾಗಿ ನಿರ್ದೇಶಿಸಿದ್ದಾರೆ. ಇವರು ನಿರ್ದೇಶಿಸಿರುವ 34 ಚಿತ್ರಗಳಲ್ಲಿ, ಗ್ರಹಣ, ಸಂತ ಶಿಶುನಾಳ ಶರೀಫ, ಸಿಂಗಾರವ್ವ, ಚಿನ್ನಾರಿ ಮುತ್ತ, ಇತ್ಯಾದಿ 20 ಚಿತ್ರಗಳಿಗೆ ಅಂತಾರಾಷ್ಟ್ರೀಯ/ ರಾಷ್ಟ್ರೀಯ/ ಪ್ರಾಂತೀಯ ಪ್ರಶಸ್ತಿಗಳು ಸಂದಿರುವುದು ಒಂದು ದಾಖಲೆ. ಚಲನಚಿತ್ರ ಕ್ಷೇತ್ರದಲ್ಲಿ ಮಾಡಿರುವ ಇವರ ಒಟ್ಟಾರೆ ಸಾಧನೆಗಾಗಿ ರಾಷ್ಟ್ರೀಯ ನೆಲೆಯಲ್ಲಿ ಚಿನ್ನದ ಪದಕವನ್ನು ಇವರು ಗಳಿಸಿದ್ದಾರೆ. ಬೆಂಗಳೂರಿನ ಪ್ರಸಿದ್ಧ "ಬೆನಕ" ತಂಡದ ಸ್ಥಾಪಕರಲ್ಲಿ ಇವರೂ ಒಬ್ಬರು; ಇತ್ತೀಚೆಗೆ, ಚಲನಚಿತ್ರ ಕ್ಷೇತ್ರದ ವಿವಿಧ ಆಯಾಮಗಳಾದ ಚಿತ್ರಪ್ರತಿ (script) ರಚನೆ, ಛಾಯಾಗ್ರಹಣ, ನಟನೆ, ನಿರ್ದೇಶನ, ಚಿತ್ರ ಸಂಪಾದನೆ, ಇತ್ಯಾದಿ ವಿಭಾಗಗಳಲ್ಲಿ ಆಸಕ್ತರಿಗೆ ತರಬೇತಿಕೊಡಲು ಇವರು "ಶ್ರುತಾಲಯ" ಎಂಬ ತರಬೇತಿ ಸಂಸ್ಥೆಯನ್ನೂ ಸ್ಥಾಪಿಸಿದ್ದಾರೆ.

ನಾಗಾಭರಣರ ಇಂತಹ ಅಗಾಧ ಯಶಸ್ಸಿಗೆ ಮುಖ್ಯ ಕಾರಣವೆಂದರೆ ಇವರು ಉದ್ದೇಶಪೂರ್ವಕವಾಗಿ ಆಯ್ದುಕೊಂಡಿರುವ 'ಮಧ್ಯಮ ಮಾರ್ಗ'. ಎಂದರೆ, ಹಿಂಸೆ-ಹೊಡೆದಾಟ-ಲೈಂಗಿಕ ಪ್ರಚೋದನೆ ಇತ್ಯಾದಿಗಳಿಂದ ಕೂಡಿರುವ 'ವ್ಯಾಪಾರಿ ಚಿತ್ರ' (Commercial Cinema), ಮತ್ತು ಧ್ವನಿಶಕ್ತಿ-ನೈಜತೆ-ಸಮಕಾಲೀನ ಪ್ರಸ್ತುತತೆ ಇತ್ಯಾದಿಗಳಿಂದ ಕೂಡಿದ 'ಕಲಾತ್ಮಕ ಚಿತ್ರ' (Art Cinema), ಇವೆರಡೂ ಪ್ರಕಾರಗಳಿಂದ ತಮ್ಮ ದೂರವನ್ನು ಕಾಯ್ದುಕೊಂಡು ಆದರೆ ಎರಡೂ ಪ್ರಕಾರಗಳ ಉತ್ತಮ ಅಂಶಗಳನ್ನು ಒಳಗೊಂಡಿರುವ ಮಧ್ಯಮ ಮಾರ್ಗ (Bridge Cinema) ಇವರ ಆಯ್ಕೆ. ಈ ಕಾರಣದಿಂದ, ಬೋಧನೆ ಹಾಗೂ ರಂಜನೆ (Instruction and Delight) ಇವೆರಡೂ ಹದವಾಗಿ ಮಿಳಿತವಾಗುವ ಇವರ ಚಿತ್ರಗಳು ಎಲ್ಲಾ ವರ್ಗದ ಪ್ರೇಕ್ಷಕರನ್ನೂ ಆಕರ್ಶಿಸುತ್ತವೆ; ಅವರ ಭಿನ್ನ ಭಿನ್ನ ನಿರೀಕ್ಷೆಗಳನ್ನು ಪೂರೈಸುತ್ತವೆ. ಇವರ ಯಶಸ್ಸಿಗೆ ಕಾರಣವಾಗಿರುವ ಇತರ ಅಂಶಗಳೆಂದರೆ, ಇವರ ಹೆಚ್ಚಿನ ಚಿತ್ರಗಳು ಪ್ರಸಿದ್ಧ ಸಾಹಿತ್ಯಕೃತಿಗಳನ್ನು ಆಧರಿಸಿರುವುದರಿಂದ ಇವರ ಚಿತ್ರಗಳಿಗೆ ದೊರಕುವ ಬಿಗಿಯಾದ ಕಥಾ-ಸಂವಿಧಾನ, ಯಾವ ಅತಿಗೂ ಹೋಗದ ಮೆಲುದನಿಯ ನಿರೂಪಣೆ, ಸಂಗೀತ-ನೃತ್ಯಗಳ ಸದುಪಯೋಗ, ಮತ್ತು ಚಿತ್ರಗಳ ಸುಖಾಂತ, ಇತ್ಯಾದಿ. ಇವೆಲ್ಲಾ ಅಂಶಗಳನ್ನೂ ಒಳಗೊಂಡಿರುವ ಹಾಗೂ ಅತೀವ ಜನಪ್ರಿಯತೆಯನ್ನು ಗಳಿಸಿಕೊಂಡಿರುವ ಒಂದು ಚಿತ್ರವೆಂದರೆ ಮೈಸೂರು ಮಲ್ಲಿಗೆ. ಎಲ್ಲರ ನಿರೀಕ್ಷೆಯಂತೆ

ಈ ಚಿತ್ರಕ್ಕೆ ಆ ವರ್ಷದ ಕನ್ನಡದ ಅತ್ಯುತ್ತಮ ಚಿತ್ರವೆಂಬ ರಾಷ್ಟ್ರೀಯ ಪುರಸ್ಕಾರ ಮತ್ತು ಫಿಲ್ಮ್ ಫೇರ್ ಪ್ರಶಸ್ತಿಗಳು ದೊರಕಿದುವು.

* * * * *

1942ರಲ್ಲಿ ಪ್ರಕಟವಾದ ಮೈಸೂರು ಮಲ್ಲಿಗೆ ಕನ್ನಡದ ಪ್ರಸಿದ್ಧ ಕವಿ ಕೆ.ಎಸ್. ನರಸಿಂಹಸ್ವಾಮಿಯವರ ಮೊದಲ ಹಾಗೂ ಅತೀವ ಜನಪ್ರಿಯ ಕವನ ಸಂಕಲನ. ಇದುವರೆಗೆ 37 ಅಧಿಕೃತ ಆವೃತ್ತಿಗಳನ್ನು ಕಂಡಿರುವ ಈ ಸಂಕಲನದ ಹೆಚ್ಚಿನ ಕವನಗಳು ದಾಂಪತ್ಯಗೀತೆಗಳು. ಈ ಕವನಗಳ ಮೂಲಕ ಕೆ.ಎಸ್.ನ ಸಾಧಾರಣ ದಂಪತಿಗಳ ಪ್ರೀತಿ–ಪ್ರಣಯ, ಕಲಹ–ಸಂಶಯ, ಅಲ್ಪಕಾಲಿಕ ವಿರಹ–ಸಮಾಗಮ, ತಾಯ್ತನ, ಬಡತನ, ಇತ್ಯಾದಿಗಳನ್ನು ಭಾವನಾತ್ಮಕವಾಗಿ ಅಭಿವ್ಯಕ್ತಿಗೊಳಿಸಿ, ಆ ಮೂಲಕ ಜನಸಾಮಾನ್ಯರಿಗೂ ಸಾಧ್ಯವಾಗುವ ಸರಸ ದಾಂಪತ್ಯದ ಲೋಕವೊಂದನ್ನು ತೆರೆದರು. ಈ ಬಗೆಯ 'ಶ್ರೀಸಾಮಾನ್ಯೀಕರಣ'ವೇ (democratization) ಮೈಸೂರು ಮಲ್ಲಿಗೆಯ ಅಸಾಧಾರಣ ಸಾಧನೆ. ಈ ಸಂಕಲನದ (ಮತ್ತು ಮುಂದಿನ ಮೂರ್ನಾಲ್ಕು ಸಂಕಲನಗಳ) ಕವನಗಳು ನವವಿವಾಹಿತರ ನಡುವೆ ನಡೆಯುವ ಸಂಭಾಷಣೆಯ ರೂಪದಲ್ಲಿ ಅಥವಾ ದಂಪತಿಗಳಲ್ಲಿ ಒಬ್ಬನು/ಳು ಮತ್ತೊಬ್ಬರನ್ನು ಉದ್ದೇಶಿಸಿ ಮಾತನಾಡುವ ರೂಪದಲ್ಲಿರುವುದರಿಂದ ಇವುಗಳಿಗೆ ತಾನೇತಾನಾಗಿ ನಾಟಕೀಯತೆ ದೊರಕಿದೆ. ಹಾಗೆಯೇ, ಭಿನ್ನ ಪಾತ್ರಗಳ ನಡುವಿನ ಸಂಬಂಧ ಕೇಂದ್ರದಲ್ಲಿರುವುದರಿಂದ, ಈ ಕವನಗಳು ಕಥನಾತ್ಮಕವಾಗಿವೆ.

ಆದರೆ, ಈ ಕವನಗಳು ಕಟ್ಟಿಕೊಡುವ 'ಕಥೆ'ಯ ಹರಹು ತುಂಬಾ ಚಿಕ್ಕದು; ಅಕ್ಕ ಪಕ್ಕದ ಹಳ್ಳಿಗಳಾಗಿರುವ ನವಿಲೂರು ಮತ್ತು ಹೊನ್ನೂರು ಇವುಗಳಿಗೆ ಸೇರಿದ ಹೆಣ್ಣು–ಗಂಡುಗಳ 'ದಾಂಪತ್ಯ ಕಥನ,' ಅಷ್ಟೇ. ಈ 'ಕಥೆ'ಯಲ್ಲಿ ಬರುವ ಪಾತ್ರಗಳೂ ಬೆರಳೆಣಿಕೆಯಷ್ಟು: ನವಿಲೂರಿನ ಶಾನುಭೋಗರು ಮತ್ತು ಮಗಳು ಪದ್ಮಾ ಹಾಗೂ ಅವಳ ತಂಗಿ ತುಂಗಾ, ಪದ್ಮಾಳನ್ನು ಮದುವೆಯಾಗುವ ಹೊನ್ನೂರಿನ (ಹೆಸರಿಲ್ಲದ) ಶಾಲಾ ಶಿಕ್ಷಕ, ಬಳೆಗಾರ ಚನ್ನಯ್ಯ ಮತ್ತು ಹೂವಿನ ಚಂದಮ್ಮ. ಈ 'ಕಥೆ'ಯಲ್ಲಿ ಬರುವ ಘಟನೆಗಳೂ ಅಷ್ಟೇನೂ ಗಂಭೀರವಾದವುಗಳಲ್ಲ – ಸ್ವಾತಂತ್ರ್ಯಪೂರ್ವದಲ್ಲಿ, ಮದುವೆಯ ಸಂದರ್ಭದಲ್ಲಿ, ನಡೆಯುತ್ತಿದ್ದ ಉರುಟಣೆ, ಪಗಡೆಯಾಟ, ಗರ್ಭಿಣಿಗೆ ಬಳೆತೊಡಿಸುವ ಶಾಸ್ತ್ರ, ಇತ್ಯಾದಿ ಆಚರಣೆಗಳು; ಪತ್ನಿಯು ತೌರಿಗೆ ಹೋದಾಗ ಪತಿ–ಪತ್ನಿಯರಿಬ್ಬರೂ ಅನುಭವಿಸುವ ವಿರಹವೇದನೆ, ಪರಸ್ಪರ ಸಾಮೀಪ್ಯದಲ್ಲಿ ಅವರಿಬ್ಬರೂ ಅನುಭವಿಸುವ ಅಪೂರ್ವ ಆನಂದ. ಇಷ್ಟೇ ವಿವರಗಳನ್ನಿಟ್ಟುಕೊಂಡು ಪೂರ್ಣಾವಧಿಯ ಒಂದು ಚಿತ್ರವನ್ನು ತಯಾರಿಸುವುದು ಅಸಾಧ್ಯ. ಏಕೆಂದರೆ, ಎಲ್ಲಾ ಕಥನಗಳಿಗೂ ಅನಿವಾರ್ಯವಾದ ಸಂಘರ್ಷವೇ ಈ ಕಥೆಯಲ್ಲಿಲ್ಲ.

ಈ ಬಗೆಯ ಅಸಾಧ್ಯ ಕಾರ್ಯವನ್ನು ಸಾಧ್ಯವಾಗಿಸುವ ಮಾರ್ಗಗಳು ಅನೇಕವಿವೆ. ಅವುಗಳಲ್ಲಿ ಒಂದೆಂದರೆ, ಮೂಲಕಥೆಗೆ ಭಿನ್ನ ಆದರೆ ಪೂರಕ ಆಯಾಮಗಳನ್ನು ಕಲ್ಪಿಸುವುದು. ಈ ದಿಕ್ಕಿನಲ್ಲಿ ನಾಗಾಭರಣ ಒಂದು ಅರ್ಥಪೂರ್ಣ ಚಾರಿತ್ರಿಕ ಆಯಾಮವನ್ನು 'ದಾಂಪತ್ಯ



ಕಥೆ'ಗೆ ಜೋಡಿಸಿ, ತಮ್ಮ ಚಿತ್ರಕಥೆಯನ್ನು ಕಟ್ಟುತ್ತಾರೆ. ಕವನಗಳಲ್ಲಿ ಆನುಷಂಗಿಕವಾಗಿ ಬರುವ ಎತ್ತಿನ ಗಾಡಿಯ ಪ್ರಯಾಣ, ಮೂರ್ನಾಲ್ಕು ದಿನಗಳ ಸಾಂಪ್ರದಾಯಿಕ ವಿವಾಹ, ಇತ್ಯಾದಿ ವಿವರಗಳು ಕಟ್ಟಿಕೊಡುವ ಕಾಲವೆಂದರೆ 20ನೆಯ ಶತಮಾನದ ಮೂರು–ನಾಲ್ಕನೆಯ ದಶಕಗಳ ಕಾಲಘಟ್ಟ, ಆ ಘಟ್ಟದಲ್ಲಿ ದೇಶಾದ್ಯಂತ ಉಗ್ರವಾಗಿ ನಡೆಯುತ್ತಿದ್ದ ಸ್ವಾತಂತ್ರ್ಯ ಹೋರಾಟದ ಕಥೆಯನ್ನು ಮೇಲೆ ಹೇಳಿದ ದಾಂಪತ್ಯ ಕಥೆಯ 'ಆವರಣ'ವಾಗಿ (Frame) ದುಡಿಸಿಕೊಳ್ಳುತ್ತಾ, ಎರಡೂ ಕಥೆಗಳನ್ನು ಸಮಾನಾಂತರವಾಗಿ ತಮ್ಮ ಚಿತ್ರಕಥೆಯಲ್ಲಿ ನಾಗಾಭರಣ ಬೆಳೆಸುತ್ತಾರೆ. ಈ ಎರಡೂ ಕಥೆಗಳನ್ನು ಒಂದೆಡೆ ತರಲು ಒಂದೇ ಪಾತ್ರವನ್ನು (ಮಂಜುನಾಥನ ಪಾತ್ರವನ್ನು) ಎರಡೂ ಕಥೆಗಳ ಮುಖ್ಯ ಪಾತ್ರವನ್ನಾಗಿ ಮಾಡುತ್ತಾರೆ. ಚಿತ್ರದ ಹೆಸರು *(ಮೈಸೂರು ಮಲ್ಲಿಗೆ)* ಸಾರ್ಥಕವಾಗಲು ಮಂಜುನಾಥನನ್ನು ಕವಿಯಾಗಿಸಿ, ಕೆ.ಎಸ್.ನ ಅವರ ಕೆಲವು ಪ್ರಸಿದ್ಧ ಕವನಗಳನ್ನು ಅವನ ರಚನೆಗಳಂತೆ ಚಿತ್ರದಲ್ಲಿ ಕಲ್ಪಿಸಿ, ಅವುಗಳನ್ನು ಮೋಹಕ ಹಾಡುಗಳ ರೂಪದಲ್ಲಿ ತಮ್ಮ ಚಿತ್ರದಲ್ಲಿ ಉಪಯೋಗಿಸಿ ಕೊಳ್ಳುತ್ತಾರೆ. ಇನ್ನು ಸಂಘರ್ಷದ ಆಶಯಕ್ಕೆ ಬಂದರೆ, ಆವರಣದ ಕಥೆಯಲ್ಲಿ ಭಾರತೀಯ ಹೋರಾಟಗಾರರ ಮತ್ತು ಬ್ರಿಟಿಷ್ ಪ್ರಭುತ್ವದ ಪ್ರತಿನಿಧಿಗಳಾದ ಪೋಲಿಸರ ನಡುವೆ ನಡೆಯುವ (ನಡೆಯುತ್ತಿದ್ದ) ಸಂಘರ್ಷವಂತೂ ಇದ್ದೇ ಇದೆ; ಒಳಗತೆಯಲ್ಲಿಯೂ ಸಂಘರ್ಷವನ್ನು ತರಲು ಕನ್ಯೆಯ ತಂದೆ ಶಾನುಭೋಗರನ್ನು ಸತ್ಯಾಗ್ರಹಿಗಳ ವಿರೋಧಿಯಂತೆ ಮತ್ತು ಮಂಜುನಾಥ ಸತ್ಯಾಗ್ರಹಿಯಾದುದರಿಂದ ಏನೇ ಆದರೂ ಅವನಿಗೆ ತಮ್ಮ ಮಗಳನ್ನು ಕೊಡಲೊಪ್ಪದ ಹಠವಾದಿಯಂತೆ ಚಿತ್ರಿಸುತ್ತಾರೆ. ಎರಡೂ ಕಥೆಗಳ ಸಂಘರ್ಷ ಹೆಚ್ಚುತ್ತಾ ಹೋಗಿ, ಶಿಖರವನ್ನು ತಲಪಿ (ಬೇರೆ ವರನಿಗೆ ಮಗಳನ್ನು ಕೊಡುವ ಶಾನುಭೋಗರ ನಿರ್ಣಯ/ಸ್ವಾತಂತ್ರ್ಯ ಹೋರಾಟದಲ್ಲಿ ಮಂಜುನಾಥನಿಗೆ ಪೋಲೀಸರ ಗುಂಡೇಟು ಬಿದ್ದು ಅವನು ಸತ್ತನೆಂಬ ಸುದ್ದಿ), ಅನಂತರ (ದೇಶವು ಗಳಿಸುವ ಸ್ವಾತಂತ್ರ್ಯದಿಂದ ಮತ್ತು ಮಂಜುನಾಥನು ಬದುಕಿ ತನ್ನ ಪತ್ನಿಯನ್ನು ಸೇರುವುದರಿಂದ) ಸುಖಾಂತವಾಗಿ ಕೊನೆಗಾಣುತ್ತದೆ. ಎಂದರೆ, ಬಿಡುಗಡೆಯ ಹಾಗೂ ಸ್ವಾತಂತ್ರ್ಯದ ತುಡಿತದ ಆಶಯ ಎರಡೂ ಕಥೆಗಳನ್ನು ಒಟ್ಟಿಗೇ ಬೆಸೆಯುತ್ತದೆ; ಮತ್ತು, ಈ ಆಶಯವನ್ನು ಚಿತ್ರದ ಪ್ರಾರಂಭದಲ್ಲಿಯೇ ಕೆ.ಎಸ್.ನ ಈ ಚಿತ್ರಕ್ಕಾಗಿಯೇ ಬರೆದ "ಬಿಡುಗಡೆ" ಎಂಬ ಗೀತೆ ಅದ್ಭುತವಾಗಿ ಕಟ್ಟಿಕೊಡುತ್ತದೆ. (ಈ ಗೀತೆಗೂ ರಾಷ್ಟ್ರೀಯ ಪುರಸ್ಕಾರ ದೊರೆಯಿತು.) ಈ ಬಗೆಯಲ್ಲಿ, ಕೆ.ಎಸ್.ನ ಅವರ ಕವನಗಳಲ್ಲಿ ಅಲ್ಲಲ್ಲಿ ಬರುವ ಕಿರು ವಿವರಗಳನ್ನೇ ಬೆಳೆಸುತ್ತಾ ಒಂದು ಮನೋಜ್ಞ ಚಿತ್ರಕಥೆಯನ್ನು ನಾಗಾಭರಣ ಕಟ್ಟುತ್ತಾರೆ. ಪರಿಣಾಮ: ಪಂಡಿತ–ಪಾಮರರೆಲ್ಲರನ್ನೂ ಸಮನಾಗಿ ತೃಪ್ತಿಗೊಳಿಸುವ ಯಶಸ್ವಿ ಚಿತ್ರ ಮೈಸೂರು ಮಲ್ಲಿಗೆ.

ಮೂಲ ಕಥೆಗೆ ನಾಗಾಭರಣ ಕಟ್ಟಿರುವ ಚಾರಿತ್ರಿಕ ಆಯಾಮ ಎಷ್ಟು ಅರ್ಥಪೂರ್ಣ–ವಾಗಿದೆಯೆಂಬುದು ಅದೇ ಕಾವ್ಯದ ಮತ್ತೊಂದು ರೂಪಾಂತರವನ್ನು ಗಮನಿಸಿದಾಗ ಸ್ಪಷ್ಟವಾಗುತ್ತದೆ. ಈ ಚಿತ್ರವು ಪ್ರದರ್ಶನಗೊಂಡು ಸುಮಾರು ಹತ್ತು ವರ್ಷಗಳ ನಂತರ ಬಿ.ವಿ. ರಾಜಾರಾಂ ನಿರ್ದೇಶನದಲ್ಲಿ ಅದೇ ಹೆಸರಿನ ನಾಟಕವೊಂದು ರಂಗದ ಮೇಲೆ ಬಂದಿತು ಮತ್ತು ಯಶಸ್ವಿಯೂ ಆಯಿತು. ಈ ನಾಟಕದಲ್ಲಿ ಕೆ.ಎಸ್.ನ ಅವರ ಕವನಗಳ ದಾಂಪತ್ಯ ಕಥೆಗೆ ಕವಿಯ ವೈಯಕ್ತಿಕ ಬದುಕಿನ ಆಯಾಮವನ್ನು ನಾಟಕಕಾರರು ಜೋಡಿಸಿ, ಅದನ್ನು ಪೂರ್ಣಾವಧಿಯ ನಾಟಕವಾಗಿ ರೂಪಾಂತರಿಸುತ್ತಾರೆ. ಆದರೆ, ಆ ನಾಟಕದ

ಯಶಸ್ಸಿನ ಹೊರತಾಗಿಯೂ ಕವಿಯ ಬದುಕು ಮತ್ತು ಅವನ ಕಾವ್ಯ ಇವುಗಳ ಸಮೀಕರಣ ಅನೇಕ ಪ್ರಶ್ನೆಗಳನ್ನೆತ್ತುತ್ತದೆ (ಕಾವ್ಯವಾಗಲಿ ಕಾದಂಬರಿಯಾಗಲಿ ಲೇಖಕನ ವೈಯಕ್ತಿಕ ಬದುಕಿನ ಪ್ರತಿಬಿಂಬ- ವಾಗಿರುವುದಿಲ್ಲ), ಮತ್ತು ಕವಿಯ ಕುಟುಂಬಕ್ಕೆ ಮುಜುಗರವನ್ನೂ ಉಂಟುಮಾಡುವ ಸಾಧ್ಯತೆಯಿದೆ.

ತಮ್ಮ ಚಿತ್ರವು ತೆರೆಯಮೇಲೆ ಬಂದು 23 ವರ್ಷಗಳಾದನಂತರ, ಈಗ ನಾಗಾಭರಣ ಮತ್ತೊಂದು ಪ್ರಯೋಗಕ್ಕೆ, ಆ ಚಿತ್ರಪ್ರತಿಯನ್ನು ಸ್ವತಂತ್ರವಾಗಿ ಪ್ರಕಟಿಸುವ ಪ್ರಯೋಗಕ್ಕೆ ಸಿದ್ಧರಾಗಿದ್ದಾರೆ. ಇಲ್ಲಿಯವರೆಗೆ ಚಿತ್ರಪ್ರತಿಗಳು ಕನ್ನಡದಲ್ಲಿ ಪ್ರಕಟವಾಗಿಯೇ ಇಲ್ಲ ಎಂದೇನೂ ಅಲ್ಲ; ಆದರೆ ಅವುಗಳ ಸಂಖ್ಯೆ ಅತ್ಯಲ್ಪ. ನನಗೆ ತಿಳಿದಂತೆ, ಕುರಾಸೋವಾನ ಎರಡು ಚಿತ್ರಪ್ರತಿಗಳನ್ನು ಸುಬ್ಬಣ್ಣನವರು, ತಮ್ಮ ನಿರ್ದೇಶನದಲ್ಲಿಯೇ ಹೊರಬಂದ ಘಟಶ್ರಾದ್ಧ, ಕೂರ್ಮಾವತಾರ, ಇತ್ಯಾದಿ ನಾಲ್ಕೈದು ಚಿತ್ರಪ್ರತಿಗಳನ್ನು ಗಿರೀಶ್ ಕಾಸರವಳ್ಳಿಯವರು, ಮತ್ತು ಅಮೆರಿಕಾ ಅಮೆರಿಕಾ ಚಿತ್ರಪ್ರತಿಯನ್ನು ನಾಗತಿಹಳ್ಳಿ ಚಂದ್ರಶೇಖರ್ ಅವರು ಈಗಾಗಲೇ ಪ್ರಕಟಿಸಿದ್ದಾರೆ. ಈ ಸಾಲಿಗೆ ಈಗ ನಾಗಾಭರಣ ಸೇರುತ್ತಿದ್ದಾರೆ. ಗಮನಿಸಬೇಕಾದ ಮತ್ತೂ ಒಂದು ಮುಖ್ಯಾಂಶವೆಂದರೆ, ಇದುವರೆಗೆ ಕನ್ನಡದಲ್ಲಿ ಪ್ರಕಟವಾಗಿರುವ ಚಿತ್ರಪ್ರತಿಗಳಲ್ಲಿ ಪಠ್ಯವನ್ನು ಹೊರತುಪಡಿಸಿ ಆ ಪಠ್ಯದ ವಿವಿಧ ದೃಶ್ಯಗಳ ಬಗ್ಗೆ ಯಾವ ಬಗೆಯ ವ್ಯಾಖ್ಯಾನವಾಗಲಿ ಟಿಪ್ಪಣಿಗಳಾಗಲೀ ಇಲ್ಲ; ನಾಗಾಭರಣರ ಈ ಚಿತ್ರಪ್ರತಿಯಲ್ಲಿ ಪಠ್ಯದೊಡನೆ, ಟಿಪ್ಪಣಿ–ವ್ಯಾಖ್ಯಾನ–ವಿಮರ್ಶೆಗಳೂ ಸೇರಿವೆ. ಇಂತಹ ಟಿಪ್ಪಣಿಗಳನ್ನೊಳಗೊಂಡ ಪ್ರಕಟಿತ ಚಿತ್ರಪ್ರತಿಗಳು ಚಲನಚಿತ್ರ ರಸಗ್ರಹಣ ಕಮ್ಮಟಗಳಲ್ಲಿ ಹಾಗೂ ಚಲನಚಿತ್ರ ತಯಾರಿಕೆಯನ್ನು ಬೋಧಿಸುವ ಶಿಕ್ಷಣ ಸಂಸ್ಥೆಗಳಲ್ಲಿ ಅಭ್ಯರ್ಥಿಗಳಿಗೆ ತರಬೇತಿ ನೀಡಲು ತುಂಬಾ ಉಪಯುಕ್ತವಾಗುತ್ತವೆ. ಹಾಗೆಯೇ, ಸಾಹಿತ್ಯಕೃತಿ– ಚಿತ್ರಪ್ರತಿ–ರಂಗಪ್ರತಿ, ಇತ್ಯಾದಿ ಭಿನ್ನ ಮಾಧ್ಯಮಗಳಲ್ಲಿ ಅನಿವಾರ್ಯವಾಗುವ ರೂಪಾಂತರಗಳನ್ನು ತೌಲನಿಕ ನೆಲೆಯಲ್ಲಿ ಚರ್ಚಿಸಲೂ ಸಾಧ್ಯವಾಗುತ್ತದೆ.

* * * * *

ಚಲನಚಿತ್ರ ನಿರ್ದೇಶಕರು ಸಾಧಾರಣವಾಗಿ ಮೂರು ಬಗೆಯ ಪ್ರತಿಗಳನ್ನು ತಯಾರಿಸುತ್ತಾರೆ: ಮೊದಲಿಗೆ ಚಿತ್ರಕಥೆ (ಮೂಲವನ್ನು ಹಿಗ್ಗಿಸಿ/ ಕುಗ್ಗಿಸಿ, ಅದಕ್ಕೆ ಇತರ ಆಯಾಮಗಳನ್ನು ಜೋಡಿಸಿ ಕಟ್ಟಿದ ಕಥನರೂಪದಲ್ಲಿರುವ ಪ್ರತಿ), ಚಿತ್ರಪ್ರತಿ [Film script] ಮತ್ತು ಚಿತ್ರೀಕರಣ ಪ್ರತಿ [shooting script]. ಚಿತ್ರಕಥೆಯನ್ನು ಚಿಕ್ಕ ಚಿಕ್ಕ ದೃಶ್ಯಗಳಾಗಿ ವಿಭಜಿಸಿ, ಆ ಪ್ರತಿಯೊಂದು ದೃಶ್ಯದ ಕ್ರಿಯೆಯನ್ನು ಹಾಗೂ ವೈಶಿಷ್ಟ್ಯವನ್ನೂ ದಾಖಲಿಸುವ ಚಿತ್ರದ ನೀಲಿ ನಕಾಶೆ ಚಿತ್ರಪ್ರತಿ. ಇನ್ನೂ ಮುಂದೆ ಹೋಗಿ, ಚಿತ್ರೀಕರಣದ ಸಂದರ್ಭದಲ್ಲಿ ಛಾಯಾಗ್ರಹಣದ ಸೂಕ್ಷ್ಮ ವಿವರಗಳು (close-up/long shot/zoom...), ಬೆಳಕಿನ ಸ್ವರೂಪ (ಪ್ರಖರ/ ಮಂದ/ ಕತ್ತಲೆ...), ನಟ–ನಟಿಯರ ಚಲನೆ, ಇತ್ಯಾದಿ ವಿವರಗಳನ್ನೂ ದಾಖಲಿಸುವ ಪ್ರತಿ ಚಿತ್ರೀಕರಣ ಪ್ರತಿ. ಈ ಸಂದರ್ಭದಲ್ಲಿ ನಾನು ಚಿತ್ರಪ್ರತಿಯನ್ನು ಮಾತ್ರ ಗಮನಿಸಿದ್ದೇನೆ.



ಚಿತ್ರಪ್ರತಿಯೊಂದು ಒಂದು ಕಥೆಯನ್ನು ದೃಶ್ಯಾತ್ಮಕವಾಗಿ ಪ್ರೇಕ್ಷಕರಿಗೆ ಸಂವಹಿಸಲು ಅವಶ್ಯಕವಾಗುವ ಶಾಬ್ದಿಕ, ಚಾಕ್ಷುಷ, ಆಂಗಿಕ, ಇತ್ಯಾದಿ ಎಲ್ಲಾ ಮಾರ್ಗಗಳನ್ನೂ ಒಳಗೊಳ್ಳುತ್ತದೆ. ಆದುದರಿಂದ, ಚಿತ್ರಪ್ರತಿಯಲ್ಲಿ ದಾಖಲಾಗುವ (ದಾಖಲಾಗಬೇಕಾದ) ಮುಖ್ಯ ವಿವರಗಳನ್ನು ಹೀಗೆ ಗುರುತಿಸಬಹುದು:

ಅ) ಅತಿ ಮುಖ್ಯವಾಗುವ ಮೊದಲ ದೃಶ್ಯ: ಇದು ಕಥನಕ್ರಿಯೆಯು ನಡೆಯುವ ಕಾಲ–ದೇಶ, ಮುಖ್ಯ ಪಾತ್ರದ/ಗಳ ವಯಸ್ಸು ಹಾಗೂ ಚೆಹರೆ, ಇಡೀ ಚಿತ್ರದ ಮೂಲಾಶಯ, ಇತ್ಯಾದಿ ಅನೇಕ ಸೂಕ್ಷ್ಮಾತಿಸೂಕ್ಷ್ಮ ವಿವರಗಳನ್ನು ಒಳಗೊಂಡಿರುತ್ತದೆ. ಈ ಕಾರಣದಿಂದಲೇ ಮೊದಲ ದೃಶ್ಯವನ್ನು ಸ್ಥಾಪನಾ ದೃಶ್ಯ (establishing scene) ಎಂದು ಕರೆಯಲಾಗುತ್ತದೆ. ಈ ದೃಶ್ಯದ ಕೆಲವಂಶಗಳು ಆಗಾಗ್ಗೆ ಪುನರಾವರ್ತನೆಗೊಳ್ಳಬಹುದು –ಕಾಲ–ದೇಶಗಳನ್ನು ಹಾಗೂ ಮೂಲಾಶಯವನ್ನು ಮರು ಸ್ಥಾಪಿಸಲು (re-establishing scenes). ಈ ದೃಶ್ಯದಲ್ಲಿ ಅಥವಾ/ಮತ್ತು ಚಿತ್ರದ ಕೆಲವು ದೃಶ್ಯಗಳಲ್ಲಿ ಅದೃಶ್ಯ ನಿರೂಪಕನು/ ನಿರೂಪಕಿಯು/ ಪಾತ್ರವೊಂದು ಕೆಲವು ವಿವರಗಳನ್ನು ನೋಡುಗರಿಗೆ ಕೊಡಬಹುದು (voice over).

ಆ) ಚಿತ್ರದ ಪ್ರತಿಯೊಂದು ದೃಶ್ಯವೂ ಈ ವಿವರಗಳನ್ನು ದಾಖಲಿಸುತ್ತದೆ: ಚಿತ್ರೀಕರಣ ಸ್ಥಳ (ಹೊರಾಂಗಣ/ಒಳಾಂಗಣ – EXT/INT), ಕ್ರಿಯೆಯ ಸ್ಥಳ (ಮನೆಯ ಭಿನ್ನ ಸ್ಥಳಗಳು/ ಮನೆಯಿಂದ ಹೊರಗೆ ಇರುವ ಸ್ಥಳ (ವನ/ತೋಟ/ನದಿಯ ಬಳಿ...) ಮತ್ತು ಸಮಯ (ಬೆಳಿಗ್ಗೆ/ರಾತ್ರಿ/ಸಂಧ್ಯಾಕಾಲ...), ಕಥನದ ಸ್ವರೂಪ (ಹಿನ್ನೋಟ/ವರ್ತಮಾನ/ ಭಿನ್ನ ದೃಶ್ಯಗಳ ಜೋಡಣೆ – Flashback/present/montage...), ದೃಶ್ಯದಲ್ಲಿ ಭಾಗವಹಿಸುವ ಪಾತ್ರ/ ಪಾತ್ರಗಳು), ದೃಶ್ಯದ ಸ್ವರೂಪ (ಸ್ವಗತ/ಸಂಭಾಷಣೆ/ಮೂಕ ದೃಶ್ಯ...), ಇತ್ಯಾದಿ.

ಇ) ಪ್ರತಿಯೊಂದು ದೃಶ್ಯವೂ ಸ್ವತಂತ್ರವಾಗಿರಬಹುದು ಅಥವಾ ಹಿಂದಿನ ದೃಶ್ಯದ ಮುಂದುವರಿಕೆ ಆಗಿರಬಹುದು (independent/continuing scene).

ಈ) ಮುಖ್ಯವಾಗಿ, ಪ್ರತಿಯೊಂದು ದೃಶ್ಯವೂ (ಹೆಸರೇ ಸ್ಪಷ್ಟಪಡಿಸುವಂತೆ) ಏನನ್ನು ಪ್ರೇಕ್ಷಕರಿಗೆ ತೋರಿಸಲು ಮತ್ತು ಕೇಳಿಸಲು ಸಾಧ್ಯವೋ ಅಷ್ಟನ್ನು ಮಾತ್ರ ಒಳಗೊಂಡಿರಬೇಕು.

ಉ) ಅತಿ ಮುಖ್ಯವಾಗಿ, ಪ್ರತಿಯೊಂದು ದೃಶ್ಯಕ್ಕೂ ಒಂದು ಖಚಿತ ಉದ್ದೇಶವಿರಬೇಕು (ಪಾತ್ರಗಳ ಪರಿಚಯ/ಪಾತ್ರದ ಬೆಳವಣಿಗೆ/ಕಥೆಯ ಮುಂದುವರಿಕೆ/ಸಂಘರ್ಷ / ಸಂಘರ್ಷದ ಪರಿಹಾರ....), ಇತ್ಯಾದಿ.

ಈ ಸಂದರ್ಭದಲ್ಲಿ ಏಳುವ ಪ್ರಶ್ನೆಯೆಂದರೆ ಮೇಲೆ ಹೇಳಿದಂತಹ ವಿವರಗಳನ್ನೊಳಗೊಳ್ಳುವ ಮುದ್ರಿತ ಚಿತ್ರಪ್ರತಿಯನ್ನು ನಾವು ಹೇಗೆ ಪರಿಗಣಿಸಬೇಕು? ಸಾಹಿತ್ಯಕೃತಿಯಂತೆ? ಅಥವಾ ಸ್ವತಂತ್ರ ವಾಙ್ಮಯ ಪ್ರಭೇದದಂತೆ? ಈ ಪ್ರಶ್ನೆಗೆ ವಿಮರ್ಶಕರ ತಾತ್ವಿಕ ಪರಿಪ್ರೇಕ್ಷ್ಯವನ್ನವಲಂಬಿಸಿ ಭಿನ್ನ ಉತ್ತರಗಳು ಸಾಧ್ಯ. ಆದರೆ, ಹೆಚ್ಚಿನ ವಿಮರ್ಶಕರ ಮತವೆಂದರೆ, ಚಿತ್ರಪ್ರತಿಯೊಂದನ್ನು

ಎರಡೂ ನೆಲೆಗಳಲ್ಲಿ – ಸ್ವತಂತ್ರ ವಾಙ್ಮಯ ಪ್ರಭೇದದಂತೆ ಮತ್ತು ಸಾಹಿತ್ಯಕೃತಿಯಂತೆ – ಪರಿಗಣಿಸಬೇಕು. ಈ ನೆಲೆಯನ್ನು ಒಪ್ಪಿಕೊಂಡು ಈಗ ಮೈಸೂರು ಮಲ್ಲಿಗೆ ಚಿತ್ರಪ್ರತಿಯನ್ನು ನೋಡಬಹುದು.

ಅ) ಸ್ವತಂತ್ರ ಪ್ರಭೇದದಂತೆ ಈ ಚಿತ್ರಪ್ರತಿಯನ್ನು ನೋಡಿದಾಗ, ದೃಶ್ಯ ವಿಂಗಡಣೆಯಲ್ಲಿ ಮತ್ತು ದೃಶ್ಯ ಸಂಯೋಜನೆಯಲ್ಲಿ ನಾಗಾಭರಣ ತಮ್ಮ ಅನುಭವವನ್ನೆಲ್ಲಾ ಈ ಚಿತ್ರಕ್ಕೆ ಧಾರೆ ಎರೆದಿದ್ದಾರೆ ಎಂಬುದು ನಮಗೆ ಅರಿವಾಗುತ್ತದೆ. 70 ದೃಶ್ಯಗಳ ಚಿತ್ರಪ್ರತಿಯಲ್ಲಿ, ಮೂರನೆಯ ದೃಶ್ಯದಿಂದ ಪ್ರಾರಂಭವಾಗಿ 64ನೆಯ ದೃಶ್ಯದವರೆಗೆ ಹಿನ್ನೋಟದ ಮೂಲಕ ಹಿಂದಿನ ಕಥೆಯನ್ನು (ಮಂಜುನಾಥ ಮೊದಲ ಬಾರಿ ಪದ್ಮಾಳನ್ನು ನೋಡಲು ಬರುವಾಗಿನಿಂದ) ನಿರೂಪಿಸುತ್ತದೆ. ಚಿತ್ರಕಥೆಯ ಪ್ರತಿಯೊಂದು ದೃಶ್ಯಕ್ಕೂ ಇರುವ ಉದ್ದೇಶ ಮತ್ತು ಅದು ಹೇಗೆ ಸಾರ್ಥಕವಾಗಿದೆ ಎಂಬುದನ್ನು ತಮ್ಮ 'ಟಿಪ್ಪಣಿ'ಗಳಲ್ಲಿ ನಾಗಾಭರಣ ವಿವರಿಸಿದ್ದಾರೆ. ನನ್ನ ದೃಷ್ಟಿಯಲ್ಲಿ ಯಾವ ದೃಶ್ಯವೂ ಅನುಚಿತ ಅಥವಾ ಅನವಶ್ಯಕ ಎಂಬಂತೆ ಕಾಣುವುದಿಲ್ಲ.

ಆದರೆ, ಕುತೂಹಲದ ಸಂಗತಿಯೆಂದರೆ, ಕೆಲವು ಟಿಪ್ಪಣಿಗಳಲ್ಲಿ ನಾಗಾಭರಣ ತಾವು ಕೇವಲ ಚಿತ್ರಪ್ರತಿಗೆ ಟಿಪ್ಪಣಿಗಳನ್ನು ಬರೆಯುತ್ತಿದ್ದಾರೆ ಎಂಬುದನ್ನು ಮರೆತು ಒಟ್ಟಾರೆ ಪ್ರದರ್ಶನಗೊಂಡ ಚಿತ್ರದಲ್ಲಿ ಆಯಾಯಾ ದೃಶ್ಯಗಳು ಹೇಗೆ ತಮ್ಮ ಉದ್ದೇಶಗಳನ್ನು ಪೂರೈಸಿವೆ ಎಂಬುದನ್ನು ವಿವರಿಸುತ್ತಾರೆ. ಕೇವಲ ಚಿತ್ರಪ್ರತಿಯನ್ನು ವ್ಯಾಖ್ಯಾನಿಸುವಾಗ "ಛಾಯಾಗ್ರಾಹಕ ಬಿ. ಸಿ. ಗೌರಿಶಂಕರ್ ನವಿರಾದಂತಹ ಭಾವನೆಗಳಿಗೆ ಪೂರಕವಾದ ಚಿತ್ರಿಕೆಗಳನ್ನು ಕಟ್ಟಿಕೊಡುವಲ್ಲಿ ಬಹಳ ಯಶಸ್ವಿಯಾಗಿ ಕೆಲಸ ಮಾಡಿದ್ದಾರೆ," "ಈ ದೃಶ್ಯದಲ್ಲಿ ದೀಪ ಹಿಡಿದು ಬರುವ... ಇವುಗಳನ್ನು ಗಮನಿಸಿದಾಗ ಛಾಯಾಗ್ರಾಹಕನ ವಿಶಿಷ್ಟ ತಂತ್ರಗಾರಿಕೆಯನ್ನು ಕಾಣಬಹುದು" ಇತ್ಯಾದಿ ಹೇಳಿಕೆಗಳು ಹೇಗೆ ಸಾಧ್ಯ?

ಪಾತ್ರಗಳನ್ನು ಬೆಳೆಸುವುದರಲ್ಲಿ, ನಾಗಾಭರಣ ಕೆ.ಎಸ್.ನ ಅವರ ಬಗ್ಗೆ ಬಂದಿರುವ ವಿಮರ್ಶೆ–ವ್ಯಾಖ್ಯಾನ–ಸಂದರ್ಶನ ಇತ್ಯಾದಿಗಳನ್ನು ಸಾಕಷ್ಟು ಅಧ್ಯಯನ ಮಾಡಿದ್ದಾರೆ ಎಂಬುದು ಸ್ಪಷ್ಟವಾಗುತ್ತದೆ. ಪದ್ಮಾ ತನ್ನ ಬಾಲ್ಯದಲ್ಲಿ ಮಾಡುತ್ತಿದ್ದ ಚೇಷ್ಟೆ–ತುಂಟತನ ಇತ್ಯಾದಿಗಳಿಗೆ (ದೃಶ್ಯಗಳು 4–6, 10, ಇತ್ಯಾದಿಗಳಿಗೆ) ಆಧಾರ ಕೆ.ಎಸ್.ನ ಅವರ ಕವನಗಳಲ್ಲಲ್ಲದೆ ಅವರ ದೀರ್ಘ ಸಂದರ್ಶನದಲ್ಲಿದೆ (ನರಹಳ್ಳಿ ಬಾಲಸುಬ್ರಹ್ಮಣ್ಯ, ನುಡಿ ಮಲ್ಲಿಗೆ; ಈ ಸಂದರ್ಶನದಲ್ಲಿಯೇ ಕೆ.ಎಸ್.ನ ತಾವು ಕನ್ಯಾವೀಕ್ಷಣೆಗೆ ಹೋದಾಗ ತಮ್ಮ ಭಾವಿ ಪತ್ನಿ ಹುಣಿಸೆಹಣ್ಣನ್ನು ತಿನ್ನುತ್ತಾ ಇದ್ದುದನ್ನು ವರ್ಣಿಸುತ್ತಾರೆ.)

ಈ ಚಿತ್ರಕ್ಕಾಗಿಯೇ ಕೆ.ಎಸ್.ನ ಅವರು ಬರೆದ ಹಾಡು ಮತ್ತು ಚಿತ್ರನಿರ್ಮಾಣ ಕಾಲದಲ್ಲಿ ತುಂಬಾ ಜನಪ್ರಿಯವಾಗಿದ್ದ ಕೆ.ಎಸ್.ನ ಅವರ ಕವನಗಳು ಚಿತ್ರಪ್ರತಿಯಲ್ಲಿ ಸಮಯೋಚಿತವಾಗಿ ಉಪಯೋಗಿಸಲ್ಪಟ್ಟಿವೆ. ಆದರೆ, ದೃಶ್ಯ 58ರಲ್ಲಿ ಉಪಯೋಗಿಸಲ್ಪಟ್ಟಿರುವ "ಬಳೆಗಾರ ಚೆನ್ನಯ್ಯ" ಹಾಡು ಆ ಸಂದರ್ಭಕ್ಕೆ ಒಪ್ಪುತ್ತದೆಯೆ ಎನ್ನುವುದು ಚರ್ಚಾಸ್ಪದ. "...ಅದಕ್ಕೋಸ್ಕರವೇ ಈ ಹಾಡನ್ನು ಬರೆದಿದ್ದಾರೇನೋ ಎನ್ನುವಷ್ಟರ ಮಟ್ಟಿಗೆ ಈ



ಕವನ ನಮ್ಮ ಚಿತ್ರಕಥೆಯ ಒಳಗೆ ಹರವಿಕೊಂಡಿದೆ" ಎಂದು ನಿರ್ದೇಶಕರು ತಮ್ಮ ಟಿಪ್ಪಣಿಯಲ್ಲಿ ಮೆಚ್ಚಿಕೊಂಡರೂ, ಮಾರುವೇಷದಲ್ಲಿರುವ ಮಂಜುನಾಥನನ್ನು ಚೆನ್ನಯ್ಯನು ಗುರುತುಹಿಡಿದನೆ? ಗುರುತುಹಿಡಿಯದಿದ್ದರೆ "ಹೋಗಿ ಬನ್ನಿರಿ ಒಮ್ಮೆ/ ಕೈ ಮುಗಿದು ಬೇಡುವೆನು" ಎಂದು ಎದುರಿಗಿಲ್ಲದ ಮಂಜುನಾಥನಿಗೆ ಹೇಳುವುದು ಸಾಧ್ಯವೆ? ಎಂಬ ಪ್ರಶ್ನೆಗಳು ಏಳುತ್ತವೆ. ಈ ಹಾಡನ್ನು ಕೈಬಿಟ್ಟಿದ್ದರೂ ಅಷ್ಟೇನೂ ನಷ್ಟವಾಗುತ್ತಿರಲಿಲ್ಲ ಎಂದು ನನಗೆ ತೋರುತ್ತದೆ. ಆದರೆ, ಇವೆಲ್ಲಾ ನಗಣ್ಯ ಅಂಶಗಳು.

ಸಾಹಿತ್ಯ ಕೃತಿಯಂತೆ ಈ ಚಿತ್ರಪ್ರತಿಯನ್ನು ನೋಡಿದಾಗ, ಅನೇಕ ಪ್ರಶ್ನೆಗಳು ಏಳುತ್ತವೆ ಮತ್ತು ಇವೆಲ್ಲವೂ ನಿರ್ದೇಶಕರು ಆಯ್ದು ಕೊಂಡಿರುವ 'ಮಧ್ಯಮ ಮಾರ್ಗ'ದ ಅನಿವಾರ್ಯ ಪರಿಣಾಮಗಳು. ಚಲನಚಿತ್ರವು ಒಂದೆಡೆ ಅಗಾಧ ಬಂಡವಾಳವನ್ನು ಅಪೇಕ್ಷಿಸುವ ಉದ್ಯಮ, ಮತ್ತೊಂದು ಕಡೆ ಒಂದು ವಿಶಿಷ್ಟ ಸಂಯುಕ್ತ ಕಲೆ. ಚಿತ್ರನಿರ್ಮಾಣದಲ್ಲಿ ತೊಡಗಿಸಿದ ಆ ಬಂಡವಾಳವನ್ನು ಹಿಂತಿರುಗಿ ಪಡೆಯಲು ಚಿತ್ರತಯಾರಕರು ಮತ್ತು ನಿರ್ದೇಶಕರು ಬಹು ಸಂಖ್ಯಾತ ಪ್ರೇಕ್ಷಕರ ಬಗ್ಗೆ ತಮ್ಮದೇ ಆದ (ಆದರೆ ಪರೀಕ್ಷಿಸಲಾಗದ) ಗೃಹೀತಗಳನ್ನು ಇಟ್ಟುಕೊಂಡಿರುತ್ತಾರೆ ಮತ್ತು ಆ ಗೃಹೀತಗಳು ಬಗೆ ಬಗೆಯ ಒತ್ತಡಗಳನ್ನು ಚಿತ್ರಕಥೆಯ ಮೇಲೆ ಹೇರುತ್ತವೆ. ಇಂತಹ ಕೆಲವು ಗೃಹೀತಗಳನ್ನು ಹೀಗೆ ದಾಖಲಿಸಬಹುದೆಂದು ತೋರುತ್ತದೆ.

ಅ) ಸಂಘರ್ಷದ ಸ್ವರೂಪ ಏನೇ ಇರಲಿ, ಚಿತ್ರವು ಸುಖಾಂತವಾಗಿರಲೇ ಬೇಕು.

ಆ) ಚಿತ್ರದ ನಾಯಕ ನಟನಿಗೆ ಯಾವ ದೌರ್ಬಲ್ಯವೂ ಇರದೆ ಅವನು ಎಲ್ಲವನ್ನೂ ಜಯಿಸುವ ಸಮರ್ಥ ಹಾಗೂ ಆದರ್ಶ ಪುರುಷನಾಗಿರಬೇಕು. (ಈ ಎರಡೂ ಒತ್ತಡಗಳ ಪರಿಣಾಮದಿಂದಾಗಿಯೇ ತರಾಸು ಅವರ ತ್ರಿವಳಿ ಕಾದಂಬರಿಯನ್ನಾಧರಿಸಿದ ನಾಗಾಭರಣ ನಿರ್ದೇಶನದ ಆಕಸ್ಮಿಕ ಸುಖಾಂತವಾಗುತ್ತದೆ ಮತ್ತು ನಾಯಕ ನಟ (ರಾಜಕುಮಾರ್) ಆದರ್ಶ ಪುರುಷನಾಗುತ್ತಾನೆ. ಆದರೆ, ಕಾದಂಬರಿಯಲ್ಲಿ ಕೇಂದ್ರ ಪಾತ್ರವು ಅತಿ ದುರ್ಬಲವಾಗಿದ್ದು, ಕಥೆ ದುರಂತದಲ್ಲಿಯೇ ಮುಗಿಯುತ್ತದೆ.)

ಇ) ಕಥೆ ಯಾವ ಸ್ವರೂಪದಲ್ಲಿಯೇ ಇದ್ದರೂ ಹಾಡುಗಳು – ಸಾಧ್ಯವಾದರೆ ನರ್ತನವೂ ಕೂಡಾ ಇರಬೇಕು. (ಈ ಚಿತ್ರಕಥೆಯಲ್ಲಿ ಆ ಸಮಸ್ಯೆ ಏಳುವುದೇ ಇಲ್ಲ; ಏಕೆಂದರೆ ಕೇಂದ್ರಪಾತ್ರವಾದ ಮಂಜುನಾಥ ಕವಿ ಮತ್ತು ವಾಸ್ತವದ ಕವಿ (ಕೆ.ಎಸ್.ನ) ತಮ್ಮ ಹಾಡುಗಳಿಗಾಗಿಯೇ ಪ್ರಸಿದ್ಧರಾಗಿದ್ದವರು.)

ಈ) ಚಿತ್ರದ ಕೊನೆಯಲ್ಲಿ ಯಾವುದಾದರೂ ರಹಸ್ಯ ಸ್ಫೋಟವಾಗಿ, ಅದರ ಮೂಲಕ ನಾಯಕನು ಎಲ್ಲವನ್ನೂ ಜಯಿಸಿ, ಚಿತ್ರವು ಸುಖಾಂತವಾಗಬೇಕು. ಈ ಒತ್ತಡದ ಪರಿಣಾಮ ಮೈಸೂರು ಮಲ್ಲಿಗೆ ಚಿತ್ರಪ್ರತಿಯ ಕೊನೆಯ ಭಾಗದಲ್ಲಿ ಕಂಡುಬರುತ್ತದೆ. ಚಿತ್ರಪ್ರತಿಯ ಕೊನೆಯ ಘಟ್ಟದಲ್ಲಿ ಬರುವ ಮಂಜುನಾಥನ ಕಲ್ಪಿತ ಸಾವು ಮತ್ತು ಅನಿರೀಕ್ಷಿತವಾಗಿ ಅವನು ಅವನ ಕವನಸಂಗ್ರಹದ ಬಿಡುಗಡೆಯ ಸಂದರ್ಭದಲ್ಲಿ ಜೀವಂತವಾಗಿ ಬರುವುದು ತುಂಬಾ ಕೃತಕವೆಂಬಂತೆ ತೋರುತ್ತದೆ. ಕಥನದಲ್ಲಿ ಕುತೂಹಲವನ್ನು ಕಾಯ್ದುಕೊಳ್ಳಬೇಕಾದರೂ

'ಅಂತಿಮ ರಹಸ್ಯ' ಮತ್ತು 'ರಹಸ್ಯಸ್ಫೋಟ'ದಲ್ಲಿ ಮುಕ್ತಾಯ ಇವುಗಳು ಚಲನಚಿತ್ರಗಳ ಯಶಸ್ಸಿಗೆ ಅನಿವಾರ್ಯವೆ? ನಿಜವಾಗಿಯೂ ಪ್ರೇಕ್ಷಕರು ಅಂತಹ 'ರಹಸ್ಯ– ರಹಸ್ಯ ಸ್ಫೋಟ'ವನ್ನು ಅಪೇಕ್ಷಿಸುತ್ತಾರೆಯೆ? ನನಗೆ ತೋರುವಂತೆ, ಕೊನೆಯವರೆಗೆ ಪ್ರೇಕ್ಷಕರನ್ನು ರಂಜಿಸಿಕೊಂಡು ಬಂದ ಈ ಚಿತ್ರ ಕೊನೆಯಲ್ಲಿ ಮಂಜುನಾಥನನ್ನು ಗಾಯಾಳುವಾದಂತೆ ಮತ್ತು ಅನಂತರ ಅವನು ಗುಣವಾಗಿ ಸ್ವಾತಂತ್ರ್ಯ ದಿನಾಚರಣೆಯಂದು ಭಾಗವಹಿಸಿದಂತೆ ತೋರಿಸಿದ್ದರೂ ಪ್ರೇಕ್ಷಕರಿಗೆ ಅತೃಪ್ತಿಯಾಗುತ್ತಿತ್ತೆಂದು ನನಗೆ ಕಾಣುವುದಿಲ್ಲ. ಆದರೆ, ಮತ್ತೂ ಒಂದು ಮಾತನ್ನು ಕೂಡಲೇ ಸೇರಿಸಬೇಕು: ಸಾಹಿತ್ಯವಿಮರ್ಶೆಯೇ ಬೇರೆ, ನೂರಾರು ಜನರಿಗೆ ಬದುಕು ಕಟ್ಟಿಕೊಡುವ ಚಲನಚಿತ್ರ ಪ್ರಪಂಚವೇ ಬೇರೆ. ಸಾಹಿತ್ಯವಿಮರ್ಶೆಯನ್ನು ಮೀರಿ ಒಂದು ಚಿತ್ರವು ಯಶಸ್ವಿಯಾಗಬಹುದು ಅಥವಾ ಸೋಲಬಹುದು. ಬಹುಸಂಖ್ಯಾತ ಪ್ರೇಕ್ಷಕರ ಅಭಿರುಚಿಯನ್ನು ತಾರ್ಕಿಕವಾಗಿ ಅಳೆಯಲು ಸಾಧ್ಯವೇ ಇಲ್ಲ.

ಕಥೆ–ಕಾದಂಬರಿ–ನಾಟಕಗಳನ್ನು ಆಧರಿಸಿರುವ ಚಲನಚಿತ್ರಗಳು ಎಲ್ಲಾ ಭಾಷೆಗಳಲ್ಲಿಯೂ ಪ್ರಸಿದ್ಧವಾಗಿವೆ. ಆದರೆ, ಭಾವಗೀತೆಗಳನ್ನು ಮಾತ್ರ ಆಧರಿಸಿ 1991ರಲ್ಲಿ ತಯಾರಿಸಲ್ಪಟ್ಟ, ಸದಭಿರುಚಿಯ ಈ ಚಿತ್ರ ಕನ್ನಡದಲ್ಲಿ ಮಾತ್ರವಲ್ಲದೆ ಇತರ ಭಾಷೆಗಳಲ್ಲಿಯೂ (ನನಗೆ ತಿಳಿದಂತೆ) ಮೊಟ್ಟ ಮೊದಲ ಪ್ರಯೋಗ. ಇದು ನಾಗಾಭರಣ ಕನ್ನಡಕ್ಕೆ ಕೊಟ್ಟ ಕೊಡುಗೆ ಮತ್ತು ಕನ್ನಡಿಗರೆಲ್ಲರೂ ಅವರ ಸ್ವೋಪಜ್ಞತೆಗೆ ಹಾಗೂ ಸಾಹಸಕ್ಕೆ ಅಭಿನಂದನೆಗಳನ್ನು ಅವರಿಗೆ ಸಲ್ಲಿಸಲೇ ಬೇಕು.

* * * * *

ನಾವು ಮಾಡುವ ಪ್ರತಿಯೊಂದು ಕಾರ್ಯವೂ ನಮಗೆ ಏನನ್ನಾದರೂ ಹೊಸದಾಗಿ ಕಲಿಸುತ್ತದೆ. ಈ ಮುನ್ನುಡಿಯ ಸಂದರ್ಭದಲ್ಲಿ ನನ್ನ ಮಟ್ಟಿಗಂತೂ ಈ ಮಾತು ಸಂಪೂರ್ಣ ಸತ್ಯ. ಚಲನಚಿತ್ರ ಕ್ಷೇತ್ರ ನನಗೊಂದು ಅಗಾಧ ವಿಸ್ಮಯದ ಅಪರಿಚಿತ ಲೋಕ. ಆ ಲೋಕದ ಬಗ್ಗೆ ಸ್ವಲ್ಪವಾದರೂ ಪ್ರವೇಶ ಪಡೆಯಲು ಈ ಮುನ್ನುಡಿ ಬರೆಯುವ ಪ್ರಕ್ರಿಯೆ ಅನುವಾಗಿದೆ. ಇಂತಹ ಅಪೂರ್ವ ಅವಕಾಶವನ್ನು ಕೊಟ್ಟ ಪ್ರಿಯ ನಾಗಾಭರಣ ಅವರಿಗೆ ನಾನು ಆಭಾರಿಯಾಗಿದ್ದೇನೆ.

*ಸಿ. ಎನ್. ರಾಮಚಂದ್ರನ್*



## ಮೈಸೂರು ಮಲ್ಲಿಗೆ ಅರಳುವ ಮುನ್ನ.....

ನನ್ನ ಬಾಲ್ಯದಲ್ಲಿ ಪಿ ಕಾಳಿಂಗರಾಯರ ಸಂಗೀತ ಗೋಷ್ಠಿಗಳನ್ನು ಕೇಳುವ ಸಾಕಷ್ಟು ಸದವಕಾಶಗಳು ಸಿಕ್ಕವು. ಆಗೆಲ್ಲ ಅವರು ಹಾಡುತ್ತಿದ್ದ "ನಮ್ಮೂರು ಚೆಂದವೋ..ನಿಮ್ಮೂರು ಚೆಂದವೋ" ಮತ್ತು "ರಾಯರು ಬಂದರು ಮಾವನ ಮನೆಗೆ" ಈ ಕವನಗಳನ್ನು ಜನಪದಗೀತೆಯೆಂದೇ ಭಾವಿಸಿದ್ದೆ. ನಂತರ ನನ್ನ ಓದಿನ ದಿನಗಳಲ್ಲಿ ಗೊತ್ತಾದದ್ದು ಕವಿ ಕೆ.ಎಸ್. ನರಸಿಂಹಸ್ವಾಮಿಯವರ ಕವನವೆಂದು. ಇಂಥಹ ಕಲಿಕೆಯ ವಿಸ್ತಾರಗಳೇ ನನ್ನ ವೃತ್ತಿ ಜೀವನದ ಮೈಲಿಗಲ್ಲುಗಳು.

ಕರ್ನಾಟಕ ಚಲನಚಿತ್ರ ಅಕಾಡೆಮಿಯ ಪ್ರಥಮ ಅಧ್ಯಕ್ಷನಾಗಿ ಅಕಾಡೆಮಿಯ ರೂಪುರೇಷೆಗಳನ್ನ ನಿರ್ಧರಿಸುತ್ತಿದ್ದಾಗ ಸಿನಿಮಾ ಶೈಕ್ಷಣಿಕವಾಗಿ ಬೆಳೆಯಲು ಬೆಳೆಸಲು ಬೇಕಾದ ಆಕರಗಳನ್ನ ಗಮನಿಸಿ ಅವುಗಳನ್ನು ನೀಗಿಸುವ ನಿಟ್ಟಿನಲ್ಲಿ ಹಲವು ಯೋಚನೆಗಳನ್ನು, ಯೋಜನೆಗಳನ್ನು ಕೈಗೆತ್ತಿಕೊಂಡೆ. ಅವುಗಳಲ್ಲಿ ಒಂದು 'ಚಿತ್ರಕಥಾ ಪಠ್ಯಗಳ ಮುದ್ರಣ', "ಚಲನಚಿತ್ರದಲ್ಲಿ ಶಿಕ್ಷಣ, ಶಿಕ್ಷಣದಲ್ಲಿ ಚಲನಚಿತ್ರ" ಎಂಬ ಘೋಷವಾಕ್ಯದೊಂದಿಗೆ ಪ್ರಾರಂಭವಾದ ಅಕಾಡೆಮಿಯ ಆಶಯ ಹಾಗೆಯೇ ಮುಂದುವರೆಯಲಿ ಎಂದು ಆಶಿಸುತ್ತಾ ನನ್ನ ಚಲನಚಿತ್ರಯಾನದಲ್ಲಿ ನಾನು ಮತ್ತು ನನ್ನ ಪ್ರೇಕ್ಷಕರು ಗುರುತಿಸಿದ ಕೆಲವು ಪ್ರಯೋಗಗಳ ಚಿತ್ರಕಥೆಯನ್ನು ಓದುಗರ ಹಾಗು ಸಿನಿಮಾಸಕ್ತರ ಉಪಯೋಗಕ್ಕಾಗಿ ಪ್ರಕಟಿಸಲು ಹರ್ಷಿಸುತ್ತೇನೆ.

ಸಿನಿಮಾ ಮತ್ತು ಇನ್ನುಳಿದ ಸಾಹಿತ್ಯ ಪ್ರಕಾರಗಳಿಗೂ ಇರುವ ವ್ಯತ್ಯಾಸವನ್ನು ಗಮನಿಸಿಯೇ ಚಿತ್ರಕಥೆಗಳ ಓದಿನ ಒಳಗೆ ವಿಹರಿಸಬೇಕಾಗುತ್ತದೆ ಎನ್ನುವುದು ನನ್ನ ಅಭಿಪ್ರಾಯ. ಸಾಹಿತ್ಯ ಕೃತಿಗಳ ಅಮೂರ್ತ ಅನುಭವವನ್ನು ಚಲನಚಿತ್ರಗಳು ಮೂರ್ತ ಅನುಭವಗಳಾಗಿ ಪರಿವರ್ತಿಸುವುದರಿಂದ ಮತ್ತು ಓದುಗರ ಮುಖಾಮುಖಿಯಾಗುವ ಸಾಧ್ಯತೆಯಿರುತ್ತದೆ. ಈ ಕಾರಣದಿಂದಾಗಿಯೇ ಚಿತ್ರಕಥಾ ಸಾಹಿತ್ಯವು ತನ್ನದೇ ಆದ ಸಾಹಿತ್ಯಿಕ ಆಯಾಮವೊಂದನ್ನು ಸೃಷ್ಟಿಸಿಕೊಳ್ಳಬೇಕಾದ ಅವಶ್ಯಕತೆ ಇದೆ. ಕನ್ನಡದ ಮಟ್ಟಿಗೆ ಕೆಲವೇ ಚಿತ್ರಕಥಾ ಸಾಹಿತ್ಯ ಕೃತಿಗಳು ಪ್ರಕಟವಾಗಿರುವುದರಿಂದ ಅವುಗಳ ಶೈಲಿ, ವ್ಯಾಕರಣ, ಬಂಧ, ಓಘ ಇವುಗಳ ನಿರ್ದಿಷ್ಟ ಸ್ವರೂಪ ಪಕ್ವವಾಗಿಲ್ಲ. ಈ ದಿಸೆಯಲ್ಲಿಟ್ಟ ಹೆಜ್ಜೆಗಳಲ್ಲಿ ನನ್ನದೂ ಒಂದು ಪ್ರಾಯೋಗಿಕ ಹೆಜ್ಜೆ ಎಂಬುದರ ಅರಿವಿನೊಡನೆ ಈ ಚಿತ್ರಕಥೆಯನ್ನು ನಿಮ್ಮ ಕೈಯಲ್ಲಿ ಇರಿಸುತ್ತಿದ್ದೇನೆ.

ಚಲನಚಿತ್ರ ರಂಗನಾಟಕದ ಪರಿಷ್ಕೃತ ರೂಪವೇ ಎಂಬುದು ಒಂದು ಪ್ರಶ್ನೆ. ಒಂದು ರೀತಿಯಲ್ಲಿ ಹೌದು ಎಂದಾದರೆ ಇನ್ನೊಂದು ರೀತಿಯಲ್ಲಿ ಅದರ ವಿಸ್ತೃತ ರೂಪ ಎಂದೇ ಹೇಳಬಹುದು. ಚಲನಚಿತ್ರ ಪ್ರಾರಂಭವಾದದ್ದೇ ರಂಗರೂಪಗಳನ್ನು ದೃಶ್ಯ ರೂಪಗಳನ್ನಾಗಿ ಮಾರ್ಪಡಿಸುತ್ತ. ಹೀಗಾಗಿ ಅದರ ಛಾಪು ಈಗಲೂ ಇದೆ. ನಾಟಕಗಳನ್ನು ಓದುವ ಮತ್ತು ಅವುಗಳನ್ನು ನಂತರ ರಂಗರೂಪಕ್ಕೆ ತರುವ ವಿಧಾನಗಳನ್ನು ನಾವು ಗಮನಿಸಿದಾಗ ಅದೇ ಶೈಲಿಯಲ್ಲಿ ಚಲನಚಿತ್ರದ ಚಿತ್ರಕಥೆ ಹಾಗು ಸಿನಿಮಾ ದೃಶ್ಯ ರೂಪ ನಮ್ಮ ಕಣ್ಣಮುಂದೆ ಬರುತ್ತದೆ.

ಚಲನಚಿತ್ರಕ್ಕೆ ಪೂರಕವಾದ ಶ್ರವ್ಯ ಸಾಮಾಗ್ರಿ ಮತ್ತು ದೃಶ್ಯ ಸಾಮಾಗ್ರಿ ಇವೆರಡನ್ನೂ ಬೇರೆ ಬೇರೆಯಾಗಿ ವಿಭಜಿಸಲೂಬಹುದು. ಒಟ್ಟಾರೆಯಾಗಿ ಹೇಳುತ್ತಲೂ ಹೋಗಬಹುದು. ಚಿತ್ರಕಥೆ ಸಂಭಾಷಣೆ ಹಾಗು ಅಲ್ಲಿ ನಡೆಯುವ ಕ್ರಿಯೆಗಳ ಸಮೀಕರಣವನ್ನು ನಾವು ಕಾಣಬಹುದು ಆದರೆ ಚಿತ್ರಿಕೆಗಳು ಕಣ್ಣಮುಂದೆ ಮೂಡುವುದಿಲ್ಲ ಹೀಗಾಗಿ ಚಿತ್ರಕಥಾ ಸೃಷ್ಟಿಯೊಂದನ್ನು ಓದುವ ಕ್ರಮವನ್ನು ಅಥವಾ ಓದುವ ಇತಿಮಿತಿಗಳನ್ನು ಅರ್ಥಮಾಡಿಕೊಂಡೆ ಚಲನಚಿತ್ರ ಕಥಾ–ಸಾಹಿತ್ಯವನ್ನು ನಾವು ಸ್ವೀಕರಿಸಬೇಕಾಗುತ್ತದೆ. ಪಾತ್ರಗಳಲ್ಲಿರುವ ಪಾತ್ರಪೋಷಣೆಗಳನ್ನು ನವಿರಾದ ಭಾವಗಳನ್ನು ತೀವ್ರ ಸಂವೇದನೆಗಳನ್ನು ಚಿತ್ರಕಥೆ ಓದುವವನ ಪರಿಭಾವಕ್ಕೆ ಮತ್ತು ಆತನ ಕಲ್ಪನೆಗೆ ಬಿಡುತ್ತ ಹೋಗುತ್ತದೆ. ಅದಕ್ಕೆ ಬೇಕಾದ ಸೂಕ್ಷ್ಮಗಳನ್ನು ಸದೃಡೀಕರಿಸುತ್ತ ಹೋಗುತ್ತದೆ. ಆದರೆ ನಿಜವಾಗಿಯೂ ಬಿಂಬ–ಭಾವದಲ್ಲಿ ಮೂಡುವುದು ಏನು ಎಂಬುದು ತಕ್ಷಣವೇ ಹೊಳೆಯದಿರಬಹುದು ಆದರೆ ಅದು ಹೀಗಿರಬಹುದು ಎಂಬ ವ್ಯಾಖ್ಯೆಯನ್ನು ಅದು ಕೊಡುತ್ತದೆ.

ಚಿತ್ರಕಥಾ ಲೇಖನ ಒಂದು ಕ್ರಿಯಾಶೀಲ ನಿರ್ಮಿತಿಯಾಗಿರುವುದರಿಂದ ಕಥಾಹಂದರ ಹೇಗಿತ್ತು ಅದರ ನಂತರ ಹೇಗಾಯಿತು ಎಂಬುದರ ಬಗ್ಗೆ ಕೂಡ ಚರ್ಚೆಯನ್ನು ಏರ್ಪಡಿಸಬಲ್ಲದು. ಕಥೆಯ ಹಂತದಲ್ಲಿದ್ದಂತಹ ಹಲವು ಸೂಕ್ಷ್ಮಗಳು ಚಿತ್ರಕಥೆಯಲ್ಲಿ ಇಲ್ಲದಿರಬಹುದು ಹಾಗೆಯೇ ಕಥೆಯಲ್ಲಿ ಇಲ್ಲದಂತಹ ಹಲವು ಸೂಕ್ಷ್ಮಗಳು ಚಿತ್ರಕಥೆಯಲ್ಲಿ ಸೇರಬಹುದು ಈ ದೃಷ್ಟಿಯಲ್ಲಿಯೂ ಕೂಡ ಸೃಜನಶೀಲ, ಕ್ರಿಯಾಶೀಲ ನಿರ್ಮಿತಿಗಿರುವಂತಹ ಎಲ್ಲ ಸಾಧ್ಯತೆಗಳನ್ನು ಚಿತ್ರಕಥಾ ಸಾಹಿತ್ಯ ತನ್ನದಾಗಿಸಿಕೊಳ್ಳುತ್ತದೆ. ಕೆಲವೊಮ್ಮೆ ಚಿತ್ರಕಥೆಯೇ ಇಲ್ಲದೆ ಚಿತ್ರೀಕರಣ ಮಾಡುವುದು ಕೆಲವರಿಗೆ ಸಾಧ್ಯವಾಗಬಹುದೋ ಏನೋ, ಆದರೆ ಅದು ಒಂದು ರೀತಿ ಹಬ್ಬದ ಊಟವನ್ನು ನೆಲದ ಮೇಲೆ ಹಾಕಿಕೊಂಡು ತಿಂದಂತೆಯೇ, ಸಮರ್ಥವಾಗಿ ಚಿತ್ರಿಕೆಗಳು ಮೂಡುತ್ತವೆ, ಚಲನಚಿತ್ರ ತನ್ನ ಗುರಿಯನ್ನು, ಹೀಗಾಗಿ ನಿರ್ದೇಶಕ, ಸಂಕಲನಕಾರ, ಛಾಯಾಗ್ರಾಹಕ ಈ ಮೂವರು ಮುಖ್ಯರ ಜೊತೆಜೊತೆಯಲ್ಲಿಯೇ ನಟ–ನಟಿಯರ ಒಂದು ಸ್ಾಂಘಿಕ ಕ್ರಿಯೆ ಚಿತ್ರಕಥಾ ಸಾಹಿತ್ಯವನ್ನು ಚಲನಚಿತ್ರವನ್ನಾಗಿ ಮಾರ್ಪಡಿಸುತ್ತದೆ ಆದ್ದರಿಂದ ಚಿತ್ರಕಥೆಯ ಹಂತದಲ್ಲಿಯೇ ಎಲ್ಲರಿಗೂ ಅದರ ದರ್ಶನಭಾಗ್ಯ ಸಾಧ್ಯವಾಗುವುದು ಬಹಳ ಮುಖ್ಯವೆನಿಸುತ್ತದೆ. ಆ ದೂರದರ್ಶನದ ಜೊತೆಜೊತೆಯಲ್ಲಿಯೇ ಎಲ್ಲರು ಒಮ್ಮುಖವಾಗಿ ಕೆಲಸಮಾಡುವುದು ಬಹಳ ಮುಖ್ಯ ಕೂಡ. ಚಲನಚಿತ್ರಕ್ಕೆ ಕಥೆ ಬೀಜವಾದರೆ ಚಿತ್ರಕಥೆ ಅಂಕುರ. ಇನ್ನುಳಿದ ಸಾಧನ ಸಲಕರಣೆಗಳು ಕಲಾವಿದರೊಟ್ಟಿಗೆ ಬಳಕೆಯೊಂದಿಗೆ ಒಂದು ವೃಕ್ಷವಾಗುತ್ತದೆ. ಇಂತಹ ಮಾದರಿ ಚಿತ್ರಕಥೆಗಳು ಚಲನಚಿತ್ರ ನಿರ್ಮಾಣದ ಪರಂಪರೆಯನ್ನು ನಮಗೆ ಐತಿಹಾಸಿಕವಾಗಿ ಮುಟ್ಟಿಸುತ್ತದೆ ಹಾಗೂ ಹುಟ್ಟುಹಾಕುತ್ತದೆ. ಅದೊಂದು ಪಾರದರ್ಶಕ ಯೋಜನೆಯಾಗುತ್ತದೆ. ಅದರ ಉನ್ನತೀಕರಣ ಚಿತ್ರಕಥೆಯಿದ್ದಾಗ ಮಾತ್ರ ಸಾಧ್ಯವಾಗುತ್ತದೆ. ಸಾಹಿತಿಯ ಆತ್ಮಸಂಗಾತದಿಂದ ಹುಟ್ಟುವ ಕಥಾಗತಿತ ಸಂಗಾತವನ್ನೇ ಪ್ರವೇಶಿಸಲು ಪ್ರಥಮ ಪೂರಕ ನಿರ್ಮಿತಿ ಈ ಚಿತ್ರಕಥೆ. ಇಲ್ಲಿ ಸಾಹಿತಿ ನಿರ್ದೇಶಕನೂ ಆಗುತ್ತಾನೆ. ಚಲನಚಿತ್ರ ಒಟ್ಟಾರೆಯಾಗಿ ಬಯಸುವ ದೃಶ್ಯಾವಳಿಗಳಲ್ಲಿ ಆಹಾರ್ಯಾದಿ ಸಾಧನ ಸಲಕರಣೆಗಳು ಕಲಾವಂತಿಕೆಯ ಸ್ಪರ್ಶ ಇತ್ಯಾದಿಗಳೆಲ್ಲವೂ ಚಿತ್ರಕಥೆಯಿದ್ದಾಗ ದಟ್ಟವಾಗುತ್ತ ಸೃಜನ ಶೀಲವಾಗುತ್ತ ದಟ್ಟವಾದ ನಿರ್ಮಿತಿಯೊಂದಕ್ಕೆ ಸಾಕ್ಷಿಯಾಗುತ್ತದೆ.



ದೃಶ್ಯ ಹಾಗು ಶ್ರವ್ಯ ಮಾಧ್ಯಮಗಳ ಒಗ್ಗೂಡುವಿಕೆ ಇಲ್ಲಿನ ಕ್ರಿಯಾಶೀಲ ನಿರ್ಮಿತಿ. ಅಲ್ಲಿ ಭಾಷೆ, ಸಂಗೀತ, ಪರಿಸರ ಧ್ವನಿಗಳು ಪೂರಕ ಅಂಶಗಳಾಗಿ ಕೆಲಸಮಾಸುತ್ತವೆ. ಚಲನಚಿತ್ರದಲ್ಲಿ ಬಳಸಿದ ಭಾಷೆ ಚಿತ್ರಕಥಾ ಹಂದರದಲ್ಲಿಯೇ ಸ್ಪಷ್ಟವಾಗಿ ಗೋಚರಿಸಿದಾಗ ಅದು ಆ ನಟ–ನಟಿಯರ ಮುಖಾಂತರ ಇನ್ನೊಂದು ಆಯಾಮವನ್ನು ಕಟ್ಟಿಕೊಡುತ್ತದೆ. ಹೀಗೆ ಭಾಷೆಯ ಸ್ವರೂಪವನ್ನು ನಿರ್ಧರಿಸುವಲ್ಲಿ ಚಲನಚಿತ್ರಗಳು ಬಹಳಷ್ಟು ಮುಂಚೂಣಿಯಲ್ಲಿ ಕೆಲಸ ಮಾಡಿವೆ. ಇನ್ನು ಚಿತ್ರಬ್ರಹ್ಮನೆಂದು ಕರೆಯಲ್ಪಡುವ ನಿರ್ದೇಶಕ, ಚಲನಚಿತ್ರದ ಮೊದಲ ಹಂತದಲ್ಲಿ ಅಂದರೆ ಚಿತ್ರಕಥಾ ಹಂತದಲ್ಲಿಯೇ ತನ್ನೆಲ್ಲ ಇತಿಮಿತಿಗಳನ್ನು ನಿರ್ಧರಿಸಿಕೊಳ್ಳುತ್ತಾನೆ. ಅದು ವ್ಯಾವಹಾರಿಕವಾಗಿರಬಹುದು, ರಾಜಕೀಯವಾಗಿರಬಹುದು, ಸಾಮಾಜಿಕವಾಗಿರಬಹುದು ಹಾಗೆಯೇ ಸೃಜನಶೀಲವೂ ಆಗಿರಬಹುದು. ತನ್ನ ಸಿನಿಮಾದ ತಿರುವು ಬಿಂದುಗಳನ್ನು ಆತ ನಿರ್ಧರಿಸಿದಾಗ ಮಾತ್ರ ಉತ್ತಮ ಚಲನಚಿತ್ರದತ್ತ ಆ ಚತ್ರಕಥೆ ಹೆಜ್ಜೆಹಾಕುತ್ತದೆ. ಚಲನಚಿತ್ರ ಕಥೆಯ ಚಿತ್ರಕಥೆಯನ್ನು ಓದುವ ಕ್ರಮವೊಂದನ್ನು ನಾವು ಅಂದುಕೊಳ್ಳಬೇಕು ಎಂದು ನನಗನಿಸುತ್ತದೆ.

ಮೈಸೂರು ಮಲ್ಲಿಗೆ ಚಿತ್ರವನ್ನು ನೋಡಿದವರಿಗೆ ಈ ಚಿತ್ರಕಥೆ ಸುಲಿದ ಬಾಳೆಹಣ್ಣಿನಂತೆ ಅರ್ಥವಾಗುತ್ತಾ ಹೋಗುತ್ತದೆ. ಹಾಗೆಯೇ ಚಿತ್ರಕಥೆ ಓದಿದ ಮೇಲೆ ಚಲನ ಚಿತ್ರ ನೋಡಿದವರಿಗೆ ಚಿತ್ರಿಕೆಗಳ ವಿಸ್ತಾರದ ಅರಿವಾಗಬಹುದು. ನಾನು ಕೊಡುವ ಟಿಪ್ಪಣಿಗಳು ಇತ್ತೀಚಿನದಾದ್ದರಿಂದ ಹಿಂದಿನ ನೆನಪುಗಳನ್ನು, ಆಶಯಗಳನ್ನು ದಾಖಲಿಸುತ್ತಿದ್ದೇನೆ. ಒಟ್ಟಿನಲ್ಲಿ ಕನ್ನಡ ಚಲನ ಚಿತ್ರ ಸಾರಸ್ವತ ಲೋಕಕ್ಕೆ, ಕನ್ನಡ ಸಿನಿಮಾ ವಿದ್ಯಾರ್ಥಿಗಳಿಗೆ ಹಾಗು ಆಸಕ್ತರಿಗೆ ಈ ಪುಸ್ತಕ ಉಪಯೋಗವಾಗಬೇಕೆನ್ನುವುದೇ ನನ್ನ ಆಶಯ.

*ಟಿ.ಎಸ್. ನಾಗಾಭರಣ*

## ಕವನಿಸಿದ ಸಿನಿಮಾ, ಮೈಸೂರ ಮಲ್ಲಿಗೆ

ಭಾರತೀಯ ಚಲನಚಿತ್ರ ಇತಿಹಾಸದಲ್ಲಿ ಕವನಗಳನ್ನ ಆಧಾರವಾಗಿಟ್ಟುಕೊಂಡು ಸಿನಿಮಾ ಮಾಡಿರುವ ಏಕೈಕ ಚಿತ್ರ 'ಮೈಸೂರ ಮಲ್ಲಿಗೆ'. ಮೈಸೂರು ಮಲ್ಲಿಗೆಯ ಕವನಗಳನ್ನ ಬೇರೆ ಬೇರೆ ಸಂಧರ್ಭದಲ್ಲಿ ಬರೆದಿರುವ ಕವಿಗೇ ಅವರು ಬರೆದಿರುವ ಕವನಗಳಲ್ಲಿ ಒಂದು ಆಶಯ ಸೂತ್ರವನ್ನು ಅದರಲ್ಲೊಂದು ಚಿತ್ರ ಕಥಯನ್ನು ಒದಗಿಸುವುದು ಬಹಳ ಕಷ್ಟದ ಸಂಗತಿಯೇ ಸರಿ. ಮೈಸೂರು ಮಲ್ಲಿಗೆ ಚಿತ್ರ ಕಥೆಯಾಗಲು ಸುಮಾರು ಒಂದೂವರೆ ವರ್ಷಗಳ ಪರಿಶ್ರಮವಿದೆ. ಮೂಲತ ಕವನಗಳನ್ನು ಬಳಸಿಕೊಂಡು ಮಾಡಿದ ಕಥೆಯಾದುದರಿಂದ ಆಯ್ದುಕೊಂಡ ಕವನಗಳಿಗೆ ಕಥೆ ಹೊಂದಿಕೆಯಾಗದಿರುವುದು. ಕೆಲವೊಮ್ಮೆ ಕವನಗಳು ಕಥೆಯ ವೇಗಕ್ಕೆ ಹೊಂದಿಕೊಳ್ಳದಿರುವುದು, ಅದೆಲ್ಲವನ್ನು ಒಂದೊಂದಾಗಿ ಹೊಂದಿಸಿಕೊಳ್ಳುತ್ತಾ ಯಾವ ಯಾವ ಕವನಗಳನ್ನ ಬಳಸಿಕೊಳ್ಳುತ್ತೇವೆ ಎಂದು ಚರ್ಚಿಸಿ ಅದರಲ್ಲಿ ಬರುವ ಪಾತ್ರಗಳನ್ನು ಹುಡುಕಿ ನಿರ್ಧರಿಸಬೇಕಾದದ್ದು ಇವು ಮುಖ್ಯವಾಗಿತ್ತು.

ಉದಾಹರಣೆಗೆ "ಶಾನುಬೋಗರ ಮಗಳು" ಕವನದಲ್ಲಿ ಬರುವ ಶಾನುಬೋಗ ಮತ್ತು ಅವನ ಮಗಳು ಪದ್ಮ, ಬಳೆಗಾರ ಚೆನ್ನಯ್ಯ ಎನ್ನುವ ಕವನದಲ್ಲಿನ ಬಳೆಗಾರ ಚನ್ನಯ್ಯ ಹೀಗೆ ಕವನಗಳಲ್ಲಿ ಬರುವ ಎಲ್ಲಾ ಪಾತ್ರಗಳನ್ನು ಒಂದೆಡೆ ಸೇರಿಸಿಕೊಂಡು ಆಯ್ದ ಕವನಗಳು ಹಾಗು ಆಯ್ದ ಪಾತ್ರಗಳ ಮುಖಾಂತರ ಕಥಾಪ್ರವೇಶ ಮಾಡುವುದೆಂದು ನಿರ್ಧಾರ ಮಾಡಿ ನೂರಾರು ದೃಷ್ಟಿಕೋನಗಳಲ್ಲಿ ಕಥಾಹಂದರವನ್ನು ಯೋಚಿಸಿದಾಗ ಕವನಕ್ಕೆ ಸರಿಹೊಂದುವ ಕಥೆ ಸಿಗುತ್ತಿರಲಿಲ್ಲ, ಸಿಕ್ಕ ಕಥೆಗೂ ಆಯ್ದು ಕವನದ ಭಾವಾಭಿವ್ಯಕ್ತಿಗಳಿಗೂ ತಾಳೆಯಾಗುತ್ತಿರಲಿಲ್ಲ. ಕೆಲವೊಮ್ಮೆ ಆಯ್ದ ಕವನಗಳು ಅಸಂಬದ್ಧವಾದಾಗ ಅವುಗಳನ್ನು ಬಿಟ್ಟು ಕವಿಯ ಬೇರೆ ಕವನ ಸಂಕಲನಗಳಿಂದ ಕವನಗಳನ್ನು ಆರಿಸಿಕೊಳ್ಳಲಾಯಿತು. ಹೀಗೆ 18 ತಿಂಗಳು ಕಥೆಯ ಸೃಷ್ಟಿ ಕ್ರಿಯೆ ಗಜಗರ್ಭವಾಯಿತು.

ಈ ಕಥಾ ಸೃಷ್ಟಿಯ ಸಂದಿಗ್ಧ ಸಮಯದಲ್ಲಿ ನಮಗೆ ಸ್ಪೂರ್ತಿಯಾಗಿ, ಸೃಜನಶೀಲವಾಗಿ ನಮ್ಮೊಡನೆ ಕೆಲಸ ಮಾಡಿದ ಕವಿಗಳು ಶ್ರೀ ಎಚ್.ಎಸ್. ವೆಂಕಟೇಶ್ ಮೂರ್ತಿ, ಎಂ.ಎನ್. ವ್ಯಾಸರಾವ್, ನರಹಳ್ಳಿ ಬಾಲಸುಬ್ರಮಣ್ಯ, ಎಸ್. ಬಸವರಾಜ್ ಹಾಗು ಸಂಗೀತ ನಿರ್ದೇಶಕ ಸಿ. ಅಶ್ವಥ್. ಈ ಐದು ಜನರ ಜೊತೆ ನಿರಂತರವಾಗಿ ಸೃಷ್ಟಿ, ಸಂವಾದ, ಮರುಸೃಷ್ಟಿ, ಒಪ್ಪಿಗೆ ನಂತರ ರೂಪಾಂತರ ಕ್ರಿಯೆಗಳಲ್ಲಿ ತೊಡಗಿದ್ದರ ಪ್ರತಿಫಲವೇ ಮೈಸೂರ ಮಲ್ಲಿಗೆ ಸಿನಿಮಾ.

ಪ್ರಾರಂಭಿಕ ಕಥಾಹಂದರದಲ್ಲಿ ಶಾನುಬೋಗ, ಶಾನುಬೋಗನ ಮಗಳು ಮತ್ತು ಅವಳನ್ನ ಪ್ರೀತಿಸಿದ ಶಾಲಾ ಮಾಸ್ತರು ಇವರ ಸುತ್ತಾ ಪ್ರೇಮ ಕಥೆಯನ್ನಷ್ಟೇ ಹೇಳೋಣಾ ಎಂದಾಗ ಕೆ.ಎಸ್. ನರಸಿಂಹಸ್ವಾಮಿಯವರು ದಾಂಪತ್ಯ ಗೀತೆಗಳ ಕವಿ ಆದ್ದರಿಂದ ದಾಂಪತ್ಯದ ಕಥೆಯಾಗಬೇಕು ಎಂದಾಯಿತು. ಇಲ್ಲಾ ಅವರು ಪ್ರೇಮಕವಿ, ಪ್ರೇಮಕಥೆಯನ್ನೇ ಪ್ರಮುಖವಾಗಿ ಹೇಳೋಣ ಎಂಬ ವಾದವೂ ಮುಂದಾಯಿತು. ನಿಜ, ಕೇವಲ ಪ್ರೇಮ, ದಾಂಪತ್ಯ ಅಷ್ಟೇ



ಸಿನಿಮಾವನ್ನು ಕಟ್ಟಬಲ್ಲುದೇ ಈ ಪ್ರಶ್ನೆಗೆ ಉತ್ತರ ಸಿಗದೇ ಹಲವು ಕಥಾಹಂದರಗಳು ಬಿದ್ದು ಹೋದವು. ಪ್ರೇಮಕಥೆ ಎಂದು ತೀರ್ಮಾನ ಮಾಡಿಕೊಂಡಿದ್ದರಿಂದ ಕಥೆಯಲ್ಲಿ ಒಬ್ಬ ನಾಯಕ, ನಾಯಕಿ, ನಾಯಕಿಯ ಅಪ್ಪ ಶಾನುಭೋಗ ಆಗಾಗ ಬಂದು ಹೋಗುವ ಬಳೆಗಾರ ಚನ್ನಯ್ಯ ಹೀಗೆ ಘಟನಾವಳಿಗಳು ಹೊಂದಾಣಿಕೆಯಾಗುತ್ತಿತ್ತೇ ಹೊರತು ಕಥೆಯ ಸ್ವರೂಪದಲ್ಲಿ ಇರಲಿಲ್ಲ ಹಾಗಾಗಿ ನಮಗೆ ಒಂದು ಕಥೆ ಅದಕ್ಕೆ ಬೇಕಾದಂತ ಒಂದು ಪರಿಸರ ಬೇಕಾಗಿತ್ತು. ಈ ಸಂದಿಗ್ಧತೆಯಲ್ಲಿ ಇರಬೇಕಾದರೆ ನಾನು ಸ್ವಾತಂತ್ರ ಸಂಗ್ರಾಮದ ಹಿನ್ನಲೆಯನ್ನ ಆರಿಸಿಕೊಂಡೆ. ಮೊದಮೊದಲು ಎಲ್ಲರೂ ತಿರಸ್ಕರಿಸಿಬಿಟ್ಟರು ಆದರೆ ಈ ಕಾಲಘಟ್ಟದ ದೆಸೆಯಿಂದ ನಮಗೆ ಸಿಕ್ಕ ಅನುಕೂಲಗಳು ಹಲವು, ಕತೆಗೆ ಬೇಕಾದ ಹಲವು ಆಯಾಮಗಳು ಈಗ ತೆರೆದುಕೊಂಡವು. ಸ್ವಾತಂತ್ರ ಸಂಗ್ರಾಮದ ಆ ದಿನಗಳಲ್ಲಿ ನಾಯಕ ಕವಿ ತನ್ನ ಸ್ವತಂತ್ರ ಪ್ರವೃತ್ತಿಯಿಂದ ತಾನು ಕೂಡ ಚಳುವಳಿಯಲ್ಲಿ ಭಾಗಿಯಾಗಿ ಶಾನುಭೋಗರ ವಿರುದ್ಧವಾಗಿ ನಿಲ್ಲುವ ಸಂಘರ್ಷ ಕೇವಲ ಕುಟುಂಬ ಸಂಘರ್ಷವಷ್ಟೇ ಅಲ್ಲ ಸಾಮಾಜಿಕ ಸಂಘರ್ಷವೂ ಆಗಿತ್ತು.


ಕಥೆಯ ಪ್ರಾರಂಭದಲ್ಲಿ ನಾಯಕ ನಾಯಕಿರ ಭೇಟಿಯಾಗುತ್ತದೆ, ಪ್ರೀತಿಯಾಗುತ್ತದೆ ಅವರಿಬ್ಬರ ಮದುವೆಯಾಗುತ್ತದೆ, ಮದುವೆಯಾದ ಮೇಲೆ ನಾಯಕ ಹಾಗು ಶಾನುಭೋಗರ ನಡುವೆ ವೈಮನಸ್ಯ ಉಂಟಾಗುತ್ತದೆ. ನಾಯಕ ಚಳುವಳಿಗೆ ಹೊರಟುಹೋಗುತ್ತಾನೆ, ಭೂಗತನಾಗುತ್ತಾನೆ. ಅವನನ್ನು ಹುಡುಕಿಕೊಂಡು ಪೋಲೀಸರು ಅಲೆಯುತ್ತಾರೆ. ನಾಯಕ ನಾಯಕಿ ಬೇರೆ ಬೇರೆ ಕಡೆ, ಬಳೆಗಾರ ಚನ್ನಯ್ಯ ಇವರಿಬ್ಬರ ನಡುವೆ ಮಧ್ಯವರ್ತಿಯಾಗಿ ಗುಪ್ತ ಟಪಾಲಿನವನಾಗಿ ಕೆಲಸ ಮಾಡುತ್ತಾನೆ, ಚಳುವಳಿಗೆ ಸಹಾಯ ಮಾಡುತ್ತಾನೆ, ಪೋಲೀಸರ ಗುಂಡೇಟಿಗೆ ಬಲಿಯಾಗುತ್ತಾನೆ. ಹೀಗೆ ಘಟನಾವಳಿಗಳ ಕೊಂಡಿ ಕವನಗಳಿಗೆ ಪೂರಕವಾಗಿ ಕಥೆಯ ಗಟ್ಟಿತನಕ್ಕೆ ಸಾಕ್ಷಿಯಾಯಿತು. ಸ್ವಾತಂತ್ರ್ಯ ಸಂಗ್ರಾಮದ ಹಿನ್ನಲೆಯಿಂದಾಗ ನಮಗೆ ಬೇಕಾದ ಸಿನಿಮೀಯ ಸಂಘರ್ಷಗಳು ಅನಾವರಣಗೊಂಡವು. ಕವನದ ಒಟ್ಟಾರೆ ಆಶಯವನ್ನು ಎಲ್ಲೂ ವಿರೋದಿಸದೆ ಎಲ್ಲಿಯೂ ಬೇರೆ ಅರ್ಥ ಕಲ್ಪಿಸದೆ ನೂರಾರು ಅರ್ಥಗಳನ್ನು ಸೃಷ್ಟಿಸುವ ಹಾಗೆ ಬಳಸಿಕೊಳ್ಳಲು ಸಾದ್ಯವಾಯಿತು. ಚಿತ್ರಕಥೆ, ಸಂಭಾಷಣೆ ಇದಕ್ಕಾಗಿ ಎಸ್. ಬಸವರಾಜ್ ಹಾಗು ಎಂ.ಎನ್. ವ್ಯಾಸರಾಯರೊಡನೆ ಕುಳಿತುಕೊಂಡಾಗ ಬಳಸಿಕೊಂಡ ತಂತ್ರಗಾರಿಕೆ Flash back technique. ದೃಶ್ಯ ರೂಪವೊಂದರ ಸೃಷ್ಟಿ ಈ ಮರುಹುಟ್ಟಿನೊಡನೆ ಸೃಜನಶೀಲವಾಗುತ್ತಾ ಹೋಗುವ ಹಂತಗಳೇ ನಮ್ಮ ಪಠ್ಯಕೃತಿ.

ಈ ಚಲನಚಿತ್ರದ ಮತ್ತೊಂದು ವಿಶೇಷ ಎಂದರೆ ಕವನಗಳ ಚಿತ್ರೀಕರಣ ಉದಾಹರಣೆಗೆ 'ದೀಪವು ನಿನ್ನದೆ ಗಾಳಿಯು ನಿನ್ನದೇ' ಕವನವನ್ನು ಕವಿಯು ದೇವರಿಗೆ ಮೊರೆ ಹೋಗುವ ಸಂದರ್ಭವನ್ನು ನೆನೆದು ಬರೆಯುತ್ತಾನೆ ಆದರೆ ಸಿನಿಮಾದಲ್ಲಿ ಗರ್ಭಿಣಿಯಾದ ನಾಯಕಿ ತನ್ನ ಗಂಡನ ಸ್ಥಿತಿಯನ್ನು ದೇವರಲ್ಲಿ ನಿವೇದಿಸುತ್ತಾ ಹೇಳುತ್ತಾಳೆ. ಸಿನಿಮಾ ಕವನವನ್ನು ತನ್ನದಾಗಿಸಿಕೊಂಡಾಗ ಎಷ್ಟು ರೂಪಕಗಳನ್ನು, ಚಿತ್ರಿಕೆಗಳನ್ನು ಹುಟ್ಟಿ ಹಾಕುತ್ತದೆ ಎಂಬುದಕ್ಕೆ ಇದು ಸಾಕ್ಷಿ. ಈ ಪ್ರಯೋಗ ಪ್ರತಿ ಕವನದಲ್ಲೂ ಆಗಿದೆ. ಇನ್ನೊಂದು ಉದಾಹರಣೆ "ಸಿರಿಗೆರೆಯ ನೀರಲ್ಲಿ, ಬಿರಿದ ತಾವರೆಯಲ್ಲಿ ಕೆಂಪಾಗಿ ನಿನ್ನ ಹೆಸರು" ಇದು ಕವಿಯ ಕಲ್ಪನೆಯ ಎತ್ತರ ಇದನ್ನು ನಾವು ದೃಶ್ಯಮಾದ್ಯಮದಲ್ಲಿ ಎಷ್ಟು ಅಚ್ಚುಕಟ್ಟಾಗಿ ತೋರಿಸುತ್ತೇವೆ ಎಂಬುದನ್ನು ಗಮನಿಸಬಹುದು.

ಚಲನಚಿತ್ರವನ್ನು ನೋಡಿದ ಕವಿ ಶ್ರೀ ಕೆ.ಎಸ್. ನರಸಿಂಹಸ್ವಾಮಿಯವರ ಪ್ರತಿಕ್ರಿಯೆ ತುಂಬಾ ಚೆನ್ನಾಗಿತ್ತು, ಸಿನಿಮಾಗಾಗಿಯೇ ನಾನು ಕವನವನ್ನು ಬರೆದಿರುವೆ ಎನ್ನುವ ಹಾಗೆ ಮಾಡಿರುವೆಯಲ್ಲ ಎನ್ನುವ ಮೆಚ್ಚಿನ ಮಾತನ್ನು ಅವರು ಆಡಿದರು. ನಿಜ ಸಿನಿಮಾಗಾಗಿಯೇ ಅವರಿಂದ ಒಂದು ಗೀತೆಯನ್ನು ಬರೆಸಿಕೊಳ್ಳಲಾಯಿತು, ಅದು ಸಿನಿಮಾದ ಮೊಟ್ಟಮೊದಲ ಕವನ. ಅವರಿಗೆ ರಾಷ್ಟ್ರಪ್ರಶಸ್ತಿ ದೊರಕಿಸಿಕೊಟ್ಟ ಕವನ "ಬಿಡುಗಡೆ" ಅದರ ಶೀರ್ಷಿಕೆ. ಕವನಗಳ ಮುಖಾಂತರವೇ ಕವಿಯ ಆಶಯವನ್ನು ಅರ್ಥೈಸುವ ಕ್ರಿಯೆ ಈ ಚಿತ್ರದಲ್ಲಿ ನಡೆದಿದೆ. ಕನ್ನಡ ಸಿನಿಮಾ ಇತಿಹಾಸದಲ್ಲಿ ಇದು ಒಂದು ಉತ್ತಮ ಪ್ರಯೋಗ, ಬಹಳ ಹೆಮ್ಮೆಯ ವಿಚಾರವೆಂದರೆ ಇದು ಕೇವಲ ಪ್ರಯೋಗವಾಗಷ್ಟೇ ಉಳಿಯಲಿಲ್ಲ, ಜನಸಾಮಾನ್ಯರಿಗೆ ಹತ್ತಿರವಾದದ್ದು ಮುಖ್ಯ. ಕೆಲವೊಮ್ಮೆ ಪ್ರಯೋಗಗಳನ್ನು ಜನರು ಸ್ವೀಕರಿಸುವುದೇ ಇಲ್ಲ. ಆದರೆ ಈ ಚಲನಚಿತ್ರ 25 ವಾರಗಳು ಓಡಿದ್ದಲ್ಲದೇ ರಾಷ್ಟ್ರ ಪ್ರಶಸ್ತಿಯನ್ನೂ ಪಡೆಯಿತು. ಅಂದರೆ ಸಾಮಾನ್ಯರಿಂದ ಅಸಾಮಾನ್ಯರ ವರೆಗೆ ಸಿನಿಕರಿಂದ ವಿಮರ್ಶಕರ ವರೆಗೆ ವಾಣಿಜ್ಯರಿಂದ ಕಲಾತ್ಮಕತೆಯ ವರೆಗೆ ಸಮಾಜದ ಸರ್ವರಿಗೂ ಆಪ್ತವಾದದ್ದು ಹಾರ್ಧಿಕವಾದ ಸಂಗತಿ. ಮೈಸೂರ ಮಲ್ಲಿಗೆಯ ಬೇರೆ ಕವನಗಳು ಈ ಅದ್ಭುತವಾದ ಮಾಧ್ಯಮದಿಂದ ನಂತರದಲ್ಲಿ ಭಾರಿ ಪ್ರಚಲಿತವಾದದ್ದು ಕನ್ನಡ ಸಾರಸ್ವತ ಲೋಕದ ಅದೃಷ್ಟ.

***ಟಿ.ಎಸ್. ನಾಗಾಭರಣ***





## ಕೆ.ಎಸ್. ನರಸಿಂಹಸ್ವಾಮಿ

26-1-1915 – 28-12-2003

ಕಾವ್ಯ – ಪಂಡಿತರಿಗಷ್ಟೇ ಅಲ್ಲ ಪಾಮರರನ್ನೂ ರಂಜಿಸಬಲ್ಲದು ಎಂಬುದಕ್ಕೆ ನಿದರ್ಶನ ಕೆ.ಎಸ್. ನರಸಿಂಹಸ್ವಾಮಿ. ಸಾಮಾನ್ಯರನ್ನೂ ತನ್ನತ್ತ ಸೆಳೆದದ್ದೇ ಇವರ ಪದ್ಯಗಳು. ಯುವ ಪ್ರೇಮಿಗಳಿಗೆ, ದಂಪತಿಗಳಿಗೆ ಹರ್ಷೋತ್ಪತ್ತಿ ಮಾಡಿದ್ದೇ ಮೈಸೂರು ಮಲ್ಲಿಗೆ. 26 ಮುದ್ರಣ (2003) ಇವರ ಪ್ರಖ್ಯಾತಿಗೆ ಸಾಕ್ಷಿ. ಕನ್ನಡನಾಡಿಗೇ ಪಸರಿಸಿತು ಮಲ್ಲಿಗೆಯ ಕಂಪು.

ಕೆ.ಎಸ್. ನರಸಿಂಹಸ್ವಾಮಿ ಹುಟ್ಟಿದ್ದು ಮಂಡ್ಯ ಜಿಲ್ಲೆಯ ಕಿಕ್ಕೇರಿ. ತಂದೆ ಸುಬ್ಬರಾಯರು, ತಾಯಿ ನಾಗಮ್ಮ. ಆರಂಭದ ಶಿಕ್ಷಣ ಮೈಸೂರು ಟ್ರೈನಿಂಗ್ ಕಾಲೇಜಿನ ಶಿಕ್ಷಣ ಸಂಸ್ಥೆಯಲ್ಲಿ. ಮಹಾರಾಜ ಹೈಸ್ಕೂಲಿನಲ್ಲಿ ಪ್ರೌಢಶಿಕ್ಷಣ. ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಬಿ.ಎ. ಓದುತ್ತಿದ್ದಾಗ ತಂದೆಯ ನಿಧನದಿಂದ ಓದು ಅಪೂರ್ಣವಾಯಿತು. 1936ರಲ್ಲಿ ತಿಪಟೂರಿನಲ್ಲಿ ವೆಂಕಮ್ಮನವರೊಂದಿಗೆ ವಿವಾಹವಾಯಿತು.

ಕೆ.ಎಸ್. ನರಸಿಂಹಸ್ವಾಮಿ ಪ್ರಧಾನವಾಗಿ ಕವಿ. ಇವರ ಕೃತಿಗಳಲ್ಲಿ ಅನುವಾದವೂ ಸೇರಿವೆ. ಕೆ.ಎಸ್.ನ ಎ.ಆರ್. ಕೃಷ್ಣ ಶಾಸ್ತ್ರಿ, ಕುವೆಂಪು, ತೀ.ನಂ.ಶ್ರೀ., ವಿ.ಸೀ., ಗೋಪಾಲ ಕೃಷ್ಣ ಅಡಿಗ ಮೊದಲಾದವರೊಂದಿಗೆ ನಿಕಟ ಸಂಪರ್ಕ ಹೊಂದಿದ್ದರು. ಮೊದಲ ಕವನ ಸಂಗ್ರಹ ಮೈಸೂರ ಮಲ್ಲಿಗೆ 1942ರಲ್ಲಿ ಪ್ರಕಟ. ಐರಾವತ, ದೀಪದಮಲ್ಲಿ, ಉಂಗುರ, ಇರುವಂತಿಗೆ, ಶಿಲಾಲತೆ, ಮನೆಯಿಂದ ಮನೆಗೆ, ತೆರೆದ ಬಾಗಿಲು, ನವಿಲದನಿ, ಸಂಜೆ ಹಾಡು, ಕೈಮರದ ಬಾಗಿಲು, ದೀಪ ಸಾಲುಗಳ ನಡುವೆ ಇವರ ಇನ್ನಿತರ ಕವನ ಸಂಗ್ರಹಗಳು. ಬಣ್ಣದ ಚಿಟ್ಟೆ, ಬೆಟ್ಟದ ಗೌರಿ, ಕಂಬನಿ, ನಿನ್ನ ಹೆಸರು, ಚಿತ್ರವಳ್ಳಿಯ ಚೆಲುವೆಯರು ಮುಂತಾದ ಕವನಗಳ ಅನುವಾದ.

ಅಬ್ಬರರಿವಿರದ, ಆಡುಮಾತಿನ, ಲಯಕ್ಕೆ ಹತ್ತಿರದ, ಭಾಷೆಯ ಸೂಕ್ಷ್ಮ ಸಂವೇದನೆಯ ಅಭಿವ್ಯಕ್ತಿಯೆ ಕೆ.ಎಸ್.ನ. ಪದ್ಯದ ಪ್ರಮುಖ ಅಂಶ, ಇವರನ್ನು ಅರಸಿಬಂದ ಪ್ರಶಸ್ತಿಗಳು ಹಲವಾರು. ದೇವರಾಜ ಬಹದ್ದೂರ್ ಬಹುಮಾನ, ರಾಜ್ಯ ಸಂಸ್ಕೃತಿ ಬಹುಮಾನ, ಕನ್ನಡ ಸಾಹಿತ್ಯ ಪರಿಷತ್ತಿನ ಸುವರ್ಣ ಮಹೋತ್ಸವ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಸದಸ್ಯತ್ವ, ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ, ಮಾಸ್ತಿ ಪ್ರಶಸ್ತಿ, ಪಂಪ ಪ್ರಶಸ್ತಿ, ಕೇರಳದ ಕುಮಾರನ್ ಆಶಾನ್ ಪ್ರಶಸ್ತಿಗಳಿಗೆ ಭಾಜನ. 1970ರಲ್ಲಿ ಪ್ರೀತಿಯಿಂದ ಅರ್ಪಿಸಿದ ಗೌರವ ಗ್ರಂಥ "ಚಂದನ".

## ಸಿರಿನುಡಿ....

ರಂಗಭೂಮಿ ಹಿನ್ನೆಲೆಯಿಂದ ಬಂದ ನಾನು 'ಉದರ ನಿಮಿತ್ತ ಬಹುಕೃತ ವೇಷಂ' ಎನ್ನುವಂತೆ ಹೊಟ್ಟೆಪಾಡಿಗಾಗಿ ಪ್ರಕಾಶನ ಸಂಸ್ಥೆ ಪ್ರಾರಂಭಿಸಿದೆ. ಆದರೆ ನನ್ನಲ್ಲಿ ಅಡಗಿರುವ ಕಲಾವಿದ ಸದಾ ಕಾಡತೊಡಗಿದ್ದ, ಅದಕ್ಕಾಗಿಯೇ ರಂಗಭೂಮಿ ಹವ್ಯಾಸವನ್ನಾಗಿಸಿಕೊಂಡೆ ಅಷ್ಟಕ್ಕೆ ತೃಪ್ತನಾಗದ ನನ್ನೊಳಗಿನ ಕಲಾವಿದ ಮತ್ತೇನನ್ನಾದರೂ ಮಾಡಬೇಕೆಂದು ತುಡಿಯ ತೊಡಗಿದ ಈ ತುಡಿತ ನನ್ನನ್ನು ಚಲನಚಿತ್ರ ಕ್ಷೇತ್ರಕ್ಕೆ ಕಾಲಿಡುವಂತೆ ಮಾಡಿತು.

2006ರಲ್ಲಿ **'ದಾಟು'** ಚಿತ್ರದ ನಿರ್ಮಾಪಕನಾಗಿ ಈ ಕ್ಷೇತ್ರಕ್ಕೆ ಕಾಲಿಟ್ಟ ನನಗೆ ಮುಂದೆ **'ಪ್ರಾರ್ಥನೆ'** ಚಿತ್ರಕ್ಕೆ ಕಾರ್ಯಕಾರಿ ನಿರ್ಮಾಪಕನಾಗಿ ಕೆಲಸ ನಿರ್ವಹಿಸಿದೆ ಈ ಎರಡು ಚಿತ್ರಗಳ ತಯಾರಿಯಲ್ಲಿ ನಾನೂ ಕೇವಲ ನಿರ್ಮಾಪಕನಾಗಿರದೆ ಚಲನಚಿತ್ರ ಎಲ್ಲಾ ವಿಭಾಗಗಳಲ್ಲಿಯೂ ಗಮನ ಹರಿಸುವ ಅವಕಾಶ ಸಿಕ್ಕಿತು. ಇಂತಹ ಅವಕಾಶವನ್ನು ಬಿಟ್ಟವರುಂಟೇ, ಆದರೂ ಸದಾ ನಿರ್ದೇಶಕರ ಹಿಂದೆ-ಮುಂದೆ ಸುತ್ತುತ್ತಾ ಅವರ ಕಾರ್ಯ ವೈಖರಿಯಿಂದ ಪ್ರಭಾವಿತನಾದೆ. ಇದರ ಫಲವೇ ನಾನು ನಿರ್ದೇಶಕನಾಗಿದ್ದು.

**'ಗಾಂಧಿ ಜಯಂತಿ'** ಹಾಗೂ **'ಕೌದಿ'** ಎಂಬ ಎರಡು ಸೃಜನಶೀಲ ಚಲನಚಿತ್ರಗಳ ನಿರ್ದೇಶಿಸಿದೆ. ಈ ಸಂದರ್ಭದಲ್ಲಿ ನಾನು ಯಾರ ಬಳಿಯೂ ನೇರವಾಗಿ ಸಹಾಯಕನಾಗಿ ಕೆಲಸ ನಿರ್ವಹಿಸಿರಲಿಲ್ಲ. ಇಪ್ಪತ್ತು ವರ್ಷಗಳ ರಂಗಭೂಮಿ ಅನುಭವ ಹಾಗೂ ಎರಡು ಚಿತ್ರಗಳ ನಿರ್ವಹಿಸಿದ ಅನುಭವ ಅಷ್ಟೆ. ಆದರೆ ನನಗೆ ಇನ್ನೂ ಏನೋ ತಿಳಿದುಕೊಳ್ಳಬೇಕೆನ್ನುವ ಕಾತರ. ಈ ನಿಟ್ಟಿನಲ್ಲಿ ಯಾವುದಾದರೂ ಪುಸ್ತಕಗಳು ಸಿಗುತ್ತವೆಯೇನೋ ಎಂಬ ಹುಡುಕಾಟ ಪ್ರಾರಂಭವಾಯಿತು. ಅಲ್ಲೂ ನಿರಾಶೆ ಯಾಕೆಂದರೆ ನನಗೆ ಸಿಕ್ಕ ಸಿನಿಮಾ ಸಂಬಂಧ ಕೃತಿಗಳಲ್ಲಿ ನಿರ್ದೇಶಕರು ತಮ್ಮ ಯಾವ ಗುಟ್ಟನ್ನು ಬಿಟ್ಟುಕೊಟ್ಟಿರಲಿಲ್ಲ.



ನನ್ನ ಈ ಅಭಿಪ್ರಾಯವನ್ನು ಹಿರಿಯ ನಿರ್ದೇಶಕರು ಹಾಗೂ ಸದಾ ಹೊಸಬರಿಗೆ ಪ್ರೋತ್ಸಾಹ ಕೊಡುತ್ತಾ ಬಂದಿರುವ ಶ್ರೀಯುತ **ಟಿ.ಎಸ್.ನಾಗಾಭರಣ** ಅವರ ಬಳಿ ಹೇಳಿಕೊಂಡಾಗ ಅವರು **'ಆಕಸ್ಮಿಕ'** ಚಿತ್ರದ ಚಿತ್ರಕಥಾ ಕೃತಿಯನ್ನು ನನ್ನ ಕೈಯಲ್ಲಿಟ್ಟರು. ಅದನ್ನು ಓದಿದ ನನಗೆ ನಿಜಕ್ಕೂ ಭರಣ ಸರ್ ಅವರಲ್ಲಿ ಹತ್ತು ಚಿತ್ರಕ್ಕೆ ಸಹಾಯಕನಾಗಿ ಕೆಲಸ ಮಾಡಿದ ಅನುಭವ ಮೂಡಿತು. ಇಂತಹ ಚಲನಚಿತ್ರ ಕೃತಿಗಳು ಇನ್ನೂ ಹೆಚ್ಚು ಹೆಚ್ಚು ಬರಬೇಕು. ನಮ್ಮಂತ ಸಿನಿಮಾಸಕ್ತರ ಹಸಿವಿಗೆ ಆಹಾರವಾಗಬೇಕೆಂಬ ಬಯಕೆ. ಅದನ್ನು ಗುರುಗಳಿಗೆ ಹೇಳಿದಾಗ ಸಂತೋಷದಿಂದ ಒಪ್ಪಿ **'ಮೈಸೂರು ಮಲ್ಲಿಗೆ'** ಹಾಗೂ **'ಜನುಮದ ಜೋಡಿ'** ಚಿತ್ರಕಥೆ ನನ್ನ ಕೈಗಿತ್ತರು. ಈ ಕೃತಿಗಳು ನಿಜಕ್ಕೂ ಸಿನಿಮಾ ಕಲಿಯುವ ವಿದ್ಯಾರ್ಥಿಗಳಿಗೆ ಬಹಳ ಉಪಯುಕ್ತವಾಗಲಿದೆ. ಅದರಲ್ಲೂ ಪ್ರತಿಯೊಂದು ದೃಶ್ಯವನ್ನು ನಿರ್ದೇಶಕರು ನಿರ್ವಹಿಸಿದ ರೀತಿ, ಅದರಿಂದಾದ ಅನುಭವವನ್ನು ಟಿಪ್ಪಣಿಯೊಂದಿಗೆ ಇಲ್ಲಿ ಕೊಟ್ಟಿದ್ದಾರೆ.

ಇಂತಹ ಕೃತಿಯನ್ನು ಹೊರತರಲು ಅನುಮತಿ ಇತ್ತ ಶ್ರೀಯುತ ಟಿ.ಎಸ್.ನಾಗಾಭಾರಣ ಅವರಿಗೆ ನನ್ನಂತಹ ಹಲವಾರು ಸಿನಿಮಾ ವಿದ್ಯಾರ್ಥಿಗಳ ಪರವಾಗಿ ಧನ್ಯವಾದಗಳನ್ನು ತಿಳಿಸುತ್ತೇನೆ.

ಈ ಕೃತಿಯನ್ನು ಅಂದವಾಗಿ ಮುದ್ರಿಸಿಕೊಟ್ಟ ಸ್ವರ ಪ್ರಿಂಟರ್ಸ್‌ನ ಗೆಳೆಯರಿಗೆ ಹಾಗೂ ಡಿ.ಟಿ.ಪಿ. ಮಾಡಿದ ಪ್ರಸನ್ನ ಕುಮಾರ್. ಎಂ ಅವರಿಗೆ ಮತ್ತು ಮುಖಪುಟ ವಿನ್ಯಾಸ ಮಾಡಿದ ಮೋಹನ್ ಕಾಮಾಕ್ಷಿ ಅವರಿಗೆ ನಾನು ಅಭಾರಿ.

ಈ ಕೃತಿಯನ್ನು ಕೊಂಡು ಓದಿ ತಮ್ಮ ಸಿನಿಮಾ ಕ್ಷೇತ್ರ ಅನುಭವವನ್ನು ಹೆಚ್ಚಿಸಿಕೊಳ್ಳುವ ಎಲ್ಲರಿಗೂ ನನ್ನ ವಂದನೆಗಳು.

– **ರವೀಂದ್ರನಾಥ ಸಿರಿವರ**
ಪ್ರಕಾಶಕರು

## ಸಾರಾಂಶ

ಪಾಶ್ಚಾತ್ಯರ ಆಗಮನ ಹಾಗು ಅವರ ಶಿಕ್ಷಣ ವ್ಯವಸ್ಥೆಗಳಿಂದ ನಮ್ಮ ದೇಶದಾದ್ಯಂತ ಜನರಲ್ಲಿ ಸ್ವಭಾಷಾಭಿಮಾನ ಹಾಗು ದೇಶಭಕ್ತಿ ಅದಮ್ಯವಾಗಿ ಜಾಗೃತಗೊಂಡವು. ಇದರಿಂದ ಅತಿ ಹೆಚ್ಚು ಲಾಭ ಪಡೆದುಕೊಂಡದ್ದು ಕನ್ನಡ ನವ್ಯ ಸಾಹಿತ್ಯ. ನೂರಾರು ಯುವ ಕವಿಗಳು ತಮ್ಮ ನವ್ಯ ಕಾವ್ಯ ಹಾಗು ದೇಶಭಕ್ತಿ ಗೀತೆಗಳ ಮೂಲಕ ಹೊಸ ಶಕೆಯ ಆರಂಭವನ್ನು ಮಾಡಿದರು.

ಅವರಲ್ಲಿ ಮಲೆನಾಡಿನ ಓರ್ವ ಯುವ ಕವಿ ಇರುತ್ತಾನೆ. ಮಲೆನಾಡಿನ ಹಚ್ಚ ಹಸಿರಿನ ಮಡಿಲಿಂದ ಬಂದ ಗ್ರಾಮೀಣ ಚೆಲುವೆಯೋರ್ವಳನ್ನು ಮದುವೆಯಾಗುತ್ತಾನೆ. ಮೈಸೂರ ಮಲ್ಲಿಗೆಯ ಸ್ನಿಗ್ಧ ಸೌಂದರ್ಯ, ಸುವಾಸನೆಯ ಪ್ರತಿರೂಪವಾದ ಆಕೆಯ ಹೆಸರೇ ಪದ್ಮ. ಕವಿ ಕೆ. ಎಸ್. ನರಸಿಂಹಸ್ವಾಮಿ ತಮ್ಮ ಹಾಡುಗಳ ಮೂಲಕ ನವವಿವಾಹಿತನಾದ ಕವಿಯ ಪ್ರಣಯರಾಗಗಳನ್ನು ಪದರ ಪದರವಾಗಿ ತೆರೆದಿಡುತ್ತಾರೆ. ಈ ಕವಿಯೇ ಮಂಜುನಾಥ. ಇವರಿಬ್ಬರ ಜೀವನದ ರಮ್ಯ ಸಮಯದ ಚಿಕ್ಕ ತುಣುಕುಗಳ ಮಾಲೆಯೇ “ಮೈಸೂರ ಮಲ್ಲಿಗೆ”.

ಪದ್ಮ ಮಂಜುನಾಥರ ದಾಂಪತ್ಯದಲ್ಲಿ ಆತ ರಮ್ಯ ಪ್ರಣಯ ಕವಿತೆಗಳನ್ನು ಬರೆದರೂ ಆತನಲ್ಲೊಬ್ಬ ಸ್ವಾತಂತ್ರ ಹೋರಾಟಗರನಿರುತ್ತಾನೆ. ಆದರೆ ಪದ್ಮಳ ತಂದೆ ಶ್ಯಾನುಭೋಗಿಕೆ ನಡೆಸುತ್ತಾ ಮಂಜುನಾಥನ ಸ್ವಾತಂತ್ರ ಹೋರಾಟದ ಕನಸಿಗೆ ತಡೆಯನ್ನೊಡ್ಡಲು ಪ್ರಯತ್ನಿಸುತ್ತಲೇ ಇರುತ್ತಾರೆ. ಮಂಜುನಾಥನ ಮನಸ್ಸು ಹಾಡು, ಪ್ರೀತಿ ಹಾಗು ಸ್ವಾತಂತ್ರ ಹೋರಾಟದ ನಡುವೆ ಛಿದ್ರವಾಗುತ್ತದೆ. ಪದ್ಮಳ ತಂದೆ ಆಕೆಯ ಆಸೆಗಳನ್ನು ಕಡೆಗಣಿಸಿ ಆಕೆಯ ವಿವಾಹವನ್ನು ಆಂಗ್ಲರ ಸರ್ಕಾರದಲ್ಲಿ ಕೆಲಸ ಮಾಡುವ ಅಮಲ್ದಾರರ ಜೊತೆಗೆ ನಿಶ್ಚಯಿಸುತ್ತಾರೆ. ಆದರೆ ಬಳೆಗಾರ ಚೆನ್ನಯ್ಯನಿಂದಾಗಿ ಅದು ತಪ್ಪಿ ಹೋಗುತ್ತದೆ.

ಚೆನ್ನಯ್ಯ ಹಲವಾರು ಸ್ವಾತಂತ್ರ ಹೋರಾಟಗಾರರನ್ನು ಆಂಗ್ಲರಿಂದ ರಕ್ಷಿಸುತ್ತಾನೆ. ಆತ ಪದ್ಮಳಿಗೆ ಮಂಜುನಾಥನ ಸಂದೇಶ ತಲುಪಿಸಲು ಹೋಗುವಾಗ ಸಿಕ್ಕಿಬೀಳುತ್ತಾನೆ. ಆಂಗ್ಲರ ಕೈಯ್ಯಲ್ಲಿ ಸಿಕ್ಕಿಬಿದಿದ್ದ ಚೆನ್ನಯ್ಯನನ್ನು ಮಂಜು ರಕ್ಷಿಸುತ್ತಾನಾದರೂ ಗುಂಡಿನ ಕಾಳಗದಲ್ಲಿ ಚೆನ್ನಯ್ಯ ಅಸುನೀಗುತ್ತಾನೆ. ಗಂಭೀರವಾಗಿ ಗಾಯಗೊಂಡ ಮಂಜುನಾಥ ಪ್ರಜ್ಞಾಹೀನನಾಗುತ್ತಾನೆ.

ಸ್ವಾತಂತ್ರ ದಿನದಂದು ಬಿಡುಗಡೆಗೊಂಡ ಚಳುವಳಿಗಾರಲ್ಲಿ ಒಬ್ಬನಾಗಿ ಮಂಜುನಾಥ ಜೈಲಿನಿಂದ ಹೊರಬರುತ್ತಾನೆ. ಪದ್ಮಳಿಗಾಗಿ ಹುಡುಕಾಡುತ್ತಾ ಬಂದವನಿಗೆ ‘ಮೈಸೂರ ಮಲ್ಲಿಗೆ’ ಕವನ ಸಂಕಲನದ ಬಿಡುಗಡೆಯ ವಿಷಯ ತಿಳಿದು ಸಮಾರಂಭದತ್ತ ಧಾವಿಸುತ್ತಾನೆ. ಕವಿಯ ಶ್ರದ್ಧಾಂಜಲಿ, ಕವಿಯ ಸಮಾಗಮಕ್ಕೆ ಸಾಕ್ಷಿಯಾಗುತ್ತದೆ. ಜೀವನ ಪ್ರೀತಿಯ ಕಂಪು ಎಲ್ಲೆಡೆ ಹರಡುತ್ತದೆ.

ಕೆ.ಎಸ್. ನರಸಿಂಹಸ್ವಾಮಿ ಅವರ ಸಾಹಿತ್ಯಕ್ಕೆ ಅಶ್ವತ್ಥ್ ಅವರ ಸಂಗೀತ ಕೇಳುಗರನ್ನು ನಾದಸ್ವರ್ಗಕ್ಕೆ ಕರೆದೊಯ್ಯುತ್ತದೆ. ಈ ಸಾಹಿತ್ಯ, ಸಂಗೀತದ ಮದುವೆಗೆ ಚಪ್ಪರವಾಗುವ ನಿರ್ದೇಶಕ ಟಿ.ಎಸ್. ನಾಗಾಭರಣ, ಈ ದೃಶ್ಯ ಕಾವ್ಯವನ್ನು ರಮಣಿಯವಾಗಿ ತೆರೆಯ ಮೇಲೆ ತಂದಿಡುತ್ತಾರೆ. ‘ಮೈಸೂರ ಮಲ್ಲಿಗೆ’ ಚಿತ್ರ ರಂಗದ ಇತಿಹಾಸದಲ್ಲೇ ಒಂದು ಅಪೂರ್ವ ಅನುಭವ.



## Synopsis

The dormant love of one's land and language flared up as a result of the impact of western education in every nook and corner of the country. The greatest beneficiary of this impact was modern kannada poetry. dozens of young kannada poets burst into song and poured forth full throated music, mainly of patriotic fervor.

There was a young poet amongst them. He hailed from malnad or the land of the hills. It was pastarol setting of waving palms and swaying bananas, gurgling brooks and green fields and verdant hills, of the blue skies and cool scented breze. The poet had married a belle of this land, Padma. She was beautiful and sweet and innocent as the Mysore Jasmine – 'Mysoraa Mallige'. Our poet K.S. Narasimha Swamy began singing in this perfect sylvan setting vibrant and fragrant songs of marital bliss and conjugal love. " Mysoora Mallige". (Mysore Jasmine)- the anthology of these sweet and innocent pictures of the family life became and instant rage throughout the width and breadth of Karnataka. It was on everybody's lips.

In the film the young lovelorn poet not only sings love songs but is also a freedom fighter. Whereas Shanubhoga is the mouth-piece of the feudalism and tries his best to foil the deed of manju, his would be son-in-law. The young poet is torn between his love of the song and lure of freedom. The father fixes up his daughter's wedding with an officer of the state Amaldar ignoring the yearning of the young heart. But Channaiah, the bangle seller of the village saves the situation. Padma and Manju realize their life's dream.

Channaiah save a number of activists who were about to be caught for their underground activities. Channaiah is finally caught while carrying a lyrical message to Padma from Manjunatha. Manjunatha saves him from the police custody

in a daring escape bid. But he falls wounded and dies. Seriously injured Manjunatha faints in the forest.

When the independant India was announced, all the freedom fighters were released. Among them was Manjunatha. He comes in search of Padma and comes to know about his poem collection getting released. The function of obituary to poet becomes the platform for poets loved ones to unite.

In the end poet is given up for lost. His lyrics are brought out in the form the pen of K.S. Narasimha Swamy. They are set to music by Aswath. T.S. Nagabharana has brought the lyrics to the life on the screen. MYSOORA MALLIGE is the gift of a triumvirate - a love lorn young poet, a silver- throated Music director. It is unique experience in the annals of the film industry.

To earth's bounty , sorrow and pain.. To hold a mirror I yearn.... yearn...

The tender loving care of the human heart
How I wish to reflect... reflect... reflect...



## AWARDS & RECOGNITIONS

**Best Regional film**
Indian National Film Awards

**Best Lyrics**
Indian National Film Awards

**Second Best Film**
Karnataka State Film Awards

**Best Actress : Sudharani**
Karnataka State Film Awards

**Best Cinematography : B.C. Gowrishankar**
Karnataka State Film Awards

**Best Sound Recordist : Aravind Kiggal & K.S. Krishnamurthy**
Karnataka State Film Awards

**Best Editor : Suresh Urs**
Karnataka State Film Awards

**Best Direction**
Filmfare Awards.

**Best Film**
Filmfare Awards.

**Best Actress**
Filmfare Awards.

Official Entry to **India International Film Festival**.
Entry to **Italy Film Festival**.
Selected and screened at **Indian Panorama**.
Celebrated **Silver Jubilee**.

Released year: **1992**

## ಕಲಾವಿದರು

ಗಿರೀಶ್ ಕಾರ್ನಾಡ್
ಆನಂದ್
ಸುಧಾರಾಣಿ
ಸುಂದರ್‌ರಾಜ್
ದತ್ತಾತ್ರೇಯ ಹೆಚ್.ಜಿ
ಕಾಸರಗೋಡು ಚಿನ್ನ
ಶಂಕರ್ ರಾವ್
ಶ್ರೀಪತಿ ಬಲ್ಲಾಳ್
ಶಿವಮೊಗ್ಗ ವೆಂಕಟೇಶ್
ಆಂಜನಪ್ಪ
ಮಲ್ಲೇಶ್ ಹರ್ತಿ
ಮಂಜುನಾಥ ಹೆಗಡೆ
ಹೆಗಡೆ ಡಿ.ಜಿ
ಬಾಲಚಂದರ ರೈ
ನಾಯಕ್
ಶಿವಣ್ಣ
ರಂಗನಾಥ ಹೆಚ್.ಎ
ಸೀತಾರಾಮಾಚಾರ್
ಕಿಶೋರಿ ಬಲ್ಲಾಳ್
ಪಂಕಜ
ಭಾಮಿನಿ
ಸಂತೃಪ್ತಿ
ಪೂರ್ಣಿಮ
ಬೇಬಿ ಭಾರ್ಗವಿ
ಮತ್ತು
ತೀರ್ಥಹಳ್ಳಿ, ಶಿವಮೊಗ್ಗ
ಹಾಗೂ
ಭದ್ರಾವತಿಯ
ರಂಗಭೂಮಿ ನಟರು.



## ತಾಂತ್ರಿಕ ವರ್ಗ

**ಹಿನ್ನಲೆ ಗಾಯನ**
ಎಸ್.ಪಿ.ಬಾಲಸುಬ್ರಮಣ್ಯ
ಎಸ್. ಜಾನಕಿ
ರತ್ನಮಾಲಾ ಪ್ರಕಾಶ್
ಬಿ.ಆರ್.ಛಾಯಾ

**ಸಹಾಯಕರು**

*ನಿರ್ದೇಶನ*
ಆನಂದ್ ಮಠದ್

*ಸಂಗೀತ*
ಶ್ರೀನಿವಾಸ ಮೂರ್ತಿ
ಬಾಲಿ

*ಛಾಯಾಗ್ರಹಣ*
ಶೇಖರ, ವೆಂಕಟೇಶ

*ಸಂಕಲನ*
ಶಿವು, ಕೆಂಪರಾಜ್, ರವಿ

**ಧ್ವನಿಗ್ರಹಣ**
ಅರವಿಂದ್
ಅಣ್ಣಾದೊರೈ
ಪೀಟರ್

**ಕಲೆ**
ರಾಜೇಂದ್ರ, ಅಪ್ಪಯ್ಯ
ಕುಮಾರ, ಜಗದೀಶ, ವೈದಿ

**ಪ್ರಸಾದನ**
ಮಲ್ಲೇಶ್ ಹರ್ತಿ

**ಸ್ಥಿರ ಚಿತ್ರಣ**
ಆರಾಧ್ಯ

**ಪತ್ರಿಕಾ ಸಂಪರ್ಕ**
ನಾಗೇಂದ್ರ

**ಪ್ರಚಾರ ಕಲೆ**
ಮಸ್ತಾನ್

**ವಸ್ತ್ರ ವಿನ್ಯಾಸ**
ನಾಗಿಣಿ ಭರಣ

**ನಿರ್ಮಾಣ ನಿರ್ವಹಣೆ**
ಬಿ.ವಿ. ರಾಮಚಂದ್ರ

**ನಿರ್ಮಾಣ ನಿರ್ವಾಹಕ**
ಶ್ರೀರಂಗ

**ಕಾರ್ಯಕಾರಿ ನಿರ್ಮಾಪಕ**
ಎಸ್.ಡಿ. ಅಶ್ವಥ್

**ನೃತ್ಯ**
ಉಡುಪಿ ಬಿ. ಜಯರಾಮ್
ದೇವಿ

**ಸಹ–ನಿರ್ದೇಶನ**
ಗಾಯಿತ್ರಿ

**ಧ್ವನಿ**
ಕೃಷ್ಣಮೂರ್ತಿ

**ಕಲೆ**
ಶಶಿಧರ್ ಅಡಪ

**ಸಂಭಾಷಣೆ**
ಬಸವರಾಜ್
ವ್ಯಾಸರಾವ್

**ಕವನಗಳು**
ಕೆ.ಎಸ್. ನರಸಿಂಹಸ್ವಾಮಿ

**ಕಥೆ–ಚಿತ್ರಕಥೆ**
ನಾಗಾಭರಣ
ಅಶ್ವತ್ಥ್
ಬಸವರಾಜು

**ಸಂಸ್ಕರಣ**
ಪ್ರಸಾದ್ ಫಿಲ್ಮ್ ಲ್ಯಾಬರೇಟರೀಸ್

**ಸಂಕಲನ ಕೇಂದ್ರ**
ಜ್ಯೋತಿ ಎಂಟರ್‌ಪ್ರೈಸಸ್

**ಧ್ವನಿಗ್ರಹಣ**
ಸಂಕೇತ್ ಎಲೆಕ್ಟ್ರಾನಿಕ್ಸ್
ಗಾನ ಲಹರಿ ರೆಕಾರ್ಡಿಂಗ್ ಸ್ಟೂಡಿಯೋ

**ಹೊರಾಂಗಣ ಘಟಕ**
ಸುಷ್ಮ ಮೂವಿ ಟೋನ್
ರಾಘವೇಂದ್ರ ಟ್‌ಡೋರ್ ಯುನಿಟ್

**ಅಡಿಗೆ ವ್ಯವಸ್ಥೆ**
ಶ್ರೀಪತಿ
ರಂಗಪ್ಪ
ಪ್ರಭಾಕರ್
ಶಿವಣ್ಣ

**ನಿರ್ಮಾಣ ಸಹಾಯ**
ಶ್ರೀಕಂಠ ಹುಬ್ಬಳ್ಳಿ
ಬೆಂಜಮಿನ್
ಗೋವಿಂದ
ಚನ್ನೇಗೌಡ
ಗೋಪಾಲ
ಕುಮಾರ

**ವಾಹನ ಚಾಲಕರು**
ಶಿವದಾಸನ್
ನಾಗಸುಂದರ
ಉಮೇಶ
ನರಸಿಂಹಯ್ಯ
ಸುಕುಮಾರ್ ಜೈನ್

**ಧ್ವನಿದಾನ**
ಶಶಿಕಲಾ
ವತ್ಸಲಾ
ರೂಪಾ
ಸಂಧ್ಯಾ
ಮೋಹನ್
ಜೈರಾಜ್
ಶ್ರೀರಂಗ
ಮಂಜುನಾಥ್ ಭಟ್

**ಸಂಕಲನ**
ಸುರೇಶ್ ಅರಸ್

**ಸಂಗೀತ**
ಸಿ. ಅಶ್ವತ್ಥ್

**ಛಾಯಾಗ್ರಹಣ**
ಬಿ.ಸಿ. ಗೌರಿಶಂಕರ್

**ನಿರ್ಮಾಪಕ**
ಶ್ರೀಹರಿ ಎಲ್.ಖೋಡೆ

**ನಿರ್ದೇಶನ**
ಟಿ.ಎಸ್. ನಾಗಾಭರಣ

ಇದು
**'ಯಜಮಾನ್ ಎಂಟರ್‌ಪ್ರೈಸಸ್'**
ಅವರ ಕೊಡುಗೆ



# ದೃಶ್ಯ–1

*ರಾತ್ರಿ–ಒಳಾಂಗಣ–ಹೊರಾಂಗಣ–ಕಾರಾಗೃಹ*
*ಹಾಡು: ಕತ್ತಲೆ ತುಂಬಿದ ಬಾಂದಳದಂಚಿಗೆ*

(ಭಾರತದ ಕಾರಾಗೃಹವೊಂದರಲ್ಲಿ ರಾತ್ರಿಯ ಸಮಯ, ಪ್ರಶಾಂತವಾಗಿರುವ ಸೆರೆಮನೆ ಆವರಣ, ಸೆರೆಮನೆಯ ಒಂದು ಕೋಣೆಯಲ್ಲಿ ಕವನಗಳನ್ನು ಬರೆಯುತ್ತ ಕುಳಿತಿರುವ ಒಬ್ಬ ವ್ಯಕ್ತಿಯೊಡನೆ ಪ್ರಾರಂಭವಾಗಿ ಸೆರೆಮನೆಯಲ್ಲಿದ್ದ ಇನ್ನುಳಿದ ಸ್ವಾತಂತ್ರ್ಯ ಚಳುವಳಿಗಾರರ ಬಿಡುಗಡೆಯ ಪ್ರಕ್ರಿಯೆ ಪ್ರಾರಂಭವಾಗುತ್ತದೆ.)

ಕತ್ತಲೆ ತುಂಬಿದ ಬಾಂದಳದಂಚಿಗೆ
ಕಾದಿದೆ ಚಂದ್ರಿಕೆ ಬಿಡುಗಡೆಗೆ

ಹೃದಯಾಗ್ನಿಯ ತೆಳು ಹೊಗೆಯಲಿ ಕಾದಿದೆ
ಚೆಲುವೆ ಬಾಳಿನ ಬಿಡುಗಡೆಗೆ
ಹೆದ್ದಾರಿಯ ಹೆಮ್ಮರಗಳು ಹೂಗಳು ಕಾದಿವೆ ಬನದಲಿ ಬಿಡುಗಡೆಗೆ
ಕಾದಿದೆ ಬನದಲಿ ಬಿಡುಗಡೆಗೆ
ಮರೆಯದ ಹಾಡಿನ ಇಂಪಿನ ದಿಕ್ಕಿಗೆ ಕಿವಿಯೊಡ್ಡಿದೆ ಜಗ ಬಿಡುಗಡೆಗೆ
ಕಿವಿಯೊಡ್ಡಿದೆ ಜಗ ಬಿಡುಗಡೆಗೆ

ಹೂವಿಗೆ ಬಣ್ಣವೆ ಕಂಪೇ ಬಿಡುಗಡೆ
ಹಕ್ಕಿಗೆ ಬಿಡುಗಡೆ ಹಾಡೇ
ಹಕ್ಕಿಗೆ ಬಿಡುಗಡೆ ಹಾಡೇ
ನೋವು ನಲಿವುಗಳ ಗೊಂದಲದಾಚೆಗೆ
ಗೆಲುವೇ ಕಾದಿದೆ ಬಿಡುಗಡೆಗೆ
ಗೆಲುವೇ ಕಾದಿದೆ ಬಿಡುಗಡೆಗೆ

**ನಿರ್ದೇಶಕರ ಟಿಪ್ಪಣಿ:**
ಮೊಟ್ಟಮೊದಲನೆಯದಾಗಿ **"ಬಿಡುಗಡೆ"** ಹಾಡಿನ ಬಗ್ಗೆ ಕೆಲವು ಮಾತುಗಳನ್ನು ದಾಖಲಿಸಲೇಬೇಕು. ಕಾರಣ ಏನೆಂದರೆ ರಾಷ್ಟ್ರ ಪ್ರಶಸ್ತಿ ಸಮಿತಿಯಲ್ಲಿ ಕೆ.ಎಸ್. ನರಸಿಂಹಸ್ವಾಮಿಯವರ ಈ ಎಲ್ಲ ಕವನಗಳನ್ನು ಕೇಳಿದಂತಹ ಸದಸ್ಯರುಗಳು, ಬಹಳ ಅದ್ಭುತವಾದ ಕವನಗಳನ್ನು ರಚಿಸಿದ್ದಾರೆ ಆದರೆ

ಸಿನಿಮಾ ಗೀತೆಗೆ ಪ್ರಶಸ್ತಿ ಕೊಡುವುದಾದರೆ ಅದು ಚಲನಚಿತ್ರಕ್ಕೋಸ್ಕರವೇ ಹಾಡನ್ನ ಬರೆದಿದ್ದರೆ ಮಾತ್ರ ಕೊಡಬೇಕು. ಅವರ ಬೇರೆ ಕವನಗಳನ್ನ ಇಟ್ಟುಕೊಂಡು ಆಧರಿಸಿ ಚಲನಚಿತ್ರ ಮಾಡಿರುವುದರಿಂದ ನಾವು ಅವರನ್ನು "ಗೀತರಚನೆಕಾರ" ಎಂದು ಪರಿಗಣಿಸಲಾಗುವುದಿಲ್ಲ ಅನ್ನುವ ಮಾತನ್ನ ಹೇಳಿದರು. ಆಗ ನಾನು ಈ ಕವನವನ್ನು ಅವರಿಗೆ ಉಲ್ಲೇಖಿಸಿ, ಇಡೀ ಚಲನಚಿತ್ರದ ಆಶಯವನ್ನು ಅವರು ಈ ರೀತಿಯ ಒಂದು ಕವನದಲ್ಲಿ ಬರೆದುಕೊಟ್ಟಿದ್ದಾರೆ. ಈ ಕವನವನ್ನು ಇಟ್ಟುಕೊಂಡೇ ಪ್ರಶಸ್ತಿಗೆ ಸಂಬಂಧಪಟ್ಟ ನಿರ್ಧಾರವನ್ನು ತಗೆದುಕೊಳ್ಳಬಹುದು ಎಂದು ಹೇಳಿದೆ. ಅದನ್ನು ದಾಖಲಿಸಿದೆ ಕೂಡ. ಹೀಗಾಗಿ ಒಂದು ಚಿತ್ರಕ್ಕೆ ನರಸಿಂಹ ಸ್ವಾಮಿಯವರು ಚಿತ್ರಗೀತೆಯನ್ನು ರಚಿಸಿದ್ದಾರೆ ಎಂದರೆ ಅದು "ಮೈಸೂರು ಮಲ್ಲಿಗೆ"ಗೆ ಮಾತ್ರ. ಈ ಮೈಸೂರು ಮಲ್ಲಿಗೆಯ ಈ ಗೀತೆಯೊಂದಿಗೆ ಅವರಿಗೆ ರಾಷ್ಟ್ರೀಯ ಪ್ರಶಸ್ತಿ ದೊರಕಿದ್ದು ಎಲ್ಲ ಕನ್ನಡಿಗರಿಗೆ ಹೆಮ್ಮೆಯ ವಿಷಯ. ಈ ಹಾಡಿನ ಒಟ್ಟಾರೆ ಆಶಯವನ್ನು ನೀವು ಗುರುತಿಸಿದಾಗ ಬಿಡುಗಡೆಯ ಜೊತೆಯಲ್ಲಿ ಪ್ರತಿಯೊಂದು ಪ್ರಾಕೃತಿಕವಾದಂತಹ ಪ್ರಕೃತಿದತ್ತವಾದಂತಹ ಆಶಯಗಳನ್ನು ಹೇಳುತ್ತ, ಬಿಡುಗಡೆಗೆ ಏನೆಲ್ಲ ಆಯಾಮಗಳಿವೆ ಎಂಬುದನ್ನುತಿಳಿಸುತ್ತಾ ಹೋಗುತ್ತದೆ. ಹಾಗೆಯೇ ಚಿತ್ರಿಕೆಯಲ್ಲಿ ಬರುವಂತಹ ಕವಿಯ ಬಿಡುಗಡೆ. ಕವಿ, ರಾಷ್ಟ್ರೀಯ ಆಂದೋಲನದಲ್ಲಿ ಭಾಗವಹಿಸಿ ಅದರ ಮುಖಾಂತರ ಸೆರೆಯಲ್ಲಿದ್ದು 1947 ಆಗಸ್ಟ್ 15ರ ನಂತರ ಬಿಡುಗಡೆಯಾಗಿ ತನ್ನೂರು ನವಿಲೂರಿನ ಕಡೆಗೆ ಹೊರಟಾಗ ದಾರಿಯುದ್ದಕ್ಕು ಆತ ಕಾಣುವ ಬಿಡುಗಡೆಯ ಸಂಕೇತಗಳನ್ನು ಚಿತ್ರಿಕೆಗಳಾಗಿ ಮಾರ್ಪಡಿಸುತ್ತ ಹಾರುವ ಹಕ್ಕಿ ಹಾರಾಡುವ ಭಾವುಟ, ಭಾರತದ ಸ್ವಾತಂತ್ರ್ಯದ ಹಳ್ಳಿಗಾಡಿನ ಪ್ರತಿಮೆಗಳನ್ನು ಪ್ರತಿಬಿಂಬಿಸುತ್ತ ಮೈಸೂರು ಮಲ್ಲಿಗೆಯ ಕವಿ ತನ್ನ ಪಯಣವನ್ನು ಸೆರೆಮನೆಯಿಂದ ಊರಿನ ಕಡೆಗೆ ನಡೆಸುತ್ತಾನೆ. ಇಡೀ ಹಾಡು ಈ ರೀತಿಯ ಪ್ರತಿಮೆಗಳ ಅನಾವರಣವನ್ನು ಕಟ್ಟಿಕೊಡುವುದೇ ಅದರ ಪ್ರಮುಖ ಅಂಶವಾಗಿದೆ. ಹಾಗೆಯೇ ಮೊಟ್ಟಮೊದಲ ಚಿತ್ರಿಕೆಯಿಂದಲೇ ಆ ಕಾಲಘಟ್ಟವನ್ನು ಪ್ರತಿನಿಧಿಸುವ ಚಿತ್ರಪರಿಕರಗಳನ್ನು ಅಂದರೆ ಬಸ್ಸು, ಬಸ್ಸಿನ ಜನ, ಇವೆಲ್ಲವನ್ನು ಗಮನಿಸಿದಾಗ ಒಂದೇ ಸಾರಿ ಪ್ರೇಕ್ಷಕ ಆ ಕಾಲಘಟ್ಟಕ್ಕೆ ತನ್ನನ್ನು ತಾನು ಹೊಂದಿಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಈ ಕವನದ ಆಶಯ ಮತ್ತು ಇಡೀ ಚಿತ್ರದ ಆಶಯ ಮೊದಲ ಚಿತ್ರಿಕೆಯಿಂದಲೇ ಮನಸ್ಸನ್ನು ಆವರಿಸಿಕೊಳ್ಳುತ್ತದೆ.



## ದೃಶ್ಯ–2

*ಹಗಲು – ಹೊರಾಂಗಣ*


(ತುಂಗಾ ವೇಗಧೂತ ಎಂಬ ವಾಹನದಲ್ಲಿ ಬರುತ್ತಿರುವ ನಾಯಕ ಮಂಜುನಾಥ ತನ್ನ ಸುತ್ತ–ಮುತ್ತ, ಅಕ್ಕ–ಪಕ್ಕದಲ್ಲಿರುವ ಸಹ–ಪ್ರಯಾಣಿಕರನ್ನು ಮತ್ತು ನೇತುಹಾಕಿದ್ದ ಗಾಂಧಿ ಮತ್ತು ನೆಹರೂರ ಭಾವಚಿತ್ರಗಳನ್ನು ನೋಡುತ್ತ ಮಂದಹಾಸ ಬೀರುತ್ತಾನೆ. ನಂತರ ಸಹ–ಪ್ರಯಾಣಿಕ ನಿದ್ರೆಯಲ್ಲಿ ತನ್ನ ಮೇಲೆ ಬೀಳುತ್ತಿರುವುದನ್ನು ಗಮನಿಸಿದ ಮಂಜುನಾಥ ಅವನನ್ನು ಸರಿಸುತ್ತಾನೆ. ಎಚ್ಚರಗೊಂಡ ಸಹ–ಪ್ರಯಾಣಿಕ;)

ಸಹ–ಪ್ರಯಾಣಿಕ : ಯಾವೂರು?

ಮಂಜುನಾಥ : ನವಿಲೂರು

ಸಹ–ಪ್ರಯಾಣಿಕ : ಓ ನವಿಲೂರಾ

(ಎಂದು ಹೇಳಿ ಮತ್ತೆ ತೂಕಡಿಸುತ್ತ ಮಂಜುನಾಥನ ಮೇಲೆ ಬೀಳುತ್ತಾನೆ. ಮಂಜುನಾಥ ಈ ಬಾರಿ ಆತನನ್ನು ಸರಿಸಲು ಹೋಗದೆ ಹೊರಗಿನ ವೀಕ್ಷಣೆಯನ್ನು ಸವಿಯುತ್ತ ತನ್ನ ಹಿನ್ನೋಟಕ್ಕೆ ಹೋಗುತ್ತಾನೆ. ಗಡ್ಡ ಮೀಸೆಯ ಮುಖ ನಿಧಾನವಾಗಿ ಯುವಕ ಮಂಜುನಾಥನ ಮುಖವಾಗುತ್ತದೆ. ಕುತೂಹಲದಿಂದ ಹೊರಗೆ ಒಳಗೆ ನೋಡುತ್ತಿರುವ ಯುವ ಮಂಜುನಾಥ)



# ದೃಶ್ಯ-3

*ಹಗಲು - ಹೊರಾಂಗಣ - ತುಂಗಾ ವೇಗಧೂತ/ರಸ್ತೆ*
*ಹಿನ್ನೋಟ/ಫ್ಲ್ಯಾಷ್‌ಬ್ಯಾಕ್*

(ತುಂಗಾ ವೇಗಧೂತದಲ್ಲಿ ಕುಳಿತಿರುವ ಮಂಜುನಾಥ, ಮಂದಹಾಸದಲ್ಲಿದ್ದಾನೆ ಮತ್ತು ತಾನು ಇಳಿಯಬೇಕಾಗಿರುವ ನಿಲ್ದಾಣದ ಬಗ್ಗೆ ಕುತೂಹಲಿಯಾಗಿದ್ದಾನೆ. ತುಂಗಾ ವೇಗಧೂತ ವಾಹನವು ಒಂದು ಕಡೆ ನಿಲ್ಲುತ್ತದೆ. ಆಗ ವಾಹನದ ನಿರ್ವಾಹಕ)

ನಿರ್ವಾಹಕ : ಯಾರ್ರೀ ನವಿಲೂರು ಕ್ರಾಸ್, ನವಿಲೂರು ಕ್ರಾಸ್, ಯಾರ್ರೀ ಬೇಗ ಇಳ್ಕೊಳ್ಳಿ,
(ತಾನು ಇಳಿಯಬೇಕಾದದ್ದು ಇದೇ ನಿಲ್ದಾಣವೆಂದು ತಿಳಿದು ಮಂಜುನಾಥ ಇಳಿಯುತ್ತಾನೆ.)
.. ರೈಟ್ ರೈಟ್
(ಹೊರಡುವಾಗ ಧೂಳೆಬ್ಬಿಸಿಕೊಂಡು ಹೋಗುವ ವಾಹನದಿಂದಾಗಿ ಮಂಜುನಾಥನಿಗೆ ಧೂಳಿನ ಸ್ನಾನವಾಗುತ್ತದೆ. ನಂತರ ತಾನು ಹೋಗಬೇಕಾಗಿರುವ ಊರಿನ ಹಾದಿಯನ್ನು ಹಿಡಿದು ಹೊರಡುತ್ತಾನೆ)





# ದೃಶ್ಯ-4

*ಹಗಲು - ಹೊರಾಂಗಣ - ನವಿಲೂರ ಹಾದಿ*

(ಹುಡುಗಿಯರ ಗುಂಪೊಂದು ಮರದಡಿಯಲ್ಲಿ ಕಾಯುತ್ತಾ ನಿಂತಿದೆ.)

ಹುಡುಗಿ : ಹೇಯ್ ಬರ್ತಾ ಇದಾಳೈ
ಹುಡುಗಿಯರು : ಎಲ್ಲಿ?
ಹುಡುಗಿ1 : ಅಲ್ಲಿ
(ತೋರಿಸುತ್ತಾಳೆ. ಪದ್ಮ ತನ್ನ ಕೈಯಲ್ಲಿ ಮಾವಿನಕಾಯಿಯ ಗೊಂಚಲನ್ನು ಹಿಡಿದು ಓಡಿ ಬರುತ್ತಿದ್ದಾಳೆ)
ಹುಡುಗಿ2 : ತಂದಿದಾಳಲ್ವ?
ಹುಡುಗಿ1 : ಹೌದು ಕಣೆ
(ನಾಯಕಿ ಹತ್ತಿರ ಬಂದಾಗ ಎಲ್ಲ ಹುಡುಗಿಯರು;)
ಹುಡುಗಿಯರು : ತಂದ್ಯೇನೆ?
ಪದ್ಮ : ತರ್ದೇ?! ಏನನ್ಕೊಂಡ್ಬಿಟ್ರೆ ನನ್ನ? ಇನ್ಸ್ವಲ್ಪ ಹೊತ್ತಾಗಿದ್ರೆ ಆ ಕಾಳನ್ ಕೈಲ್ ಸಿಕ್ಹಾಕೊ ಬಿಡ್ತಿದ್ದೆ ಕಣ್ರೆ,
ಹುಡುಗಿ3 : ನಂಗೊತ್ತು ಈ ಜಿಂಕೆ ಮರಿ ಯಾರ್ ಕೈಗು ಸಿಕ್ಹಾಕೊಳಲ್ಲ ಅಂತ
ಪದ್ಮ : ಈ ಪೂಸಿಯೆಲ್ಲ ಬೇಡ ತೆಗಿ ಉಪ್ಪು-ಖಾರ
ಹುಡುಗಿ3 : ನೀ ಮಾವಿನ್ಕಾಯ್ ತೆಗಿ
(ಪದ್ಮ ಕಾಯಿಯ ಗೊಂಚಲನ್ನು ತೋರಿಸಿದಾಗ ಅದನ್ನು ತಗೆದುಕೊಳ್ಳಲು ಹಾತೊರೆಯುವ ಎಲ್ಲರನ್ನು ಸುಧಾರಿಸುವ ಪದ್ಮ ನಿಧಾನವಾಗಿ ಕಾಯಿಗಳನ್ನು ಕೊಡುತ್ತಾಳೆ. ಇತ್ತ ಮಂಜುನಾಥ ದಾರಿಯಲ್ಲಿ ನಡೆದುಹೋಗುತ್ತ ಈ ಹುಡುಗಿಯರ ಪಕ್ಕದಲ್ಲೇ ಹಾದು ಹೋಗುತ್ತಿರುತ್ತಾನೆ)
ಪದ್ಮ : ಕಾಯಿಗಳ್ನ ತಗೊಂಡ್ ಬರ್ತಿದ್ದೆ ಕಣ್ರೆ, ಎದ್ರುಗಡೆನೆ ಕಾಳ ಬಂದ್ಬಿಟ್ಟ ಗೊತ್ತ, ಅಲ್ಲಿಂದ ತಪ್ಪಿಸ್ಕೊಂಡ್ ಓಡ್ಬಂದಿದಿನಿ ನಾನು.
(ಅಷ್ಟರಲ್ಲೇ ಒಂದು ಹುಡುಗಿ ಕಾಯಿಯನ್ನು ತಿಂದು ಹುಳಿಗೆ ಕಿರುಚಿಕೊಳ್ಳುತ್ತ)
ಹುಡುಗಿ1 : ಆ, ಎಷ್ಟ್ ಹುಳಿಯಾಗಿದ್ಯಲ್ಲೆ?
ಪದ್ಮ : ಅಯ್ಯೋ ನಿನ್ನ, ಅದನ್ನ ಹಾಗಾ ತಿನ್ನೋದು? ಉಪ್ಪುಖಾರ ಹಚ್ಕೊಂಡ್ ತಿನ್ಬೇಕು

(ಎನ್ನುತ್ತಿದ್ದಂತೆಯೇ ಅವರಲ್ಲಿ ಉಪ್ಪುಖಾರದ ಹಂಚಿಕೆ ಶುರುವಾಗುತ್ತದೆ. ಅಲ್ಲಿಗೆ ಬರುವ ಮಂಜುನಾಥ ಹುಡುಗಿಯರತ್ತ ಬಂದು)

ಮಂಜುನಾಥ : ಇಲ್ನೋಡಿ
(ಎಂದಾಗ ಹುಡುಗಿಯರು ಅವನತ್ತ ದೃಷ್ಟಿ ಬೀರಿ ಅವನ ವೇಷಭೂಷಣವನ್ನು ನೋಡಿ ನಗುವರು)
.. ಈ ದಾರಿ ಎಲ್ಲಿಗ್ಹೋಗುತ್ತೆ.

ಪದ್ಮ : ಈ ದಾರಿನಾ, ಎಲ್ಲೂ ಹೋಗಲ್ಲ ಇಲ್ಲೇ ಬಿದ್ದಿರುತ್ತೆ.

ಮಂಜುನಾಥ : (ನಸು ಕೋಪದಿಂದ)
ಅದು ನಂಗು ಗೊತ್ತು ಇದು ನವಿಲೂರಿಗ್ಹೋಗುತ್ತ ಅಂತ ಕೇಳ್ದೆ.

ಪದ್ಮ : ನವಿಲೂರ್ಗ? ಓ ನೀವ್ಹೋದ್ರೆ ಅದೂ ಹೋಗುತ್ತೆ
(ಹುಡುಗಿಯರು ನಗುವರು)

ಮಂಜುನಾಥ : ಹೋಗಿ ಹೋಗಿ ನಿಮ್ಮನ್ ಕೇಳಿದ್ನಲ್ಲ, ನಾನ್ ಮುಠ್ಠಾಳ.

ಪದ್ಮ : ಹೌದು (ಅಣಕಿಸುತ್ತಾಳೆ)

ಮಂಜುನಾಥ : ಏನೋ ಹುಡ್ಗೀರು ಅಂತ ಸದ್ರ ಕೊಟ್ರೆ ತಲೆಯೆಲ್ಲ ಮಾತಾಡ್ತೀರ.

ಪದ್ಮ : ಹ್ಹಾಂ, ತಲೇಲಾ ಮಾತಾಡಿದ್ದು?! ಬಾಯಲ್ಲಲ್ವೇನೆ
(ಮತ್ತೆ ಅಣಕಿಸಿ ನಗುವರು ಮತ್ತೆ ಮಂಜುನಾಥ ಅವರನ್ನುದ್ದೇಶಿಸಿ)

ಮಂಜುನಾಥ : ಅದ್ಯಾರ್ ನಿಮ್ಮನ್ನ ಸಾಕಿ ಬೆಳ್ಸಿದ್ರೋ ಆ ದೇವ್ರೇ ಕಾಪಾಡ್ಬೇಕು. ಗಂಡ್ ಬೀರಿಯರು
(ಹುಡುಗಿಯರೆಲ್ಲರು ಗಂಭೀರವಾಗುತ್ತಾರೆ. ಮಂಜುನಾಥ ಅವರಿಗೆ ಛೀಮಾರಿ ಹಾಕಿ ತನ್ನ ಪಾಡಿಗೆ ತಾನು ಹೊರಡುತ್ತಾನೆ)

ಪದ್ಮ : ಯಾರೇ ಇವ್ನು? ನಮ್ಮೂರ್ಗೆ ಬಂದು ನಮ್ಮನ್ನೆ ಛೇಡಿಸ್ತಾನೆ! ಮಾಡ್ತಿನಿ, ಮಾಡ್ತಿನಿ.

ಹುಡುಗಿ1 : ಯಾರೋ ಏನೋ ಕಣೇ, ಪಾಪ ಸುಮ್ನೆ ಇರೇ.

ಪದ್ಮ : ಏ, ಯಾರಾದ್ರೇನೆ? ಸರಿಯಾಗ್ ಓಡಿಸ್ತಿನ್ ನೋಡು.
(ಮಂಜುನಾಥನೆಡೆಗೆ ತಿರುಗಿ)
.. ರೀ, ರೀ ಸ್ವಾಮಿ. ಆ ದಾರೀಲ್ ಹೋಗ್ಬೇಡಿ ಈ ಗದ್ದೆ ತೆವರಿನ್ಮೇಲ್ ಹೋಗಿ ನೇರ ನವಿಲೂರ್ಗೆ ಹೋಗುತ್ತೆ. ಹ್ಹಾಂ
(ಮಂಜುನಾಥ ಆ ದಾರಿಯಲ್ಲಿ ಹೋಗಲು ಪ್ರಾರಂಭಿಸುತ್ತಾನೆ. ಅವನನ್ನು ಹಿಂಬಾಲಿಸುವ ಪದ್ಮ



ಮತ್ತು ಅವಳ ಸಂಗಡಿಗರು)

ಹುಡುಗಿ2 : ಏಯ್ ಏನ್ ಮಾಡ್ತೀಯೆ?

ಪದ್ಮ : ನೋಡ್ತಾ ಇರು
(ಒಂದು ಕಡೆ ಬಂದು ನಿಲ್ಲುವ ಪದ್ಮ, ಮಂಜುನಾಥ ನಡೆದು ಹೋಗುತ್ತಿರುವುದನ್ನು ನೋಡುತ್ತ ಇದ್ದಕ್ಕಿದ್ದಂತೆ;)
.. ಹಾವೂ
(ಎಂದು ಕಿರುಚಿಕೊಳ್ಳುತ್ತಾಳೆ. ಅವಳ ಸ್ನೇಹಿತರೂ ಸೇರಿದಂತೆ ಮಂಜುನಾಥನೂ ಗಾಬರಿಗೊಂಡು ತೆವರಿಯ ಮೇಲೆ ಆಯತಪ್ಪಿ ಬೀಳುತ್ತಾನೆ. ನಂತರ ಸ್ನೇಹಿತೆಯರು ಜೋರಾಗಿ ನಗುತ್ತಿರುವ ಪದ್ಮಾಳ ಹತ್ತಿರ ಬಂದು)

ಸ್ನೇಹಿತೆ4 : ಎಲ್ಲೇ ಹಾವು?

ಪದ್ಮ : ಹುತ್ತದಲ್ಲಿ ಕಣೆ
(ಸ್ನೇಹಿತೆಯರೆಲ್ಲರು ಜೋರಾಗಿ ನಗುತ್ತಾರೆ. ಮಂಜುನಾಥ ಅಸಹಾಯಕನಂತೆ ಆ ಕೆಸರಿನಲ್ಲಿಯೇ ಕುಳಿತಿರುತ್ತಾನೆ)

**ನಿರ್ದೇಶಕರ ಟಿಪ್ಪಣಿ:**

ನವಿಲೂರಿನ ಸೊಬಗನ್ನು ಸವಿಯುತ್ತ ಬರುವ ಕವಿಗೆ ಹಿಂದಿನ ನೆನಪುಗಳಲ್ಲಿ (ಫ್ಲ್ಯಾಷ್ ಬ್ಯಾಕ್) ಪ್ರಾರಂಭವಾಗುವ ಮೊಟ್ಟಮೊದಲ ದೃಶ್ಯ ಇದು. ತನ್ನ ನವಿಲೂರಿನ ಮೊದಲ ಪ್ರಯಾಣವನ್ನು ನೆನೆಸಿಕೊಳ್ಳುವ ಕವಿಯ ಮನಃಸ್ಥಿತಿ ನಿಧಾನವಾಗಿ ಬದಲಾಗುತ್ತದೆ. ರಮಣೀಯವಾದಂತಹ ಪ್ರಕೃತಿಯ ಮಧ್ಯದಲ್ಲಿ ಇಳಿಯುವ ಕವಿ ತನ್ನ ಹುಡುಕಾಟದಲ್ಲಿ ನವಿಲೂರಿನ ಕಡೆಗೆ ಸಾಗುತ್ತಿದ್ದಾಗ ಅಲ್ಲೇ ಮಾವಿನ ಕಾಯಿಯನ್ನು ತಿನ್ನುತ್ತಾ ಕುಳಿತಂಥ ಹುಡುಗಿಯರ ಗಮನ ಸೆಳೆಯುತ್ತಾರೆ. ಆ ಹುಡುಗಿಯರ ಚೆಲ್ಲಾಟ ಅವನಿಗೆ ಕೋಪ ತರಿಸಿದರೂ ಕೂಡ ಗಂಡುಬೀರಿಯರು ಎಂಬ ಮಾತಿನಿಂದ ಕೋಪಗೊಂಡ ಹುಡುಗಿ, ಅವನನ್ನು ಗದ್ದೆ ತೆವರಿನ ಮೇಲೆ ಕಳುಹಿಸಿ ಅವನನ್ನು ಗದ್ದೆಗೆ ಬೀಳುವಂತೆ ಮಾಡುತ್ತಾಳೆ. ಈ ರೀತಿಯ ಮಕ್ಕಳಾಟದೊಡನೆ ಪ್ರಾರಂಭವಾಗುವ ಚಿತ್ರ ನಿಷ್ಕಲ್ಮಶವಾದಂತಹ ಹೃದಯಗಳ ಮಿಲನಕ್ಕೆ ಹಾದಿ ಮಾಡಿಕೊಡುತ್ತದೆ. ಇಡೀ ಸಿನಿಮಾವನ್ನು ತೀರ್ಥಹಳ್ಳಿಯ ಸುತ್ತಮುತ್ತ ಚಿತ್ರಿಸಲಾಯಿತು. ಅಂದಿನ ಆ ತೀರ್ಥಹಳ್ಳಿಯ ನೆನಪುಗಳನ್ನು ಭದ್ರವಾಗಿ ದಾಖಲಿಸಿರುವ ಈ ಚಿತ್ರ ಆಗಿನ ಪ್ರಕೃತಿ ಹಾಗು ಅಲ್ಲಿನ ಪರಿಸರ ಹೇಗಿತ್ತು ಎಂಬುದಕ್ಕೆ ಸಾಕ್ಷಿಯಾಗಿದೆ.

## ದೃಶ್ಯ–5

*ಹಗಲು – ಹೊರಾಂಗಣ – ಶಾನುಭೋಗರ ಮನೆ*

(ಮಲೆನಾಡಿನ ಹಳೆಯ ಕಾಲದ ದೊಡ್ಡ ಮನೆ. ದೊಡ್ಡ ಪಡಸಾಲೆಯಲ್ಲಿ ಶಾನುಭೋಗರು ಸುಂಕ ವಸೂಲಿ ಮಾಡುವ ಬಗ್ಗೆ ರೈತರಲ್ಲಿ ವಿಚಾರಣೆ ಮಾಡುತ್ತಿದ್ದಾರೆ)

ಶಾನುಭೋಗ : ನೀವೆಲ್ಲ ಇಷ್ಟೊಂದ್ ಬಾಕಿ ಉಳ್ಸ್ಕೊಂಡ್ಬಿಟ್ರೆ ನಾ ಈ ವರ್ಷ ಇಸಾಬ್ ಕಟ್‌ದ್ಹಂಗೆ. ರಾಮಯ್ಯ ಮೂರು ಕಾಲಾಣೆ, ಮಂಜಯ್ಯ, ಮೂರ್ ರೂಪಾಯಿ, ನರಸಿಂಹ ನಾಯಕ ಐದು ರೂಪಾಯಿ. ಮುನಿಯಾ ಅಯ್ಯೋ ಶಿವ ಶಿವ ಎಂಟ್ ರೂಪಾಯಿ ಎರೆಡಾಣೆ.
(ಮಾದನಿಗೆ) .. ಕರ್ಕೊಂಡ್ ಬಂದ್ಯಾ?

ಮಾದ : ನಾ ಹೋದ್ರೆ ಬಿಟ್ಟೇನ? ಎಳಕ್ಕಂಡ್ ಬಂದೀನ್ ನೋಡ್ರಿ.

ಶಾನುಭೋಗ : ಯಾಕೋ ಕರಿಯಣ್ಣ, ಸರಕಾರಕ್ಕ್ ಕೊಡ್ಬೇಕಾಗಿರೋ ಕಂದಾಯಾನ ಕೊಡ್ದೆ ಭೂಮೀನ್ ಅನುಭೋಕೆ ಅದೇನ್ ನಿನ್ನಪ್ಪನ್ ಚಪ್ಪೋಡು ಅಂತ ತಿಳ್ಕೊಂಡಿದಿಯಾ? ಕೊಡೋ ಮೂರ್ ರುಪಾಯಿ ಹನ್ನೆರೆಡಾಣೆಗೆ ನಾನ್ ನನ್ನಾಳನ್ನ ನಿನ್ ಮನೆಗೆ ಅರ್ಬಾರಿ ಅಟ್ಬೇಕ?

ಕರಿಯಣ್ಣ : (ದುಃಖದಿಂದ) ಸಮಯ ಸ್ವಾಮಿಯೋರ. ಮನ್ಯಾಗೆ ಉಣ್ಣೋದಿಕ್ಕು ಕಾಸಿಲ್ಲ. ಇಲ್ದೆ ಹೋದ್ರೆ ಉಳ್ಸ್ಕೊತಿದ್ನ.

ಶಾನುಭೋಗ : ಈ ಹಳೇ ಆಟನೆಲ್ಲ ನನ್ಹತ್ರ ಆಡ್ಬೇಡ, ಒಳ್ಳೇ ಮಾತ್ನಲ್ ತಂದ್ ಕೊಟ್ಬಿಡು. ಹ್ಞಾಂ..
(ಅಷ್ಟರಲ್ಲಿ ಚೆನ್ನಯ್ಯ ಮಧ್ಯ ಪ್ರವೇಶಿಸಿ ಶಾನುಭೋಗರನ್ನು ಸಮಾಧಾನ ಪಡಿಸುವ ರೀತಿಯಲ್ಲಿ)

ಚೆನ್ನಯ್ಯ : ಏನೋ ಸಮಯ ಅಂತಾನೆ, ಮುಂದಿನ್ ಸಲ ತಂದ್ಕೊಡ್ತಾನೆ ಬುಡಿ ಸ್ವಾಮಿ. ಏ ಕರಿಯಾ ತಂದ್ ಕೊಟ್ಬುಡೋ.

ಶಾನುಭೋಗ : ಅಯ್ಯೋ ಚೆನ್ನಯ್ಯ, ಹೀಗ್ ಹೇಳ್ಕೊಂಡ್ ಮೂರ್ ವರ್ಷದಿಂದ ಬಾಕಿ ಉಳ್ಸ್ಕೊಂಡ್ ಬಂದಿದಾನೆ. ಇವ್ರೆಲ್ಲ ಹೀಗ್ ಮಾಡಿದ್ರೆ ನಾ ಅಮಲ್ದಾರ್ರತ್ರ ಏನ್ ತಲೆ ಚೆಚ್ಕೊಳ್ಳಿ.. ಏ ಕರಿಯಣ್ಣ, ಬಾರೋ ಇಲ್ಲಿ.
(ಇನ್ನೂ ಬಾರದಿರುವುದನ್ನು ಕಂಡು)
.. ಬಾರೋ
(ಕರಿಯಣ್ಣ ಮುಂದೆ ಬಂದು ನಿಂತಾಗ)



.. ಚಳುವಳಿ–ಗಿಳುವಳಿ ಸೇರ್ಕೊಂಡಿದಿಯೇನೋ?

ಕರಿಯಣ್ಣ : ಅಯ್ಯಯ್ಯೋ ಇಲ್ಲಾ ಸ್ವಾಮಿ, ಬಡವಾ ನೀನ್ ಮಡಗ್ದಂಗ್ ಇರು ಅಂತ, ನಮಗ್ಯಾಕ್ ಸ್ವಾಮಿ ಈ ಚಳುವಳಿ ಎಲ್ಲ?
(ಚೆನ್ನಯ್ಯ ಮಧ್ಯ ಪ್ರವೇಶಿಸಿ)

ಚೆನ್ನಯ್ಯ : ನಮ್ ನವಿಲೂರು ಉಳಿದೆಲ್ಲಾ ಊರ್ಗಳಿಗಿಂತ ವಾಸಿ, ಅದೇ ನರಸಾಪುರದೊಳಗೆ ಒಬ್ರೂ ಕಂದಾಯಾನೇ ಕಟ್ಟಿಲ್ವಂತೆ.

ಶಾನುಭೋಗ : ಹೌದೇ!

ಚೆನ್ನಯ್ಯ : (ಕರಿಯಣ್ಣನ ಕಡೆಗೆ ತಿರುಗಿ)
.. ಏ ಕರಿಯಣ್ಣ, ಆದಷ್ಟು ಬೇಗ ಕಟ್ಬಿಡೋ.

ಕರಿಯಣ್ಣ : ಆಯ್ತು..
(ಶಾನುಭೋಗಯ ಕಡೆಗೆ ತಿರುಗಿ)
.. ತಮ್ಮ್ ಪಾದಕ್ ತಂದು ಒಪ್ಪುಸ್ತೀನ್ ಸ್ವಾಮಿ

ಶಾನುಭೋಗ : ಅಷ್ಟ್ ಮಾಡ್ಬಿಡಪ್ಪ,
(ಎಂದು ತಮ್ಮ ಲೆಕ್ಕದತ್ತ ತಿರುಗಿ)
..ಇನ್ಯಾರು, ವೆಂಕ, ನಿಂದೇನಯ್ಯ ಅದು ತಾಪತ್ರಯ? ಅಲ್ಲ ಬರೇ ಮೂರು ರೂಪಾಯಿ ನಾಲ್ಕಾಣೆಗ್ ಹೀಗಾದ್ರೆ ಹೇಗೆ? ವರ್ಷ ವರ್ಷಕ್ಕು ಕಂದಾಯ ಜಾಸ್ತಿಯಾಗುತ್ತೇ ಹೊರ್ತು ಕಡಿಮೆ ಆಗುತ್ತಾ ಹೇಳು?
(ಎಂದು ಹೇಳುತ್ತಿರಬೇಕಾದರೆ ಮಂಜುನಾಥ ತನ್ನ ಕೆಸರಿನ ವೇಷದಲ್ಲಿ ಟ್ರಂಕು, ಮೂಟೆಯನ್ನು ಹೊತ್ತುಕೊಂಡು ಶಾನುಭೋಗರ ಮನೆಗೆ ಬರುತ್ತಾನೆ. ಮಂಜುನಾಥನನ್ನು ಗಮನಿಸುವ ಶಾನುಭೋಗ ಮತ್ತು ಅಲ್ಲಿ ನೆರೆದಿದ್ದವರೆಲ್ಲರು ನಗುತ್ತಿರಬೇಕಾದರೆ ಮಂಜುನಾಥ ಮುಂದೆ ಬಂದು)

ಮಂಜುನಾಥ : ನಾನು ಮಂಜುನಾಥ ಅಂತ, ಈ ಊರ್ಗೆ ಹೊಸ್ದಾಗ್ ಬಂದಿರೋ ಮೇಷ್ಟ್ರು.

ಚೆನ್ನಯ್ಯ : ಅಯ್ಯೋ ಶಿವನೆ, ನಿಮ್ಮನ್ ನೋಡಿದ್ರೆ ಕಂಬಳದ ಕೋಣದಿಂದ್ ಓಡ್ಬಂದಿರೋ ಮನುಷ್ಯರಾಗ್ ಕಾಣ್ತೀರಲ್ಲ.
(ಎಂದು ಮತ್ತೆ ಜೋರಾಗಿ ನಗುತ್ತಾರೆ. ಇದೇ ಸಮಯಕ್ಕೆ ಪದ್ಮ ಹಿಂಬದಿಯ ಬಾಗಿಲಿನ ಮೂಲಕ ಮನೆಗೆ ಬಂದು ನಗುತ್ತಿರುವವರತ್ತ ಕಿಟಕಿಯ ಮರೆಯಲ್ಲಿ ನೋಡುತ್ತಾಳೆ)

ಮಂಜುನಾಥ : ಗದ್ದೆ ತೇವರಿನ್ಮೇಲ್ ಬರುವಾಗ ಕಾಲ್ ಜಾರಿ ಬಿದ್ಬಿಟ್ಟೆ. (ಪದ್ಮ ನಗುವಳು) ಅದಿಕ್ಕೆ.

ಚೆನ್ನಯ್ಯ : ಸೊಗಸಾದ್ ದಾರಿ ಬಿಟ್ಟುಟ್ಟು ಆ ಗದ್ದೆ ತೇವರಿನ್ಮೇಲ್ ಯಾಕ್ ಸ್ವಾಮಿ ಬಂದ್ರಿ?
(ಗೋಡೆಯ ಹಿಂದೆ ಬಂದು ನಿಂತಿದ್ದ ಅಕ್ಕನನ್ನು ಕಂಡು ತುಂಗೆ;)


ತುಂಗೆ : ಏನೇ?

ಪದ್ಮ : (ಏನೂ ಇಲ್ಲವೆಂದು ಸಂಜ್ಞೆ ಮೂಲಕ ತಿಳಿಸುತ್ತಾ, ಗಾಳಿಯಲ್ಲಿ ಮುತ್ತೊಂದನ್ನು ನೀಡುತ್ತಾಳೆ)

ಶಾನುಭೋಗ : ಸದ್ಯ, ಪೆಟ್ಟಾಗ್ಲಿಲ್ವಲ್ಲ?

ಮಂಜುನಾಥ : ಇಲ್ಲ ಇಲ್ಲ ಅಂಥದ್ದೇನಿಲ್ಲ
(ಎನ್ನುತ್ತಿದ್ದಂತೆಯೇ ಮನೆ ಒಳಗಡೆ ತಿರುಗಿ;)

ಶಾನುಭೋಗ : ಪದ್ಮಾ (ಎಂದು ಕರೆಯುತ್ತಾರೆ)



ತುಂಗೆ : ಹೇಯ್ ನೀನ್ ಹೋಗೇ
(ಎಂದು ಪದ್ಮಾಳನ್ನು ಎಚ್ಚರಿಸುತ್ತಾಳೆ)

ಪದ್ಮ : ನೀನೆ ಹೋಗೇ
(ಪದ್ಮ ಹೋಗದೆ ತನ್ನ ತುಂಗೆಯನ್ನೇ ದೂಡಿ ಕಳುಹಿಸುತ್ತಾಳೆ. ತುಂಗೆ ಹೊರಗೆ ಬಂದು ತಂದೆಗೆ)

ತುಂಗೆ : ಏನಪ್ಪಯ್ಯ?

ಶಾನುಭೋಗ : ಓ ನೀ ಬಂದ್ಯ, ಬಾ
(ಮಗಳು ಹತ್ತಿರ ಬಂದ ನಂತರ)
.. ಇಲ್ನೋಡು ಮೇಷ್ಟ್ರು ಬಂದಿದಾರೆ. ಈಗ್ ಅವರ ಸ್ನಾನ, ಊಟದ್ ವ್ಯವಸ್ಥೆಯಾಗ್ಬೇಕು. ಹ್ವಾ
(ಏನು ಎಂದು ಕೇಳುತ್ತಾರೆ)



ತುಂಗೆ : ಆಗ್ಲಿ ಅಪ್ಪಯ್ಯ

ಶಾನುಭೋಗ : (ಮಾಸ್ತರರ ಕಡೆಗೆ ತಿರುಗಿ)
.. ಮೇಷ್ಟ್ರೆ ನೀವ್ ಸ್ನಾನ ಮಾಡ್ಕೊಂಡ್ ಬಂದ್ಬಿಡಿ ಆಮೇಲ್ ಮಾತಾಡೋಣ
(ಚಿಕ್ಕ ಮಗಳು ನಸುನಗುತ್ತ ಮಾಸ್ತರರ ಬಳಿಗೆ ಬಂದು)

ತುಂಗೆ : ಬನ್ನಿ..
(ಎಂದು ಕರೆಯುವವಳು ನಂತರ ಮಂಜುನಾಥ ಜಗುಲಿಯ ಮೇಲೆ ನಡೆದು ಬರುವಾಗ ಅವನ ಕಾಲನ್ನು ತೋರಿಸುತ್ತಾಳೆ. ಮಂಜುನಾಥ ಚಪ್ಪಲಿಯನ್ನು ತಗೆಯಬೇಕೇನೋ ಎಂದು ತಗೆದು ಕೈಯಲ್ಲಿ ಹಿಡಿದುಕೊಳ್ಳುತ್ತಾನೆ. ಇದನ್ನು ಕಂಡ ಆ ಹುಡುಗಿ ನಗುತ್ತ ಒಳಗೆ ಓಡಿ ಹೋದರೆ ಚೆನ್ನಯ್ಯ ಮೇಷ್ಟ್ರನ್ನು ಕರೆದು)

ಚೆನ್ನಯ್ಯ : ಮೇಷ್ಟ್ರೆ ಆ ಚಪ್ಲೀನ ಮೂಲೆನಾಗಿಡಿ
(ಎಲ್ಲರು ನಗುತ್ತಾರೆ ಮಂಜುನಾಥ ತನ್ನ ಚಪ್ಪಲಿಯನ್ನು ಮರೆಮಾಚಿಕೊಂಡು ತಂದು ಬಾಗಿಲ ಬಳಿಯಲ್ಲಿ ಇಟ್ಟುಹೋಗುತ್ತಾನೆ)
.. ಒಳ್ಳೆ ಮೇಷ್ಟ್ರು ಆ ಕೊಳಕ್ ಚಪ್ಲೀನ ಕೈನಾಗ್ ಹಿಡ್ಕಂಡ್ ಹೋಯ್ತಾವ್ರಲ್ಲ
(ಎಲ್ಲರ ನಗು ಕೇಳಿಸುತ್ತಲೇ ಇರುತ್ತದೆ)

**ನಿರ್ದೇಶಕರ ಟಿಪ್ಪಣಿ:**

ಮೊಟ್ಟಮೊದಲ ದೃಶ್ಯದಲ್ಲೇ ಶಾನುಭೋಗರು ಸುಂಕ ವಸೂಲಿ ಮಾಡುವುದನ್ನು ತೋರಿಸುತ್ತ ಅಂದಿನ ಸರ್ಕಾರದ ಪ್ರತಿನಿಧಿಯಾಗಿ ಪ್ರಾಮಾಣಿಕವಾಗಿ ಸುಂಕ ವಸೂಲಿ ಮಾಡುತ್ತಿದ್ದಾರೆ ಎಂಬುದನ್ನು ಹೇಳಲಾಗುತ್ತದೆ. ಹಾಗೆಯೇ ಅಂದಿನ ಪರಿಸ್ಥಿತಿ ಉಳಿದ ಹಳ್ಳಿಗಳಲ್ಲಿ ಹೇಗಿದೆ ಎಂಬುದನ್ನು ಬಳೆಗಾರ ಚೆನ್ನಯ್ಯ ಹೇಳುತ್ತಾನೆ. ಆ ಸಮಯಕ್ಕೆ ಅಲ್ಲಿಗೆ ಬಂದ ಊರಿನ ಹೊಸ ಮಾಸ್ತರು ಮಂಜುನಾಥ. ಮೈಯಲ್ಲ ರಾಡಿ ಮಾಡಿಕೊಂಡು ಬಂದದ್ದನ್ನು ನೋಡಿ ಜನರೆಲ್ಲ ಹಾಸ್ಯಮಾಡಿ ನಕ್ಕು ಅವನನ್ನು ಛೇಡಿಸುತ್ತಿರುವಾಗ ಅಲ್ಲಿಗೆ ಬರುವ ಪದ್ಮ ಅವನೆಲ್ಲಿ ಸತ್ಯವನ್ನೇಳಿ ಬಿಡುತ್ತಾನೋ ಎಂದು ಹೆದರಿ ಗಾಬರಿಯಲ್ಲಿದ್ದಾಗ ಮಂಜುನಾಥ ತಾನೇ ಗದ್ದೆಯ ತೆವರಿನಲ್ಲಿ ಎಡವಿಬಿದ್ದಿದ್ದಾಗಿ ಹೇಳುತ್ತ ಸ್ನಾನದ ಮನೆಗೆ ಪದ್ಮಾಳ ತಂಗಿಯ ಜೊತೆಗೆ ಹೊರಡುತ್ತಾನೆ. ಇಡೀ ದೃಶ್ಯ ಆ ಕುಟುಂಬದ ಮತ್ತು ಆ ಹಳ್ಳಿಯ ಆವತ್ತಿನ ಪರಿಸ್ಥಿತಿಯನ್ನು ಹೇಳುತ್ತ ಪಾತ್ರಗಳ ಪರಿಚಯವನ್ನು ಬಹಳ ನೇರವಾಗಿಯೇ ಮಾಡಿಕೊಡುತ್ತದೆ.

# ದೃಶ್ಯ-6

*ರಾತ್ರಿ – ಒಳಾಂಗಣ – ಶಾನುಭೋಗರ ಮನೆ*

(ಅಡಿಗೆಮನೆ ಹಾಗು ಊಟದ ಮನೆಗಳ ನಡುವೆ. ಅಡಿಗೆಯನ್ನು ಒಂದು ಬಟ್ಟಲಿಗೆ ಹಾಕಿತರುತ್ತ ಪದ್ಮ ತನ್ನ ತಂಗಿಗೆ ಅಡಿಗೆಮನೆಯಲ್ಲಿ ಮೆಲುಧ್ವನಿಯಲ್ಲಿ)

ಪದ್ಮ : ಇದ್ ತಗೊಂಡ್ಹೋಗ್ ಬಡ್ಸೆ

ತುಂಗೆ : ಯಾಕೆ, ನೀನೆ ಹೋಗ್ ಬಡ್ಸು

ಪದ್ಮ : ನಾನ್ ನಿನ್ಗಿಂತ ದೊಡ್ಡೋಳಲ್ವ, ನನ್ಮಾತ್ ಕೇಳ್ತೀಯಲ್ವ, ಜಾಣ ಮರಿ. ತಗೊಂಡ್ಹೋಗ್ ಬಡ್ಸಮ್ಮ.

ತುಂಗೆ : ಬಡ್ಸ್ತೀನಿ. ನಾಳೆ ನನ್ನ ಸಂತೆಗ್ ಕರ್ಕೊಂಡ್ ಹೋಗ್ತಿ ತಾನೆ?

ಪದ್ಮ : ಓ ಕರ್ಕೊಂಡ್ಹೋಗ್ತಿನಿ

ತುಂಗೆ : ಕೇಳಿದ್ದೆಲ್ಲ ಕೊಡ್ಸ್ತೀಯ ತಾನೆ?

ಪದ್ಮ : ಓ..

ತುಂಗೆ : ಟೇಪು, ಜಡೆ ದಾರ, ಮುತ್ತಿನ್ ಸರ
(ಎಂದು ಕೇಳುತ್ತಿರವಾಗಲೇ ಪದ್ಮ ತಲೆ ಚಚ್ಚಿಕೊಳ್ಳುತ್ತ)

ಪದ್ಮ : ಹೋಗೆ, ಬಡ್ಸ್ಬಿಟ್ ಬಾರೆ

ಶಾನುಭೋಗ : ಪದ್ಮಾ ಬಡ್ಸಮ್ಮ
(ತುಂಗೆ ತೆಗೆದುಕೊಂಡು ಹೋಗುತ್ತಿರುವುದನ್ನು ಪದ್ಮ ಗೋಡೆಯ ಮರೆಯಲ್ಲಿ ನಿಂತು ನೋಡುತ್ತಿದ್ದಾಳೆ. ಚಿಕ್ಕ ಮಗಳು ತುಂಬಿದ ಪಾತ್ರೆಗಳನ್ನು ತರುತ್ತಿರುವುದನ್ನು ಕಂಡ ತಂದೆ)

ಶಾನುಭೋಗ : ಹ್ಹಾ, ಮೆಲ್ಗೆ ಮೆಲ್ಗೆ, ಬಾ.
(ಚಿಕ್ಕ ಮಗಳು ಅಡಿಗೆ ಬಡಿಸುತ್ತಾಳೆ)
.. ಮೆಲ್ಗ್ ಹಾಕು
(ಹಾಕಿದ ನಂತರ ಮಗಳನ್ನು ನೋಡಿ ನಗುತ್ತ ಮಂಜುನಾಥನಿಗೆ ಊಟಕ್ಕೆ ಆಸ್ಪದ ಕೊಡದಂತೆ ಮಾತನಾಡಲು ತೊಡಗುತ್ತಾನೆ)
.. ಹ್ಹಾ, ಶುರುಮಾಡಿ. ಇದೇ ಮೊದುಲ್ನೇದ?

ಮಂಜುನಾಥ : ಹೌದು. ಮೆಟ್ರಿಕ್ ಪಾಸಾದ್ಮೇಲೆ ಟ್ರೈನಿಂಗ್ ಹೋಗಿದ್ದೆ ಆಮೇಲ್ಕೆಲವು ಮನೇಲಿ ಪಾಠ ಇಟ್ಕೊಂಡಿದ್ದೆ. ಅದ್ಬಿಟ್ರೆ ಇದೇ ಮೊದುಲ್ನೆ ಕೆಲ್ಸ ನನಿಗೆ.

ಶಾನುಭೋಗ : ನಿಮ್ಮೂರ್ ಯಾವ್ದು?



ಮಂಜುನಾಥ : ನಮ್ಮೂರು, ಹೊನ್ನೂರು. ತಂದೆ ಅಪ್ಪಣ್ಣಯ್ಯ ಅಂತ್ಹೇಳಿ

ಶಾನುಭೋಗ : ಏನ್ ಮಾಡ್ತಾರೆ?

ಮಂಜುನಾಥ : ನಾನು ನಾಲ್ಕ್ ತಿಂಗ್ಳು ಮಗುವಾಗಿದ್ದಾಗ್ಲೇ ಅವರ್ ತೀರ್ಕೊಂಡ್ಬಿಟ್ರು
(ಶಾನುಭೋಗ ಸಂತಾಪ ಸೂಚಿಸುವ ಶಬ್ದಮಾಡುತ್ತಾರೆ. ನಂತರ ಮಂಜುನಾಥ ಮುಂದುವರೆದು)
.. ನಾನ್ ಬೆಳ್ದಿದ್ದೆಲ್ಲ ಭಾರತೀಪುರದಲ್ಲಿ, ಸೋದರ ಮಾವನ ಮನೇಲಿ.

ಶಾನುಭೋಗ : ನಮ್ಮೂರ್ ನಿಮಗೆ ಹೇಗನ್ಸತ್ತೆ?

ಮಂಜುನಾಥ : ಗಲಾಟೆ ಗಲಿಬಿಲಿ ಇಲ್ದೇ ಇರೋ ಇಂಥ ಶಾಂತ ಸ್ಥಳವೇ ನನಗಿಷ್ಟ

ಶಾನುಭೋಗ : ಅಲ್ವಾ.. (ನನಗೂ ಹಾಗೇ ಎನ್ನುವಂತೆ ಹೇಳುತ್ತಾರೆ)

ಮಂಜುನಾಥ : ನನಗೂ ಓದೋದು ಬರೆಯೋದು ಇರುತ್ತೆ. ಇಳ್ಕೊಳೋಕೆ ಇಂಥಾ ಒಂದ್ ಜಾಗ ಸಿಕ್ರೆ ಸಾಕು

ಶಾನುಭೋಗ : ಹಮ್ ಅದ್ರ ವ್ಯವಸ್ಥೆ ಮಾಡ್ಸಣ ಬಿಡಿ. ಅದಕ್ಕೇನ್
(ಎಲೆಯಲ್ಲಿ ಇನ್ನೂ ಅನ್ನ ಖಾಲಿಯಾಗದಿರುವುದನ್ನು ಕಂಡು ತಮ್ಮ ಮಾತನ್ನು ಅಲ್ಲಿಗೇ ನಿಲ್ಲಿಸಿ)
.. ಅಯ್ಯೋ, ನೀವೇನ್ ಊಟಾನೇ ಮಾಡಿಲ್ಲ?
(ಅಡುಗೆ ಕೋಣೆಯತ್ತ ತಿರುಗಿ ತನ್ನ ಮಗಳಿಗೆ)
.. ಪದ್ಮ, ಇವತ್ತೇನ್ ಚೆನ್ನಾಗ್ ಅಡಿಗೆ ಮಾಡಿಲ್ವ? ಮೇಷ್ಟ್ರು ಊಟಾನೆ ಮಾಡ್ತಿಲ್ಲ?
(ಪದ್ಮ ಯಾಕೆಂದು ಆಲೋಚಿಸುತ್ತ ನಿಲ್ಲುತ್ತಾಳೆ ಅಷ್ಟರಲ್ಲಿ)

ಮಂಜುನಾಥ : ಇಲ್ಲ, ಇಲ್ಲ ಹಾಗೇನಿಲ್ಲ ಚೆನ್ನಾಗಿದೆ, ಚೆನ್ನಾಗಿದೆ.
(ಪದ್ಮ ಸಂತಸಗೊಳ್ಳುತ್ತಾಳೆ)

ಶಾನುಭೋಗ : ಮಾಡಿ, ಮಾಡಿ. ನನಿಗ್ಗೊತ್ತು ನನಿಗ್ ಮಾತೂ ಅಂತಂದ್ರೆ ಪ್ರೀತಿ. ಮಾಡಿ
(ಊಟ ಮಾಡಲು ಸೂಚಿಸುತ್ತಾರೆ. ಪದ್ಮ, ಮಂಜುನಾಥ ಊಟ ಮಾಡುವುದನ್ನು ಬಾಗಿಲ ಮರೆಯಲ್ಲಿ ಕದ್ದು ನೋಡುತ್ತಿರುತ್ತಾಳೆ)

**ನಿರ್ದೇಶಕರ ಟಿಪ್ಪಣಿ:**

ಊಟದ ದೃಶ್ಯ ಬಹಳ ನವಿರಾದ ಭಾವನೆಗಳನ್ನು ಎಬ್ಬಿಸುವಂತಹದು. ಶಾನುಭೋಗರ ಮಾತಿನ ತವಕವನ್ನು, ಮಂಜುನಾಥನ ಇರಿಸುಮುರಿಸುಗಳನ್ನು, ಪದ್ಮಳ ನಿರಾಳತೆಯನ್ನು ಮತ್ತು ತುಂಗೆಯ ಚೇಷ್ಟೆಯನ್ನು ಹೀಗೆ ಎಲ್ಲವನ್ನು ಒಂದೇ ದೃಶ್ಯದಲ್ಲಿ ಅಡಕಮಾಡುವುದರಲ್ಲಿ ಈ ದೃಶ್ಯ ಯಶಸ್ವಿಯಾಗಿದೆ.

## ದೃಶ್ಯ–7

*ರಾತ್ರಿ – ಒಳಾಂಗಣ – ಶಾನುಭೋಗರ ಮನೆ*

(ಮಾಸ್ತರರಿಗೆ ಮನೆ ತೋರಿಸಲು ಶಾನುಭೋಗರು ದೀಪದೊಂದಿಗೆ ಸಿದ್ಧವಾಗಿದ್ದಾರೆ. ಇನ್ನೂ ಸಿದ್ಧವಾಗಿಲ್ಲದ ಮಾಸ್ತರರನ್ನು)

ಶಾನುಭೊಗ : ಮೇಷ್ಟ್ರೇ, ಬನ್ನಿ. ತಡ ಆದ್ರೆ ಶಾಮರಾಯ್ರು ಮಲ್ಗ್‌ಬಿಡ್ತಾರೆ ಅಷ್ಟೆ.

ಮಂಜುನಾಥ : (ಸಿದ್ಧವಾಗುತ್ತ)
.. ಬಂದೆ ಶಾನ್ಭೋಗ್ರೆ
(ತನ್ನ ಸಾಮಾನುಗಳನ್ನು ಎತ್ತಿಕೊಂಡು ಹೋಗುತ್ತಿರುವ ಮಂಜುನಾಥ ಹಿಂತಿರುಗಿ ನೋಡಿದಾಗ ಬಾಗಿಲ ಮರೆಯಲ್ಲಿ ನೋಡುವ ಪದ್ಮ ಕಾಣುತ್ತಾಳೆ)



## ದೃಶ್ಯ–8

*ರಾತ್ರಿ – ಹೊರಾಂಗಣ – ಶ್ಯಾಮರಾಯರ ಮನೆ*


(ಮಲೆನಾಡಿನ ಚಿಕ್ಕ ಮನೆಯ ಅಂಗಳದಲ್ಲಿ. ಶ್ಯಾಮರಾಯರ ಮನೆಯಲ್ಲಿ ಶ್ಯಾನುಭೋಗರು, ಶ್ಯಾಮರಾಯರು, ಗೌರಮ್ಮ ಮಾತುಕಥೆಯನ್ನು ಮುಗಿಸಿದ ನಂತರ)

ಶಾನುಭೋಗ : ಹಾಗಾದ್ರೆ ಬರ್‍ಲಾ ಶ್ಯಾಮರಾಯರೆ.

ಶ್ಯಾಮರಾಯ : ಸರಿ

ಶಾನುಭೋಗ : ನಿಮ್ ನಿದ್ರೆಗೆ ತೊಂದ್ರೆ ಕೊಟ್ಟಂಗಾಯ್ತು

ಶ್ಯಾಮರಾಯ : ಅಯ್ಯೋ ಅದೇನ್ ಬಿಡಿ ದಿನಾ ಇದ್ದದ್ದೆ. ಉಣ್ಣೋದು ಮಲ್ಗೋದು
(ನಗುವರು. ಶಾನುಭೋಗರು, ಮಂಜುನಾಥನ ಬಳಿ ಬಂದು)



ಶಾನುಭೋಗ : ಮೇಷ್ಟ್ರೆ, ಶ್ಯಾಮರಾಯ್ರು ಅಂತಂದ್ರೆ ಊರಿಗ್ ಅನ್ನದಾತರಿದ್ದಾಗೆ. ನೀವೇನು ಸಂಕೋಚ ಮಾಡ್ಕೊಬೇಡಿ. ನಾಳೆ ಬೆಳಿಗ್ಗೆ ಬರ್ತೀನ್ ಮತ್ತೆ.
(ತಮ್ಮ ಚಪ್ಪಲಿ ಹಾಕಿಕೊಂಡು, ದೀಪವನ್ನು ತಗೆದುಕೊಂಡು ಹೊರಡಲು ಸಿದ್ಧವಾಗುತ್ತಾರೆ)
.. ಬರ್‍ಲಾ ಗೌರಮ್ಮ
(ಎಂದು ಹೊರಡುವರು. ಶಾನುಭೋಗರು ಹೋದ

ನಂತರ ಶ್ಯಾಮರಾಯರು;)

| | | |
|---|---|---|
| ಶ್ಯಾಮರಾಯ | : | (ತಮ್ಮ ಹೆಂಡತಿಗೆ)<br>.. ಗೌರ, ಮೇಷ್ಟ್ರುಗೆ ಅವರ್ ಕೋಣೆ ತೋರ್‍ಸು. |
| ಗೌರಮ್ಮ | : | ಆಗ್ಲಿ (ಎಂದು ಹೊರಡುವರು) |
| ಮಂಜುನಾಥ | : | ಶ್ಯಾಮರಾಯ್ರೆ, ನೀವ್ ಹೆಸ್ರಿಡ್ದು ಕೂಗಿದ್ರೇನೆ ನನಿಗ್ ಶ್ರೇಯಸ್ಸು. ನಾನ್ ನಿಮ್ ಮಗ ಇದ್ದಹಾಗೆ. |
| ಶ್ಯಾಮರಾಯರು | : | ಹಾಗೇ ಆಗ್ಲಪ್ಪ. ಮಗ ಅಂತ ಹೇಳ್ಬಿಟ್ಟು ನನ್ ಬಾಯಿನೇ ಕಟ್ಹಾಕ್ಬಿಟ್ಟೆ. ಅವ್ನಿದ್ದಿದ್ರೆ ನಿನ್ನಷ್ಟೇ ವಯಸ್ಸಾಗಿರ್‍ತಿತ್ತು<br>(ಗೌರಮ್ಮ ಮಧ್ಯ ಪ್ರವೇಶಿಸಿ) |
| ಗೌರಮ್ಮ | : | ಏನೂಂದ್ರೆ, ಮೇಷ್ಟ್ರು ಈಗ ತಾನೇ ಬಂದಿದ್ದಾರೆ. ಈಗ್ಲೇ ಅವರ್ ಮುಂದೆ ನಮ್ ದುಃಖಾನೆಲ್ಲ ಹೇಳ್ಕೊಂಡು ಯಾಕ್ ಅವರ್ ಮನಸ್ನ ಚಿಕ್ಕದ್ ಮಾಡ್ಬೇಕು? ನೀವು ಹೀಗ್ ಬನ್ನಿ ಮೇಷ್ಟ್ರೆ (ಗೌರಮ್ಮ ಹೊರಡುವರು) |
| ಶ್ಯಾಮರಾಯರು | : | (ಮಂಜುನಾಥನಿಗೆ).. ಹೋಗಪ್ಪ<br>(ಮಂಜುನಾಥ ತನ್ನ ವಸ್ತುಗಳನ್ನು ತಗೆದುಕೊಂಡು ಹೊರಡುವನು. ಒಳಗೆ ಬಂದ ನಂತರ) |
| ಗೌರಮ್ಮ | : | ಬಾಪ್ಪ, ಒಳಗ್ಬಾ<br>(ಮಂಜುನಾಥ ಒಳಗೆ ಬಂದ ನಂತರ)<br>.. ಇದೇ ಕೋಣೆ<br>(ಮಂಜುನಾಥ ಕೋಣೆಯನ್ನು ನೋಡುತ್ತಿರುವಾಗ ಗೌರಮ್ಮ;)<br>.. ಇರು ನೀರ್ ತರ್‍ತಿನಿ. |
| ಮಂಜುನಾಥ | : | ಆಗ್ಲಿ..<br>(ಗೌರಮ್ಮನವರು ಹೊರಡುತ್ತಾರೆ. ಮಂಜುನಾಥ ಕೋಣೆಯನ್ನು ನೋಡುತ್ತಿರುವಾಗ ಆತನಿಗೆ ಒಂದು ಫೋಟೋ ಕಾಣಿಸುತ್ತದೆ. ಆ ಫೋಟೋವನ್ನೇ ನೋಡುತ್ತಿರಬೇಕಾದರೆ ಗೌರಮ್ಮನವರು ಬಂದು;) |
| ಗೌರಮ್ಮ | : | ಅದು ನಮ್ ಹುಡ್ಗನ್ ಫೋಟೋಪಾ. ಮಿಲಿಟ್ರಿನಲ್ ಇದ್ದ, ಬರ್ಮಾ ಯುದ್ಧಕ್ ಹೋದೋನು ವಾಪಸ್ ಬರ್‍ಲೇ ಇಲ್ಲ. |
| ಮಂಜುನಾಥ | : | ಈಗ ನಾನ್ ಬಂದಿದ್ದೀನಲ್ಲಮ್ಮ. |
| ಗೌರಮ್ಮ | : | (ಸಂತಸದಿಂದ)<br>ಎಂಥ ಮುತ್ತಿನಂತ ಮಾತೇಳಿದ್ಯಪ್ಪ.<br>(ಹತ್ತಿರ ಬಂದು ಆತನ ಗದ್ದ ಮತ್ತು ತಲೆಯನ್ನು ಸವರಿ) |



.. ಆಗ್ಲಪ್ಪ, ಹಾಗೇ ಆಗ್ಲಿ. ಪಾಪ ನಿಂಗೆಷ್ಟ್ ಆಯಾಸ ಆಗಿದ್ಯೋ ಏನೋ. ಹೋಗಿ ಮಲ್ಕೋಪಾ.
(ಮಂಜುನಾಥ ಆಯಿತೆಂದು ಸೂಚಿಸುತ್ತಾನೆ)
.. ಮಲ್ಕೋ
(ಎಂದು ಹೇಳಿ ಭಾವುಕರಾಗಿ ನೋಡುತ್ತ ಹೋಗುತ್ತಾರೆ)

**ನಿರ್ದೇಶಕರ ಟಿಪ್ಪಣಿ:**

ಶ್ಯಾಮರಾಯರ ಮನೆಗೆ ಶಾನುಭೋಗರು ಬಂದು ಮಂಜುನಾಥನನ್ನು ಬಿಟ್ಟುಹೋಗುವ ದೃಶ್ಯವನ್ನು ಚಿಕ್ಕದಾಗಿಸಿದ್ದೇವೆ. ಶಾನುಭೋಗರು ಹೋಗುವಲ್ಲಿಂದ ಪ್ರಾರಂಭವಾಗುವ ದೃಶ್ಯ ನಂತರ ನಿಧಾನವಾಗಿ ತಾರ್ಕಿಕ ಅಂತ್ಯವನ್ನು ಕಾಣುತ್ತದೆ. ಶ್ಯಾಮರಾಯರ ಹೆಂಡತಿ ಗೌರಮ್ಮ ತನ್ನ ಮಗ ಬರ್ಮಾ ಯುದ್ಧದಲ್ಲಿ ಸೈನಿಕನಾಗಿ ಮಡಿದ ಬಗ್ಗೆ ಸೂಚ್ಯವಾಗಿ ಹೇಳುವುದು, ಮತ್ತು ಮಂಜು ಈಗ ನಾನೇ ನಿಮ್ಮ ಮಗನ ಹಾಗೇ ಎಂದು ಹೇಳುವ ಮುಖಾಂತರ ಭಾವನಾತ್ಮಕವಾದಂತಹ ಒಂದು ಸಂಬಂಧವನ್ನು ಶ್ಯಾಮರಾಯರು ಮತ್ತು ಗೌರಮ್ಮರೊಡನೊಡನೆ ಪ್ರಾರಂಭಿಸುತ್ತಾನೆ. ಕಾಲಘಟ್ಟವನ್ನು ನಿರ್ಧರಿಸುವ ಬರ್ಮ ಯುದ್ಧದ ಸಂಭಾಷಣೆಯಿಂದಾಗಿ ದೃಶ್ಯ ತನ್ನದೇ ಆದ ಚೌಕಟ್ಟನ್ನು ಹೆಚ್ಚಿಸಿಕೊಳ್ಳುತ್ತ ಸಾಗುತ್ತದೆ.

## ದೃಶ್ಯ-9

*ಹಗಲು - ಹೊರಾಂಗಣ - ಶಾಲೆ*

(ಪದ್ಮ ನಡೆದು ಬರುತ್ತಿರುವಾಗ ಶಾಲೆಯಲ್ಲಿ ಮಕ್ಕಳು ಪ್ರಾರ್ಥನೆ ಮಾಡುತ್ತಿರುವುದು ಕೇಳಿಸಿ ಅಲ್ಲೇ ನಿಲ್ಲುತ್ತಾಳೆ.)

ಮಂಜುನಾಥ & ಮಕ್ಕಳು: *ಕಾಯ್ ಶ್ರೀಗೌರಿ, ಕರುಣಾ ಲಹರಿ*
*--------- ಶಂಕರೀಶ್ವರಿ*
*ಕಾಯ್ ಶ್ರೀಗೌರಿ, ಕರುಣಾ ಲಹರಿ*
*--------- ಶಂಕರೀಶ್ವರಿ*

(ಪ್ರಾರ್ಥನೆ ಮಾಡಿಸುತ್ತಿರುವ ಸಂದರ್ಭದಲ್ಲಿ ಪದ್ಮ ಶಾಲೆಯ ಬಳಿ ಬರುತ್ತಾಳೆ. ಅದನ್ನು ಪ್ರಾರ್ಥನೆ ಮಾಡುತ್ತಿದ್ದ ಪದ್ಮಾಳ ಸ್ನೇಹಿತೆಯರು ನೋಡುತ್ತಾರೆ.)

*ಶ್ರೀ ಜಯಚಾಮುಂಡಿಕೆ ಶ್ರೀ ಜಯಚಾಮೇಂದ್ರ*
*ನಾಮಾಂಕಿತ ಭೂಮೇಂದ್ರ ಲಲಾಮನ ಮುದಕೇ*

(ಪದ್ಮ, ಮಂಜುನಾಥನ ಹಿಂದೆ ನಿಂತು ತನ್ನ ಸ್ನೇಹಿತೆಯರಿಗೆ ತಾನು ತಂದಿರುವ ಮಾವಿನ ಕಾಯಿಯನ್ನು ತೋರಿಸಿ ಅವರಿಗೆ ಆಸೆ ಹುಟ್ಟುವಂತೆ ಮಾಡುತ್ತಾಳೆ)

*ಕಾಯ್ ಶ್ರೀಗೌರಿ ಶ್ರೀಗೌರಿ, ಕರುಣಾ ಲಹರಿ*
*--------- ಶಂಕರೀಶ್ವರಿ*

(ಪ್ರಾರ್ಥನೆ ಮುಗಿದ ನಂತರ ಮಂಜುನಾಥ, ವಿದ್ಯಾರ್ಥಿಗಳಿಗೆ)

ಮಂಜುನಾಥ : ಎಲ್ಲಾ ಬನ್ನಿ ಒಳಗೆ ಬನ್ನಿ
(ಮಕ್ಕಳು ಗಲಾಟೆ ಮಾಡುತ್ತ ಬರುತ್ತಿರುವುದನ್ನ ಗಮನಿಸಿದ ನಂತರ)
.. ಗಲಾಟೆ ಮಾಡ್ದೆ ಬನ್ನಿ ಗಲಾಟೆ ಮಾಡ್ದೆ ಬನ್ನಿ
(ಒಳಗೆ ಹೋಗುತ್ತಿರುವ ಸಂದರ್ಭದಲ್ಲಿ ಪದ್ಮಾಳ ಸ್ನೇಹಿತೆಯರು ಪದ್ಮಾಳ ಬಳಿ ಬಂದಾಗ)



ಪದ್ಮ : ಎಷ್ಟೊತ್ತೆ ಕಾಯೋದು?
ಹುಡುಗಿ : ಕೊಡೇಮಾ.. (ಎಂದು ಎಲ್ಲರು ಕೇಳಿದಾಗ)
ಪದ್ಮ : ಕೊಡಲ್ಲ ಹೋಗ್ರೆ..
(ಕೊಠಡಿಯೊಳಗೆ ಎಲ್ಲ ಮಕ್ಕಳು ಬಂದು ಈ ಹುಡುಗಿಯರು ಬರದಿದ್ದನ್ನು ಗಮನಿಸಿದ ಮಂಜುನಾಥ ಹೊರಗೆ ಬಂದು ನೋಡಿದಾಗ ಪದ್ಮಾಳ ಸ್ನೇಹಿತೆಯರು ಪದ್ಮಾಳ ಜೊತೆ ಓಡಿ ಹೋಗುತ್ತಿರುವುದು ಕಾಣಿಸಿ ಮಂದಹಾಸ ಬೀರುತ್ತಾನೆ)



# ದೃಶ್ಯ–10

*ಹಗಲು – ಹೊರಾಂಗಣ – ಬಯಲು ಪ್ರದೇಶ*

(ಪದ್ಮ ಮುಂದೆ ಓಡಿ ಬರುತ್ತಿದ್ದರೆ ಅವಳ ಸಂಗಡಿಗರು ಅವಳನ್ನು ಹಿಂಬಾಲಿಸುತ್ತಿದ್ದಾರೆ)

ಪದ್ಮ : ನಾನ್ ಹೇಳಿದ್ ಹಾಗ್ ಕೇಳಿದ್ರೇನೆ ನಿಮ್ಗೆಲ್ಲ ಕಾಯ್ಕೊಡೋದು
(ನಿಂತು ಅಲ್ಲೇ ನಿಂತಿದ್ದ ಕರುವನ್ನು ತೋರಿಸಿ)
.. ಹೇಯ್ ಅಲ್ನೋಡ್ರೆ ಕರು ಇದ್ಯಲ್ಲ ಅದಿಕ್ಕ್ ಗೆಜ್ಜೆ ಕಟ್ಟುದ್ರೇನೆ ಕಾಯಿ ಕೊಡೋದು



(ತಕ್ಷಣವೇ ಎಲ್ಲರು ಕರುವನ್ನು ಹಿಡಿಯಲು ಹೋಗುತ್ತಾರೆ ಆದರೆ ಕರು ಸಹ ಹೆದರಿ ಓಡಲು ಪ್ರಾರಂಭಿಸುತ್ತದೆ. ಸ್ನೇಹಿತೆಯರೆಲ್ಲರು ಸ್ವಲ್ಪ ದೂರ ಓಡಿ ಆಯಾಸಗೊಂಡು ನಿಲ್ಲುತ್ತಾರೆ. ಆದರೆ ಪದ್ಮ ಓಡುತ್ತಲೇ ಇರುತ್ತಾಳೆ. ಸ್ವಲ್ಪ ದೂರದ ನಂತರ ನಿಂತು ಹಿಂದೆ ತಿರುಗಿ ವಿಶ್ರಾಂತಿ ತಗೆದುಕೊಳ್ಳುತ್ತಿದ್ದ ತನ್ನ ಸ್ನೇಹಿತೆಯರಿಗೆ;)

ಪದ್ಮ : ಬನ್ರೇ..

ಸ್ನೇಹಿತೆಯರು : ನಾವ್ ಬರಲ್ಲಪ್ಪ

(ಪದ್ಮ ತಾನೊಬ್ಬಳೇ ಆ ಕರುವನ್ನು ಹಿಡಿಯಲು ಹೋಗುತ್ತಾಳೆ. ಅದೇ ಸಮಯಕ್ಕೆ ಮಾಸ್ತರರು ಅಲ್ಲಿಗೆ ಬಂದಿರುವುದನ್ನು ನೋಡುವ ಸ್ನೇಹಿತೆಯರೆಲ್ಲರು ಅಲ್ಲಿಂದ ಪರಾರಿಯಾಗುತ್ತಾರೆ. ಕರುವನ್ನು ಹಿಡಿದ ಪದ್ಮ ಹಿಂತಿರುಗಿ ನೋಡಿದರೆ ಸ್ನೇಹಿತರಿಲ್ಲದೆ ಮಾಸ್ತರರು ನಿಂತಿರುವುದನ್ನು



ಕಂಡು ವಿಚಲಿತಳಾಗಿ ನಂತರ ಧೈರ್ಯದಿಂದ ಮಾಸ್ತರರು ನಿಂತಿರುವ ದಾರಿಯತ್ತ ಬರುತ್ತಾಳೆ. ಮಾಸ್ತರರು ದಾರಿಗೆ ಅಡ್ಡಲಾಗಿ ಕಾಲುಹಾಕಿಕೊಂಡು ನಿಂತಿರುವುದರಿಂದ ಪದ್ಮ ಮುಂದಕ್ಕೆ ಹೋಗದೆ ಅಲ್ಲೇ ನಿಂತಾಗ ಮಾಸ್ತರರು ಕಾಲು ತಗೆದು ದಾರಿ ಕೊಡುತ್ತಾರೆ. ಓಡುವ ರಭಸದಲ್ಲಿ ಕರುವಿಗೆ ಕಟ್ಟುವ ಗೆಜ್ಜೆ ಕೆಳಗೆ ಬಿದ್ದಾಗ ಮಾಸ್ತರರು ಅದನ್ನು ಎತ್ತಿಕೊಡಲು ಹೋದಾಗ ಅದನ್ನು ತಗೆದುಕೊಳ್ಳದೆ ನಗುತ್ತ ಹೋಗಿಬಿಡುತ್ತಾಳೆ ಇತ್ತ ಮಾಸ್ತರರು ಮಂದಹಾಸವನ್ನು ಬೀರುತ್ತ ಗೆಜ್ಜೆಯ ಸದ್ದನ್ನು ಕೇಳುತ್ತ ನಿಲ್ಲುತ್ತಾರೆ)



**ನಿರ್ದೇಶಕರ ಟಿಪ್ಪಣಿ:**

ಕಾಯ್ ಶ್ರೀ ಗೌರಿ ಪ್ರಾರ್ಥನೆಯೊಂದಿಗೆ ಪ್ರಾರಂಭವಾಗುವ ಶಾಲೆಯ ದೃಶ್ಯ ಅಂದಿನ ಮೈಸೂರು ಸಂಸ್ಥಾನದ ಅಡಿಯಲ್ಲಿದ್ದ ಹಲವಾರು ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣ ಕೇಂದ್ರಗಳಲ್ಲಿ ಮಹಾರಾಜರ ಕೃತಿಯ ಪ್ರಾರ್ಥನೆಯೊಂದಿಗೆ ಪ್ರಾರಂಭವಾಗುತ್ತಿರುವುದನ್ನು ಸಂಕೇತಿಸುತ್ತ ಮತ್ತು ಪದ್ಮಾಳ ಚೇಷ್ಟೆ ಹುಡುಗಾಟವನ್ನು ಹೇಳುವಂತಹ ದೃಶ್ಯವಾಗಿ ಮಾರ್ಪಾಡಾಗುತ್ತದೆ. ಮಂಜುನಾಥ ಆಕೆಯನ್ನು ಮತ್ತೆ ಭೇಟಿಮಾಡುತ್ತಾನೆ. ಆಕೆಯ ಹುಡುಗಾಟವನ್ನು ಮತ್ತು ಜೀವನೋತ್ಸಾಹವನ್ನು ಕಂಡು ಅವನಲ್ಲಿ ಕಾವ್ಯವೊಂದು ಸ್ಫುರಿಸುತ್ತದೆ. ಹೀಗೆ ಕೆ.ಎಸ್.ನ ಅವರ ಎರಡನೆಯ ಕವನದ ಸಾಲುಗಳು ಕಾವ್ಯದಿಂದ ಚಲನಚಿತ್ರಕ್ಕೆ ಗೀತೆಯಾಗಿ ಮಾರ್ಪಾಡಾಗುತ್ತ ಚಿತ್ರಕ್ಕೆ ರೂಪಕವನ್ನು ಸೃಷ್ಟಿಸುತ್ತದೆ. ಈ ಹಾಡಿಗೆ ವಿಶೇಷವಾದ ಐತಿಹಾಸಿಕ ಕಾರಣವೂ ಇದೆ.

## ದೃಶ್ಯ–11

*ರಾತ್ರಿ – ಒಳಾಂಗಣ – ಶ್ಯಾಮರಾಯರ ಮನೆ*

(ಮನೆಯಲ್ಲಿ ಗೆಜ್ಜೆಯ ಶಬ್ದವನ್ನು ಆಲಿಸುತ್ತ ಪದ್ಮಾಳನ್ನು ನೆನಸಿಕೊಳ್ಳುತ್ತ ಮಂಜುನಾಥನಿಗೆ ಒಂದು ಕವನ ಬರೆಯುವ ಮನಸಾಗಿ)

*ಹಕ್ಕಿಯ ಹಾಡಿಗೆ*
*ತಲೆದೂಗುವ ಹೂವು*
*ನಾನಾಗುವ ಆಸೆ*

(ಎಂದು ಹೇಳಿ ಬರೆಯತೊಡಗುತ್ತಾನೆ)



## ದೃಶ್ಯ–12

*ಹಗಲು – ಒಳಾಂಗಣ – ಶ್ಯಾಮರಾಯರ ಮನೆ*

(ಬೆಳಗಿನ ಹೊತ್ತು ಮಂಜುನಾಥ ಮಹಡಿಯಿಂದ ಕೆಳಗೆ ಬಂದಾಗ ಅಲ್ಲಿ ಬಿಟ್ಟಿದ್ದ ರಂಗೋಲಿಗಳನ್ನು ನೋಡಿ ಅತಿ ಆಶ್ಚರ್ಯ ಪಡುತ್ತಾನೆ. ನಂತರ ಅಲ್ಲೇ ತುಳಸೀ ಗಿಡಕ್ಕೆ ಪೂಜೆ ಮಾಡುತ್ತಿದ್ದ ಗೌರಮ್ಮನವರು ಮಂಜುನಾಥನ ಹತ್ತಿರ ಬಂದು)

ಗೌರಮ್ಮ : ಏನ್ ಮಂಜು, ಯಾಕ್ ಹಾಗ್ ನೋಡ್ತಾ ನಿಂತ್ಕೊಂಡ್ಬಿಟ್ಟೆ.


ಮಂಜುನಾಥ : ಅಲ್ಲಾ ಇಷ್ಟೊಂದ್ ಚೆಂದದ ರಂಗೋಲಿ ಆದ್ರೆ ತುಳಿದೇ ಹೋಗೋದ್ ಹ್ಯಾಗೆ?

ಗೌರಮ್ಮ : ನಮ್ ಪದ್ಮ ಹಾಕಿದ್ದು. ರಂಗೋಲಿ ಹಾಕೋದ್ರಲ್ಲಿ ಬಹಳ ನಿಪುಣೆ ಅವ್ಳು. ಹಬ್ಬಾ ನೋಡು ಬೆಳಗಿನ್ ಜಾವಾನೆ ಬಂದು ಇಷ್ಟೆಲ್ಲ ಮಾಡಿದಾಳೆ. ತುಂಬ ಜಾಣೆ ಅವ್ಳು
(ಎಂದು ಪ್ರಾರ್ಥನೆ ಮಾಡುತ್ತ ಒಳಗೆ ಹೋಗುತ್ತಾರೆ. ಗೌರಮ್ಮನವರು ಹೋದ ನಂತರ ಮಂಜುನಾಥ ಖುಷಿಯಿಂದ ರಂಗೋಲಿಯನ್ನು ತುಳಿಯದೆ ಒಂದೊಂದಾಗಿ ದಾಟುತ್ತ ಹೋಗುತ್ತಾನೆ ಅತ್ತ ಪದ್ಮಳು ಒಂದೊಂದೇ ರಂಗೋಲಿಯನ್ನು ದಾಟುತ್ತ ಬಂದು ಮಂಜುನಾಥನ ಕೋಣೆಗೆ ಬರುತ್ತಾಳೆ. ಬಂದು ತನ್ನ ಗೆಜ್ಜೆಗಾಗಿ ಹುಡುಕಾಟ ನಡೆಸುತ್ತಾಳೆ)

ಪದ್ಮ : ಎಲ್ಲಿದೆ?
(ಎಂದು ಅವನ ಟ್ರಂಕುಗಳಲ್ಲಿ ಹುಡುಕಾಟ ನಡೆಸುತ್ತಾಳೆ. ಅಲ್ಲಿ ಮಂಜುನಾಥ ಬರೆದಿರುವ ಕವನಗಳು ಆಕೆಗೆ ಕಾಣಿಸುತ್ತವೆ. ಅದನ್ನು ತಗೆದುಕೊಂಡು ಓದಲು ತೊಡಗುತ್ತಾಳೆ)

*ಹಕ್ಕಿಯ ಹಾಡಿಗೆ ತಲೆದೂಗುವ ಹೂ ನಾನಾಗುವ ಆಸೆ*

(ಎಂದು ಓದುವಷ್ಟರಲ್ಲಿ ಮಂಜುನಾಥ ಬರುವುದು ಕಾಣಿಸಿ ಕವನದ ಹಾಳೆಯನ್ನು ಮುಚ್ಚಿಟ್ಟುಕೊಳ್ಳುತ್ತಾಳೆ. ಮಂಜುನಾಥ ಸ್ನಾನಮಾಡಿಕೊಂಡು ತಲೆ ಒರೆಸಿಕೊಳ್ಳುತ್ತ ಬರುತ್ತ ಕೋಣೆಯಲ್ಲಿ ಪದ್ಮ ನಿಂತಿರುವುದನ್ನು ನೋಡಿ)



ಮಂಜುನಾಥ : ನೀನಾ? ಇಲ್ಲೇನ್ ಮಾಡ್ತಿದ್ಯ?

ಪದ್ಮ : ಗೆಜ್ಜೆ, ನಂದು
(ಎಂದು ಗೆಜ್ಜೆಯನ್ನು ತೋರಿಸಿ ಹೋಗುತ್ತಿರುವಾಗ)

ಮಂಜುನಾಥ : ಸಿಗ್ತಲ್ವ?

ಪದ್ಮ : ಹ್ಞೂ ಸಿಕ್ತು. ನೆನ್ನೆನೆ ಸಿಕ್ಕಿದ್ರೆ ಕರೂಗಾದ್ರು ಕಟ್ಬೋದಿತ್ತು. ಈಗ್ ತಿರ್‍ಗ ಕರೂನ್ ಹುಡುಕ್ಬೇಕು
(ಎಂದು ಹೊರಡುತ್ತಿರುವಾಗ ಪದ್ಮಾಳ ಕೈಯಲ್ಲಿ ತನ್ನ ಕವನದ ಹಾಳೆಯನ್ನು ನೋಡುವ ಮಂಜುನಾಥ)

ಮಂಜುನಾಥ : ಏಯ್ ನನ್ ಕವನ, ಇನ್ನೂ ಮುಗ್ದಿಲ್ಲ.
(ಓಡಿ ಹೋಗಿ ಅವಳ ಕಡೆ ನೋಡುತ್ತಾ ನಿಲ್ಲುತ್ತಾನೆ)



## ದೃಶ್ಯ–13

*ಹಗಲು – ಹೊರಾಂಗಣ – ನವಿಲೂರು*

(ಪದ್ಮಳ ಮುಖಾಂತರ ಪ್ರಕೃತಿಯನ್ನು ಚಿತ್ರೀಕರಿಸಲಾಗಿದೆ)

*ಹಕ್ಕಿಯ ಹಾಡಿಗೆ ತಲೆದೂಗುವ ಹೂ ನಾನಾಗುವ ಆಸೆ*
*ಹಸುವಿನ ಕೊರಳಿನ ಗೆಜ್ಜೆಯ ದನಿಯೂ ನಾನಾಗುವ ಆಸೆ*
*ಹತ್ತಿದ ಕಾಮನಬಿಲ್ಲಿನ ಮೇಲಿನ ಮುಗಿಲಾಗುವ ಆಸೆ*
*ಚಿನ್ನದ ಬಣ್ಣದ ಜಿಂಕೆಯ ಕಣ್ಣಿನ ಮಿಂಚಾಗುವ.. ಆಸೆ*
*ತೋಟದ ಕಂಪಿನ ಉಸಿರಲಿ ಸೇರುವ ಜೇನಾಗುವ ಆಸೆ*
*ಕಡಲಿನ ನೀಲಿಯ ನೀರಲಿ ಬಳುಕುವ ಮೀನಾಗುವ ಆಸೆ*
*ಸಿಡಿಲನು ಕಾರುವ ಬಿರುಮಳೆಗಂಜದೆ ಮುನ್ನಡೆಯುವ ಆಸೆ*
*ನಾಳೆಯ ಬದುಕಿನ ಇರುಳಿನ ತಿರುವಿಗೆ ದೀಪವನಿಡುವಾಸೆ*

(ಹಾಡಿನ ಸಾಲುಗಳು ಮುಗಿದು ಹೋಗುವುದನ್ನು ಮನಗಂಡ ಪದ್ಮ ಹಾಡನ್ನು ಅಲ್ಲಿಗೇ ನಿಲ್ಲಿಸುತ್ತಾಳೆ. ಎದುರಿಗೆ ಮಂಜುನಾಥ ಬಂದಿರುವುದನ್ನು ನೋಡಿ ಗಲಿಬಿಲಿಗೊಂಡು, ನಾಚಿಕೊಂಡು ಮಂಜುನಾಥನಿಗೆ ಕವನದ ಪ್ರತಿಯನ್ನು ಕೊಟ್ಟುಹೋಗುತ್ತಾಳೆ. ಮಂಜುನಾಥ ಪತ್ರವನ್ನು ನೋಡುತ್ತ ನಂತರ ಪದ್ಮಾಳನ್ನೇ ನೋಡುತ್ತ ನಿಲ್ಲುತ್ತಾನೆ)

**ನಿರ್ದೇಶಕರ ಟಿಪ್ಪಣಿ:**
ಕವನವನ್ನು ಬರೆದ ಮನಸ್ಥಿತಿಯಲ್ಲಿ ಬೆಳಗ್ಗೆ ಹೊರಬಂದ ಮಂಜು, ಮನೆಯಲ್ಲಿ ಕಾಣುವ ರಂಗೋಲಿಯ ದೃಶ್ಯ ಆತನನ್ನು ಅಪ್ರತಿಭನನ್ನಾಗಿಸುತ್ತದೆ. ಅಷ್ಟೇ ಅಲ್ಲ ಪದ್ಮಾಳಿಂದ ವಿನ್ಯಾಸಗೊಂಡಿರುವ ರಂಗೋಲಿಗಳನ್ನು ತುಳಿಯದೆ ಅದನ್ನು ಹಾರಿ ಹಾರಿ ದಾಟುತ್ತಾನೆ. ಅದೇ ರೀತಿ ಹಾರಿ ಹಾರಿ ಬರುವ ಪದ್ಮ ತನ್ನ ಗೆಜ್ಜೆಯ ಸರವನ್ನು ಹುಡುಕುತ್ತ ಕೋಣೆಗೆ ಬಂದಾಗ ಅಲ್ಲಿ ಕಾಣುವ ಕವನವೊಂದನ್ನು ಓದುತ್ತಾಳೆ. ಆಕರ್ಷಿತಳಾಗಿ ಆ ಕವನವನ್ನು ತಗೆದುಕೊಂಡು ಹೋಗುತ್ತಾಳೆ. ಈ ಕವನವೇ ನಂತರದ ಹಾಡಾಗುತ್ತದೆ. ಕವಿ ಮಂಜುನಾಥನ ಕವನ ಪದ್ಮಾಳ ಮುಖಾಂತರ ಹಾಡಾಗಿ ಮೂಡುತ್ತದೆ.

# ದೃಶ್ಯ–14

*ರಾತ್ರಿ – ಒಳಾಂಗಣ – ಶ್ಯಾಮರಾಯರ ಮನೆ*

(ಮಂಜುನಾಥ ದೀಪದ ಸಹಾಯದಿಂದ ಕವನವೊಂದನ್ನು ಬರೆಯುತ್ತಿದ್ದಾನೆ)

ಮಂಜುನಾಥ : *ಮಣ್ಣಿನ ಕೊಡುಗೆಗೆ,*
*ನೋವಿಗೆ ನಲಿವಿಗೆ,*
*ಕನ್ನಡಿ ಹಿಡಿವಾಸೆ..*

(ಸ್ವಲ್ಪ ಸಮಯ ಪದಗಳಿಗೆ ಹುಡುಕಾಟ ನಡೆಸಿ)

*ಮಾನವ ಹೃದಯದ*
*ಕರುಣೆಗೆ ಒಲವಿಗೆ*
*ದನಿಗೂಡಿಸುವಾಸೆ*

(ಕವನ ಸಂಪೂರ್ಣಗೊಳಿಸಿದ್ದಕ್ಕೆ ಸಂತಸಪಡುತ್ತ ಮತ್ತೆ ಕವನವನ್ನು ಓದುತ್ತಾನೆ)

*ಮಾನವ ಹೃದಯದ*
*ಕರುಣೆಗೆ ಒಲವಿಗೆ*
*ದನಿಗೂಡಿಸುವಾಸೆ*

(ಎಂದು ಹೇಳಿ ಮೈಮುರಿಯುತ್ತ ಕಿಟಕಿಯ ಬಳಿ ಬಂದು ನಿಂತಾಗ ಮನೆಯ ಮುಂದೆ ಯಾರೋ ಒಬ್ಬ ವ್ಯಕ್ತಿ ಗಾಯಾಳುವಾಗಿ ಬಂದು ನಿಲ್ಲುವುದು ಕಾಣಿಸಿ ಕೆಳಗೆ ಓಡಿ ಬರುತ್ತಾನೆ. ಆ ವ್ಯಕ್ತಿ ಅತೀವವಾಗಿ ಗಾಯ ಗೊಂಡಿದ್ದರಿಂದ ಸ್ವಲ್ಪ ದೂರವೇ ನಡೆದು ಕುಸಿದು ಬೀಳುತ್ತಾನೆ. ಮಂಜುನಾಥ ಅವನ ಮುಂದೆ ಓಡಿ ಬಂದು)

ಮಂಜುನಾಥ : ಯಾರೂ?
(ಅವನನ್ನು ಮುಟ್ಟಿ)
.. ಸ್ವಾಮಿ
(ಎಂದು ಮಾತನಾಡಿಸುವಷ್ಟರಲ್ಲೆ ಶ್ಯಾಮರಾಯರು ಮತ್ತು ಗೌರಮ್ಮ ಓಡಿಬರುತ್ತಾರೆ.)



ಶ್ಯಾಮರಾಯರು : ಏನಾಯ್ತು ಮಂಜು? ಯಾರು? ಯಾರು?
(ಬಿದ್ದ ವ್ಯಕ್ತಿಯನ್ನು ಮುಟ್ಟಿ, ಮಂಜುನಾಥನಿಗೆ)
.. ಏನಾಯ್ತು?

ಮಂಜುನಾಥ : ಯಾರೋ ಗೊತ್ತಿಲ್ಲ, ಪಾಪ ತೊಂದ್ರೇಲ್ ಇರೋ ಹಾಗಿದೆ.

ಶ್ಯಾಮರಾಯರು : ನಡಿ ಒಳಗ್ ಕರ್ಕೊಂಡ್ಹೋಗಣ.
(ಎಂದು ಇಬ್ಬರೂ ತಮ್ಮ ಹೆಗಲಿಗೆ ಅವನನ್ನು ಹಾಕಿಕೊಂಡು ಒಳಗಡೆ ಕರೆತರುತ್ತಾರೆ.)
.. ಮೆಲ್ಲಗೆ

ಮಂಜುನಾಥ : (ಒಳಗಡೆ ಕರೆತರುತ್ತ) ಮೆಲ್ಲಗೆ

ಶ್ಯಾಮರಾಯರು : (ಆತನಿಗೆ ನೀರನ್ನು ಚಿಮ್ಮಿಸಿ) ..ನೋಡಪ್ಪ.. ನೋಡು..

ಮಂಜುನಾಥ : ಇಲ್ನೋಡಿ..

ಶ್ಯಾಮರಾಯರು : ಕಣ್ತೆರಿ..
(ಗೌರಮ್ಮನವರು ಒಳಗಿನಿಂದ ಹಾಲನ್ನು ತಂದುಕೊಡುತ್ತ)

ಗೌರಮ್ಮ : ಹಾಲ್ತಗೊಳಿ
(ಮಂಜುನಾಥ ಅದನ್ನು ತಗೆದುಕೊಂಡು ಗಾಯಾಳುವಿಗೆ)

ಮಂಜುನಾಥ : ಕುಡಿರಿ..
(ಹಾಲು ಕುಡಿಸುತ್ತಾನೆ. ವ್ಯಕ್ತಿ ಹಾಲನ್ನು ಕುಡಿಯುತ್ತಿರುವುದನ್ನು ಕಂಡು ಎಲ್ಲರು ಸಂತೋಷಗೊಳ್ಳುತ್ತಾರೆ. ನಂತರ ಆ ವ್ಯಕ್ತಿಗೆ ಎಚ್ಚರವಾಗಿ)

ರಾಘವ : ನನ್ನನ್ನ, ನನ್ನನ್ನ ಹೇಗಾದ್ರು ಪಾರ್ಮಾಡಿ. ನಾನಿಲ್ಲಿಂದ ಹೋಗ್ಲೇಬೇಕು.

ಮಂಜುನಾಥ : (ಕುತೂಹಲದಿಂದ) ..ಪಾರ್ಮಾಡೋದು! ಯಾಕೆ?

ರಾಘವ : ಯಾಕೆಂದ್ರೆ ನನಿಗೆ ನಾಳೆ ಮುಖ್ಯವಾದ ಚಳುವಳಿ ಕೆಲ್ಸ ಇದೆ. ನಾನ್ ಹೋಗ್ಲೇ..
(ನೋವಿನಿಂದ ಕಾಲನ್ನೆತ್ತಲಾಗದೆ, ಯಾರೋ ಬರುವುದನ್ನು ಗಮನಿಸಿ ಹೇಳುವುದನ್ನು ಅರ್ಧಕ್ಕೇ ನಿಲ್ಲಿಸುತ್ತಾನೆ. ಇದನ್ನು ಗಮನಿಸುವ ಶ್ಯಾಮರಾರು ತಮ್ಮ ಪತ್ನಿಗೆ)

ಶ್ಯಾಮರಾಯರು : ನೋಡು, ಯಾರ್ ಬಂದಿದಾರೆ ಅಂತ
(ಗೌರಮ್ಮನವರು ಕಿಟಕಿಯ ಬಳಿ ಯಾರೆಂದು ನೋಡಲು ಬಂದಾಗ ಪೋಲೀಸರು ಬರುತ್ತಿರುವುದನ್ನು ನೋಡಿ ಗಾಬರಿಯಾಗುತ್ತಾರೆ. ನಂತರ ಒಳಗಡೆ ಬಂದು)

ಗೌರಮ್ಮ : ದೇವ್ರೆ, ಅಯ್ಯಯ್ಯೋ ಪೋಲೀಸ್ನೋರು ಬರ್ತಿದಾರೆ.

ಶ್ಯಾಮರಾಯರು : (ಗಾಬರಿಗೊಂಡು) ..ಪೋಲೀಸ್ನೋರು..!

ಗೌರಮ್ಮ : ಹೌದು.

(ಶ್ಯಾಮರಾಯರು ನಂತರ ಮಂಜುನಾಥನ ಕಡೆಗೆ ತಿರುಗಿ)

ಶ್ಯಾಮರಾಯರು : ಮಂಜು ಇವ್ರನ್ನ ಹಿಂದಿನ್ ಬಾಗಿಲ್ನಿಂದ ಶಾನುಭೋಗ್ರ ಮನೆಗ್ ಕರ್ಕೊಂಡ್ ಹೋಗೋದೆ ಒಳ್ಳೇದು. ಇಲ್ಲಿದ್ರೆ ಖಂಡಿತ ಪೋಲೀಸ್ನೋರ್ ಹಿಡ್ಕೋತಾರೆ. ಅಲ್ಲಿದ್ರೆ ಯಾರಿಗೂ ಅನುಮಾನಾನೇ ಬರೋದಿಲ್ಲ.

ಮಂಜುನಾಥ : ಹೌದು ಆದ್ರೆ ಈ ಪರಿಸ್ಥಿತೀಲಿ ಹ್ಯಾಗ್ ಸಾಧ್ಯ?

ರಾಘವ : ಇಲ್ಲ.. ನಾನ್ ಹೋಗ್ಲೇಬೇಕು.

(ಮಂಜುನಾಥನ ಸಹಾಯದಿಂದ ಎದ್ದುನಿಲ್ಲುತ್ತಾನೆ.)

ಮಂಜುನಾಥ : ಬನ್ನಿ.. ಬನ್ನಿ..

ಶ್ಯಾಮರಾಯರು : ಮೆತ್ತಗೆ..

ಮಂಜುನಾಥ : ಒಂದೆರೆಡ್ ಘಳಿಗೆನಾದ್ರು ವಿಶ್ರಾಂತಿ ತಗೊಂಡ್ಹೋಗಿ

(ಹಿಂದಿನ ಬಾಗಿಲಿಂದ ಮನೆಯನ್ನು ದಾಟುತ್ತಾರೆ)



## ದೃಶ್ಯ–15

***ರಾತ್ರಿ – ಹೊರಾಂಗಣ – ನವಿಲೂರಿನ ಬೀದಿ***

(ಮಂಜುನಾಥ ಅಪರಿಚಿತನನ್ನು ತನ್ನ ಹೆಗಲಿನ ಸಹಾಯದಿಂದ ಕರೆದುಕೊಂಡು ಬರುತ್ತಿದ್ದಾನೆ)

ಮಂಜುನಾಥ : ಇಂಥಾ ನೋವ್ನಲ್ಲೂ ಹೋಗ್ಬೇಕು ಅಂತೀರಲ್ಲ, ಅದ್ಹೇಗ್ ಸಾಧ್ಯ

ರಾಘವ : ಏನ್ಮಾಡ್ಲಿ.. ಮಾಡ್ಲೇಬೇಕು

(ನೋವಿನಿಂದ ನರಳುತ್ತ ಹೇಳುತ್ತಾನೆ)

ಮಂಜುನಾಥ : ಮೆಲ್ಲಗೆ..

# ದೃಶ್ಯ–16

*ರಾತ್ರಿ – ಹೊರಾಂಗಣ – ಶ್ಯಾಮರಾಯರ ಮನೆ*

(ಶ್ಯಾಮರಾಯರ ಮನೆಗೆ ಪೋಲೀಸರು ಬಂದು ವಿಚಾರಣೆ ನಡೆಸುತ್ತಿದ್ದಾರೆ)

ದಫೇದಾರ : ಅದ್ಯಾಕ್ ಇಷ್ಟೊತ್ನಲ್ ದರ್ವಾಜ ತಕ್ಕೊಂಡಿದ್ರಿ?

ಶ್ಯಾಮರಾಯರು : (ಅಳುಕಿನಲ್ಲಿ) ..ಏನಿಲ್ಲ, ಬೇಲಿ ಅಂಚ್ನಲ್ಲಿ ಏನೋ ಸರಸರಾಂತ ಶಬ್ದ ಆದ್ಹಂಗಾಯ್ತು. ದನಕರುಗಳೆಲ್ಲ ಕೂಗ್ಕೊಂಡ್ವು. ಹಾವು–ಗೀವು ಬಂದಿದ್ಯೋ ಏನೋ ನೋಡೋಣಾಂತ ಬಾಗಿಲ್ ತೆರ್ದೆ. ಇದ್ರಿಂದ ನಿಮಗ್ ತೊಂದ್ರೆ ಆಯ್ತೇನು?

ದಫೇದಾರ : (ತನ್ನ ಲಾಟಿಯನ್ನು ಠೀವಿಯಿಂದ ಬಡಿಯುತ್ತ) ಅಂದ್ರೆ ಅವ್ನಿಲ್ಲಿಗ್ ಬರ್ಲಿಲ್ಲಾಂತಾಯ್ತು.

ಶ್ಯಾಮರಾಯರು : ಯಾರು? ಯಾರ್ ಬರ್ಬೇಕಾಗಿತ್ತು?

ದಫೇದಾರ : ಅವ್ನೆ ದಾಡಿವಾಲಾ, ಚಳುವಳಿಗಾರ ರಾಘವೇಂದ್ರ ಅಂತ

ಶ್ಯಾಮರಾಯರು : (ಹುಸಿನಗು ನಗುತ್ತ)
.. ಚಳುವಳಿ, ಚಳುವಳಿಗು ಈ ಮನೆಗು ಏನ್ ಸಂಬಂಧ ದಫೇದಾರ್ರೇ? ನೀವೆಲ್ಲೋ ತಪ್ಪಿ ಬಂದಿದ್ದೀರಿ. ಬೇಕಿದ್ರೆ ಮನೇನೆಲ್ಲ ಹುಡುಕಿ ನೋಡಿ, ನಿಮ್ಮ ಅನುಮಾನ ಪರಿಹರಿಸ್ಕೊಳ್ಳಿ

ದಫೇದಾರ : ನೀವ್ ಹೇಳಿದ್ರೆ ಸಾಕು. ಆಸಾಮಿ ಸರಿಯಾದ್ ಹೊತ್ನಲ್ ಕೈಕೊಟ್ನಲ್ಲ. ತಥ್ ಈ ಚಳುವಳಿಗಾರರ್ನ್ ತಂದು. ನಾಳೆ ಕಮ್ಮರ್ಡಿಲ್ ಬೇರೆ ಭಾಷಣ ಮಾಡ್ತಾನಂತೆ ಅವ್ನೇನಾದ್ರು ಭಾಷಣ ಮಾಡುದ್ರೆ ನನ್ ತಲೆ ಗಯಾ
(ಎಂದು ತನ್ನ ಕುತ್ತಿಗೆಯತ್ತ ಸನ್ನೆ ಮಾಡಿ ತೋರಿಸುತ್ತಾನೆ)



# ದೃಶ್ಯ–17

*ರಾತ್ರಿ – ಒಳಾಂಗಣ – ಶಾನುಭೋಗರ ಮನೆ*

(ಮಂಜುನಾಥ ಅವನ ಜೊತೆ ಅಪರಿಚಿತ ರಾಘವೇಂದ್ರನನ್ನು ಮನೆಯೊಳಗೆ ಕರೆದೊಯ್ಯುತ್ತಿರುವ ಶಾನುಭೋಗರು.)

ಶಾನುಭೋಗ : ನಿಧಾನ, ನಿಧಾನ. ಇವರ್ನ ಈ ಮನೆಗ್ ಕರ್ಕೊಂಡ್ ಬಂದು ಬಹಳ ಒಳ್ಳೇದ್ ಮಾಡಿದ್ರಿ

ಮಂಜುನಾಥ : (ಅಪರಿಚಿತನಿಗೆ) ..ಮೆಲ್ಲಗೆ

ಶಾನುಭೋಗ : ಅಗತ್ಯವಾಗಿ ನಮ್ಮನೇಲೆ ಇರ್ಲಿ.
(ಪದ್ಮಾಳ ಬಳಿ ಬಂದು)
.. ಪದ್ಮಾ ಮುಂದಿನ್ ಕೋಣೆ ಬಾಗಿಲ್ ತೆಗಿ.
(ಪದ್ಮ, ಅಪ್ಪನ ಬಳಿಯಿಂದ ದೀಪವನ್ನು ತಗೆದುಕೊಂಡು ದಾರಿಯನ್ನು ತೋರಿಸುತ್ತ ನಡೆಯುತ್ತಾಳೆ ಆಗ ಮಂಜುನಾಥ ಶಾನುಭೋಗರಿಗೆ)

ಮಂಜುನಾಥ : ನಿಮ್ದು ವಿಶಾಲವಾದ ಮನಸ್ಸು ಶಾನ್ಭೋಗ್ರೆ.

ಅಪರಿಚಿತ : ನಾನು ಬೆಳಗ್ಗೆ ಆದಷ್ಟು ಬೇಗ ಹೊರ್ಟೋಗ್ತಿನಿ. ನಿಮಗ್ಯಾರಿಗು ತೊಂದ್ರೆ ಕೊಡಲ್ಲ.

ಶಾನುಭೋಗ : ಏನು ತೊಂದ್ರೆ ಇಲ್ಲ ಬಿಡಿ
(ಕೋಣೆ ಬಂದ ನಂತರ ಅಪರಿಚಿತನಿಗೆ)
.. ಬನ್ನಿ ನಿಧಾನ
(ಮಂಜುನಾಥ ಅವನನ್ನು ಕೋಣೆಯೊಳಗೆ ತಂದು ಕೂರಿಸುತ್ತಾನೆ.)

ಪದ್ಮ : ನೀವಿಲ್ಲಿರ್ಬಹುದು. ನಿಮ್ಗಿಲ್ಲಿ ಯಾವ್ರೀತಿ ತೊಂದ್ರೆನು ಆಗಲ್ಲ

ರಾಘವೇಂದ್ರ : ಆಯ್ತು. ಮಂಜುನಾಥ್ ನಿಮ್ಗ್ ಹ್ಯಾಗ್ ಕೃತಜ್ಞತೆ ಹೇಳ್ಬೇಕೋ ಗೊತ್ತಾಗ್ತಾ ಇಲ್ಲ

ಮಂಜುನಾಥ : ಹೇಯ್ ನನಗ್ಯಾಕೆ? ಅದೆಲ್ಲ ಏನಿದ್ರು ಇವಳ್ಗೇ ಸೇರ್ಬೇಕು.
(ಎಂದು ಪದ್ಮಾಳತ್ತ ತೋರಿಸುತ್ತಾನೆ. ಪದ್ಮ ನಗುತ್ತ ಏನನ್ನೂ ತಗೆದುಕೊಂಡು ಹೊರಡುವಳು)

ರಾಘವೇಂದ್ರ : ಆಯ್ತು. ಬೆಳಗ್ಗೆ ಭೇಟಿ ಆಗ್ತಿನೋ ಇಲ್ವೋ ಗೊತ್ತಿಲ್ಲ. ಬೇಗ ಹೋಗ್ತಿನಿ.
(ಶಾನುಭೋಗರು ಬಾಗಿಲ ಬಳಿಯಲ್ಲಿ ನಿಂತು ಇದನ್ನೆಲ್ಲ ನೋಡುತ್ತಿರುತ್ತಾರೆ)

ಮಂಜುನಾಥ : ಎಂದಾದ್ರು ಭೇಟಿಯಾಗೋಣ. ಸಧ್ಯ ನೀವ್ ಈ ಗಂಡಾಂತರದಿಂದ ಪಾರಾದ್ರೆ ಸಾಕು ಬರ್ತೀನಿ.
(ಎಂದು ಅವರಿಗೆ ಹೇಳಿ ಹೊರಬಂದು ಶಾನುಭೊಗರಿಗೆ)
.. ತುಂಬಾ ಉಪ್ಕಾರ ಆಯ್ತು

ಶಾನುಭೋಗ : ಏನಿಲ್ಲ ಕರ್ತವ್ಯ, ಮಾಡ್ಬೇಕಲ್ಲ

ಮಂಜುನಾಥ : ನಾನ್ ಬರ್ತಿನಿ

ಶಾನುಭೋಗ : ಆಗ್ಲಿ. ಸಮಸ್ಕಾರ
(ಮಂಜುನಾಥ ಹೋಗುವಾಗ ಪದ್ಮಾಳಿಗೆ)

ಮಂಜುನಾಥ : ಪದ್ಮಾ. ಅವರ್ ಜವಾಬ್ದಾರಿಯೆಲ್ಲ ನಿಂದೆ. ಸ್ವಲ್ಪ ಜಾಗರೂಕತೆಯಿಂದ ನೋಡ್ಕೊ

ಪದ್ಮ : ಆಗ್ಲಿ..
(ಮಂಜುನಾಥ ಹೊರಡುವನು, ಪದ್ಮ ನೀರನ್ನು ರಾಘವೇಂದ್ರನಿಗಾಗಿ ಕೋಣೆಯಲ್ಲಿ ಇಡಲುಬರುವಾಗ ತಂದೆ ಶಾನುಭೋಗರು ಏನನ್ನೋ ಗಾಢವಾಗಿ ಯೋಚಿಸುತ್ತಿರುತ್ತಾರೆ ನಂತರ ರಾಘವೇಂದ್ರನಿರುವ ಕೋಣೆಗೆ ಬೀಗವನ್ನು ಹಾಕುವುದನ್ನು ಕಂಡ ಪದ್ಮಾಳಿಗೆ ಆಶ್ಚರ್ಯವಾಗುತ್ತದೆ. ಆಕೆ ತಂದೆಗೆ)

ಪದ್ಮ : ಅಪ್ಪಯ್ಯ, ಯಾಕ್ ಬಾಗಿಲ್ಗೆ ಚಿಲ್ಕ ಹಾಕಿದ್ದು?

ಶಾನುಭೋಗ : ಚಿಲ್ಕ ಹಾಕ್ದಿದ್ರೆ ಅವ್ನು ಅಷ್ಟೊತ್ತಿಗೇ ಎದ್ದು ಹೊರ್ಟ್ಹೋಗ್ತಾನೆ.

ಪದ್ಮ : (ಕುತೂಹಲದಿಂದ) ..ಅಂದ್ರೆ?

ಶಾನುಭೋಗ : ಅಂದ್ರೆ ಬೆಳಗ್ಗೆ ಎದ್ಕೂಡ್ಲೆ ಅವನನ್ನ ದಫೇದಾರ್ರಿಗೆ ಒಪ್ಪಿಸ್ಬೇಕು
(ಇದರಿಂದ ಗಾಬರಿಗೊಳ್ಳುವ ಪದ್ಮ ತನ್ನ ತಂದೆಗೆ)

ಪದ್ಮ : ಹಾಗ್ ಮಾಡ್ಬೇಡ ಅಪ್ಪಯ್ಯ ಪಾಪ ಅವ್ರು.

ಶಾನುಭೋಗ : (ಕುಪಿತರಾಗಿ)
.. ನೋಡು ನೀನ್ ಒಳಗ್ ಹೋಗಿ ಮಲ್ಕೋಹೋಗು. ಹೋಗು. (ಇನ್ನೂ ಹೋಗದಿರುವುದನ್ನು ಕಂಡು)
.. ಹೋಗು ಒಳಗೆ ಹೇಳಿದ್ನಲ್ಲ. ಹೋಗು
(ಏನನ್ನೋ ಹೇಳಲು ಬರುವ ಆಕೆಯನ್ನು ತಡೆದು ಆಕೆಯನ್ನು ಕೋಣೆಗೆ ಕಳುಹಿಸಿ ಬಂದು)
.. ಚಳುವಳಿ ಮಾಡ್ತಾರಂತೆ ಚಳುವಳಿ
(ಎಂದು ರೇಗುತ್ತ ತಮ್ಮ ಹಾಸಿಗೆಯ ಬಳಿ ಮಲಗುತ್ತಾರೆ.)



## ದೃಶ್ಯ–18


***ಹಗಲು – ಹೊರಾಂಗಣ – ಶಾನುಭೋಗರ ಮನೆ***

(ಬೆಳ್ಳಂಬೆಳಗ್ಗೆಯೇ ಮಂಜುನಾಥ ತಮ್ಮ ಮನೆಗೆ ಬರುತ್ತಿರುವುದನ್ನು ನೋಡಿದ ಶಾನುಭೋಗರು ಮೊದಲಿಗೆ ಗುರುತು ಹಿಡಿಯದೆ;)

ಶಾನುಭೋಗ : ಯಾರದು? ಮೇಷ್ಟ್ರ.. ಏನ್ಮೇಷ್ಟ್ರೆ ಬೆಳಗ್ಗೆಬೆಳಗ್ಗೆ ಎದ್ದು ಇಷ್ಟ್ ದೂರ?

ಮಂಜುನಾಥ : ರಾಘವ ಇದಾರೋ ಹೋದ್ರೋ ಅಂಥ ನೋಡ್ಕೊಂಡ್ಹೋಗಣಾಂತ

ಶಾನುಭೋಗ : ಓಹೋ ಅವ್ರ, ಇನ್ನೂ ಹೋಗಿಲ್ಲ. ಎಲ್ಲಿಗ್ ಹೋಗ್ಬೇಕೋ ಅಲ್ಲಿಗ್ ಹೋಗ್ತಾರೆ. ನಾನ್ ಆ ವ್ಯವಸ್ಥೆ ಮಾಡಿದಿನಿ.
(ಎಂದು ರಾಘವೇಂದ್ರನನ್ನು ಕೂಡಿಹಾಗಿದ್ದ ಕೋಣೆಯತ್ತ ಬರುತ್ತ ಆ ಕೋಣೆಯ ಬಾಗಿಲು ತೆರೆದಿರುವುದು ಕಾಣಿಸಿ ಆತಂಕ ಮತ್ತು ಕೋಪದಿಂದ ಮಗಳನ್ನು ಕೂಗುವರು)



.. ಪದ್ಮಾ, ಬಾಗಿಲ್ಯಾರ್ ತೆಗ್ದದ್ದು?
(ಮಗಳು ಇನ್ನೂ ಬಾರದಿರುವುದನ್ನು ಕಂಡು)
.. ಪದ್ಮಾ (ಪದ್ಮ ಪಳಗಿನಿಂದ ಓಡಿ ಬರುವಳು)

ಪದ್ಮ : ಏನಪ್ಪಯ್ಯ?

ಶಾನುಭೋಗ : (ಕೋಪದಿಂದ) .. ಬಾಗಿಲ್ಯಾರ್ ತೆಗ್ದದ್ದು?
(ಪದ್ಮ, ತಪ್ಪಿತಸ್ಥಳಂತೆ ನಿಲ್ಲುವುದನ್ನು ನೋಡುವ ತಂದೆ)

.. ಯಾಕೆ? (ಕೋಪದಿಂದ) ..ಯಾಕೆ?
(ಪದ್ಮ ಹಾಗೆಯೇ ನಿಂತಿದ್ದಾಳೆ ಮಂಜುನಾಥ ಇವೆಲ್ಲವನ್ನು ಕುತೂಹಲದಿಂದ ನೋಡುತ್ತಿದ್ದಾನೆ)
.. ಯಾಕ್ ಹೀಗ್ಮಾಡ್ದೆ? ನಿನಗ್ಯಾಕ್ ಬೇಕಾಗಿತ್ತು ಇದು?

ಪದ್ಮ : ಮೇಷ್ಟ್ರು ಅಷ್ಟು ನಂಬಿ ಅವರನ್ನಿಲ್ಲಿ ಬಿಟ್ಟ್ ಹೋದಾಗ ಅದೂ
(ಎಂದು ಹೇಳುತ್ತಿರುವಂತೆಯೇ ತಂದೆ ಅವಳ ಮುಂದೆ ಹೋಗಿ)

ಶಾನುಭೋಗ : ಏನಂದೆ?! ನನ್ನ ಮಾತಿಗಿಂತ ಮೇಷ್ಟ್ರ ಮರ್ಯಾದೆ ಹೆಚ್ಚಾಯ್ತು ನಿಂಗೆ?

ಪದ್ಮ : ಹಾಗಲ್ಲ ಅಪ್ಪಯ್ಯ
(ಎನ್ನುತ್ತಿದ್ದಂತೆಯೇ ಮಗಳ ಕೆನ್ನೆಗೆ ಬಾರಿಸುತ್ತಾರೆ)

ಶಾನುಭೋಗ : ನನಗೆ ಎದ್ರು ವಾದುಸ್ತೀಯ, ತಡಿ
(ಎಂದು ಹೊಡೆಯಲು ಕೈ ಮೇಲೆತ್ತಿದಾಗ ಮಂಜುನಾಥ ಮಧ್ಯ ಪ್ರವೇಶಿಸಿ ಶಾನುಭೋಗರಿಗೆ)

ಮಂಜುನಾಥ : ಶಾನ್ಭೋಗ್ರೆ

ಶಾನುಭೋಗ : ಮೇಷ್ಟ್ರೆ, ನೀವ್ಬಂದ್ ಕೆಲ್ಸ ಆಯ್ತಲ್ಲ. ಹೊರ್ಡಿ ಇಲ್ಲಿಂದ. ಹೊರ್ಡಿ
(ಎಂದು ಹೊರಕ್ಕೆ ಕೈ ತೋರಿಸುತ್ತಾರೆ. ಪದ್ಮ ಅಳುತ್ತಾ ಒಳ ಹೋಗುತ್ತಾಳೆ. ಮಂಜುನಾಥ ಇನ್ನೂ ಅಲ್ಲೇ ನಿಂತಿರುವುದನ್ನು ಕಂಡು)
.. ಹ್ಞೂಂ
(ಎಂದು ಹ್ಞೂಂಕರಿಸುತ್ತಾರೆ. ಮಂಜುನಾಥ ಅಸಹಯಾಕನಾಗಿ ಮರಳುತ್ತಿರುತ್ತಾನೆ)
.. ಯಾರ್ಯಾರು ಎಷ್ಟೆಷ್ಟ್ರಲ್ ಇರ್ಬೇಕೋ ಅಷ್ಟಷ್ಟ್ರಲ್ ಇರ್ಬೇಕು. ಸಲಿಗೆ ತೋರ್ಸಿದ್ರು ಅಂತ ಹೆಗಲೇರ್ಬಾರ್ದು.
(ಈ ಮಾತುಗಳನ್ನು ಕೇಳಿಸಿಕೊಳ್ಳುತ್ತಲೇ ಮಂಜುನಾಥ ಅಸಹಾಯಕನಾಗಿ ಹೊರ ನಡೆಯುತ್ತಾನೆ)

**ನಿರ್ದೇಶಕರ ಟಿಪ್ಪಣಿ:**

ಒಂದು ಅನಿರೀಕ್ಷಿತ ಘಟನೆ ಹೇಗೆ ಶಾನುಭೋಗರು ಮತ್ತು ಮಂಜುನಾಥನ ಸುತ್ತ ಕೊಂಡಿಹಾಕಿಕೊಳ್ಳುತ್ತದೆ ಮತ್ತು ಅದರ ಮುಖಾಂತರ ಮಂಜುನಾಥ ಹಾಗೂ ಪದ್ಮ ಇನ್ನೂ ಹತ್ತಿರವಾಗುತ್ತಾರೆ ಎನ್ನುವುದನ್ನು ಪ್ರಬಲವಾಗಿ ನಿರೂಪಿಸುವಲ್ಲಿ ಅಂದು ನಡೆಯುತ್ತಿದ್ದ ಚಳುವಳಿಯನ್ನು ಬಳಸಿಕೊಳ್ಳಲಾಯಿತು. ರಾಘವೇಂದ್ರ ಒಬ್ಬ ಚಳುವಳಿಗಾರ, ಚಳುವಳಿಯ ಮುಂಚೂಣಿಯಲ್ಲಿದ್ದವನು ಕಾಲಿಗೆ ಏಟು ತಿಂದು ಮಾಸ್ತರ



ಮಂಜುನಾಥನ ಮನೆ ಮುಂಭಾಗದಲ್ಲಿ ಬಂದು ಬೀಳುತ್ತಾನೆ. ಅವನನ್ನು ಹುಡುಕುತ್ತ ಬಂದ ಪೋಲೀಸರಿಂದ ಅವನನ್ನು ತಪ್ಪಿಸುವುದಕ್ಕೆ ಮಂಜುನಾಥ ಅವನನ್ನು ಶಾನುಭೋಗರ ಮನೆಯಲ್ಲಿ ತಂದಿರಿಸಿದ್ದಾನೆ ಪದ್ಮಾಳ ಭರವಸೆಯೊಂದಿಗೆ. ಆದರೆ ಸರ್ಕಾರದ ಕೆಲಸದಲ್ಲಿರುವ ಶಾನುಭೋಗರು ಅವನನ್ನು ಪೋಲೀಸರಿಗೆ ಒಪ್ಪಿಸುವ ಯೋಚನೆಯಲ್ಲಿರುತ್ತಾರೆ. ಇದನ್ನು ತಿಳಿಯುವ ಪದ್ಮ ಅವನನ್ನು ಬೆಳ್ಳಂಬೆಳಗ್ಗೆಯೇ ಬಾಗಿಲು ತೆರೆದು ಕಳುಹಿಸಿಬಿಟ್ಟಿರುತ್ತಾಳೆ. ಬೆಳಗ್ಗೆ ಮಂಜುನಾಥ ಬಂದಾಗ ಶಾನುಭೋಗರಿಗೂ ಕೂಡ ಆತ ಅಲ್ಲಿ ಇಲ್ಲದಿರುವುದು ಒಂದು ರೀತಿ ದಿಗ್ಭ್ರಮೆಯನ್ನುಂಟು ಮಾಡುತ್ತದೆ. ತನ್ನ ತಪ್ಪನ್ನು ಒಪ್ಪಿಕೊಳ್ಳುವ ಪದ್ಮ ಈ ಕೆಲಸವನ್ನು ಮಾಸ್ತರ ಮಂಜುನಾಥನಿಗಾಗಿ ಮಾಡಿದ್ದಾಗಿ ಹೇಳುತ್ತಾಳೆ. ಇದರಿಂದ ಕುಪಿತರಾಗುವ ಶಾನುಭೋಗರು ಮಂಜುನಾಥನನ್ನು ಮಾತನಾಡಲೂ ಬಿಡದೆ ಹೊರಗೆ ಕಳುಹಿಸುತ್ತಾರೆ. ಈ ಇಡೀ ಪ್ರಕರಣ ಮೊಟ್ಟಮೊದಲ ಸಂಘರ್ಷವಾಗಿ ಸ್ವಾತಂತ್ರ್ಯ ಪೂರ್ವದ ಚಳುವಳಿಯ ಮುಖಾಂತರ ಈ ಮನೆಯನ್ನು ಮತ್ತು ಈ ಕುಟುಂಬವನ್ನು ಪ್ರವೇಶಿಸುತ್ತದೆ ಎಂಬ ಸೂಚನೆಯನ್ನು ಇದು ಕೊಡುತ್ತದೆ. ಇಡೀ ಪರಿಸರವನ್ನು ನಾವು ಬಳಸಿದ್ದ ವಸ್ತ್ರವಿನ್ಯಾಸ ಹಾಗೂ ಪರಿಕರಗಳೆಲ್ಲವನ್ನು ಗಮನಿಸಿದಾಗ ಆ ಕಾಲಘಟ್ಟವನ್ನು ಹಿಡಿದಿಡುವಲ್ಲಿ ಈ ದೃಶ್ಯ ಯಶಸ್ವಿಯಾಗಿದೆ ಎಂದು ಹೇಳಬಹುದು. ಒಟ್ಟು ಚಿತ್ರಕಥೆಯ ಮೊದಲ ಸಂಘರ್ಷವಾಗಿ ಪ್ರಾರಂಭವಾಗುವ ಈ ಸನ್ನಿವೇಶ ನಿಧಾನವಾಗಿ ಹೇಗೆ ಪೂರ್ಣ ಚಿತ್ರವನ್ನು ಆವರಿಸಿಕೊಳ್ಳುತ್ತದೆ ಎನ್ನುವುದು ಬಹಳ ಮುಖ್ಯ.

# ದೃಶ್ಯ-19

*ಹಗಲು - ಹೊರಾಂಗಣ*

(ಪದ್ಮ ಬಟ್ಟೆ ಒಗೆಯಲು ಬಂದು ಅಳುತ್ತ ನದಿಯ ಮುಂದೆ ಕುಳಿತಿರುವಾಗ ಹೂವೊಂದು ತೇಲುತ್ತ ಅವಳತ್ತ ಬರುತ್ತದೆ. ಅದನ್ನು ಎತ್ತಿ ತನ್ನ ಪಕ್ಕದಲ್ಲಿ ಇಟ್ಟುಕೊಂಡು ಮತ್ತೆ ಅಳುತ್ತಿರುತ್ತಾಳೆ. ಮತ್ತೆ ಇನ್ನೆರೆಡು ಹೂಗಳು ತೇಲಿಬರುವುದಲ್ಲದೆ ಮತ್ತೆ ಹಲವಾರು ಹೂಗಳು ತೇಲಿಬರುವುದನ್ನು ಕಂಡು ಎಲ್ಲಿಂದ ಬರುತ್ತಿವೆಯೆಂದು ಪರಿಶೀಲಿಸಲು ಎದ್ದಾಗ ಅತ್ತ ಮಂಜುನಾಥ ಮಾಸ್ತರರು ಕುಳಿತಿರುವುದನ್ನು ನೋಡಿ ಮುಗುಳ್ನಕ್ಕು ಹೂವಿನ ಪರಿಮಳವನ್ನು ಸವಿಯುತ್ತಾಳೆ)





# ದೃಶ್ಯ-20

*ಹಗಲು-ಹೊರಾಂಗಣ*
*ಹಾಡು: ಸಿರಿಗೆರೆಯ ನೀರಲ್ಲಿ*

(ಮಂಜುನಾಥ ಹಾಗು ಪದ್ಮರ ಭಾವನೆಗಳು ಪ್ರೇಮಕಾವ್ಯವಾಗಿ ಮಾರ್ಪಾಡಾಗುತ್ತದೆ. ಒಬ್ಬರಿಗೊಬ್ಬರು ಹತ್ತಿರವಾಗುವ ಸನ್ನಿವೇಶಗಳು, ದೃಶ್ಯಗಳೊಡನೆ)

ಸಿರಿಗೆರೆಯ ನೀರಲ್ಲಿ
ಬಿರಿದ ತಾವರೆಯಲ್ಲಿ
ಕೆಂಪಾಗಿ ನಿನ್ನ ಹೆಸರು

ಗುಡಿಯ ಗೋಪುರದಲ್ಲಿ
ಮೆರೆವ ದೀಪಗಳಲ್ಲಿ
ಬೆಳಕಾಗಿ ನಿನ್ನ ಹೆಸರು



ಜೋಯಿಸರ ಹೊಲದೊಳಗೆ
ಕುಣಿವ ಕೆಂಗರುವಿನ
ಕಣ್ಣಲ್ಲಿ ನಿನ್ನ ಹೆಸರು

ತಾಯ ಮೊಲೆಯಲ್ಲಿ ಕರು
ತುಟಿಯಿಟ್ಟು ಚೆಲ್ಲಿಸಿದ
ಹಾಲಲ್ಲಿ ನಿನ್ನ ಹೆಸರು

ಹೂ ಬನದ ಬಿಸಿಲಲ್ಲಿ
ನರ್ತಿಸುವ ನವಿಲಿನಾ ದನಿಯಲ್ಲಿ
ನಿನ್ನ ಹೆಸರು

ಹೊಂದಾಳೆ ಹೂವಿನಲಿ
ಹೊರಟ ಪರಿಮಳದಲ್ಲಿ
ಉಯ್ಯಾಲೆ ನಿನ್ನ ಹೆಸರು



ಮರೆತಾಗ ತುಟಿಗೆ ಬಾರದೆ
ಮೋಡ ಮರೆಯೊಳಗೆ
ಬೆಳದಿಂಗಳು ನಿನ್ನ ಹೆಸರು

ನೆನೆದಾಗ ಕಣ್ಣಮುಂದೆಲ್ಲ
ಹುಣ್ಣಿಮೆಯೊಳಗೆ ಹೂಬಾಣ
ನಿನ್ನ ಹೆಸರು



# ದೃಶ್ಯ–21

***ಹಗಲು – ಹೊರಾಂಗಣ – ನದಿ ದಂಡೆ***

(ಪದ್ಮ ಪದ್ಮ ಎಂದು ಮರಳಿನಲ್ಲಿ ಬರೆದಿರುವುದನ್ನು ನೋಡಿದ ಪದ್ಮ ಸ್ವಲ್ಪ ದೂರದಲ್ಲಿ ಮಾಸ್ತರರು ಕುಳಿತಿರುವುದನ್ನು ಕಂಡು ಅಕ್ಷರ ಬರೆದ ಮತ್ತೊಂದು ತುದಿಯಲ್ಲಿ ಕುಳಿತು ಮುಗುಳ್ನಗುತ್ತಾಳೆ. ಮಂಜುನಾಥ ಏನನ್ನಾದರು ಬರೆ ಎಂದು ಹೇಳಿದಾಗ ಮೊದಲು ನಾಚಿಕೊಂಡು ನಂತರ ಮಂಜು ಎಂದು ಬರೆಯುತ್ತಾಳೆ. ಬರೆದು ಮಂಜುನಾಥನ ಕಡೆಗೆ ನೋಡಿದಾಗ ಅವನಿಲ್ಲದಿರುವುದನ್ನು ಕಂಡು ಹುಡುಕಾಡುತ್ತಿರುವಾಗ)

ಪದ್ಮ : ಎಲ್ಲಿ?
(ಮಂಜುನಾಥ ಅವಳ ಹಿಂದೆಯಿಂದ ಬಂದು ಬರೆದಿರುವುದನ್ನು ನೋಡುತ್ತಾನೆ. ಪದ್ಮ ಗಲಿಬಿಲಿಯಿಂದ ಎದ್ದುನಿಂತಾಗ ಮಂಜುನಾಥ ನಗುತ್ತಾ)

ಮಂಜುನಾಥ : ಚೆನ್ನಾಗಿದೆ
(ಬಟ್ಟೆಗಳ ಬುಟ್ಟಿಯನ್ನು ತಗೆದುಕೊಳ್ಳಲು ಹೋಗುವ ಪದ್ಮಾಳಿಗೆ ಸಹಾಯಮಾಡಿ, ಇಬ್ಬರೂ ಅದನ್ನು ಹಿಡಿದುಕೊಂಡು ಹೋಗುತ್ತ ತಮಾಷೆ ಮಾಡಿಕೊಂಡು ನಗುತ್ತಾ ಬರುವಾಗ, ಅತ್ತಬಂದ ಶಾನುಭೋಗರು ಮರೆಯಲ್ಲಿ ನಿಂತು ನೋಡುತ್ತಾರೆ)

ಪದ್ಮ : ಬಿಡಿ ನಾನೇ ಹಿಡ್ಕೊತಿನಿ

ಮಂಜುನಾಥ : ಪರ್ವಾಗಿಲ್ಲ ನಾನ್ ಹಿಡ್ಕೋತಿನಿ

ಪದ್ಮ : ಬಿಡಿ, ಅಷ್ಟೇನ್ ಭಾರ ಇಲ್ಲ. ಗಂಡುಸ್ರು ಹಿಡ್ಕೋಬಾರ್ದು.

ಮಂಜುನಾಥ : ತುಂಬಾ ಬಿಸಿಲಿದೆ ಅಲ್ಲಾ?

ಪದ್ಮ : ದಿನಾ ಇದ್ದಿದ್ದೆ.

ಮಂಜುನಾಥ : ಆದ್ರೂ ಇವತ್ತ್ಯಾಕೋ ಜಾಸ್ತಿ
(ಎಂದು ಕೊಡೆಯನ್ನು ಇಬ್ಬರಿಗೂ ಹಿಡಿದುಕೊಂಡು ಬರುತ್ತಾನೆ)

ಪದ್ಮ : ಹೌದು. ಇವತ್ತೇನ್ ಶಾಲೆಗ್ ಹೋಗ್ಲಿಲ್ವ?

ಮಂಜುನಾಥ : ಶಾಲಿಯಿಂದ್ಲೇ ಬಂದದ್ದು. ಹಾಗೇ ಬೇಜಾರಾಗಿ ಸಹಸ್ರನಾಮ ಬರೀತಾ ಕೂತಿದ್ದೆ.
(ಪದ್ಮ ನಗುತ್ತಾಳೆ. ಶಾನುಭೋಗರು ಇವೆಲ್ಲವನ್ನು ನೋಡಿ ಗಂಭೀರವಾಗಿ ಹೊರಟುಹೋಗುತ್ತಾರೆ)

| | | |
|---|---|---|
| ಪದ್ಮ | : | ಹೌದು ಅಷ್ಟೊಂದ್ ಕವನ ಬರಿತೀರಲ್ಲ, ಶಾಲೇಲ್ ಯಾಕ್ ಒಂದೇ ಪದ್ಯ ಹೇಳ್ಕೊಡ್ತೀರಾ? |
| ಮಂಜುನಾಥ | : | (ಆಶ್ಚರ್ಯದಿಂದ) ..ಯಾರ್ ಹೇಳಿದ್ದು?! |
| ಪದ್ಮ | : | (ನಗುತ್ತ) .. ನನ್ ಗೆಳತಿ( ಎಂದು ಓಡುತ್ತಾಳೆ) |
| ಮಂಜುನಾಥ | : | ಹೇಯ್ ಪದ್ಮ, ನಿಂತ್ಕೋ ಇಲ್ಲಿ. (ಎಂದು ಆತನೂ ಓಡಿಬರುವಾಗ ಎದುರಿಗೆ ಶಾನುಭೋಗರು ಕುಳಿತಿರುವುದು ಕಾಣಿಸಿ ಇಬ್ಬರೂ ಸ್ತಬ್ಧವಾಗಿ ನಿಲ್ಲುತ್ತಾರೆ. ಪದ್ಮ ಭಯಭೀತಳಾಗಿ ತಲೆತಗ್ಗಿಸುತ್ತ ನಿಂತು ನಂತರ ಹೊರಟುಹೋಗುತ್ತಾಳೆ. ಮಂಜುನಾಥ ನಿಧಾನವಾಗಿ ಶಾನುಭೋಗರ ಮುಂದೆ ಬರುತ್ತಾನೆ. ಶಾನುಭೋಗರು ನಿಧಾನವಾಗಿ ಅವನನ್ನು ನೋಡುತ್ತ) |
| ಶಾನುಭೋಗ | : | ಏನ್ಮೇಷ್ಟ್ರೆ ಬಹಳ ಮುಂದುವರ್ದ್ದಿರೋ ಹಾಗಿದೆ. |
| ಮಂಜುನಾಥ | : | ನೀವು ನನ್ನು ತಪ್ಪುತಿಳ್ಕೊಂಡಿದಿರ ಶಾನ್ಭೋಗ್ರೆ, ನಾನು (ಏನನ್ನೋ ಹೇಳಲು ಬರುವ ಅವನನ್ನು ತಡೆದು ಶಾನುಭೋಗರು) |
| ಶಾನುಭೋಗ | : | ನೀವೇನು ಹೇಳೋ ಅವಶ್ಯಕತೆ ಇಲ್ಲ. ನನಗೆಲ್ಲ ಅರ್ಥವಾಗುತ್ತೆ. (ಮಂಜುನಾಥ ನಿಧಾನವಾಗಿ ಹೊರಟು ಹೋಗುತ್ತಾನೆ ಶಾನುಭೋಗರು ಅಲ್ಲೇ ಯೋಚಿಸುತ್ತ ನಿಲ್ಲುತ್ತಾರೆ) |

**ನಿರ್ದೇಶಕರ ಟಿಪ್ಪಣಿ:**

ರಾಘವೇಂದ್ರನ ಪ್ರಕರಣದ ನಂತರದ ಕಥೆಯಲ್ಲಿ ಪದ್ಮಾ ಹಾಗೂ ಮಂಜುನಾಥ ಇನ್ನೂ ಹತ್ತಿರವಾಗುತ್ತಾರೆ. ಒಂದು ಅಪರೂಪದ ದೃಶ್ಯವೊಂದನ್ನು ಪ್ರಕೃತಿ ತಾನೇ ಸಹಜವಾಗಿ ಕಟ್ಟುವಂತೆ ನಮ್ಮ ಕಣ್ಣಿಗೆ ಬೀಳುತ್ತದೆ. ಪದ್ಮಾಳ ಏಕಾಂಗಿ ತನವನ್ನು ನಿವಾರಿಸುವಂತೆ ಮಂಜು ಹಲವು ಬಣ್ಣದ ಪುಷ್ಪಗಳನ್ನು ನೀರಿನಲ್ಲಿ ತೇಲಿಬಿಡುತ್ತಾನೆ. ಅದು ನಿಧಾನವಾಗಿ ಪದ್ಮಳನ್ನು ಸೇರುತ್ತದೆ. ನಂತರ ಅವರಿಬ್ಬರ ಮನೋಭಿಲಾಷೆಯಂತೆ ಒಂದು ಕವನ ತಾನೇತಾನಾಗಿ ಮೂಡುತ್ತದೆ. ಕೆ.ಎಸ್.ನ ಅವರ ಈ ಕವನದ ಸಾಲು ಹೇಗೆ ಪ್ರೇಮಿಗಳ ಒಡನಾಟದಲ್ಲಿ ಹೆಸರು ಪ್ರಾಮುಖ್ಯವಾಗುತ್ತದೆ ಹಾಗೂ ಆ ಹೆಸರಿನ ಮುಖಾಂತರ ಹೇಗೆ ನವಿರಾದ ಭಾವನೆಗಳು ಒಡಮೂಡುತ್ತವೆ ಎನ್ನುವುದನ್ನು ಇಡೀ ಕವನದ ತುಂಬ ಚಿತ್ರಿಸಲಾಗುತ್ತದೆ. ದೃಶ್ಯ ಕಾವ್ಯ ಮುಗಿದ ನಂತರ ಕೂಡ ದೃಶ್ಯ ಈ ರೀತಿಯ ಹೆಸರಿನೊಂದಿಗೆ ಮತ್ತೆ ಕಟ್ಟಿಕೊಳ್ಳುತ್ತದೆ. ಪದ್ಮಾಳ ಹೆಸರನ್ನು ಮರಳ ಮೇಲೆ ನದಿಯ ದಡದಲ್ಲಿ ಬರೆಯುತ್ತಿರುವ ಮಂಜುನಾಥನ ಇರುವನ್ನು ಗಮನಿಸಿ ತಾನೂ ಅವನ ಹೆಸರನ್ನು ಬರೆದು ಹೊರಡುತ್ತಾಳೆ ಆದರೆ ಅಲ್ಲಿ ವಿಧಿವಶಾತ್ ಶಾನುಭೋಗರ ಕೈಯಲ್ಲಿ ಸಿಕ್ಕಿ ಬೀಳುತ್ತಾರೆ. ಅಲ್ಲಿಂದ ಶಾನುಭೋಗರು ತಮ್ಮದೇ ಆದ ಯೋಜನೆಯೊಂದನ್ನು ರೂಪಿಸುತ್ತಾರೆ. ಈ ಪ್ರಕ್ರಿಯೆಗಳನ್ನು ಚಿತ್ರಿಸುವಾಗ



ಛಾಯಾಗ್ರಾಹಕ ಬಿ.ಸಿ.ಗೌರಿಶಂಕರ್ ನವಿರಾದಂತಹ ಭಾವನೆಗಳಿಗೆ ಪೂರಕವಾದ ಚಿತ್ರಿಕೆಗಳನ್ನು ಕಟ್ಟಿಕೊಡುವಲ್ಲಿ ಬಹಳ ಯಶಸ್ವಿಯಾಗಿ ಕೆಲಸ ಮಾಡಿದ್ದಾರೆ. ಕ್ಯಾಮೆರಾ ಬಹಳ ಸುಲಲಿತವಾಗಿ ಭಾವನೆಗಳನ್ನು ಮತ್ತು ಭಾವನೆಗಳಿಗೆ ತಕ್ಕ ಚಿತ್ರಿಕೆಗಳನ್ನು ಚಿತ್ರಿಸುತ್ತಾ ಸಾಗಿದೆ. ನಮ್ಮ ಕನ್ನಡ ಚಲನಚಿತ್ರ ರಂಗ ಗೌರಿಯನ್ನು ಒಬ್ಬ ಶೃಂಗಾರ (ರೊಮ್ಯಾಂಟಿಕ್) ಛಾಯಾಗ್ರಾಹಕ ಎಂದೇ ಗುರುತಿಸುತ್ತದೆ. ಈ ದಿಸೆಯಲ್ಲಿ ಮೈಸೂರು ಮಲ್ಲಿಗೆ ಅವನ ಹಲವು ಚಿತ್ರಗಳಲ್ಲಿ ಅಭ್ಯಸಿಸಬಹುದಾದ ಪ್ರಯೋಗಶೀಲ ಚಲನಚಿತ್ರ.

# ದೃಶ್ಯ-22

***ಹಗಲು – ಶ್ಯಾಮರಾಯರ ಮನೆಯ ಹೊರಗೆ ಮತ್ತು ಒಳಗೆ***

(ಶಾನುಭೋಗರು ಶ್ಯಾಮರಾಯರ ಮನೆಯ ಹೊರಾಂಗಣಕ್ಕೆ ಬರುತ್ತ)

ಶಾನುಭೋಗ : ಶ್ಯಾಮರಾಯ್ರೇ.. ಶ್ಯಾಮರಾಯ್ರೇ..
(ಗೌರಮ್ಮನವರು ಬಂದಿದ್ದನ್ನು ನೋಡಿ)
..ಎಲ್ಲಿ?

ಗೌರಮ್ಮ : ಊಟ ಮಾಡ್ತಿದಾರೆ. ಬನ್ನಿ ಒಳಗೆ.
(ಒಳಗೆ ಬರುತ್ತಲೇ ಗೌರಮ್ಮನವರಿಗೆ)

ಶಾನುಭೋಗ : ಗೌರಮ್ಮನವ್ರೇ

ಗೌರಮ್ಮ : ಏನು?

ಶಾನುಭೋಗ : ಸಿಹಿ ತಗೊಳಿ

ಗೌರಮ್ಮ : ಸಿಹಿನಾ? ಯಾಕೆ?

ಶಾನುಭೋಗ : ನಮ್ ಪದ್ಮನ್ ಮದ್ವೆ ನಿಶ್ಚಯ ಆಯ್ತು

ಗೌರಮ್ಮ : (ಸಂತೋಷದಿಂದ)
.. ಹೌದೇ! ಏನೂಂದ್ರೆ, ಏನೂಂದ್ರೆ, ಕೇಳಿದ್ರಾ?

ಶ್ಯಾಮರಾಯರು : ಏನೇ?

ಗೌರಮ್ಮ : ನಮ್ ಪದ್ಮಾಗ್ ಮದ್ವೆ ನಿಶ್ಚಯ ಆಯ್ತಂತೆ!

ಶ್ಯಾಮರಾಯರು : ಹೌದೇ!

ಗೌರಮ್ಮ : ಹೌದು

ಶ್ಯಾಮರಾಯ : ಗಂಡ್ಯಾರೋ?

ಶಾನುಭೋಗ : ಇನ್ನ್ಯಾರು ಶ್ಯಾಮರಾಯ್ರೇ, ಹೋದ್ಸಾರಿ ನಗರದಿಂದ ಬಂದಿದ್ರಲ್ಲ ಅಮಲ್ದಾರರ್ರು, ಅವ್ರೇ

ಶ್ಯಾಮರಾಯರು : ಓ ಅದೇ ಅಮಲ್ದಾರ ಕೃಷ್ಣರಾಯರು. ಸೂರ್ನಳ್ಳಿ ಕಡೆಯವ್ರು.

ಶಾನುಭೋಗ : ಏನೋ ಮನೆ ತಾಪತ್ರಯ ಅಂತ ಮದುವೆ ಮುಂದೂಡಿದ್ರಲ್ಲ ಈಗ್ ಒಪ್ಕೊಂಡಿದಾರೆ.

ಶ್ಯಾಮರಾಯರು : ಹೌದೇ.

ಗೌರಮ್ಮ : ಇದು ಪದ್ಮಂಗ್ ಗೊತ್ತ?

ಶಾನುಭೋಗ : ಇನ್ನೂ ಇಲ್ಲ. ಊರಿಂದ ನೇರ್ವಾಗಿ ಮೊದ್ಲು ನಿಮ್ಮನೇಗೆ ಬಂದೆ.
(ಇಬ್ಬರಿಗು) ..ನೀವು ದಂಪತಿಗಳು ಮುಂದೆ ನಿಂತು ಕನ್ಯಾದಾನ ಮಾಡಿ ಮದುವೆ ನಡಸ್ಕೊಡ್ಬೇಕು.



ಶ್ಯಾಮರಾಯರು : (ಸಂತಸದಿಂದ)
ಅಗತ್ಯವಾಗಿ, ಪದ್ಮ ನಿಮಗ್ಹ್ಯಾಗೋ ನಮ್ಗೂ ಹಾಗೆ ಮಗಳೇ ಅಲ್ವೇ.

ಶಾನುಭೋಗ : ಗೊತ್ತಿಲ್ವೇ? ಅದಿಕ್ಕೆ ಬಂದೆ. ಸರಿ ನಾ ಬರ್ತೇನೆ
(ಹೊರಡಲನುವಾಗುವರು. ಆಗ ಶ್ಯಾಮರಾಯರು)


ಶ್ಯಾಮರಾಯರು : ಛೇ ಛೇ ಉಂಟೇ ಎಲ್ಲಾದ್ರು, ಬನ್ನಿ ಕೂತ್ಕೊಳಿ.

ಶಾನುಭೋಗ : ಇಲ್ಲ ಬೇಡ, ಪದ್ಮ ಊಟಕ್ಕಾದಿರ್ತಾಳೆ. ಸರಿ ಬರ್ತಿನಿ. ಬರ್ತಿನಿ ಗೌರಮ್ಮ.
(ಶಾನುಭೋಗರ ನಿರ್ಗಮನದ ನಂತರ ಗೌರಮ್ಮಳ ಆತಂಕದ ಮೇಲೆ ದೃಶ್ಯ ಕೊನೆಗೊಳ್ಳುತ್ತದೆ.)

# ದೃಶ್ಯ–23

***ಹಗಲು –ಶಾನುಭೋಗರ ಮನೆಯ ಒಳಗೆ***

| | | |
|---|---|---|
| | | (ತನ್ನ ಮದುವೆ ನಿಶ್ಚಯವಾಗಿರುವುದೆಂದು ತಿಳಿದ ಪದ್ಮ ಆತಂಕದಿಂದ ತನ್ನ ತಂಗಿ ತುಂಗೆಗೆ) |
| ಪದ್ಮ | : | ನಿಜ್ವೇನೆ? |
| ತುಂಗೆ | : | ಹೌದು ಕಣೆ. ಅಪ್ಪಯ್ಯಾನೆ ಸಿಹಿ ತಂದ್ಕೊಟ್ಟಿದ್ದು. ನಿಂಗು ಬೇಕಾ? |
| ಪದ್ಮ | : | ಬೇಡಮ್ಮ<br>(ಹತಾಶೆಯಿಂದ ಅಳುತ್ತಿದ್ದವಳು ನಂತರ ಏನನ್ನೋ ನೆನಪಿಸಿಕೊಂಡವಳಂತೆ ತನ್ನ ತುಂಗೆಗೆ) |
| ಪದ್ಮ | : | ತುಂಗೆ, ಮೇಷ್ಟ್ರು ಎಲ್ ಸಿಕ್ತಾರ್ಯೇ? |



| | | |
|---|---|---|
| ತುಂಗೆ | : | ಇನ್ನೆಲ್ಲಿ? ಶಾಲೇಲೆ<br>(ಶಾಲೆಯಲ್ಲೆ ಎಂದು ಕೇಳಿಸಿಕೊಂಡ ಪದ್ಮ ಅಲ್ಲಿಗೆ ಹೋಗುವ ತವಕದಿಂದ ಓಡಿಬರುತ್ತಾಳೆ. ತುಂಗೆ ಅವಳನ್ನು ಕೂಗುತ್ತ ಹಿಂಬಾಲಿಸುತ್ತಾಳೆ. ಪದ್ಮ ಮನೆಯ ಬಾಗಿಲ ಬಳಿ ಬಂದಾಗ ತಂದೆ ಚೆನ್ನಯ್ಯನೊಂದಿಗೆ ಬರುತ್ತಿರುವುದು ಕಾಣಿಸಿ ಅಲ್ಲೆ ಸ್ತಬ್ಧವಾಗಿ ನಿಲ್ಲುತ್ತಾಳೆ.) |
| ಚೆನ್ನಯ್ಯ | : | ಏನ್ ಸ್ವಾಮಿ ಅಷ್ಟೋಂದ್ ತರಾತುರಿ ನಿಮ್ಗೆ? |
| ಶಾನುಭೋಗ | : | ಬೆಳೆದ ಮಗಳನ್ನ ಎಷ್ಟು ದಿವ್ಸಾಂತ ಮನೇಲೇ ಇಟ್ಕೊಳ್ಳೋದು ಚೆನ್ನಯ್ಯ. ಅಂತೂ ಹೋದ ಕೆಲ್ಸ ಹೂವಿನ್ಸರ ಎತ್ಕೊಂಡ್ಹಂಗಾಯ್ತು. ಎಷ್ಟಾದ್ರು ದೊಡ್ಡ ಮನುಷ್ಯರು ಅಂದ್ರೆ ದೊಡ್ಡ ಮನುಷ್ಯರೇ ಅಲ್ವಾ?<br>(ಪದ್ಮ ತನ್ನ ಪಾಡಿಗೆ ತಾನು ಹೋಗೋಣವೆಂದು ನಿರ್ಧಾರ ಮಾಡಿ ಮುಂದೆ ಬರುತ್ತಿದ್ದಂತೆಯೇ ಶಾನುಭೋಗರು ಅವಳನ್ನು ಕರೆದು) |
| ಶಾನುಭೋಗ | : | ಪದ್ಮ.. (ಪದ್ಮ ಅಲ್ಲೇ ನಿಲ್ಲುತ್ತಾಳೆ) |
| ಚೆನ್ನಯ್ಯ | : | ನಾನಿನ್ ಬರ್ತಿನಿ ಶಾನ್ಬೋಗ್ರೆ |
| ಶಾನುಭೋಗ | : | ಬಾ, ಹೋಗ್ತೀಯಂತೆ<br>(ತಮ್ಮ ಛತ್ರಿಯನ್ನು ಮಡಚಿ ಮಗಳ ಹತ್ತಿರ ಬಂದು)<br>.. ಎಲ್ಲಿಗ್ ಹೊರ್ಟಿದೀಯಮ್ಮ? ಇಷ್ಟೊತ್ನಲ್ಲಿ? |
| ಪದ್ಮ | : | ಕನಕನ್ ಮನೆಗೆ ಕಸೂತಿ ಬಟ್ಟೆ ತರೋಕೆ |
| ಶಾನುಭೋಗ | : | (ನಗುತ್ತ) ..ನಾಳೆ ನಾಡಿದ್ರಲ್ಲಿ ಮದುವೆಯಾಗ್ಬೇಕಾಗಿರೋ ಹುಡ್ಗಿ..<br>(ಪದ್ಮ ಅವಾಕ್ಕಾಗಿ ನೋಡುವಳು. ಶಾನುಭೋಗರು ವಿಷಯ ತಿಳಿಸಿದವರಂತೆ ನೋಡುತ್ತ)<br>.. ತಗೋ, ಹೊರಗ್ ಹೋಗೋದಕ್ಕೆ ಹೊತ್ತು ಗೊತ್ತು ಇಲ್ವೇನಮ್ಮ. ತಗೋ. ನಡಿ ಹೋಗು ಒಳ್ಗೆ.<br>(ಎಂದು ಅವಳ ಕೈ ಹಿಡಿದುಕೊಂಡು ಮನೆಯ ಬಾಗಿಲ ಬಳಿಗೆ ಕರೆದುತಂದಾಗ ಪದ್ಮ ಅಸಹಾಯಕಳಂತೆ ಹಿಂತಿರುಗಿ ಚೆನ್ನಯ್ಯನನ್ನು ನೋಡುತ್ತಾಳೆ. ಆಗ ಶಾನುಭೋಗರು)<br>.. ಹೋಗು, ಮನೆ ಕೆಲ್ಸ ಇರ್ಬೇಕಲ್ಲ. ಹೋಗು<br>(ಎಂದು ಅವಳನ್ನು ಬಲವಂತವಾಗಿ ಮನೆ ಒಳಗಡೆ ಕಳುಹಿಸುವರು. ಪದ್ಮ ಬಂದು ಬಾಗಿಲ ಹಿಂದೆ ನಿಲ್ಲುವಳು. ನಂತರ ಶಾನುಭೋಗರು ಚೆನ್ನಯ್ಯನವರಿಗೆ)<br>.. ಚೆನ್ನಯ್ಯ, ಜೋಯಿಸ್ರೆ ಹೇಳಿದಾರೆ. ಈ ಶ್ರಾವಣ ಶುಕ್ಲಾಷ್ಟಮಿ ಒಳ್ಳೇದಿನವಂತೆ, ಮುಗ್ಸಿಬಿಡಿ ಎಲ್ಲಾ ಮನ್ಸಲ್ಲಿದ್ದಂಗಾಗುತ್ತೆ. |
| ಚೆನ್ನಯ್ಯ | : | ಹೌದು ಸ್ವಾಮಿ ಎಲ್ಲಾ ನಿಮ್ ಮನಸ್ಸಲ್ ಇದ್ದಾಂಗೇ ಆಗ್ತಾಯಿದೆ. |
| ಶಾನುಭೋಗ | : | ಅಂದ್ರೆ ಚೆನ್ನಯ್ಯ ಮದುವೆಗೆ ಹತ್ತು ದಿವ್ಸ ಮಾತ್ರ ಉಳ್ದಿದೆ (ಪದ್ಮ ಆತಂಕಗೊಳ್ಳುವಳು)<br>.. ಸಿದ್ಧತೆಗಳೆಲ್ಲ ಆಗ್ಬೇಡ್ವೇ? |
| ಚೆನ್ನಯ್ಯ | : | (ನಗುತ್ತ) ಅಮಲ್ದಾರ್ರೇ ಅಳಿಯ ಆಗೋದಾದ್ರೆ ಹತ್ತು |

ದಿನ ಯಾಕ್ ಸ್ವಾಮಿ, ಹತ್ತು ಘಂಟೇಲೆ ಆಗ್ಹೋಗುತ್ತೆ.

ಶಾನುಭೋಗ : ಸರಿ, ಸರಿ. ಹೀಗಂದ್ರೆ ಹ್ಯಾಗೋ? ನೀನೆ ಮುಂದ್ ನಿಂತ್ ಮಾಡ್ಸ್ಬೇಕಪ್ಪ. ಮೊದ್ಲೇ ನಿನ್ ಕೇಳ್ಲಿಲ್ಲ, ಬೇಜಾರ್ ಮಾಡ್ಕೋಬೇಡ.

ಚೆನ್ನಯ್ಯ : ಯಾರನ್ ಕೇಳ್ಬೇಕಾಗಿತ್ತೋ ಅವ್ರನ್ನೇ ಕೇಳಿಲ್ಲ ಅಂದ್ಮ್ಯಾಲೆ ನಾ ಯಾವೂರ್ ದಾಸಯ್ಯ ಬುಡೀ ಸ್ವಾಮಿ. ಆಯ್ತು ನಾ ಇನ್ ಬತ್ತಿನಿ. ಹಂಗೆ ಆ ತಿಮ್ಮಾಚಾರೀಗ್ ಚಪ್ರ ಕಟ್ಹೋಕ್ ಹೇಳೋಯ್ತಿನಿ.
(ಪದ್ಮ ತೀರಾ ದುಃಖಿತಳಾಗಿ ಅಳುತ್ತಾ ನಿಲ್ಲುತ್ತಾಳೆ)

**ನಿರ್ದೇಶಕರ ಟಿಪ್ಪಣಿ:**

ಶಾನುಭೋಗರು ಪದ್ಮ ಮತ್ತು ಮಂಜು ಮಾತನಾಡುವುದನ್ನು ಅಕಸ್ಮಾತಾಗಿ ನೋಡಿದ ಮೇಲೆ ಒಂದು ನಿರ್ಧಾರಕ್ಕೆ ಬರುತ್ತಾರೆ. ಮುಂದಿನ ದೃಶ್ಯ ಶ್ಯಾಮರಾಯರ ಮನೆಗೆ ಬರುವ ಶಾನುಭೋಗರು ಪದ್ಮಾಳ ಮದುವೆ ಅಮಲ್ದಾರರ ಜೊತೆಗೆ ನಿಶ್ಚಯವಾಗಿರುವುದೆಂದು ತಿಳಿಸಿ ಸಿಹಿ ಕೊಟ್ಟು ಅಲ್ಲಿಂದ ಹೊರಡುತ್ತಾರೆ. ಈ ಸಿಹಿ ಸುದ್ದಿ ನಂತರ ಪದ್ಮಳಿಗೆ ತುಂಗೆಯ ಮುಖಾಂತರ ತಿಳಿಯುತ್ತದೆ. ಅಲ್ಲಿ ಆಕೆ ನಿಜವಾಗಿಯೂ ಚಿಂತಿತಳಾಗುತ್ತಾಳೆ. ಹಾಗೂ ಮಾಸ್ತರರನ್ನು ಎಲ್ಲಿ ಹುಡುಕಬಹುದೆಂದು ಯೋಚಿಸುತ್ತ ಮನೆಯ ಹೊರಗೆ ಹೊರಟಾಗ ಎದುರಾಗುವ ಶಾನುಭೋಗರು ಮತ್ತು ಚೆನ್ನಯ್ಯ ಅವಳನ್ನು ಒಳಗೆ ಕಳುಹಿಸುತ್ತಾರೆ. ಶಾನುಭೋಗರು ತಾವು ನಿಶ್ಚಯಿಸಿದ ವರ, ಮದುವೆ, ದಿನಾಂಕ ಇತ್ಯಾದಿಗಳ ಬಗ್ಗೆ ಮಾತನಾಡುತ್ತ ಚೆನ್ನಯ್ಯ ಅದಕ್ಕುತ್ತರವಾಗಿ ಪದ್ಮಳ ಮನಸ್ಸಿನ ಉತ್ತರದಂತೆ ಸಂಭಾಷಣೆಯನ್ನು ಮುಂದುವರೆಸುತ್ತಾನೆ. ಬಾಯಿ ಮುಚ್ಚಿದ್ದ ಪದ್ಮಾಳಿಗೆ ಬಾಯಿಯಾಗಿ ಚೆನ್ನಯ್ಯ ಮಾತನಾಡುತ್ತಾನೆ. ಆದರೆ ಶಾನುಭೋಗರ ನಿರ್ಧಾರ ಖಚಿತವಾಗಿರುತ್ತದೆ. ಈ ಮೂರು ಒಂದಕ್ಕೊಂದು ಕೊಂಡಿಯಾಗಿರುವ ದೃಶ್ಯಗಳು. ದೃಶ್ಯದ ಪರಿಕಲ್ಪನೆಯಲ್ಲಿ ಗೌರೀಶಂಕರ್ ಅವರ ಛಾಯಾಗ್ರಹಣದ ವಿವರಗಳನ್ನೂ ಗಮನಿಸಬೇಕು. ಬಹಳ ಮುಖ್ಯವಾಗಿ ಅಕ್ಕ ಹಾಗೂ ತುಂಗೆಯರ ಸಂಭಾಷಣೆ. ಬಿಸಿಲು ಕೋಲುಗಳು ಅವರ ಹಿಂದೆ ಇಡೀ ಮನೆಯನ್ನು ಆವರಿಸಿಕೊಂಡಿರುವುದನ್ನು ನಾವು ಕಾಣಬಹುದು. ಈ ರೀತಿ ವಿಶಿಷ್ಟವಾದಂತಹ ಚಿತ್ರಿಕೆಯನ್ನು ರೂಪಕವಾಗಿ ಬಳಸಿಕೊಳ್ಳುವ ಸಾಧ್ಯತೆಗಳನ್ನು ಗೌರಿ ಸತತವಾಗಿ ಇಡೀ ಚಿತ್ರದಲ್ಲಿ ಮಾಡುತ್ತ ಬಂದಿದ್ದಾನೆ. ಅಷ್ಟೇ ಪೂರಕವಾಗಿ ಶಾನುಭೋಗರು ಮತ್ತು ಚೆನ್ನಯ್ಯನ ಮಾತುಗಳು, ಸಂಭಾಷಣಾಕಾರರಾದ ಬಸವರಾಜು ಅವರ ಶೈಲಿಯನ್ನು ತಿಳಿಸುತ್ತದೆ. ಒಟ್ಟಾರೆ ಒಂದು ಗಂಡು ಹೆಣ್ಣಿನ ಸಂಬಂಧದಲ್ಲಿ ಕೇವಲ ಅವರಿಬ್ಬರ ಒಪ್ಪಂದವಷ್ಟೇ ಸಾಧ್ಯವಿಲ್ಲ, ಹಿರಿಯರ ಒಪ್ಪಿಗೆಯೂ ಮುಖ್ಯ ಹಾಗೂ ಕೊನೆಗೂ ಅವರದೇ ನಿರ್ಧಾರ ಎನ್ನುವುದನ್ನು ಆ ಕಾಲಘಟ್ಟದ ಜೀವನ ಕ್ರಮವನ್ನು ಇಟ್ಟುಕೊಂಡೇ ದೃಶ್ಯಗಳನ್ನು ನಿರೂಪಿಸುತ್ತ ಸಾಗಿದ್ದೇವೆ.



## ದೃಶ್ಯ–24

*ರಾತ್ರಿ – ಶಾನುಭೋಗರ ಮನೆಯ ಒಳಗೆ*

(ತನ್ನ ಮದುವೆಯ ದಿಢೀರ್ ನಿಶ್ಚಯದಿಂದ ದಿಗ್ಭ್ರಾಂತಳಾಗಿರುವ ಪದ್ಮ ದೀಪದ ಬೆಳಕಿನಲ್ಲಿ ಅಳುತ್ತ ಕುಳಿತಿದ್ದಾಳೆ)



## ದೃಶ್ಯ-25

*ಹಗಲು-ಹೊರಾಂಗಣ-ಶಾಲೆ*

(ಪದ್ಮಾಳನ್ನು ನೋಡಲಾಗದೆ ಮತ್ತು ಶಾನುಭೋಗರ ಜೊತೆ ಮನಸ್ತಾಪವಾಗಿದ್ದಕ್ಕೆ ಶಾಲೆಯ ಮುಂದೆ ಮಂಜುನಾಥ ಚಿಂತಿಸುತ್ತ ಕುಳಿತಿದ್ದಾನೆ)



## ದೃಶ್ಯ-26

*ಹಗಲು – ಶಾನುಭೋಗರ ಮನೆಯ ಒಳಗೆ*

(ಪದ್ಮ, ಮಂಜುನಾಥನಿಗಾಗಿ ಒಂದು ಪತ್ರವನ್ನು ಬರೆದು ತನ್ನ ತಂಗಿ ತುಂಗೆಯನ್ನು ಕರೆಯುವಳು)

ಪದ್ಮ : ತುಂಗಾ, ತುಂಗಾ

ತುಂಗ : ಏನಕ್ಕ?

ಪದ್ಮ : (ತುಂಗೆಯ ಬಳಿಗೆ ಹೋಗಿ)
.. ನೋಡು, ಈ ಪತ್ರಾನ ಮೇಷ್ಟ್ರಿಗ್ ಕೊಟ್ಬಿಟ್ ಬರ್ತೀಯಾ? ಹುಷಾರು, ಜಾಣೆ
(ಎಂದು ಅವಳ ಹಣೆಗೆ ಮುತ್ತೊಂದನ್ನು ಇಡುತ್ತಾಳೆ. ತುಂಗೆ ಪತ್ರವನ್ನು ತಗೆದುಕೊಳ್ಳುತ್ತ, ತನಗೆ ಮುತ್ತನ್ನಿಟ್ಟ ಜಾಗವನ್ನು ತೋರಿಸುತ್ತ)

ತುಂಗ : ಈಗ್ ಕೊಟ್ಯಲ್ಲ ಅದನ್ನು ಮೇಷ್ಟ್ರಿಗ್ ಕೊಟ್ಬಿಟ್ ಬರ್ಲಾ?

ಪದ್ಮ : ಕೊಡ್ತಿನ್ ನೋಡು ಹೋಗೇ ಸುಮ್ನೆ
(ತುಂಗೆ ನಗುತ್ತ ಹೊರಡಲನುವಾಗುವಳು. ಪದ್ಮ ಅವಳ ಹಿಂದೆ ಬಂದು ಎದುರಿಗೆ ತನ್ನ ತಂದೆ ಬರುತ್ತಿರುವುದನ್ನು ಗಮನಿಸಿ ಗಾಬರಿ ಪಡುವಳು)
.. ಅಯ್ಯಯ್ಯೋ, ಏಯ್ ತುಂಗಾ ಭದ್ರಾ ಕಣೆ

ತುಂಗ : ನಂಗೊತ್ತು
(ಎಂದು ತನ್ನ ಅಂಗಿಯ ಒಳಗೆ ಇರಿಸಿಕೊಳ್ಳುತ್ತಾಳೆ. ಶಾನುಭೊಗರು ಎದುರಿಗೆ ಬಂದು)

ಶಾನುಭೋಗ : ತುಂಗಾ

ತುಂಗ : ಏನು?

ಶಾನುಭೋಗ : ಎಲ್ಲಿಗ್ ಹೊರ್ಟೆ?

ತುಂಗ : ಮೀನಾಕ್ಷಿ ಮನೆಗೆ

ಶಾನುಭೋಗ : ಯಾಕೆ?

ತುಂಗ : ಅಪ್ಪಿಗಾದ್ರೆ ಮದ್ವೆ ಮನೆಬಿಟ್ ಹೋಗ್ಬೇಡ ಅಂದೆ, ನಂಗೇನ್ ಮದ್ವೇನ ನಾ ಹೋಗ್ತಿನಿ
(ಎಂದು ಪತ್ರ ಇರುವ ಜಾಗದ ಮೇಲೆ ಕೈ ಇಟ್ಟುಕೊಂಡು ಓಡಿಹೋಗುತ್ತಾಳೆ)

ಶಾನುಭೋಗ : ಏಯ್ ಅದೇ ಲಗ್ನದಲ್ಲ್ ನಿನಗೂ ಮದ್ವೆ ಮಾಡ್ಬಿಡ್ತೀನಿ
(ಎಂದು ಪದ್ಮನನ್ನು ನೋಡುತ್ತ, ನಗುತ್ತ ಒಳಗೆ

ಹೋಗುತ್ತಾರೆ. ಪದ್ಮ ಉಫ್ ಎಂದು ನಿಟ್ಟುಸಿರುಬಿಡುತ್ತ ಕುಳಿತುಕೊಳ್ಳುತ್ತಾಳೆ)

**ನಿರ್ದೇಶಕರ ಟಿಪ್ಪಣಿ:**
ಪದ್ಮ ತನ್ನ ತುಂಗೆಯ ಮುಖಾಂತರ ಮಂಜುನಾಥನಿಗೆ ಸುದ್ದಿ ಮುಟ್ಟಿಸುವ ಸಲುವಾಗಿ ಒಂದು ಪತ್ರವನ್ನು ಬರೆದು ತಂದೆಯ ಕಣ್ಣುತಪ್ಪಿಸಿ ತಲುಪಿಸುತ್ತಾಳೆ. ಮಂಜು ಅದಕ್ಕೆ ಉತ್ತರವಾಗಿ ಮತ್ತೊಂದು ಪತ್ರವನ್ನು ಅವಳ ಕೈಲಿ ಕಳುಹಿಸುತ್ತಾನೆ. ಕೆ.ಎಸ್.ನ ಅವರ "ಮೈಸೂರ ಮಲ್ಲಿಗೆ"ಯ ಒಂದು ಅದ್ಭುತವಾದ ಕವನ "ನಿನ್ನ ಪ್ರೇಮದ ಪರಿಯ". ಈ ಕವನದ ಸಾಲುಗಳು ಈ ಸಂದರ್ಭಕ್ಕೆ ಎಷ್ಟು ಅಚ್ಚುಕಟ್ಟಾಗಿ ಹೊಂದಿಕೊಂಡಿದೆ ಎಂಬುದನ್ನು ಮುಂದಿನ ಚಿತ್ರಿಕೆಗಳು ಚಿತ್ರಿಸುತ್ತಾ ಹೋಗುತ್ತದೆ. ಕವನದ ಮೂಲ ಆಶಯಕ್ಕೆ ಧಕ್ಕೆ ಬಾರದ ಹಾಗೆ ಕವನದ ಒಟ್ಟಾರೆ ಆಶಯವನ್ನು ಧ್ವನಿಪೂರ್ಣವಾಗಿ ಹೇಳುವಂತಹ ಈ ರೀತಿಯ ಸಂದರ್ಭಗಳಿಂದಾಗಿಯೇ ಕಥೆ ಮತ್ತು ಚಿತ್ರಕಥೆ ತನ್ನ ಹಿಡಿತವನ್ನು ಸಾಧಿಸುವುದಕ್ಕೆ ಸಾಧ್ಯವಾಯಿತು.



## ದೃಶ್ಯ–27

*ಹಗಲು – ನದಿ ದಂಡೆ*

(ಮಂಜುನಾಥ ನದಿ ನೀರಿನಲ್ಲಿ ಕಾಲು ಬಿಟ್ಟುಕೊಂಡು ಯೋಚಿಸುತ್ತ ಕುಳಿತಿರುವಾಗ ತುಂಗೆ ಅಲ್ಲಿಗೆ ಬಂದು)

ತುಂಗ : ಮೇಷ್ಟ್ರೆ, ಎಲ್ ಹುಡ್ಕೋದು ನಿಮ್ಮನ್ನ?

ಮಂಜುನಾಥ : ಯಾಕೆ? ಏನಾಯ್ತು?

ತುಂಗ : ಅಕ್ಕ ನಿಮುಗ್ ಕೊಡು ಅಂತ ಒಂದ್ ಕಾಗ್ದ ಕೊಟ್ಟಿದ್ಲು ಎಲ್ಲಿ?
(ಎಂದು ಹುಡುಕುವಾಗ ಮಂಜುನಾಥನೂ ಅವಳ ಅಂಗಿಯ ಜೇಬನ್ನು ಹುಡುಕುವಾಗ ಆಕೆಗೆ ಕಚಗುಳಿ ಇಟ್ಟಂತಾಗಿ)
.. ತಾಳಿ, ತಾಳಿ ಹಾ ಇಲ್ಲಿದೆ.
(ಎಂದು ಕಾಗದವನ್ನು ಕೊಡುತ್ತಾಳೆ. ಮಂಜುನಾಥ ಕಾಗದವನ್ನು ಓದಿದ ನಂತರ ತುಂಗೆಗೆ ಮುತ್ತುಕೊಡಲು ಬರುತ್ತಾನೆ;)

ಮಂಜುನಾಥ : ತುಂಗೇ
(ಆಗ ಆಕೆ ಅವನನ್ನು ತಡೆದು;)

ತುಂಗ : ಇರಿ, ಇರಿ

ಮಂಜುನಾಥ : ಯಾಕೆ?

ತುಂಗ : ಈ ಕೆನ್ನೆಗ್ ಕೊಡಿ
(ತನ್ನ ಎಡಬದಿಯ ಕೆನ್ನೆಯನ್ನು ತೋರಿಸುತ್ತಾಳೆ)

ಮಂಜುನಾಥ : (ಮುತ್ತು ಕೊಟ್ಟ ನಂತರ) ಈ ಕೆನ್ನೆಗ್ ಯಾಕೆ?

ತುಂಗ : ಈ ಕೆನ್ನೆಗೆ ಅಕ್ಕ ಮುತ್ಕೊಟ್ಟಿದ್ದು

ಮಂಜುನಾಥ : ಏಯ್ ಕಳ್ಳಿ ಕೂತ್ಕೊ
(ಎಂದು ಅವಳನ್ನು ಕೂರಿಸಿ)
.. ನಾ ಒಂದ್ ಪತ್ರಕೊಡ್ತಿನಿ ಅದನ್ನ ನಿಮ್ಮಕ್ಕಂಗ್ ಕೊಡ್ಬೇಕು
(ತುಂಗ ಸಮ್ಮತಿ ಸೂಚಿಸುತ್ತಾಳೆ ನಂತರ ಮಂಜುನಾಥ ತನ್ನ ಬ್ಯಾಗಿನಿಂದ ಒಂದು ಪತ್ರವನ್ನು ತಗೆದುಕೊಂಡು ಬರೆಯತೊಡಗುತ್ತಾನೆ)

# ದೃಶ್ಯ–28

***ರಾತ್ರಿ – ಶಾನುಭೋಗರ ಮನೆಯ ಒಳಗೆ ಮತ್ತು ಹೊರಗೆ***
***ಹಾಡು: ನಿನ್ನ ಪ್ರೇಮದ ಪರಿಯ***

(ಪದ್ಮ ಪತ್ರವನ್ನು ಓದುತ್ತಿದ್ದಾಳೆ)

ನಿನ್ನ ಪ್ರೇಮದ ಪರಿಯ
ನಾನರಿಯೇ ಕನಕಾಂಗಿ
ನಿನ್ನೊಳಿರೆ ನನ್ನ ಮನಸು

ಹುಣ್ಣಿಮೆಯ ರಾತ್ರಿಯಲಿ
ಉಕ್ಕುವುದು ಕಡಲಾಗಿ
ನಿನ್ನೊಲುಮೆ ನನ್ನ ಕಂಡು
ನಿನ್ನೊಳಿರೆ ನನ್ನ ಮನಸು

ಸಾಗರನ ಹೃದಯದಲಿ
ರತ್ನ ಪರ್ವತ ಮಾಲೆ
ಮಿಂಚಿನಲಿ ಮೀವುದಂತೆ
ತೀರದಲಿ ಬಳುಕುವೊಲೆ
ಕಣ್ಣ ಚುಂಬಿಸಿ ಮತ್ತೆ
ಸಾಗುವುದು ಕನಸಿನಂತೆ
ನಿನ್ನೊಳಿರೆ ನನ್ನ ಮನಸು

ಅಲೆಬಂದು ಕರೆಯುವುದು
ನಿನ್ನೊಲುಮೆ ಅರಮನೆಗೆ
ಒಳಗಡಲ ರತ್ನಪುರಿಗೆ
ಅಲೆಯಿಡುವ ಮುತ್ತಿನಲೆ
ಕಾಣುವುದು ನಿನ್ನೊಲುಮೆ
ಒಳಗುಡಿಯ ಮೂರ್ತಿ ಮಹಿಮೆ
ನಿನ್ನೊಳಿರೆ ನನ್ನ ಮನಸು

ತಾರೆಯಾಗದೆ ಕಾಣುವ ಈ ಮಿಂಚು
ನಾಳೆ ಅರ್ಧಾಂಗಿ ತಾರೆಯಾಗದೆ ಕಾಣುವೀ ಮಿಂಚು.



**ನಿರ್ದೇಶಕರ ಟಿಪ್ಪಣಿ:**
ನಿನ್ನ ಪ್ರೇಮದ ಪರಿಯ ಕವನದ ಸಾಲುಗಳು, ಅವರಿಬ್ಬರ ಮನಸ್ಥಿತಿಗಳನ್ನು ಬಹಳ ಗಂಭೀರವಾಗಿ ಮತ್ತು ರೂಪಕಗಳ ಜೊತೆಯಲ್ಲಿ ಮನಮುಟ್ಟುವಂತೆ ಮಾಡುವಲ್ಲಿ ಯಶಸ್ವಿಯಾಗುತ್ತದೆ. ಆ ಕವನದ ನಂತರದ ದೃಶ್ಯ ರಾತ್ರಿಯ ಹೊತ್ತಿನಲ್ಲಿ ಪದ್ಮ ತನ್ನ ದುಃಖದಲ್ಲಿರಬೇಕದರೆ ಬರುವ ಬಳೆಗಾರ ಚೆನ್ನಯ್ಯ ಆಕೆಯ ಜೊತೆ ಭರವಸೆಯ ಮಾತುಗಳನ್ನು ಆಡುತ್ತ ದೇವರನ್ನು ನಂಬು ದಾರಿತೋರಿಸುತ್ತಾನೆ ಎಂದು ಹೇಳಿ ದೀಪವನ್ನು ಹಚ್ಚಿಸುತ್ತಾನೆ. ಈ ದೃಶ್ಯದಲ್ಲಿ ದೀಪ ಹಿಡಿದು ಬರುವ ಪದ್ಮಾಳ ಚಿತ್ರಿಕೆಗೆ ಮುಂಚೆ ಆ ಬೆಳಕು ಚೆನ್ನಯ್ಯನ ಮೇಲೆ ನಿಧಾನವಾಗಿ ಹರಡುವ ಒಂದು ಚಿತ್ರಿಕೆಯೊಡನೆ ನಂತರ ಆಕೆ ದೀಪದ ಜೊತೆಯಲ್ಲಿ ಬಂದು ಕೂರುತ್ತಾಳೆ. ಇವುಗಳನ್ನು ಗಮನಿಸಿದಾಗ ಛಾಯಾಗ್ರಾಹಕನ ವಿಶಿಷ್ಟ ತಂತ್ರಗಾರಿಕೆಯನ್ನು ಇಲ್ಲಿ ಕಾಣಬಹುದು. ದೃಶ್ಯದ ಗಾಢತೆ ಚೆನ್ನಯ್ಯನ ಮಾತುಗಳಿಂದಾಗಿ ಮತ್ತಷ್ಟು ಆತ್ಮೀಯವಾಗುವ ಸಂದರ್ಭವನ್ನು ಇಲ್ಲಿ ನಾವು ಕಾಣಬಹುದು. ಹಾಡಿನ ಪ್ರಭಾವದಿಂದ ಹೊರಗೆ ಬಂದ ಕೂಡಲೇ ಈ ರೀತಿಯ ಅಪೂರ್ವವಾದ ದೃಶ್ಯ ಪದ್ಮಾಳ ಮನಸ್ಥಿತಿಯನ್ನು ಪೂರ್ಣವಾಗಿ ಪ್ರೇಕ್ಷಕ ತನ್ನದಾಗಿಸಿಕೊಳ್ಳುತ್ತಾನೆ.

# ದೃಶ್ಯ–29

***ರಾತ್ರಿ – ಶಾನುಭೋಗರ ಮನೆಯ ಒಳಗೆ***

(ಪದ್ಮ ಅಳುತ್ತ ಕತ್ತಲ ಮನೆಯಲ್ಲಿ ಕೂತಿರುತ್ತಾಳೆ. ಆಗ ಚೆನ್ನಯ್ಯ ಮನೆಗೆ ಬಂದು ಅಳುತ್ತಿರುವ ಸದ್ದನ್ನು ಕೇಳಿ)

ಚೆನ್ನಯ್ಯ : ಯಾರೋ ಅಳ್ತೇರಂಗ್ಯೆಯ್ತಲ್ಲ! ಯಾರು? ಪದ್ಮವ್ವ (ಎಂದು ಕೂಗುತ್ತಾನೆ ಆದರೆ ಪದ್ಮ ಎದ್ದು ಬರದೆ ತನ್ನ ಪಾಡಿಗೆ ತಾನು ಅಳುತ್ತಲೇ ಇರುತ್ತಾಳೆ. ಆಗ ಚೆನ್ನಯ್ಯ ಹತ್ತಿರ ಬಂದು)
.. ಪದ್ಮವ್ವ! ಯಾಕ್ನಂತಾಯಿ ದೀಪಾನು ಹಚ್ಚದೆ ಹಿಂಗ್ ಅಳ್ತಾ ಕೂತಿದಿ? ಮನೆಗ್ ಬೆಳಕ್ ಬೇಕಾಗಿರೋ ಹೊತ್ನಾಗೆ ಹಿಂಗ್ ಕತ್ಲು ಮಾಡ್ಕಬಾರ್ದು. ಹೋಗು ದೀಪ ಹಚ್ಚು ಹೋಗು

ಪದ್ಮ : ನನ್ ಪಾಲ್ಗೆ ಇನ್ನಲ್ ಬೆಳಕು ಚೆನ್ನಯ್ಯ?

ಚೆನ್ನಯ್ಯ : ಹಂಗಂದ್ರೆಂಗವ್ವ? ಹೋಗು, ಹೋಗು ನನ್ತಾಯಿ. ನಿನ್ ಕೈಯಾರೆ ಹಚ್ಚಿದ್ ದೀಪ ನಿನ್ಗೊಂದ್ ದಾರಿ ತೋರ್ಸ್ಲೈತೆ ಹೋಗು, ಹೋಗವ್ವ (ಬಲವಂತ ಪಡಿಸುತ್ತ)
.. ಹೋಗು ನನ್ತಾಯಿ. (ಪದ್ಮ ಎದ್ದು ಹೋಗುತ್ತಾಳೆ)
.. ಕಷ್ಟ–ಸುಖ ಅನ್ನೋದು ನೆಳ್ಳು ಬೆಳಕಿದ್ದಂಗೆ. ಒಂದನ್ನೊಂದ್ ಬಿಟ್ಟು ಇರೋಕಿಲ್ಲ ಕಣವ್ವ
(ದೀಪ ಹಚ್ಚಿಕೊಂಡು ತರುತ್ತಿರುವುದನ್ನು ನೋಡಿ ಸಂತಸಪಡುತ್ತ)
.. ಅವ್ವವ್ವ ಹೀಗೆ, ದೀಪ್ದಂಗೆ ಯಾವಾಗ್ಲು ನಿನ್ನ್ ಮುಖ ಲಕ್‌ಲಕಾಂತ ಹೊಳೀತಿರ್ಬೇಕು

ಪದ್ಮ : ಚೆನ್ನಯ್ಯ, ಮೇಷ್ಟ್ರುನ ನಾನ್ ಹೇಗ್ ಮರೀಲಿ? ಅಪ್ಪಯ್ಯ ನನಗ್ ಬಲ್ವಂತ ಮಾಡಿ ಮದ್ವೆ ಮಾಡುದ್ರೆ ನನ್ಗುಳಿದಿರೋದ್ ಒಂದೇ ಒಂದ್ ದಾರಿ.

ಚೆನ್ನಯ್ಯ : ಛೇ ಛೇ ಬುಡ್ತೂ ಅನ್ನ್ ನನ್ತಾಯಿ. ಆ ಜಗಾ ಕಾಯೋನು ಈ ನನ್ ಮಗಾ ಕಾಯ್ದೇ ಹೋದಾನ? ಯಾರ್‍ಯಾರ್ ಕೈಲಿ ಏನೇನ್ ಮಾಡ್ಸಬೇಕೋ ಮಾಡ್ಸೇ ತೀರ್ತಾನೆ. ನೀ ಏನು ಯೋಚ್ನೆ ಮಾಡ್ಬೇಡ. ಧೈರ್ಯವಾಗಿರು. ಹೋಗು ದೇವ್ರಿಗ್ ದೀಪ ಹಚ್ಚಿ ಹರ್ಕೆ ಹೊತ್ಕ. ಎಲ್ಲ ಒಳ್ಳೆದಾಯ್ತದೆ. ಹೋಗು. (ಎಂದು ಅವಳನ್ನು ಕಳುಹಿಸಿ ಈತ ಅವಳನ್ನೇ ನೋಡುತ್ತ ನಿಟ್ಟುಸಿರು ಬಿಡುತ್ತಾನೆ)



# ದೃಶ್ಯ–30

***ಹಗಲು – ತಾಲೂಕು ಕಛೇರಿಯ ಹೊರಗೆ***

(ಚೆನ್ನಯ್ಯ ತಾಲೂಕು ಕಛೇರಿಯ ಬಳಿ ಅಮಲ್ದಾರರನ್ನು ನೋಡಲು ಕಾಯುತ್ತಾ ಕುಳಿತಿದ್ದಾನೆ. ಜನರು ಬರುವುದು, ಹೋಗುವುದು ಮಾಡುತ್ತಿದ್ದಾರೆ. ಚೆನ್ನಯ್ಯ ಒಳಗೆ ಹೋಗಲು ಪ್ರಯತ್ನಿಸಿದಾಗ ಜವಾನ ಅವನನ್ನು ತಡೆದು;)

ಜವಾನ : ಏನಯ್ಯ? ನಡಿಯಯ್ಯ ಹೊರ್ಗೆ.

ಚೆನ್ನಯ್ಯ : ಅದೂ..
(ಎಂದು ಏನನ್ನೋ ಹೇಳುವಷ್ಟರಲ್ಲಿ ಯಾರೋ ಒಬ್ಬ ಪ್ರಮುಖ ವ್ಯಕ್ತಿ ಬರುವುದನ್ನು ಗಮನಿಸಿದ ಜವಾನ ಅವನಿಗೆ ನಮಸ್ಕಾರ ಮಾಡುತ್ತ ನಿಲ್ಲುತ್ತಾನೆ)

ಜವಾನ : ನಮಸ್ಕಾರ ಬುದ್ಧಿ.

ವ್ಯಕ್ತಿ : ನಮಸ್ಕಾರ
(ಎಂದು ಒಳಗೆ ಹೋಗುತ್ತಾನೆ. ಚೆನ್ನಯ್ಯ ಅವರನ್ನು ಹಿಂಬಾಲಿಸಿ ಹೊರಡುವಾಗ ಅವನನ್ನು ಜವಾನ ತಡೆಯುತ್ತಾನೆ.)

ಜವಾನ : ತಡಿಯಯ್ಯ. ಏನಯ್ಯ? ಒಳ್ಳೆ ದನ ನುಗ್ಗಿದ್ಹಂಗ್ ನುಗ್ಗತಾ ಇದ್ದೀಯಲ್ಲ ನೀನೇನ್ ಪಟೇಲ್ನ? ಇಲ್ಲಾ ಶಾನ್ಭೋಗ್ನ?

ಚೆನ್ನಯ್ಯ : ಏಯ್ ಅದನ್ನೆಲ್ಲ ಕೇಳೋಕ್ ನೀ ಯಾರ್ಲಾ? ನಾನು ಏಟೋತ್ತಿಂದ ನೋಡ್ತಾವ್ನಿ ಒಳ್ಳೆ ಜಬರ್ದಸ್ತಾಗ್ ಪೇಟ ಹಾಕಾಂಡ್ಬಂದೋರ್ಗೆ ಕೈ ಮುಗ್ದು ಒಳಗ್ ಬಿಡ್ತೀಯ, ನಾ ಕುಂತೇ ಅವ್ನಿ. ಎಟ್ಹೋತ್ತು ಅಂತ ಕುಂತಿರೋದು. ನಾವೇನ್ ಮನುಷ್ಯರಲ್ವ?

ಜವಾನ : ಏ ಅವ್ರೆಲ್ಲ ದೊಡ್ಡೋರು. ಅಮಲ್ದಾರ್ರು ನೋಡಾಕ್ ಬತ್ತಾರೆ.

ಚೆನ್ನಯ್ಯ : ಏ ನಾನೇನ್ ಮೇಜು ಕುರ್ಚಿ ನೋಡಾಕಾ ಬಂದಿವ್ನಿ.? ನಾನು ಅಮಲ್ದಾರ್ರು ನೋಡಾಕೆ ಬಂದಿರೋದು.
(ಪುನಃ ಅವನನ್ನು ತಡೆಯುವ ಜವಾನ, ಪ್ರಮುಖ ವ್ಯಕ್ತಿ ಬರುವುದನ್ನು ಗಮನಿಸಿ)

ಜವಾನ : ನಮಸ್ಕಾರ ಬುದ್ಧಿ.
(ಮತ್ತೆ ಒಳಗೆ ಹೋಗಲು ಪ್ರಯತ್ನಿಸುವ ಚೆನ್ನಯ್ಯನನ್ನು ತಡೆಯುತ್ತ)

| | | |
|---|---|---|
| | | .. ತಡಿಯಯ್ಯ. ಅದೇನ್ ಹೇಳ್ಬೇಕು ನನ್ಮುಂದ್ ಒದ್ರು. ನಾನ್ ಅವ್ರುಂದೆ ಒದ್ರುಕಾತಿನಿ. |
| ಚೆನ್ನಯ್ಯ | : | ನೀ ಯಾವೂರ್ ದೊಣ್ಣೆ ನಾಯ್ಕ? ನಿಂತಾವ್ ಒದ್ರಾಕೆ. ನಾ ಅಮಲ್ದಾರ್ರುತಾವೆ ಒದ್ರಾದು. (ಖಡಾಖಂಡಿತವಾಗಿ ಹೇಳುತ್ತಾನೆ) |
| ಜವಾನ | : | ನೋಡು ಹಿಂಗೆಲ್ಲ ಮಾತಾಡ್ದೆ ಅಂತಂದ್ರೆ ಕತ್ತಿಡ್ದು ಆಚೆಗ್ ತಬ್ಬಿಡ್ತಿನಿ. |
| ಚೆನ್ನಯ್ಯ | : | ಏನ್ ಹೆದ್ರುಸ್ತೀಯ? ದಬ್ಬು ನೋಡಾವ. ಮಡುಗ್ದಾಂದ್ರೆ ಹಂಗೆ ಬುಂಡೆಯೆಲ್ಲ ನಿಗ್ರುಕಾಬುಡ್ಬೇಕು. |
| ಜವಾನ | : | ನೋಡು ಸುಮ್ಕಿರು<br>(ಎನ್ನುವಷ್ಟರಲ್ಲಿ ಅಮಲ್ದಾರರು ಬರುತ್ತಾರೆ. ಅವರು ಬಂದದ್ದನ್ನು ನೋಡಿ)<br>.. ನೋಡಿ ಸ್ವಾಮಿ. ಇವ್ನಯಾವನೋ ಗೊತ್ತಿಲ್ಲ. ಬೆಳಗ್ನಿಂದ ನಿಮ್ಮನ್ನ ಕಾಣ್ಬೇಕು ಅಂತ ಒಂದೆ ಪಟ್ಟ್ ಹಿಡ್ಕಂಡ್ ಕುಂತ್ಕಂಡ್ಬಿಟ್ಟವ್ನೆ. ನಾ ಹೇಳ್ತಾಯಿವ್ನಿ ಅಮಲ್ದಾರ್ರು.<br>(ಎನ್ನುವಾಗ ಅಮಲ್ದಾರರು ಮಾತು ನಿಲ್ಲಿಸುವಂತೆ ಸೂಚಿಸಿ ಆತನನ್ನು ಒಳಗೆ ಬಿಡುವಂತೆ ಸಂಜ್ಞೆಮಾಡಿ ಒಳಗೆ ಹೋಗುತ್ತಾನೆ. ನಂತರ ಜವಾನ, ಚೆನ್ನಯ್ಯನಿಗೆ ಒಳಗೆ ಹೋಗುವಂತೆ ಸಂಜ್ಞೆ ನೀಡುತ್ತಾನೆ.) |
| ಅಮಲ್ದಾರ | : | ಯಾರಯ್ಯ ನೀನು? |
| ಚೆನ್ನಯ್ಯ | : | ನವಿಲೂರ್ನೋನು ಸ್ವಾಮಿ. ಬಳೆಗಾರ ಚೆನ್ನಯ್ಯ ಅಂತ. ನಿಮ್ತಾವ ವಸಿ ಮಾತಾಡ್ಬೇಕಿತ್ತು ಧಣಿ. |
| ಅಮಲ್ದಾರ | : | ಏನದು? |
| ಚೆನ್ನಯ್ಯ | : | ನಮ್ ಶಾನ್ಭೋಗ್ರು ಮಗ್ಳು ಪದ್ಮವ್ವನ್ಜೊತೆ ತಮ್ಮ ಲಗ್ನ ಗೊತ್ತಾಗೈತೆ ಅಂತ ತಿಳೀತು. ಅದ್ಕೆ ಬಂದೆ ಬುದ್ಧಿ. |
| ಅಮಲ್ದಾರ | : | (ನಗುತ್ತ) ಅದಾ.. ಏನಾದ್ರು ಹೇಳ್ಕಳ್ಸುದ್ಲಾ? |
| ಚೆನ್ನಯ್ಯ | : | ಬುದ್ಧಿ ಪದ್ಮವ್ವನ್ನ ಚಿಕ್ಕ್ ಮಗೀನಿಂದ ನೋಡ್ತಾ ಬಂದೀವ್ನಿ. ಅವ್ರ್ ಮನ್ಸು ಶಾನ್ಭೋಗ್ರಿಗಿಂತ ನನ್ಗೆ ಶಾನೆ ಚೆನ್ನಾಗ್ ಗೊತ್ತು. ನಮ್ಮೂರ್ ಮೇಷ್ಟ್ರುಮ್ಯಾಗೆ ಅವ್ರಿಗ್ ಮನಸಾಗೈತೆ ಬುದ್ಧಿ. ಮೇಷ್ಟ್ರ ಮಂಜುನಾಥಪ್ಪಾನೂ<br>(ಅಮಲ್ದಾರ ದಿಗ್ಭ್ರಾಂತನಾಗುತ್ತಾನೆ)<br>.. ನಮ್ ಪದ್ಮವ್ವನ್ಮ್ಯಾಗೆ ಆಸೆ ಇಟ್ಕೊಂಡವ್ರೆ ಬುದ್ಧಿ. ಬಂಗಾರ್ದಂಥಾ ಜೋಡಿ. ಈ ಜೋಡೀನ್ ಒಂದ್ಮಾಡಿದ್ರೆ ಆ ಪುಣ್ಯ ನಿಮ್ಗೇ ಸಿಕ್ತದೆ ಸ್ವಾಮಿ. |



| | | |
|---|---|---|
| ಅಮಲ್ದಾರ | : | ಏಯ್, ಏನೋ ತಾಪತ್ರಾಯ ಹೇಳ್ತಾನೆ ಅಂತ ಸುಮ್ನಿದ್ರೆ ನಂಗೆ ತಾಪತ್ರಾಯ ತಂದಿಡ್ತಾಯಿದ್ಯಾ?<br>(ಭಯಭಿತನಾಗುವ ಚೆನ್ನಯ್ಯ, ಅಮಲ್ದಾರನಿಗೆ) |
| ಚೆನ್ನಯ್ಯ | : | ಇಲ್ಲ ಬುದ್ಧಿ, ತಪ್ಪಿಳ್ಕಬೇಡಿ ಬುದ್ಧಿ |
| ಅಮಲ್ದಾರ | : | ನಿಂಗ್ ಜ್ಞಾನ ನೆಟ್ಟಗಿದ್ಯಲ್ವೋ ಇಲ್ವೋ. ರಂಗಾ..<br>(ಜವಾನ ಓಡಿಬರುವನು) |
| ಜವಾನ | : | ಮಹಾಸ್ವಾಮಿ |
| ಚೆನ್ನಯ್ಯ | : | ನಿಮ್ ಕಾಲಿಗ್ ಬೀಳ್ತೀನಿ ಬುದ್ಧಿ. |
| ಅಮಲ್ದಾರ | : | ತಳ್ಳೋ ಆಚೆಗೆ ಇವನ್ನ. ಹೋಗೋ ಆಚೆಗೆ.<br>(ಜವಾನ ಎಳೆದೊಯ್ಯುತ್ತಿದ್ದರೂ ಚೆನ್ನಯ್ಯ ಮತ್ತೆ ವಿನಂತಿಸಿಕೊಳ್ಳುತ್ತಾನೆ) |
| ಚೆನ್ನಯ್ಯ | : | ಬ್ಯಾಡ ಬುದ್ಧಿ, ನಿಮ್ಗೇಳೋಷ್ಟು ಧೈರ್ಯ ಅವ್ಳಿಗಿಲ್ಲ ಬುದ್ಧಿ. ಎರೆಡ್ ಜೀವ ಒಂದ್ಮಾಡಿದ್ ಪುಣ್ಯ ಬತ್ತದೆ ಬುದ್ಧಿ. ಹಾಗ್ ಮಾಡ್ಬೇಡಿ ಬುದ್ಧಿ. ಎಳೆ ಮನಸ್ಸನ್ನ ನೋಯಿಸ್ಬೇಡಿ ಧಣಿ. |
| ಜವಾನ | : | ನಡಿಯಯ್ಯ<br>(ಎಂದು ಎಳೆದೊಯ್ಯುತ್ತಾನೆ, ಅಮಲ್ದಾರ ಅವನನ್ನೇ ನೋಡುತ್ತ ಚಿಂತಾಕ್ರಾಂತನಾಗುತ್ತಾನೆ) |

# ದೃಶ್ಯ–31

*ಹಗಲು – ಶಾನುಭೋಗರ ಮನೆ ಒಳಗೆ*

(ಮದುವೆಯ ಆಚರಣೆಗಳು, ಶ್ಲೋಕ, ಮಂತ್ರ ಪಠನಗಳೆಲ್ಲ ನೆರವೇರುತ್ತಿದೆ. ಶಾನುಭೋಗರ ಬಂದ ಅತಿಥಿಗಳನ್ನು ವಿಚಾರಿಸಿಕೊಳ್ಳುತ್ತಿದ್ದಾರೆ. ಮದುವೆಯ ವಧುವಿನ ಧಿರಿಸಿನಲ್ಲಿ ಪದ್ಮ ಅಂಗಣವನ್ನು ಪ್ರವೇಶ ಮಾಡುತ್ತಾಳೆ. ಮದುವೆ ಮಂಟಪದಲ್ಲಿ ವರನಾಗಿ ನಿಂತಿರುವ ಮಂಜುನಾಥನನ್ನು ನೋಡಿ ಪರಸ್ಪರ ನಕ್ಕು ಹಾರಗಳನ್ನು ಹಾಕುತ್ತಾರೆ. ಎಲ್ಲರೂ ಅಕ್ಷತೆ ಹಾಕುತ್ತಿರಬೇಕಾದರೆ ಚೆನ್ನಯ್ಯ ಈ ಮದುವೆಗೆ ಕಾರಣರಾದ ಅಮಲ್ದಾರರತ್ತ ಧನ್ಯತೆಯ ಭಾವದಿಂದ ನೋಡಿ ಕೈ ಮುಗಿಯುತ್ತಾನೆ. ಅಮಲ್ದಾರರು ಮುಗುಳ್ನಗುತ್ತಾರೆ. ತಾಳಿ ಕಟ್ಟುವ ಕಾರ್ಯಕ್ರಮ ಮುಗಿದ ನಂತರ ಶಾನುಭೋಗರು ಕಣ್ಣೀರನ್ನು ಒರೆಸಿಕೊಳ್ಳುತ್ತ ಅಮಲ್ದಾರರತ್ತ ಬರುತ್ತಾರೆ. ಆಗ ಅಮಲ್ದಾರರು)

ಅಮಲ್ದಾರ : ಏನ್ ಶಾನ್ಭೋಗ್ರೇ, ಹ್ಯಾಗಿದೆ ಜೋಡಿ?

ಶಾನುಭೋಗ : (ನಿಂತಿರುವುದನ್ನು ಕಂಡು)
.. ಕೂತ್ಕೊಳಿ. ಎಲ್ಲ ಅಮಲ್ದಾರ್ರ ದಯೆ. ಕೂತ್ಕೊಳಿ.

ಅಮಲ್ದಾರ : ದೊಡ್ಡ ಮಾತು. ಇಲ್ಲಿ ನಡಿತಾಯಿರೋ ಮದುವೆ ಒಂದು ನೆಪಮಾತ್ರ. ಅದು ಮುಂಚಿತವಾಗಿ ಸ್ವರ್ಗದಲ್ಲೇ ನಿಶ್ಚಿತವಾಗಿರುತ್ತೆ. ನೋಡಿ, ನೋಡಿ, ಹ್ಯಾಗಿದೆ ಜೋಡಿ. ಒಬ್ಬರಿಗೊಬ್ರು ಹೇಳ್ಮಾಡ್ಸಿದ್ಹಾಗ್ ಇದೆ. ಇದಕ್ಕಿನ್ನ ಹೆಚ್ಗೆ ಇನ್ನೇನ್ ಬೇಕು ಹೇಳಿ ನಿಮ್ಗೇ. ಅವ್ರು ಸುಖವಾಗಿದ್ರೆ ಅಷ್ಟೇ ಸಾಕಲ್ವೇ?

ಶಾನುಭೋಗ : ಹೌದು ಅಮಲ್ದಾರ್ರೇ. ನಂಗೆ ಬೇಕಾಗಿರೋದು ಅಷ್ಟೇ. ನನ್ ಮಗ್ಳ ಸುಖ.
(ಮದುವೆಯ ಶಾಸ್ತ್ರಗಳು ಮುಂದುವರೆಯುತ್ತದೆ)

**ನಿರ್ದೇಶಕರ ಟಿಪ್ಪಣಿ:**

ಬಳೆಗಾರ ಚೆನ್ನಯ್ಯ ಪದ್ಮಾಳ ಸಾಂತ್ವನ ಮಾಡಿದ ಮೇಲೆ ನೇರವಾಗಿ ಅಮಲ್ದಾರರನ್ನು ಭೇಟಿಮಾಡಲು ಬರುತ್ತಾನೆ. ಬಹಳ ಹೊತ್ತಿನಿಂದ ಕಾಯ್ದಿರುವ ಚೆನ್ನಯ್ಯನನ್ನು



ಜವಾನ ಒಳಗೆ ಬಿಡದಿರುವುದು ಕೊನೆಗೆ ಅಮಲ್ದಾರರೇ ಬಂದು ಅವನನ್ನು ಒಳಗೆ ಬರುವಂತೆ ಮಾಡಿ ನಂತರ ಆತನನ್ನು ಬಂದ ಕಾರಣವನ್ನು ಕೇಳಿದಾಗ ಆತ ಪದ್ಮ ಹಾಗೂ ಮಂಜುನಾಥ ಪರಸ್ಪರ ಪ್ರೀತಿಸುತ್ತಿರುವುದನ್ನು ತಿಳಿಸಿ ಅಮಲ್ದಾರರನ್ನು ಯೋಚನೆಗೀಡು ಮಾಡುತ್ತಾನೆ. ಈ ಪುಟ್ಟ ದೃಶ್ಯದ ಮುಖಾಂತರ ಅಮಲ್ದಾರನ ಮುಂದಿನ ನಿಲುವು ಏನು ಎಂಬುದು ಗೊತ್ತಾಗದಂತೆ ಉಳಿಸಿಕೊಳ್ಳುವುದು ಬಹಳ ಮುಖ್ಯವಿತ್ತು. ಕಾರಣ ಇದರ ನಂತರದ ದೃಶ್ಯ ಬೇರೆಯೇ ಆಗಿತ್ತು. ಈ ಕುತೂಹಲವನ್ನು ಹಿಡಿದಿಟ್ಟು ಮುಂದಿನ ದೃಶ್ಯಕ್ಕೆ ಚಿತ್ರಕಥೆ ಸಾಗುತ್ತದೆ. ಮದುವೆಯ ದೃಶ್ಯ ಕುತೂಹಲಕಾರಿಯಾಗಿ ಪ್ರಾರಂಭವಾದರೂ ಕೂಡ ಸುಖಾಂತ್ಯವಾಗಿ ಮುಗಿಯುತ್ತದೆ. ಅಮಲ್ದಾರರು ತಮ್ಮ ದೊಡ್ಡತನವನ್ನು ಪದ್ಮ–ಮಂಜುನಾಥರ ಮದುವೆ ಮಾಡಿಸುವುದರ ಮೂಲಕ ಹಾಗೂ ಅವರಿಬ್ಬರಿಗೂ ಹಾರೈಸುವುದರ ಮೂಲಕ ಶಾನುಭೋಗರಿಗೆ ಆ ಪರಿಸ್ಥಿತಿಯ ಅರಿವನ್ನು ಮಾಡಿಕೊಡುತ್ತಾರೆ ಮತ್ತು ಪದ್ಮ ಹಾಗೂ ಮಂಜುನಾಥ ಅವರ ಬಾಳಿಗೆ ಹೊಸ ಭಾಷ್ಯವೊಂದನ್ನ ಬರೆಯುತ್ತಾರೆ. ಒಂದು ಸಾಂಸ್ಕೃತಿಕವಾದ ಹಿನ್ನಲೆಯನ್ನು ತನ್ನದಾಗಿಸಿಕೊಳ್ಳುವ ಹಲವು ಮಜಲುಗಳಲ್ಲಿ ಈ ಮದುವೆಯ ದೃಶ್ಯವೂ ಕೂಡ ಅಷ್ಟೇ ಪ್ರಮುಖವಾದದ್ದು. ಬಳಸಿರುವ ಮದುವೆಯ ಮಂತ್ರಗಳು, ಪರಿಸರ ನಿರ್ಮಾಣ ಹಾಗೂ ಒಟ್ಟಾರೆ ಧ್ವನಿ ಪಥ ಇವುಗಳನ್ನು ಗಮನಿಸಿದಾಗ ಘಟ್ಟದ ಮೇಲಿನ ಅಥವಾ ಮಲೆನಾಡಿನ ಸಾಂಸ್ಕೃತಿಕ ಆಯಾಮವನ್ನು ಇದು ತೆರೆದುಕೊಳ್ಳುತ್ತಾ ಹೋಗುತ್ತದೆ. ಹಲವು ಸೂಕ್ಷ್ಮಗಳಲ್ಲಿ ಇದೂ ಕೂಡ ಒಂದು ಎಂಬುದನ್ನು ನಾವು ಗ್ರಹಿಸಬೇಕು.

# ದೃಶ್ಯ-32

*ರಾತ್ರಿ – ಪ್ರಸ್ಥದ ಕೋಣೆ.*

(ಮಂಜುನಾಥ ಕವಿತೆಯನ್ನು ಬರೆದು ಮುಗಿಸಿ ಓದತೊಡಗುತ್ತಾನೆ.)

*ಒಂದಿರುಳು ಕವಿತೆಯಲಿ, ನನ್ನವಳ ಕೇಳೀದೆನು*
*ಚೆಂದ ನಿನಗಾವುದೆಂದು.*
*ನಮ್ಮೂರು ಚೆಂದವೋ*

(ಎಂದು ಹೇಳುತ್ತ ಹಾಸಿಗೆಯ ಮೇಲೆ ಕುಳಿತಾಗ ಗೆಜ್ಜೆಯ ಸದ್ದು ಬರುತ್ತದೆ. ಸದ್ದು ಕೇಳಿ ತಟ್ಟನೆ ಎದ್ದು, ಪರಿಶೀಲಿಸುವ ಉದ್ದೇಶದಿಂದ ಮತ್ತೆ ಕುಳಿತುಕೊಳ್ಳುತ್ತಾನೆ. ಮತ್ತೆ ಶಬ್ದ ಬಂದಿದ್ದನ್ನು ಕೇಳಿ ಮತ್ತೆ ಕುಳಿತು ಮತ್ತೆ ಏಳುವುದು ಮಾಡಿ ಹಾಸಿಗೆಯ ಕೆಳಗಡೆ ಏನದು ಎಂದು ನೋಡುತ್ತಾನೆ. ಕೋಣೆಯೊಳಗೆ ಪ್ರವೇಶಿಸುವ ಪದ್ಮ ಏನು ಮಾಡುತ್ತಿದ್ದಾನೆಂದು ಅಚ್ಚರಿಗೊಂಡು)

ಪದ್ಮ : ಏನ್ರೀ ಅದು?

(ಮಂಜುನಾಥ ಸುಮ್ಮನಿರುವಂತೆ ಸೂಚಿಸಿ, ಮಂಚಕ್ಕೆ ಕಟ್ಟಲಾಗಿದ್ದ ಗೆಜ್ಜೆಯನ್ನು ಹೊರತೆಗೆದು ತೋರಿಸುತ್ತಾನೆ. ನಂತರ ಅದನ್ನು ಅಲುಗಾಡಿಸಿ ಸದ್ದನ್ನು ಮಾಡಿದಾಗ ಹೊರಗಿಂದ ನಗುವ ಸದ್ದು ಕೇಳಿಬರುತ್ತದೆ. ಅಚ್ಚರಿಗೊಂಡು ಮತ್ತೆ ಸದ್ದನ್ನು ಮಾಡಿದಾಗ ಮತ್ತೆ ನಗುವ ಸದ್ದು ಕೇಳಿಬರುತ್ತದೆ. ಪದ್ಮ ಏನನ್ನೋ ಅರಿತವಳಂತೆ ನಸುನಗುತ್ತಾಳೆ. ಮಂಜುನಾಥ ಮತ್ತೆ ಮತ್ತೆ ಗೆಜ್ಜೆಸದ್ದನ್ನು ಮಾಡುತ್ತ ಕಿಟಕಿಯ ಬಳಿ ಬರುತ್ತಾನೆ. ಇತ್ತ ಗೆಜ್ಜೆ ಸದ್ದು ನಿಂತಿದ್ದು ಯಾಕೆ ಎಂದು ಯೋಚಿಸುತ್ತಿರುವಾಗಲೇ ಮಂಜುನಾಥ ಕಿಟಕಿ ತಗೆದು ಸದ್ದು ಮಾಡುತ್ತಾನೆ. ಪದ್ಮಾಳ ಸ್ನೇಹಿತೆಯರು ನಾಚಿ ಓಡಿಹೋಗುತ್ತಾರೆ. ಪದ್ಮ, ಹಾಸಿಗೆಯ ಮೇಲೆ ಇದ್ದ ಕವನದ ಹಾಳೆಯನ್ನು ತಗೆದುಕೊಂಡು ಓದತೊಡಗಿದಾಗ ಮಂಜುನಾಥ ಅದನ್ನು ಕಸಿದುಕೊಳ್ಳಲು ಬರುತ್ತಾನೆ. ಆದರೆ ಪದ್ಮ ಅವನ ಕೈಗೆ ಸಿಗದ ಹಾಗೆ ತಪ್ಪಿಸಿದಾಗ ಮಂಜುನಾಥ ಅವಳನ್ನು ತಬ್ಬಿ ತಿರುಗಿಸಿ ಪತ್ರವನ್ನು



ಕೊಡುವಂತೆ ಹೇಳಿ ವಾಪಾಸ್ ತಗೆದುಕೊಂಡು ಕುಳಿತುಕೋ ನಾ ಓದುತ್ತೇನೆಂದು ಸಂಜ್ಞೆ ಮಾಡುತ್ತಾನೆ. ನಂತರ ಇಬ್ಬರೂ ಕುಳಿತುಕೊಳ್ಳುತ್ತಾರೆ. ಇಬ್ಬರೂ ಕುಳಿತ ನಂತರ ಮಂಜುನಾಥ, ಪದ್ಮಾಳನ್ನು ತನ್ನ ತೊಡೆಯ ಮೇಲೆ ಮಲಗಲು ಸೂಚಿಸಿದಾಗ ಪದ್ಮ ಮಲಗುತ್ತಾಳೆ. ಪತ್ರವನ್ನು ಓದುವಂತೆ ಸಂಜ್ಞೆಮಾಡಿದಾಗ ಆಕೆ ಓದುವುದಿಲ್ಲವೆಂಬಂತೆ ಮುಖ ತಿರುಗಿಸುತ್ತಾಳೆ. ಮಂಜುನಾಥ ತಾನೇ ಓದುವವನಂತೆ ಓದಲು ಪ್ರಾರಂಭಿಸುತ್ತಾನೆ.)

ಮಂಜುನಾಥ : *ಒಂದಿರುಳು ಕನಸಿನಲಿ*
*ನನ್ನವಳ ಕೇಳಿದೆನು*
*ಚೆಂದ ನಿನಗಾವುದೆಂದು*


ಪದ್ಮ : *ನಮ್ಮೂರು ಚೆಂದವೋ.. ನಿಮ್ಮೂರು ಚೆಂದವೋ..*
*ಎಂದೆನ್ನ ಕೇಳಲೇಕೆ*
*ಎನ್ನರಸ ಸುಮ್ಮನಿರಿ ಎಂದಳಾಕೆ.*

# ದೃಶ್ಯ-33

***ಹಗಲು – ಹೊರಾಂಗಣ***
***ಹಾಡು: ಒಂದಿರುಳು ಕನಸಿನಲಿ ನನ್ನವಳ ಕೇಳಿದೆನು***

ಒಂದಿರುಳು ಕನಸಿನಲಿ ನನ್ನವಳ ಕೇಳಿದೆನು
ಚೆಂದ ನಿನಗಾವುದೆಂದು
ನಮ್ಮೂರು ಹೊನ್ನೂರು, ನಿಮ್ಮೂರು ನವಿಲೂರು
ಚೆಂದ ನಿನಗಾವುದೆಂದು

ನಮ್ಮೂರು ಚೆಂದವೋ,
ನಿಮ್ಮೂರು ಚೆಂದವೋ ಎಂದೆನ್ನ ಕೇಳಲೇಕೆ
ನಮ್ಮೂರ ಮಂಚದಲ್ಲಿ,
ನಿಮ್ಮೂರ ಕನಸಿದನು ವಿಸ್ತರಿಸಿ ಹೇಳಬೇಕೇ
ನಮ್ಮೂರು ಚೆಂದವೋ,
ನಿಮ್ಮೂರು ಚೆಂದವೋ ಎಂದೆನ್ನ ಕೇಳಲೇಕೇ
ಎನ್ನರಸ ಸುಮ್ಮನಿರಿ ಎಂದಳಾಕೆ



ಬಾಳೆಗಳು ತೋಳ ಬೀಸಿ
ಮಲ್ಲಿಗೆಯ ಮೊಗ್ಗುಗಳು, ಮುಳ್ಳಬೇಲಿಯ ಬರಿಸಿ
ಬಳುಕುತಿದೆ ಕಂಪಸೂಸಿ.

ನಗುನಗುತ ನಮ್ಮೂರ ಹೆಣ್ಣುಗಳು ಬರುತಿರಲು
ನಿಮ್ಮೂರ ಸಂತೆಗಾಗಿ
ನವಿಲೂರಿಗಿಂತಲೂ ಹೊನ್ನೂರೆ ಸುಖವೆಂದು ನಿಲ್ಲಿಸಿತು ಪ್ರೇಮ ಕೂಗಿ



ನಿಮ್ಮೂರ ಬಂಡಿಯಲಿ, ನಮ್ಮೂರ ಬೆಟ್ಟಾದ ಓಡಿದುದು ದಾರಿ ಬೇಗ
ಪುಟ್ಟ ಕಂದನ ಕೇಕೆ ತೊಟ್ಟಿಲನು ತುಂಬಿತ್ತು
ನಿಮ್ಮೂರ ಸೇರಿದಾಗ
ಊರ ಬೇಲಿಗೆ ಬಂದು, ನೀವು ನಮ್ಮನು ಕಂಡು
ಕುಶಲವನು ಕಂಡಾಗ
ತುಟಿಯಲೇನೋ ನಿಂದು ಕಣ್ಣಲ್ಲೇನೋ ಬಂದು ಕೆನ್ನೆ ಕೆಂಪಾದುದಾಗ

ನಮ್ಮೂರು ಚೆಂದವೋ,
ನಿಮ್ಮೂರು ಚೆಂದವೋ ಎಂದೆನ್ನ ಕೇಳಲೇಕೇ
ಎನ್ನರಸ ಸುಮ್ಮನಿರಿ ಎಂದಳಾಕೆ

**ನಿರ್ದೇಶಕರ ಟಿಪ್ಪಣಿ:**
ಮದುವೆಯ ನಂತರದ ದೃಶ್ಯ ಎಲ್ಲ ಮಾಮೂಲಿ ಚಿತ್ರಗಳಂತೆಯೇ ಪ್ರಥಮ ರಾತ್ರಿಯ ದೃಶ್ಯ. ಆದರೆ ಇದರ ಕಲಾತ್ಮಕ ಗುಣ ಏನೆಂದು ಗಮನಿಸಿದರೆ ಕನ್ನಡ ಸಾರಸ್ವತ ಲೋಕದಲ್ಲಿ ಬಹಳಷ್ಟು ತನ್ನದೇ ಆದಂತಹ, ವಿಶಿಷ್ಟವಾದಂತಹ, ಜಾನಪದೀಯವಾದಂತಹ ಪ್ರಭಾವವನ್ನು ಬೀರಿದಂತಹ "ಒಂದಿರುಳು ಕನಸಿನಲಿ ನನ್ನವಳ ಕೇಳಿದೆನು ಚೆಂದ ನಿನಗಾವುದೆಂದು" ಎಂಬ ಕವನದ ಸಾಲುಗಳು ಗೀತೆಯಾಗಿ ಮಾರ್ಪಟ್ಟಿರುವುದು. ಕರುವಿಗೆ ಗೆಜ್ಜೆ ಕಟ್ಟುವ ಆ ಗೆಜ್ಜೆಯ ಸದ್ದನ್ನು ಮಂಚಕ್ಕೆ ಕಟ್ಟಿದ್ದಂತಹ ಗೆಳತಿಯರ ತುಂಟಾಟವನ್ನು ಗಮನಿಸುತ್ತಲೇ ತಾನು ಬರೆದ ಕವನದ ಸಾಲುಗಳನ್ನು ತನ್ನ ಹೆಂಡತಿಯೊಡನೆ ಹಂಚಿಕೊಳ್ಳುವ ಮಂಜುನಾಥ, ಅವರಿಬ್ಬರ ಭಾವಾಭಿನಯದಂತೆ ಇಡೀ ಕವನ ನಮ್ಮನ್ನು ಒಂದು ದೃಶ್ಯಲೋಕಕ್ಕೆ ಕರೆದೊಯ್ಯುತ್ತದೆ. ಬಹಳ ಮುಖ್ಯವಾಗಿ ನಮ್ಮ ಆಶಯ ಕೆ.ಎಸ್.ನ ಅವರ ಹಲವು ಕವನಗಳು ಈ ರೀತಿಯ ದೃಶ್ಯ ರೂಪಕವಾಗುತ್ತ ಮತ್ತು ಆ ದೃಶ್ಯರೂಪಕದ ಜೊತೆಯಲ್ಲಿಯೇ ಕಥೆ ಜೀವಂತವಾಗುತ್ತ ಚಿತ್ರಕಥೆ ತನ್ನ ವೇಗವನ್ನು ಹೆಚ್ಚಿಸಿಕೊಂಡು ಹೋಗುವುದೇ ಆದ್ದರಿಂದ ಈ ಕಾರ್ಯದಲ್ಲಿ ಈ ನಮ್ಮೂರು ಚೆಂದವೋ ನಿಮ್ಮೂರು ಚೆಂದವೂ ಬಹಳ ಅಪ್ಯಾಯಮಾನವಾಗಿ ಮೂಡಿ ಬಂದಿದೆ. ಈ ಕವನ ಹಾಡಾಗುತ್ತ ಸಾಗಿದಂತೆ ಅವರಿಬ್ಬರ ಕನಸು ಏನಿತ್ತು ಎಂಬುದನ್ನು ಪ್ರೇಕ್ಷಕನ ಮುಂದೆ ನನಸಾಗಿಸುತ್ತದೆ. ಹೇಳುತ್ತ ಜಾನಪದೀಯವಾಗಿ ಜನಪದ ನೃತ್ಯವನ್ನು ಬಳಸಿ ಜೊತೆಗೆ ನೃತ್ಯಗಾರ್ತಿಯರನ್ನು ನೃತ್ಯಗಾರರನ್ನು ಬಳಸಿಕೊಳ್ಳುತ್ತ ಈ ದೃಶ್ಯವನ್ನು ಕಲ್ಪಿಸಿಕೊಳ್ಳಲಾಗಿದೆ. ಕಾರಣ ಈ ಕವನ ಕನ್ನಡ ಜನಮಾನಸದಲ್ಲಿ ತನ್ನದೇ ಆದಂತಹ ವಿಶಿಷ್ಟ ಸ್ಥಾನಮಾನವನ್ನು ಪಡೆದಿದ್ದರಿಂದ ಈ ಪ್ರಯೋಗವನ್ನು ಇಲ್ಲಿ ಮಾಡಲಾಯಿತು. ಪದ್ಮ ಹಾಗೂ ಮಂಜುನಾಥರ ಬದುಕು ಈ ರೀತಿ ಸುಂದರವಾಯಿತು ಎಂಬ ಕಲ್ಪನೆಯನ್ನು ಈ ಮೂಲಕ ಪ್ರೇಕ್ಷಕನ ಮನಸ್ಸಿನಲ್ಲಿ ಮೂಡಿಸಲಾಯಿತು.

## ದೃಶ್ಯ–34

*ರಾತ್ರಿ – ಶಾನುಭೋಗರ ಮನೆ*

(ಮಗ್ಗುಲಲ್ಲಿ ಮಲಗಿದ್ದ ಪದ್ಮ ಎದ್ದು ಕುಳಿತು)

ಪದ್ಮ : ಅಬ್ಬ, ತುಂಬ ಚೆನ್ನಾಗಿದೆ.
(ಎಂದು ಎದ್ದು ಕಿಟಕಿಯನ್ನು ತೆರೆಯುತ್ತಾಳೆ. ಬೆಳಕಾಗಿರುವುದನ್ನು ಕಂಡು)
.. ಅಯ್ಯಯ್ಯೋ!!

ಮಂಜುನಾಥ : ಏನಾಯ್ತು?

ಪದ್ಮ : ಬೆಳಕಾಗ್ಹೋಯ್ತು, ನಾನಿನ್ ಬರ್ಲಾ?

ಮಂಜುನಾಥ : (ಆಕಳಿಸುತ್ತ)
.. ರಾತ್ರಿಯೆಲ್ಲ ಕನಸ್ ಕಾಣೋದ್ರಲ್ಲೇ ಆಗ್ಹೋಯ್ತಲ್ಲೆ.
(ಪದ್ಮ ಹೊರಗಡೆ ಹೋಗಲು ಬಾಗಿಲ ಬಳಿಗೆ ಬಂದಾಗ)
.. ಪದ್ಮ
(ಎಂದು ಕರೆದು ನಿಲ್ಲುವಂತೆ ಕೈ ತೋರಿಸುವನು)


ಪದ್ಮ : ಯಾಕೆ?
(ಹತ್ತಿರ ಬಂದು ಆಕೆಯನ್ನು ದಿಟ್ಟಿಸಿ ನೋಡತೊಡಗುತ್ತಾನೆ. ಪದ್ಮ ನಾಚಿಕೊಳ್ಳುತ್ತಾಳೆ. ನಂತರ ಮಂಜುನಾಥ ಆಕೆಯ ಸಿಂಧೂರವನ್ನು ಚದುರಿಸಿ, ಅವಳ ತಲೆಯ ಕೂದಲನ್ನೆಲ್ಲ ಕೆದರಿ ಅವಳ ಅಂದವನ್ನೆಲ್ಲ ಕಡಿಸುತ್ತಾನೆ. ಇದರ ಹಿಂದಿನ ಉದ್ದೇಶವನ್ನು ಅರಿತ ಪದ್ಮ ಮತ್ತೂ ನಾಚಿಕೆಗೆ ಒಳಗಾಗುತ್ತಾಳೆ. ನಂತರ ಪದ್ಮ ಹೋದಾಗ ಮಂಜುನಾಥ ನಿದ್ರೆಗೆ ಜಾರುತ್ತಾನೆ.)



## ದೃಶ್ಯ–35

*ಹಗಲು – ಹೊರಾಂಗಣ*

(ಶಾಲೆಯಲ್ಲಿ ಮಕ್ಕಳೆಲ್ಲ ಪ್ರಾರ್ಥನೆ ಮಾಡುತ್ತಿರುವ ಸಮಯದಲ್ಲಿ ಒಬ್ಬ ವ್ಯಕ್ತಿ ಅನುಮಾನಾಸ್ಪದವಾಗಿ ಬಂದು ನಿಲ್ಲುವುದನ್ನು ನೋಡುವ ಮಂಜುನಾಥ ಆತನನ್ನು ಗಮನಿಸುತ್ತಾನೆ. ಅಪರಿಚಿತ ವ್ಯಕ್ತಿ ಮಂಜುನಾಥನನ್ನು ಬರುವಂತೆ ಸಂಜ್ಞೆಮಾಡಿ ಕೂಗುತ್ತಾನೆ. ಮಂಜುನಾಥ ಆಯಿತೆಂದು ಸಮ್ಮತಿಸಿ ಹೊರಗೆಬಂದು ಆತನನ್ನು ಗುರುತು ಹಿಡಿಯಲಾಗದೆ)



ಮಂಜುನಾಥ : ನೀವು? ನೀವು?
(ಎಂದು ಗೊಂದಲದಲ್ಲಿರುವಾಗ ರಾಘವ ತನ್ನ ಮುಸುಗನ್ನು ತಗೆದು)

ರಾಘವ : ನಾನು ರಾಘವ
(ಮಂಜುನಾಥ ಗುರುತು ನೆನಪಿಗೆ ಬಂದು ಸಂತೋಷಗೊಂಡು)

ಮಂಜುನಾಥ : ಹೇ ರಾಘವ!! ಚೆನ್ನಾಗಿದ್ದಿರ?

ರಾಘವ : ಹ್ಞೂ ಸ್ವಾಮಿ. ಇದೇನು? ಮದ್ವೆ ಆದ್ಮೇಲ್ ಇಷ್ಟ್ ಬೇಗ ಎಲ್ರನ್ನು ಮರ್ತುಬಿಡೋದೆ? ದೇಶಕ್ಕೆ ದೇಶಾನೇ ಸ್ವಾತಂತ್ರ್ಯ ಚಳುವಳಿಯಲ್ ಭಾಗವಹಿಸ್ತಾಯಿದ್ರೆ ನೀವ್ ಮಾತ್ರ ಇಲ್ಲಿ ಹುಡುಗ್ರು ಮುಂದೆ ನಾಗರಹಾವೆ, ಹಾವೊಳು ಹೂವೆ ಅಂತ ಪುಂಗಿ ಊದ್ತಿದ್ದೀರಿ ಅಲ್ವೇ?

ಮಂಜುನಾಥ : (ನಗುತ್ತಾ) ..ಅದು ಒಂದು ರೀತಿ ಬ್ರಿಟೀಶರನ್ನ ಎರೆಡ್ತಲೆ ನಾಗರಹಾವು ಅಂತ ಬರೆದ ಪದ್ಯ ರಾಘವ. ಇದು ಅದರ ಒಳ ಅರ್ಥ. ಒಂದರ್ಥದಲ್ಲಿ ಇದೂ ಕೂಡ ದೇಶ ಸೇವೆ ಅಲ್ವೇ?

ರಾಘವ : ನಿಜ. ಆದ್ರೂ ಮಂಜು, ನಮ್ಮ ಚಳುವಳಿ ಮುಖಂಡ್ರಾದಂಥ ಶಂಕರ ಪಾಟೀಲ್ರು ನಿಮ್ಮನ್ನ ಕರ್ಕೊಂಡ್ ಬಾ ಅಂತ ಹೇಳಿದಾರೆ. ನಾನು ಬಹಳ ದಿನಗಳಿಂದ ನಿಮಗೆ ಕಾಯ್ತಾ ಇದ್ದೆ. ಅಂತೂ ಇವತ್ತ್ ಸಿಕ್ಕಿದೀರ. ಬನ್ನಿ ಹೋಗಣ.

ಮಂಜುನಾಥ : (ಸ್ವಲ್ಪ ಯೋಚಿಸಿ)
.. ಈಗ ನಂಗೆ ಪಾಠ ಇದ್ಯಲ್ಲ. ಜಾಗ ಹೇಳಿದ್ರೆ ಆಮೇಲ್ ನಾನೆ ನೇರ್ವಾಗ್ ಬಂದ್ಬಿಡ್ತೀನಿ. ಅದೂ ಅಲ್ದೆ ಮನೇಲ್ಬೇರೆ ಹೇಳಿಲ್ಲ. ಪಾಪ ಪದ್ಮ ಕಾಯ್ತಿರ್ತಾಳೆ.

ರಾಘವ : (ನಗುತ್ತಾ) ..ಇಲ್ಲೀ ಸ್ವಾಮಿ. ಬೇಗ ಬಂದ್ಬಿಡ್ಬಹುದು. ಸಂಜೆ ಒಳ್ಗೆ ನಿಮ್ಮನ್ನ ಕಳ್ಸೋ ಜವಾಬ್ದಾರಿ ನಂದು.

ಮಂಜುನಾಥ : ಸರಿ ಹುಡುಗ್ರನ್ನ ಕಳ್ಸಿಬಿಟ್ ಬಂದ್ಬಿಡ್ತೀನಿ.
(ಎಂದು ಹೊರಡುತ್ತಾನೆ)

ರಾಘವ : ಆಯ್ತು.
(ರಾಘವೇಂದ್ರನ ಸಂಶಯಾಸ್ಪದ ನಡೆಯಲ್ಲಿ ದೃಶ್ಯ ಕೊನೆಗೊಳ್ಳುತ್ತದೆ)



# ದೃಶ್ಯ-36

***ಹಗಲು – ಹೊರಗೆ – ಕಾಡಿನ ಪ್ರದೇಶ***

(ಶಂಕರ ಪಾಟೀಲರು ಕಾಡಿನ ಪ್ರದೇಶದಲ್ಲಿ ಒಂದಷ್ಟು ಚಳುವಳಿಗಾರರನ್ನು ಕೂರಿಸಿಕೊಂಡು ಅವರೊಡನೆ ಸಂವಾದ ನಡೆಸುತ್ತಿದ್ದಾರೆ.)

ಪಾಟೀಲರು : ಮಹಾತ್ಮ ಗಾಂಧಿಯವ್ರ ತತ್ವಾನ ಯಾರೂ ಮೀರ್ಬಾರ್ದು. ನಮ್ಮ ಉದ್ದೇಶ ಉಪದೇಶದಿಂದ ಕೆಲ್ಸ ಮಾಡೋದಲ್ಲ. ಜನ್ರನನ್ನ ಎಚ್ಚರಿಸೋದು. ಅವ್ರ ಮನಸ್ಸಿನಾಗ ಸ್ವಾತಂತ್ರ್ಯದ ಅನಿವಾರ್ಯತೇನ ಬಿತ್ತೂದು.
(ಮಂಜುನಾಥ, ರಾಘವನ ಜೊತೆ ಪ್ರವೇಶಿಸುತ್ತಾ)

ಮಂಜುನಾಥ : ಇದೆಲ್ಲ ನಂಗೆ ಹೊಸ ಅನ್ಭವ.

ರಾಘವ : ಇದ್ರಿಂದ ಒಳ್ಳೇದಾಗ್ಬೇಕು ಅಷ್ಟೇ. ಇಡೀ ದೇಶಕ್ ದೇಶಾನೇ ಈ ಅನುಭವಕ್ಕೋಸ್ಕರ ಕಾಯ್ತಾಯಿದೆ.

ಮಂಜುನಾಥ : ಹೌದು
(ಅವರು ಬಂದಿದ್ದನ್ನು ಬಂಡೆಯ ಮೇಲೆ ಕುಳಿತಿದ್ದ ವ್ಯಕ್ತಿ ಗಮನಿಸಿ ಅವರು ಬರುತ್ತಿರುವುದನ್ನು ಶಂಕರ ಪಾಟೀಲರುರಿಗೆ ತಿಳಿಸುತ್ತಾನೆ.)

ವ್ಯಕ್ತಿ : ಜೈ.. ಮಾರುತಿ.. ಜೈ..
(ಶಂಕರ ಪಾಟೀಲರುರು ಇದನ್ನು ಗಮನಿಸುತ್ತಾರೆ. ಮಂಜುನಾಥನ ಪ್ರವೇಶವಾಗುತ್ತಿದ್ದಂತೆ ಅಲ್ಲಿದ್ದವರು ಅವನಿಗೆ ನಮಸ್ಕರಿಸಲು ಆರಂಭಿಸುತ್ತಾರೆ. ಮಂಜುನಾಥ ಅವರೆಲ್ಲರಿಗು ನಮಸ್ಕರಿಸುತ್ತ ಮುಂದುವರೆಯುತ್ತಾನೆ. ಅವನು ಹತ್ತಿರವಾಗುತ್ತಿದ್ದಂತೆ ಪಾಟೀಲರುರು)

ಪಾಟೀಲರು : ಬರ್ರಿ, ಬರ್ರಿ(ನಗುತ್ತ ಸ್ವಾಗತಿಸುತ್ತಾರೆ)


ರಾಘವ : ಬನ್ನಿ,
(ಪಾಟೀಲರಿಗೆ ಮಂಜುನಾಥ)
ಪಾಟೀಲ್ರೆ ಇವ್ರು...

ಪಾಟೀಲರು : ಗೊತ್ತು ಮಂಜುನಾಥ
(ತುಂಬಾ ಗೊತ್ತಿರುವಂತೆ ಹೇಳುತ್ತಾನೆ)
.. ನವಿಲೂರಿನ ಮಾಸ್ತ್ರು. ಕವಿಗಳು.

ಮಂಜುನಾಥ : (ಅಚ್ಚರಿಗೊಂಡು)
..ನನ್ಗಿಂತ ಮೊದ್ಲೇ ನನ್ ಸುದ್ದಿ ಬಂದ್ಬಿಟ್ಟಿದೆ.

ಪಾಟೀಲರು : ನಮ್ಮೋರು ಅಂದ್ಮೇಲ ಅಷ್ಟಾದ್ರುಗೊತ್ತಾಗ್ಬೇಡೇನ್ರಿಸರ. ಬನ್ನಿ.

(ಹತ್ತಿರ ಕರೆದು ಕೂರಿಸಿಕೊಳ್ಳುವನು)
.. ಬರ್ರಿ, ಕೂಡ್ರಿ.
(ಮಂಜುನಾಥ ಕೂತ ನಂತರ ಪಕ್ಕದವನಿಗೆ)
.. ಅದ್ಹಂಗ್ ನಾನೇನ್ಹೇಳ್ತಿದ್ದೆ.
(ನೆನಪಿಸಿಕೊಂಡು)
.. ಮಹಾತ್ಮ ಗಾಂಧಿಯವ್ರ ಕನಸು ನನಸಾಗ್ಬೇಕಾದ್ರ ನಾವು ಹಳ್ಳಿ ಹಳ್ಳಿಗೂ ಹೋಗಿ ಬ್ರಿಟೀಶರ ದಬ್ಬಾಳಿಕೇನ, ನಮ್ಮ ಗುಲಾಮ್ತನಾನ ಜನ್ರ ಮನಸ್ಸಿನಾಗ್ ನಾಟೋಹಂಗ್ ಹೇಳ್ಬೇಕು. ಅದಕ್ಕ ನಿಮ್ಮನ್ನೆಲ್ಲ ಕರ್ಸಿದ್ದು.
(ಮಂಜುನಾಥನ ಕಡೆ ತಿರುಗಿ) ಏನಂತೀರಿ ಮೇಷ್ಟ್ರೆ?



ಮಂಜು : ನಾವು..

ಪಾಟೀಲರು : ನೀವು ಏಕಚಿತ್ತರಾಗಿ ಕೆಲ್ಸ ಮಾಡ್ತೀರಿ..
(ಎನ್ನುವಷ್ಟರಲ್ಲಿ ಬಂಡೆಯ ಮೇಲೆ ಕುಳಿತಿದ್ದ ವ್ಯಕಿಗೆ ದೂರದಲ್ಲಿ ಪೋಲೀಸರು ಬರುತ್ತಿರುವುದು ಕಾಣಿಸಿ)

ವ್ಯಕ್ತಿ : ಗೋವಿಂದಾ ಗೋವಿಂದ
(ಗಾಬರಿಯಲ್ಲಿ ಕೂಗುತ್ತಾನೆ. ಆಗ ಪಾಟೀಲರು ಎಲ್ಲದಕ್ಕು ತಯಾರಾದವರಂತೆ ಅಲ್ಲಿ ನೆರೆದಿದ್ದ ವ್ಯಕ್ತಿಗಳಿಗೆ ಸಲಹೆ–ಸೂಚನೆಗಳನ್ನು ಕೊಡತೊಡಗುತ್ತಾರೆ.)

ಪಾಟೀಲರು : (ವ್ಯಕ್ತಿಗೆ) ..ಹೇ ನೀವ್ ಆ ಸಾಮಾನೆಲ್ಲ ಗಂಟ್ ಕಟ್ರಿ ಮತ್ತೆ ಮತ್ತ್ ನಮ್ಗೋಸ್ಕರ ಕಾಯ್ಬೇಡ್ರಿ, ಯಾವ್ಡು ಬಿಡ್ದಂಗ್ ತಗೊಂಡ್ಹೋಗ್ರಿ.
(ಕೆಲವು ವ್ಯಕ್ತಿಗಳು ಹೊರಡಲು ಸಜ್ಜಾಗುತ್ತಿರುತ್ತಾರೆ.)



.. ನಾನೇನಪ್ಪ ಹೇಳ್ತಿದ್ದೆ ಅಂದ್ರ ಈ ಬಿಡುಗಡೆಯ ಹೋರಾಟ ನಮ್ಮ ಚಳುವಳಿಯ ಮೊದಲ ಘಟ್ಟ ಅಷ್ಟೇ. ಅದಕ್ಕ ಮುಂದೆ ಬಹಳಷ್ಟು ಮಾಡೋದದ. ಸ್ವತಂತ್ರ ಭಾರತದಾಗ ಧಾರ್ಮಿಕ ಮತ್ತು ಸಾಮಾಜಿಕ ಕ್ಷೇತ್ರದಾಗ ಸಮನ್ವಯ ತರೋದು, ಆರ್ಥಿಕ ಪ್ರಗತಿ ಸಾಧಿಸಿ, ಅದರ ಫಲಾನ ಎಲ್ರಿಗೂ ಸಿಗೋಹಂಗ್ ಹಂಚೂದು. ಇವು ನಮ್ಮ ಧ್ಯೇಯ.
(ಈ ಮಾತುಗಳು ಹೇಳುತ್ತಿರುವಾಗಲೇ ಅಲ್ಲಿ ನೆರೆದಿದ್ದ ಕೆಲವು ಮಂದಿ ಅಲ್ಲಿಂದ ಹೋಗಲು ಪ್ರಯತ್ನಿಸುತ್ತಾರೆ. ಸ್ವಲ್ಪ ದೂರದ ನಂತರ ಪೋಲೀಸರು ಅವರನ್ನು ತಡೆದುನಿಲ್ಲಿಸುತ್ತಾರೆ.)
.. ಇವಕ್ಕ ಏನೇ ಅಡ್ಡ ಬಂದ್ರು ನಾವು ಎದೆಗೊಡ್ಲಿಕ್ಕ ಸಿದ್ಧರಾಗ್ಬೇಕು. ನಮ್ಮ ಸಾಧನ ಮತ್ತು ಸಿದ್ಧಿ ಏನದ ಅವು ನಮ್ಮ ದೇಶದ ಬಿಡುಗಡೆಗಾಗಿ. ನಾವು ಭಾರತೀಯರೆಲ್ಲ ಒಂದೇ ತಾಯಿ ಮಕ್ಳು, ನಮ್ಮ ನಮ್ಮಲ್ಲಿ ಕಲಹ, ಭಿನ್ನಾಭಿಪ್ರಾಯ ಬೇಡ. ಯಾವುದೇ ಪ್ರಚೋದನೆಗೂ ಸಂಯಮ ಕಳ್ಕೊಬ್ಯಾಡ್ರಿ. ನೀವ್ ಏಳ್ರಿ, ಬ್ಯಾರೆಯವ್ರನ್ನೂ ಎಬ್ಬಿಸ್ರಿ. ಗುರಿ ಸಾಧ್ನೋತನ್ಕ ಮುಂದಿಟ್ಟ ಹೆಜ್ಜೆ ಹಿಂದಕ್ಕ ತೆಗೀಬ್ಯಾಡ್ರಿ. ತಾಳ್ಮೆ ಸಹನೆಯಿಂದ ಸತ್ಯಾಗ್ರಹ ನಡೆಸ್ರಿ. ಶಾಂತಿ ನಮ್ಮ ಬೀಜ ಮಂತ್ರವಾಗ್ಲಿ. ಬೋಲೋ ಭಾರತ್ ಮಾತಾಕಿ.

ಎಲ್ಲರೂ : ಜೈ..

ಪಾಟೀಲರು : ಇನ್ಕಿಲಾಬ್

ಎಲ್ಲರೂ : ಜಿಂದಾಬಾದ್
(ಮಂಜುನಾಥನೂ ಜೊತೆಗೂಡಿ ಕೈ ಎತ್ತಿ ಕೂಗುವನು)

ಪಾಟೀಲರು : ಇನ್ಕಿಲಾಬ್

ಎಲ್ಲರೂ : ಜಿಂದಾಬಾದ್

ಪಾಟೀಲರು : ಬೋಲೋ ಭಾರತ್ ಮಾತಾಕೀ

ಎಲ್ಲರೂ : ಜೈ
(ಇವರ ಕೂಗಾಟ ಜಾಸ್ತಿಯಾಗುತ್ತಲೇ ಪೋಲೀಸ್ ಅಧಿಕಾರಿ ತನ್ನ ಪೇದೆಗಳಿಗೆ ಅವರೆಲ್ಲರನ್ನು ಸುತ್ತುವರೆಯುವಂತೆ ಹೇಳುತ್ತಾನೆ)

## ದೃಶ್ಯ–38

*ಹಗಲು – ಸೆರೆಮನೆಯ ಹೊರಗೆ*

(ಪೋಲೀಸ್ ವಾಹನವೊಂದು ಜನರನ್ನು ತುಂಬಿಕೊಂಡು ಸೆರೆಮನೆಯ ಮುಂದೆ ಬಂದು ನಿಲ್ಲುತ್ತದೆ. ಅದರಿಂದ ವ್ಯಕ್ತಿಗಳೆಲ್ಲ ಇಳಿದು ಜಯಕಾರ ಹಾಕಲು ಪ್ರಾರಂಭಿಸುತ್ತಾರೆ.)

ಎಲ್ಲರು : ಬೋಲೋ ಭಾರತ್ ಮಾತಾಕೀ

ಎಲ್ಲರು : ಜೈ

ಎಲ್ಲರು : ವಂದೇ

ಎಲ್ಲರು : ಮಾತರಮ್

(ಹೀಗೆ ಘೋಷಣೆಗಳನ್ನು ಕೂಗುತ್ತ ಸೆರೆಮನೆಯೊಳಗೆ ಪ್ರವೇಶಿಸುತ್ತಾರೆ. ಸೆರೆಮನೆಯಲ್ಲಿ ಆಗಲೇ ಇದ್ದಂತಹ ಜನರೂ ಘೋಷವಾಕ್ಯಗಳನ್ನು ಕೂಗುತ್ತ ಪಾಟೀಲರು ಹಾಗೂ ಅವರ ಸಂಗಡಿಗರನ್ನು ಬರಮಾಡಿಕೊಳ್ಳುತ್ತಾರೆ. ಹೀಗೆ ಒಟ್ಟಿಗೇ ಗುಂಪು ಕಟ್ಟಿಕೊಂಡು ಬರುತ್ತಿದ್ದ ಎಲ್ಲರನ್ನು ಒಬ್ಬ ಪೋಲೀಸ್ ಪೇದೆ ಬಂದು ಬೇರೆ ಬೇರೆ ಮಾಡಿ, ಅರ್ಧ ಜನರನ್ನು ಬೇರೆ ಕಡೆಯ ಕೋಣೆಗೆ ಕಳುಹಿಸಿ ಮತ್ತರ್ಧ ಜನರನ್ನು ಬೇರೆ ಕೋಣೆಗೆ ಕಳುಹಿಸುತ್ತಾನೆ.)

ಪೇದೆ : ಹ್ಞಾಂ ಹ್ಞಾಂ ನಿಲ್ಸಿ, ನಿಲ್ಸಿ. ಎಲ್ರು ಈ ಕಡೆ ಕೊಠಡಿಗ್ ಹೋಗಿ. ಗಲಾಟೆ ಮಾಡ್ಬೇಡಿ.

(ಸೆರೆಮನೆ ಪ್ರವೇಶಿಸುತ್ತಿರುವ ಪ್ರತಿಯೊಬ್ಬರೂ ಘೋಷ ವಾಕ್ಯಗಳನ್ನು ಕೂಗುತ್ತಲೇ ಇರುತ್ತಾರೆ. ಮಂಜುನಾಥ ಸೆರೆಮನೆಯನ್ನು ಪ್ರವೇಶಿಸಿ ಅಲ್ಲಿನ ಚಿತ್ರಣವನ್ನು ಸೂಕ್ಷ್ಮವಾಗಿ ಗಮನಿಸತೊಡಗುತ್ತಾನೆ. ರಾಘವ ಬಂದು ಎಲ್ಲವೂ ಬೇಗ ಸರಿಹೋಗಲಿದೆ ಎನ್ನುವ ಭಾವವನ್ನು ಮುಖದಲ್ಲಿ ತೋರಿಸಿ ಹೋಗುತ್ತಾನೆ)



## ದೃಶ್ಯ–39

*ಹಗಲು – ಸೆರೆಮನೆಯ ಆವರಣ*

(ಸೆರೆಮನೆಯ ಗೋಡೆಯನ್ನು ತೋರಿಸುತ್ತಾ ಹೋದಂತೆ ಹಿನ್ನಲೆಯಲ್ಲಿ ಅಧಿಕಾರಿಯೊಬ್ಬರ ಧ್ವನಿ ಕೇಳಿಬರುತ್ತದೆ.)

ಅಮಲ್ದಾರರ ದನಿ : ಸಾಮಾಜಿಕ ಶಾಂತಿಗೆ ಭಂಗ ತಂದು ಜನಗಳನ್ನು ಗುಂಪುಕೂಡಿಸಿ, ಪ್ರಚೋದಿಸಿ, ಆಡಳಿತ ಸರ್ಕಾರಕ್ಕೆ ವಿರುದ್ಧವಾಗಿ ಜನರನ್ನು ಎತ್ತಿಕಟ್ಟಿದ್ದು ಅಪರಾಧವೆಂದು ಪರಿಗಣಿಸಿ, ಬಂಧಿಸಿ ಕಾರಾಗೃಹದಲ್ಲಿಟ್ಟ ಈ ಕೆಳಕಂಡವರನ್ನು ಮುಂದೆ ಇಂತಹ ಕಾರ್ಯ ಪ್ರವೃತ್ತಕರಾಗಬಾರದೆಂದು ಎಚ್ಚರಿಕೆ ನೀಡಿ ಬಿಡುಗಡೆ ಮಾಡಲಾಗಿದೆ..

ಶಂಕರ್ ಪಾಟೀಲರು.. ರಾಘವೇಂದ್ರ.. ಮಂಜುನಾಥ.. ಶ್ರೀನಿವಾಸ.. ಪುರುಷೋತ್ತಮ.. ಮಹಾಲಿಂಗ.. ನರಸಿಂಹ ನಾಯಕ್.

(ಎಲ್ಲರನ್ನು ಹೊರಗೆ ಕಳುಹಿಸಲಾಗುತ್ತದೆ.)

# ದೃಶ್ಯ-40

***ಹಗಲು – ಸೆರೆಮನೆಯ ಹೊರಗೆ***

(ಸೆರೆಮನೆಯಿಂದ ಎಲ್ಲರನ್ನು ಬಿಡುಗಡೆ ಮಾಡಿ ಹೊರಗೆ ಕಳುಹಿಸಲಾಗುತ್ತದೆ. ಹೊರಗೆ ಬಂದಾಗ ಪಾಟೀಲರು ತನ್ನ ಸಂಗಡಿಗರಿಗೆ)

ಪಾಟೀಲರು : ಅಂತೂ ಒಂದು ಘಟ್ಟ ದಾಟಿದ್ವಿ, ಇನ್ನು ಮುಂದದ ಮಹಾ ಸಾಗರ.

ರಾಘವ : ನೀವು ಒಬ್ಬ ಮಾಂತ್ರಿಕ ಇದ್ದ ಹಾಗೆ. ನಿಮ್ಮ ಮುಂದಾಳತ್ವದಲ್ಲಿ ಯಾವ ಸಮುದ್ರಾನು ಲೆಕ್ಕಕ್ಕಿಲ್ಲ ಬಿಡಿ.

ಪಾಟೀಲರು : ಹ್ಞಾಂ ಅದಿರ್ಲಿ. ನಾವ್ ಅನ್ಕೊಂಡ್ಹಂಗ ಇನ್ನು ಮುಂದಿನ ಕಾರ್ಯಾಚರಣೆ ನಡೆಸ್ಬೇಕು. ನಾನು ಸೀಗಳ್ಳಿಗ್ ಹೋರ್ಟೇನಿ. ನೀವು ನಿಮ್ ನಿಮ್ ಸ್ಥಳಕ್ ಹೋಗಿ ಮತ್ತೆ ನನ್ ಬಂದು ಭೇಟಿ ಮಾಡಿ.
(ಮಂಜುನಾಥನನ್ನು ನೋಡಿ)
.. ಏನಪ್ಪ ಮಂಜುನಾಥ ನೀನು ಮಾಡೋದಕ್ಕ ಬಹಳ ಕೆಲ್ಸ ಐತಿ.
(ರಾಘವ ಪಾಟೀಲರನ್ನು ತಡೆಯುತ್ತ)

ರಾಘವ : ಅಯ್ಯಯ್ಯೋ ಅವ್ರ ಪಾಡಿಗೆ ಅವ್ರನ್ನ ಬಿಟ್ಬಿಡಿ.

ಪಾಟೀಲರು : ಯಾಕ?

ರಾಘವ : ಅವ್ರಿಗಿನ್ನ ಮದುವೆಯಾಗಿ ಮೂರ್‍ನಾಲ್ಕು ತಿಂಗ್ಳು ಕೂಡ ಆಗಿಲ್ಲ. ಹೊಸ ದಾಂಪತ್ಯ. (ಎಲ್ಲರೂ ನಗುವರು)

ಪಾಟೀಲರು : ಹಂಗಾ ಆಗ್ಲೀ, ಅವ ಅವ್ರೂರಾಗೇ ಕೆಲ್ಸಾ ಮಾಡ್ಲಿ. ಒಟ್ನಾಗ ಮಹಾತ್ಮ ಗಾಂಧೀಜಿಯವ್ರು ಹೇಳ್ದಂಗ ಹಳ್ಳಿ ಹಳ್ಳಿಯಾಗೂ ಜನ ಜಾಗೃತಿ ಆಗ್ಬೇಕು. ನಾನಿನ್ನು ಬರ್ತೀನಪ್ಪ.

ಮಂಜುನಾಥ : ಒಳ್ಳೇದು.

ಪಾಟೀಲರು : ಮತ್ತ ಕೂಡ್ಲೇ ಭೇಟಿ ಮಾಡೋಣು.
(ತನ್ನ ಸಂಗಡಿಗರಿಗೆ)
.. ಹ್ಞಾಂ ನಡ್ರಪ್ಪ.
(ಎಲ್ಲರು ಹೋದ ನಂತರ ರಾಘವ ಮಂಜುನಾಥನಿಗೆ)


ರಾಘವ : ಮಂಜು, ನಾವಂದ್ಕೊಳ್ಳೋದೆ ಒಂದು ಆಗೋದೆ ಒಂದು. ಸಂಜೆ ಒಳಗ್ ಮನೆ ತಲ್ಪಿಸ್ತೀನಿ ಅಂದೆ. ಮೂರ್ದಿನ ಆಗ್ಹೋಯ್ತು.



ಮಂಜುನಾಥ : ಮೂರ್ದಿನ ತಾನೆ ಪರ್ವಾಗಿಲ್ಲ ಬಿಡು. ಅಷ್ಟ್ರಲ್ ಏನು ಪ್ರಳಯ ಆಗಿರಲ್ಲ.
(ಎಂದು ಹೇಳಿ ವಿಚಿತ್ರವಾಗಿ ಜೋರಾಗಿ ನಗಲು ಪ್ರಾರಂಭಿಸುತ್ತಾನೆ. ರಾಘವ ಕುತೂಹಲಗೊಂಡು)

ರಾಘವ : ಯಾಕೆ?

ಮಂಜುನಾಥ : ಒಂದು ಕಲ್ಪನೆ. ಕಲ್ಪನೆ ನಗು ತರಸ್ತು.
(ಎಂದು ನಗುವುದನ್ನು ಮುಂದುವರೆಸುತ್ತಾನೆ.)



## ದೃಶ್ಯ–41

*ರಾತ್ರಿ – ಶಾನುಭೋಗರ ಮನೆಯ ಒಳಗೆ*

(ಮಂಜುನಾಥನ ಕಲ್ಪನೆಯಲ್ಲಿ ಹಾಡು ಶುರುವಾಗುತ್ತದೆ)

ರಾಯರು ಬಂದರು ಮಾವನ ಮನೆಗೆ ರಾತ್ರಿಯಾಗಿತ್ತು.
ಹುಣ್ಣಿಮೆ ಹರಸಿದ ಬಾಣಿನ ನಡುವೆ ಚೆಂದಿರ ಬಂದಿತ್ತು.
ತುಂಬಿದ ಚೆಂದಿರ ಬಂದಿತ್ತು

ಮಾವನ ಮನೆಯಲಿ ಮಲ್ಲಿಗೆ ಹೂಗಳ ಪರಿಮಳ ತುಂಬಿತ್ತು
ಬಾಗಿಲ ಬಳಿ ಕಾಲಿಗೆ ಬಿಸಿನೀರಿನ ತಂಬಿಗೆ ಒಂದಿತ್ತು
ಒಳಗಡೆ ದೀಪದ ಬೆಳಕಿತ್ತು

ಘಮಘಮಿಸುವ ಮೃಷ್ಟಾನ್ನದ ಭೋಜನ ರಾಯರ ಕಾದಿತ್ತು
ಬೆಳ್ಳಿಯ ಬಟ್ಟಲ ಗಸಗಸೆ ಪಾಯಸ ರಾಯರ ಕರೆದಿತ್ತು
ಭೂಮಿಗೆ ಸ್ವರ್ಗವೆ ಇಳಿದಿತ್ತು

ಚಪ್ಪರಗಾಲಿನ ಮಂಚದ ಮೇಗಡೆ ಮೆತ್ತನೆ ಹಾಸಿತ್ತು
ಅಪ್ಪಟ ರೇಶಿಮೆ ದಿಂಬಿನ ಅಂಚಿಗೆ ಚಿತ್ರದ ಹೂವಿತ್ತು
ಪದುಮಳು ಹಾಕಿದ ಹೂವಿತ್ತು

ಚಿಗುರೆಲೆ ಬಣ್ಣದ ಅಡಿಕೆಯ ತಂದಳು ನಾದಿನಿ ನಗುನಗುತಾ
ಬಿಸಿಬಿಸಿ ಹಾಲಿನ ಬಟ್ಟಲ ತಂದರು ಅಕ್ಕರೆಯಲಿ ಮಾವ
ಮಡದಿಯ ಸದ್ದೇ ಇರಲಿಲ್ಲ

ಮಡದಿಯ ತಂಗಿಯ ಕರೆದಿಂತೆಂದರು ಅಕ್ಕನ ಕರಿಯಮ್ಮ
ಮೆಲುದನಿಯಲಿ ನಾದಿನಿ ಎಂದಂದಳು ಪದುಮಳು ಒಳಗಿಲ್ಲ
ನಕ್ಕಳು ರಾಯರು ನಗಲಿಲ್ಲ

ಏರುತ ಇಳಿಯುತ ಬಂದರು ರಾಯರು ದೂರದ ಊರಿಂದ
ಕಣ್ಣನು ಕಡಿದರು ನಿದ್ದೆಯು ಬಾರದು ಪದುಮಳು ಒಳಗಿಲ್ಲ
ಪದುಮಳ ಬಳೆಗಳ ದನಿಯಿಲ್ಲ

ಬೆಳಗಾಯಿತು ಸರಿ ಹೊರಡುವೆನೆಂದರು ರಾಯರು ಕುಳಿತಿರಲಿ



ಒಳಮನೆಯಲಿ ನೀರಾಯಿತು ಎಂದಳು ನಾದಿನಿ ರಾಗದಲಿ
ಯಾರಿಗೆ ಎನ್ನಲು ಹರುಷದಲಿ
ಪದುಮಳು ಬಂದಳು ಹೂವನು ಮುಡಿಯುತ ರಾಯರ ಕೋಣೆಯಲಿ..

(ಮಾವ ಶಾನುಭೋಗರ ಮನೆಗೆ ಬರುವ ಅಳಿಯ ಮಂಜುನಾಥ ಪದ್ಮಳನ್ನು ಕಾಣದೆ ತಹತಹಿಸುವುದು. ಮಾವ ಹಾಗು ನಾದಿನಿಯರು ಉಪಚರಿಸುವುದು. ಇಂತಹ ಚಿತ್ರಿಕೆಗಳ ಸಮೂಹದೊಂದಿಗೆ ನವಿರಾದ ದಾಂಪತ್ಯ ಗೀತೆಯೊಂದು ಅನಾವರಣಗೊಳ್ಳುತ್ತದೆ)

## ದೃಶ್ಯ–42

*ಹಗಲು – ಶಾನುಭೋಗರ ಮನೆಯ ಒಳಗೆ*

(ಮಂಜುನಾಥನ ಕಲ್ಪನಾ ಕಥೆಯನ್ನು ಕೇಳಿದ ಪದ್ಮ ಹೊಟ್ಟೆ ಹುಣ್ಣಾಗುವಂತೆ ನಗುತ್ತಿರುತ್ತಾಳೆ)

ಪದ್ಮ : (ನಗುತ್ತ) ತುಂಬಾ ಚೆನ್ನಾಗಿದೆ ನಿಮ್ ಕಥೆ.

ಮಂಜುನಾಥ : ಆಮೇಲೇನಾಯ್ತು ಗೊತ್ತ?

ಪದ್ಮ : ಏನಾಯ್ತು?

ಮಂಜುನಾಥ : ಪದ್ಮ ಹೂ ಮುಡೀತಾ ಬಂದ್ಳಾ?

ಪದ್ಮ : ಬಂದ್ಳು

ಮಂಜುನಾಥ : ಅವ್ಳಗಂಡ ಏಳ್ತಾನೆ. ಹತ್ತಿರ ಬರ್ತಾನೆ. ಅವ್ಳ್ ಕೆನ್ನೆ ಮುಟ್ತಾನೆ
(ಎಂದು ಅವಳ ಕೆನ್ನೆಯನ್ನು ಮುಟ್ಟುತ್ತಾನೆ. ಪದ್ಮ ಯಾರಾದರೂ ನೋಡಿದರೆ ಎನ್ನುವ ರೀತಿ ಸಂಕೋಚ ಪಡುತ್ತಾಳೆ. ಮಂಜುನಾಥ ಆಕೆಗೆ ಮುತ್ತನ್ನಿಡುತ್ತಾನೆ)

ಪದ್ಮ : ನಿಮ್ಗನೇಸ್ ಹೊತ್ತು ಗಿತ್ತು ಏನು ಇಲ್ವಾ?

ಮಂಜುನಾಥ : ಕವಿಗಳಿಗೆ ಹೊತ್ತು ಗಿತ್ತು ಎಲ್ಲ ಎಲ್ಲಿರುತ್ತೆ?

ಪದ್ಮ : (ಅಣಕಿಸುವಂತೆ)
ಓಹೋಹೋ ಕವಿಗಳೇ ನಿಮ್ಗ ಹೊತ್ತುಗೊತ್ತು ಇಲ್ದೇ ಇರ್ಬಹುದು. ಆದ್ರೆ ನಮಗಿದೆ ಗೊತ್ತಾಯ್ತ...
(ಎಂದು ಮಾತನಾಡಿಕೊಳ್ಳುವಾಗ ಶಾನುಭೋಗರು ಪ್ರವೇಶ ಮಾಡುತ್ತಾರೆ. ಬಂದು ತಾನು ಬಂದಿದ್ದೇನೆಂದು ಶಬ್ದ ಮಾಡುತ್ತಾರೆ. ಅಪ್ಪ ಬಂದಿದ್ದು ಗೊತ್ತಾಗಿ ಪದ್ಮ ಕಂಬದ ಮರೆಯಲ್ಲಿ ಅಡಗಿ ನಿಲ್ಲುತ್ತಾಳೆ, ಮಂಜುನಾಥ ಅಲ್ಲಿಯೇ ತಲೆತಗ್ಗಿಸಿ ನಿಲ್ಲುತ್ತಾನೆ. ಶಾನುಭೋಗರು ಮಂಜುನಾಥನನ್ನು ನೋಡುತ್ತ)

ಶಾನುಭೋಗ : ಓಹೋಹೋ ರಾಯ್ರು, ಯಾವಾಗ್ಬಂದ್ರಿ? ಮೂರ್ ದಿವ್ಸದ್ ಮೇಲಾದ್ರು ಮನೆ ದಾರಿ ಗೊತ್ತಾಯ್ತಲ್ಲ.

ರಾಘವ : ಅದೂ ರಾಘವ ಬಂದಿದ್ರು. ಸಂಜೆ ಒಳ್ಗೆ ಹೋಗ್ಬರೋಣಾಂತ.

ಶಾನುಭೋಗ : ಹ್ಞಾಂ ಅವ್ರು ಬನ್ನಿ ಅಂದ್ರು ನೀವು ಹೋದ್ರಿ, ಇಲ್ಲಿ ಕಣ್ಣಲ್ ಎಣ್ಣೆ ಬಿಟ್ಕೊಂಡ್ ಕಾಯ್ತಾಯಿರ್ತಾರೆ ಅನ್ನೋದು ನೆನಪಿಗೇ ಬರ್ಲಿಲ್ಲ. ನಿಮ್ಗೂ ಒಬ್ಳು ಹೆಂಡ್ತಿ ಇದ್ದಾಳೆ, ಸಂಸಾರ ಇದೆ ಅನ್ನೋದು ಮೂರೇ ತಿಂಗ್ಳಲ್ಲೇ ಮರ್ತ್ ಹೋಗ್ಬಿಡ್ತು. ಆ ಚಳುವಳಿ ಪಳುವಳಿನೆಲ್ಲ ಮನೆ ಮಠ ಇಲ್ದಿದ್ದೋರಿಗ್ ಬಿಟ್ಕೊಟ್ಬಿಡಿ. ನಮ್ಮಂಥವ್ರಿಗೆ ಹೇಳಿದ್ದಲ್ಲ ಅದು.

ಮಂಜುನಾಥ : ತಪ್ಪ್ ತಿಳ್ಕೊಂಡಿದಿರ ಮಾವಯ್ಯ. ಜೈಲಲ್ ಸೇರಿದ್ದ ಅಷ್ಟೋಂದ್ ಜನ ಮನೆ–ಮಠ ಇದ್ದೋರೆ. ಅವ್ರು ದೇಶಕ್ಕಾಗಿ ಎಲ್ಲಾನು ಬಿಟ್ರು.

ಶಾನುಭೋಗ : ತಮ್ಮ ತಮ್ಮ ಮನೇನೆ ಸರಿಯಾಗಿ ನೊಡ್ಕೊಳ್ದೇ ಇದ್ದೋರು ಇನ್ ದೇಶ ಏನ್ ನೋಡ್ಕೊತಾರೆ. ಸ್ವಾತಂತ್ರ್ಯ ಅಂತೆ ಸ್ವಾತಂತ್ರ್ಯ.
(ಅಸಹನೆಯಿಂದ ಹೇಳುತ್ತಾನೆ. ನಂತರ ತನ್ನ ಮಗಳಿಗೆ)
.. ಪದ್ಮ, ಅಲ್ಲಿ ತೋಟ್ದಲ್ಲಿ ಅಡ್ಕೆ ಗೊನೆ ಇಳಿಸ್ತಾಯಿದಾರೆ. ನಾನ್ ಹೋಗ್ಬೇಕು. ಊಟಕ್ಕೆ ನನಿಗ್ ಕಾಯ್ಬೇಡ
(ಎಂದು ಒರಟಾಗಿ ಹೇಳುತ್ತ ಹೊರಟುಹೋಗುತ್ತಾನೆ. ಆಗ ಪದ್ಮ, ಮಂಜುನಾಥನ ಹತ್ತಿರ ಬಂದು;)

ಪದ್ಮ : ಅಪ್ಪಯ್ಯ ಪ್ರೀತಿಗ್ ಹಾಗೆಲ್ಲ ಅಂತಾರೆ. ಅದನ್ನೆಲ್ಲ ಮನ್ಸಿಗ್ ಹಚ್ಕೋಬೇಡಿ. ಬನ್ನಿ
(ಎಂದು ಕೈ ಹಿಡಿಯುತ್ತಾಳೆ. ಆದರೆ ಮಂಜುನಾಥ ಸಮಾಧಾನಗೊಳ್ಳದವನಂತೆ ಅವಳ ಕೈಯನ್ನು ಬಿಡಿಸಿಕೊಳ್ಳುತ್ತಾನೆ. ಮತ್ತೆ ಪದ್ಮ ಪ್ರೀತಿಯಿಂದ)
.. ಬನ್ನಿ
(ಎಂದಾಗ ಮಂಜುನಾಥ ಸಣ್ಣಗೆ ನಗುತ್ತ ಪದ್ಮಾಳ ಜೊತೆ ಹೋಗುವನು)

**ನಿರ್ದೇಶಕರ ಟಿಪ್ಪಣಿ:**

ಈ ದೃಶ್ಯ ಚಳುವಳಿಯ ಬಿಸಿ ಬಹಳ ಏರುತ್ತಾಯಿದ್ದ ಕಾಲ ಹೇಗೆ ಇಡೀ ಭಾರತ ದೇಶ ತನ್ನದೇ ಆದಂತಹ ದನಿಯೊಂದಿಗೆ ಬ್ರಿಟೀಷರ ವಿರುದ್ಧ ತಮಗೆ ಸಿಕ್ಕಂತಹ ಅಲ್ಪ ಸ್ವಲ್ಪ ಅವಕಾಶಗಳನ್ನೇ ಬಳಸಿಕೊಳ್ಳುತ್ತ ಚಳುವಳಿಯನ್ನು ತೀವ್ರಗೊಳಿಸುತ್ತಿದ್ದಂತಹ ಸಮಯವನ್ನು ಇಲ್ಲಿ ಬಿಂಬಿಸಲಾಗಿದೆ. ನಾಗರಹಾವೇ ಹಾವೊಳು ಹೂವೇ ಈ ಪದ್ಯದ ಒಳಾರ್ಥವನ್ನು ಪ್ರೇಕ್ಷಕನಿಗೆ ಗೊತ್ತಾಗುವ ಹಾಗೆ ಮಾಡುವಂತಹ ಸಂದರ್ಭ ಕೂಡ ಇದು. ಬ್ರಿಟೀಷರನ್ನು ಎರೆಡು ತಲೆಯ ಹಾವು ಎಂದು ಸೂಚ್ಯವಾಗಿ ಹೇಳಿದ ಈ ಕವನವನ್ನು ಅಂದು ಹೇಗೆ ಬಳಸಲಾಗಿತ್ತು ಎಂಬುದನ್ನು ವಿವರಿಸುತ್ತ ದೃಶ್ಯವನ್ನು ಕಲ್ಪಿಸಲಾಗಿದೆ. ಹೀಗೆ ಕವಿ, ಕಾವ್ಯ ಮತ್ತು ಆಶಯ ಆಯಾ ಕಾಲಘಟ್ಟದಲ್ಲಿ ಹೇಗೆ ಸಾಮಾಜಿಕವಾಗಿ ತನ್ನ ಪರಿವರ್ತನೆಯ ಕಾರ್ಯಗಳನ್ನು ಮಾಡುತ್ತಾ ಇತ್ತು ಅನ್ನುವುದನ್ನು ಕೂಡ ಇಲ್ಲಿ ಗಮನಿಸಬಹುದು. ಮಂಜುನಾಥ ಹಾಗೂ ರಾಘವರ ಭೇಟಿ ಮಂಜುನಾಥನ ಬದುಕಿನಲ್ಲಿ

ಇನ್ನೊಂದು ತಿರುವಿಗೆ ಎಡೆಮಾಡಿಕೊಡುತ್ತದೆ. ಚಳುವಳಿಯ ಮುಂಚೂಣಿಯಲ್ಲಿದ್ದ ರಾಘವೇಂದ್ರನನ್ನು ಮಂಜುವಿಗೆ ಪರಿಚಯಿಸುವುದರ ಮುಖಾಂತರ ಅವರ ಕಾರ್ಯಾಚರಣೆ ಏನು, ಅವರ ಕಾರ್ಯೋನ್ಮುಖರಾದಂತಹ ರೀತಿ ಏನು? ವ್ಯವಸ್ಥೆ ಏನು? ಇವುಗಳನ್ನು ಪ್ರೇಕ್ಷಕನಿಗೆ ಪರಿಚಯಮಾಡುತ್ತ ಹಾಗೆಯೇ ಸಂಜೆಯ ಒಳಗೆ ಮನೆ ತಲುಪಲಿದ್ದ ಮಂಜು ಅಲ್ಲಿ ಪೋಲೀಸರಿಂದ ಬಂಧಿಯಾಗಿ ನಂತರ ಮೂರನೇ ದಿನ ಕ್ಷಮಾದಾನವನ್ನು, ಎಚ್ಚರಿಕೆಯನ್ನು ಪಡೆದು ಬಿಡುಗಡೆಯಾಗುವವರೆಗೆ ಮೂರುದಿನಗಳ ಪ್ರಕರಣ ನಡೆದು ಹೋಗುತ್ತದೆ. ಇದರಿಂದಾಗಿ ಮಂಜು ಚಳುವಳಿಯ ಮುಖ್ಯ ವಾಹಿನಿಯಲ್ಲಿ ತನ್ನನ್ನು ತಾನು ತೊಡಗಿಸಿಕೊಂಡಂತಾಗುತ್ತದೆ. ಆದರೆ ಅವನ ಕವಿ ಹೃದಯ ತನ್ನದೇ ಆದಂತಹ ವಿಶಿಷ್ಟವಾದ ಕಾವ್ಯನಿಧಿಯನ್ನು ಅಥವಾ ಕವಿ ಸಮಯವನ್ನು ತನ್ನದಾಗಿಸಿಕೊಳ್ಳುತ್ತದೆ ಇಂಥಹ ಪ್ರಕರಣ ನಡೆದ ಮೇಲೂ ಕೂಡ. ಈ ರೀತಿಯ ಪೀಠಿಕೆಯೊಡನೆ ಪ್ರಾರಂಭವಾಗುವ ಕವನದ ಸಾಲುಗಳು ರಾಯರು ಬಂದರು ಮಾವನ ಮನೆಗೆ. ಮೂರು ದಿನಗಳ ನಂತರ ರಾಯರು ಮಾವನ ಮನೆಗೆ ಹೊರಟಿದ್ದಾರೆ. ನಿಜವಾದ ಮಾವನ ಮನೆಯ ಕಡೆಗೆ. ಈ ಕವನದ ಸಾಲುಗಳೂ ಕೂಡ ಕನ್ನಡ ಸಾರಸ್ವತ ಲೋಕವನ್ನು ಬಹಳಷ್ಟು ಪ್ರಭಾವಶಾಲಿಯಾಗಿ ಆವರಿಸಿಕೊಂಡಂತಹ ಕವನ. ಭಾವಗೀತೆಯ ಇತಿಹಾಸವನ್ನು ಬರೆಯುವಾಗ ಕಾಳಿಂಗರಾಯರ, ಮೈಸೂರು ಅನಂತ ಸ್ವಾಮಿಗಳ, ಸಿ. ಅಶ್ವಥರ ಸುಗಮ ಸಂಗೀತದ ಪರಂಪರೆಯನ್ನು ಹೇಳುವಾಗ ರಾಯರು ಬಂದರು ಮಾವನ ಮನೆಗೆ ತನ್ನದೇ ಆದಂತಹ ವಿಶಿಷ್ಟ ಮಜಲುಗಳನ್ನು ದಾಟಿಬಂದಿದೆ ಅನ್ನುವುದನ್ನು ನಾವು ಕಾಣುತ್ತೇವೆ. ಒಬ್ಬೊಬ್ಬ ಹಾಡುಗಾರನೂ ಅಂದರೆ ಕಾಳಿಂಗರಾಯರು, ಅನಂತ ಸ್ವಾಮಿ, ಅಶ್ವಥರು ಈ ಹಾಡಗಳನ್ನು ಸಂಯೋಜಿಸಿದಾಗ ಮತ್ತು ಹಾಡಿದಾಗ ಅವರ ಭಾವಭಿವ್ಯಕ್ತಿಯೇ ವಿಭಿನ್ನವಾಗಿ ವಿಶಿಷ್ಟವಾಗಿತ್ತು. ಇದನ್ನು ದಾಖಲಿಸಿ ಇದರ ಮುಖಾಂತರ ಕನ್ನಡ ಸಾರಸ್ವತಲೋಕ ತನ್ನದೇ ಆದಂತಹ ಅದ್ಭುತ ಕೊಡುಗೆಗಳನ್ನು ಈ ರೀತಿ ನಮ್ಮೊಡನೆ ಬಿಟ್ಟಿದೆ, ನಮ್ಮ ಬದುಕಿಗೆ ಹತ್ತಿರವಾಗಿಸಿದೆ ಎಂಬುದನ್ನು ಸಾಕ್ಷೀಕರಿಸುವುದು ಇಲ್ಲಿ ಬಹಳ ಮುಖ್ಯವಾಗಿತ್ತು ಅದನ್ನು ಮೈಸೂರು ಮಲ್ಲಿಗೆ ಸಾಧಿಸಿದೆ. ರಾಯರು ಬಂದರು ಮಾವನ ಮನೆಗೆ ಅಂತಹ ಒಂದು ದಾಂಪತ್ಯ ಗೀತೆಯನ್ನು ಸಂದರ್ಭೋಚಿತವಾಗಿ ಮಂಜುನಾಥ ಚಳುವಳಿಯ ಹಿನ್ನಲೆಯಲ್ಲಿದ್ದರೂ ಕೂಡ ತನ್ನ ಹೆಂಡತಿಯನ್ನು, ಕಾವ್ಯ ಜಗತ್ತನ್ನು ಮರೆಯದ ಹಾಗೆ ಮತ್ತೆ ಪ್ರತಿಬಿಂಬಿಸುತ್ತ ಆ ಹಾಡಿನ ಸಾಂಸ್ಕೃತಿಕ ಆಯಾಮವನ್ನು ಬಿಂಬಿಸುತ್ತ ಜೊತೆಯಲ್ಲೇ ಆ ಕಾಲಘಟ್ಟದ ನವಿರಾದ ದಾಂಪತ್ಯ ಮತ್ತು ಪ್ರೇಮ ಹಾಗೂ ಕಾಮ ಇವುಗಳ ವ್ಯತ್ಯಾಸವನ್ನು ವಿವರಿಸುತ್ತ ದೃಶ್ಯ ಕಟ್ಟಿಕೊಳ್ಳುವ ಬಗೆ ಹಾಡು ಮುಗಿದ ಕೂಡಲೆ ಅದರ ಆನಂದವನ್ನು ಸವಿಯುವುದು ಅಂತಹ ಸಂತೋಷದ ರಸಘಳಿಗೆಗಳ ಮಧ್ಯದಲ್ಲಿ ಶಾನುಭೋಗರು ಇತ್ಯಾತ್ಮಕವಾಗಿ ಬದುಕು ಮನೆ ಮಠ ಇಲ್ಲದವರಿಗೆ ಚಳುವಳಿ ಎನ್ನುವ ಮಾತಿನೊಂದಿಗೆ ಅವರಿಬ್ಬರಲ್ಲಿ ಬದುಕಿನ ವಿಭಿನ್ನ ದೃಷ್ಟಿಕೋನಗಳನ್ನು ಪ್ರತಿಬಿಂಬಿಸುತ್ತ ನಿಧಾನವಾಗಿ ಅವರಿಬ್ಬರಲ್ಲಿ ಒಂದು ಕಂದಕ ಇದೆ ಎಂಬುದನ್ನು ದೃಶ್ಯ ಕಟ್ಟಿಕೊಡುತ್ತದೆ. ಆದರೆ ಪದ್ಮ ಮತ್ತು ಮಂಜುನಾಥರ ಪ್ರೀತಿ ಅಗಾಧವಾಗಿರುತ್ತದೆ.



## ದೃಶ್ಯ–43


***ಹಗಲು – ಶಾನುಭೋಗರ ಮನೆಯ ಒಳಗೆ***

(ದೀಪದ ಬೆಳಕಿನಲ್ಲಿ ಕವಿತೆ ಬರೆಯಲು ಯೋಚಿಸುತ್ತ ಕುಳಿತಿರುವ ಮಂಜುನಾಥ)

ಮಂಜುನಾಥ : *ತಾಯಿಗೆ ಕಾಣಿಕೆ ರಕ್ತ..*
*ಧಾರೆ ಎರೆವವನೆ ಮುಕ್ತ..*


(ಸರಿಯಾಗಿ ಬರಲಿಲ್ಲವೆಂದು ಯೋಚಿಸುತ್ತ ಕುಳಿತಿರುವಾಗ ಅವನಿಗೆ ಪಾಟೀಲರ ಮಾತುಗಳು ನೆನಪಿಗೆ ಬರುತ್ತವೆ. ನಂತರ ಆ ಮಾತುಗಳಿಂದ ಪ್ರೇರೇಪಿತನಾದವನಂತೆ ಮತ್ತೆ ಬರೆಯಲು ಪ್ರಾರಂಭಿಸುತ್ತಾನೆ)

*ಕ್ರಾಂತಿ ಕಾಳಿಯ ಕರೆಗೆ, ಓ ಎನ್ನಿ ಬಂಧುಗಳೇ*
*ಹೊರಬನ್ನಿ ಕತ್ತಲೆಯ ಬಸಿರ ಸೀಳಿ*
*ಧೀನತೆಯನು ಹೂಳಿ, ಕಣ್ಣಲ್ಲಿ ಕೆಂಗಿಳಿ ತಾಳಿ*
*ತಾಯಿ ಭಾರತೆಗೆ ಜಯಕಾರ ಹೇಳಿ*
*ಕ್ರಾಂತಿ ಕಾಳಿಯ ಕರೆಗೆ, ಓ ಎನ್ನಿ ಬಂಧುಗಳೇ*
*ಹೊರಬನ್ನಿ ಕತ್ತಲೆಯ ಬಸಿರ ಸೀಳಿ*



ಜಡತೆಯನು ಮೆಟ್ಟಿ, ಬಂಧನದ ಶೃಂಕಲ ಕುಟ್ಟಿ
ಹೊಸ ಹುಟ್ಟಿಗಾಗಿ ಪಣ ತೊಟ್ಟು ಬನ್ನಿ
ಹೊಸ ಹುಟ್ಟಿಗಾಗಿ ಪಣ ತೊಟ್ಟು ಬನ್ನಿ.
ಇದೋ ದೇಹ, ಇದೋ ಹೃದಯ
ಇದು ಕೊಟ್ಟ ಮಾತೆನುತ
ಸ್ವಾರ್ಥವನು ಬಿಟ್ಟು, ಮನವಿಟ್ಟು ಬನ್ನಿ.

(ಹೀಗೆ ಬರೆಯುತ್ತಿರುವಾಗ ಪದ್ಮ ಬಂದು ಮಂಜುನಾಥನ ಪಕ್ಕದಲ್ಲಿ ಬಂದು ನಿಲ್ಲುತ್ತಾಳೆ. ಮಂಜುನಾತ ಕವಿತೆಯನ್ನು ಬರೆದು ಮುಗಿಸಿ ಅವಳಲ್ಲಿ ಅನುರಕ್ತನಾಗುತ್ತಾನೆ)



**ನಿರ್ದೇಶಕರ ಟಿಪ್ಪಣಿ:**
ಮಂಜುನಾಥನ ಕವನದ ಸಾಲುಗಳ ಕೂಡ ನರಸಿಂಹಸ್ವಾಮಿಯವರ ಕವನದ ಸಾಲುಗಳಂತೆ ಹೇಗೆ ಬದಲಾಯಿತು ಎಂಬುದನ್ನು ಇಲ್ಲಿ ಗಮನಿಸಬೇಕು. ನವಿರಾದ ಪ್ರೇಮಗೀತೆಗಳು, ದಾಂಪತ್ಯಗೀತೆಗಳು ನಿಧಾನವಾಗಿ ಆ ಕಾಲಘಟ್ಟಕ್ಕೆ ಹೊಂದಿದಂತಹ "ಕ್ರಾಂತಿಕಾರಿಯ ಕರೆಗೆ ಓಗೊಟ್ಟು ಬನ್ನಿ" ಇದು ನರಸಿಂಹಸ್ವಾಮಿಯವರ ಕವನ ಸಂಕಲನದಲ್ಲಿ ಬಂದಂತಹುದು. ಇದನ್ನೂ ಕೂಡ ಇಲ್ಲಿ ಬಳಸಲಾಗಿದೆ. ಕವಿ ಹೃದಯ ತನ್ನ ಕಾಲಮಾನದಲ್ಲಿ ನಡೆದಂತಹ ಸಾಮಾಜಿಕ ಪರಿವರ್ತನೆಯ ಜೊತೆಯಲ್ಲೇ ಹೇಗೆ ಕನ್ನಡಿಯಂತೆ ಕೆಲಸಮಾಡುತ್ತದೆ ಮತ್ತು ಅದರ ಜವಾಬ್ದಾರಿ ಏನು ಎಂಬುದನ್ನು ಅದು ನಿರ್ಧರಿಸುತ್ತದೆ. ಆದರೆ ಬದುಕು ಸಹನೀಯವಾಗುವುದು ದಾಂಪತ್ಯ ಕೂಡ ಸಮಾಧಾನವಾಗಿ ನಡೆದಾಗ. ಇಲ್ಲಿ ಈ ದೃಶ್ಯ ರೂಪಕ ಈ ರೀತಿಯ ವೈರುಧ್ಯದ ಭಾವಗಳನ್ನು ಒಟ್ಟಿಗೆ ಚಿತ್ರೀಕರಿಸುತ್ತ ಬೇರೆಯೇ ಆದಂತಹ ಒಂದು ಉಪಮೆಯೊಂದನ್ನು ರೂಪಕಗಳ ಜೊತೆಯಲ್ಲಿ ಸೃಷ್ಟಿಸಿದೆ.



## ದೃಶ್ಯ-44

*ಹಗಲು – ಶಾನುಭೋಗರ ಮನೆಯ ಹೊರಗೆ*

(ಶಾನುಭೋಗರು ತಮ್ಮ ವೃತ್ತಿಯ ಉಡುಪನ್ನು ಧರಿಸಿ ಜನರಿಗಾಗಿ ಕಾಯುತ್ತ ನಿಂತಿದ್ದಾರೆ. ನಂತರ ಚೆನ್ನಯ್ಯನ ಬಳಿಗೆ ಬಂದು)

ಶಾನುಭೋಗ : ಬಾಕಿ ಇಸಾಲ್ ಕೊಡೋರ್ರನ್ನ ಬೇಗ್ ಕರ್ಕೊಂಡ್ಬಾರೋ ಅಂತ ಮಾದನ್ನ ಕಳ್ಸಿದ್ರೆ ಎಲ್ಲೋ ಪಟ್ಟಂಗ ಹೊಡೀತಿರ್ಬೇಕು. (ಆಕ್ರೋಶದಿಂದ ಹೇಳುತ್ತಾನೆ. ನಂತರ) .. ನೋಡಿ ಬಾರೋ ರಂಗ.
(ಆತನನ್ನು ಚೆನ್ನಯ್ಯ ತಡೆದು)

ಚೆನ್ನಯ್ಯ : ರಂಗ..
(ಶಾನುಭೋಗರನ್ನು ನೋಡುತ್ತ)
.. ಬರ್ತಾರ್ ಬುಡಿ ಸ್ವಾಮಿ. ದುಡ್ಡು-ಕಾಸು ಹೊಂದಿಸ್ಕಂಡ್ ಬರ್ಬೇಕಲ್ಲ.

ಶಾನುಭೋಗ : ನೀ ಏನೇ ಅನ್ನು ಚೆನ್ನಯ್ಯ. ಕಾಲ ಕೆಟ್ಹೋಯ್ತು. ಭಯ-ಭಕ್ತಿನೇ ಇಲ್ದಂಗ್ ಆಯ್ತು. ಏನ್ ಬಂದಿದೆ ಈ ಜನಕ್ಕೀವತ್ತೂಂತ.
(ತನ್ನ ಕೆಲಸದಲ್ಲಿ ನಿರತರಾಗುತ್ತಾರೆ)

## ದೃಶ್ಯ-45

*ಹಗಲು - ನದಿ ದಂಡೆ*
*(ಪರ್ಯಾಯ ದೃಶ್ಯ)*

(ನದಿ ದಂಡೆಯ ಬಳಿ ಜನರು ಮಂಜುನಾಥನ ಬಳಿ ಮಾತನಾಡುತ್ತಿದ್ದಾರೆ.)

ವ್ಯಕ್ತಿ1 : ಕಂದಾಯ ಕಟ್ಟಿಲ್ಲ ಅಂದ್ರೆ ಬಿಡ್ತಾರ ಸ್ವಾಮಿ ನಮ್ಮನ್ನ.

ವ್ಯಕ್ತಿ2 : ಮನೇನ ಜಪ್ತಿ ಮಾಡುಸ್ತಾರೆ. ಎಮ್ಮೆ ಎತ್ತುಗಳ್ನ ಹರಾಜಾಕಿಸ್ತಾರೆ.

ಮಂಜುನಾಥ : ಹರಾಜಾಕಿದ್ರೆ ಕೂಗಿ ಕೊಳ್ಳೋರ್ ಬೇಕಲ್ಲ. ಇನ್ನು ಎತ್ತು, ಎಮ್ಮೆ ಎಷ್ಟೂಂತ ಜಪ್ತಿ ಮಾಡ್ತಾರೆ. ಹಿಡ್ಕೊಂಡ್ಹೋಗಿ ಏನ್ಮಾಡ್ತಾರೆ? ನೀವೆಲ್ಲ ಒಂದಾಗಿದ್ರೆ ಯಾರೂ ಏನೂ ಮಾಡಕ್ಕಾಗಲ್ಲ. ಧೈರ್ಯವಾಗಿರಿ.

ವ್ಯಕ್ತಿ3 : ಆದ್ರೂ ಶಾನುಭೋಗ್ರುನ್ ಎದ್ರಾಕ್ಕೋಳೋದ್ ಅಂದ್ರೆ? (ಎಂದು ಪ್ರಶ್ನಾರ್ಥಕವಾಗಿ ಕೇಳಿದಾಗ)

ಮಂಜುನಾಥ : ನೋಡಿ ಇದು ಯಾರು ಯಾರನ್ನೂ ಎದ್ರಾಕ್ಕೊಳೋದ್ ಅಲ್ಲ. ಇಡೀ ದೇಶ್ದಲ್ಲೇ ಹೀಗಾಗ್ತಿರ್ಬೇಕಾದ್ರೆ ಒಬ್ಬಿಗೋಸ್ಕರ ನಿಲ್ಲೋಲ್ಲ ಇದು. ನಡೀರಿ ಈ ವಿಷಯಾನ ಅವ್ರಿಗೆ ತಿಳ್ಸಿ ಹೇಳಿದ್ರೆ ಅವ್ರರ್ಥ ಮಾಡ್ಕೋತಾರೆ. ನಡಿರಿ.

ವ್ಯಕ್ತಿ3 : ಇವ್ರ ಹೇಳೋದ್ರಾಗು ಏನೋ ವಿಷಯ ಐತಪ್ಪ. (ಎಲ್ಲರೂ ಅಲ್ಲಿಂದ ಹೊರಡುತ್ತಾರೆ)



## ದೃಶ್ಯ-46

*ಹಗಲು - ಶಾನುಭೋಗರ ಮನೆಯ ಒಳಗೆ*

(ಜನರು ತಮ್ಮ ತಮ್ಮಲ್ಲೆ ಮಾತನಾಡಿಕೊಳ್ಳುತ್ತ ಶಾನುಭೋಗರ ಮನೆಗೆ ಬಂದು ಅವರ ಮುಂದೆ ನಿಲ್ಲುತ್ತಾರೆ. ಎಲ್ಲರನ್ನು ಗಮನಿಸಿ ಶಾನುಭೋಗರು)

ಶಾನುಭೋಗ : ಕರೆ ಕಳ್ಸಿ ಕಾಯ್ತಾ ಇರ್ಬೇಕೇನ್ರಯ್ಯ? ಅಮಲ್ದಾರ್ರು ಜಮಾಬಂದಿಗ್ ಬರ್ತಾರೆ, ಎಲ್ಲ ಕಂದಾಯ ತಂದ್ಕೊಡ್ಬೇಕು ಅಂತ ಹೇಳಿರ್ಲಿಲ್ಲ?

ವ್ಯಕ್ತಿ1 : ಹೇಳಿದ್ದೀರಿ ಸ್ವಾಮಿ, ಆದ್ರೆ ಕೊಡ್ಬೇಕಾದ್ರೆ ನಮ್ತಾವ ಇರ್ಬೇಕಲ್ಲ.?

ಶಾನುಭೋಗ : (ಚೆನ್ನಯ್ಯನತ್ತ ನೋಡಿ)
ಚೆನ್ನಯ್ಯ, ಪ್ರತೀ ವರ್ಷದ ಮಾತು. ಆದ್ರೆ ಈ ಸಲ ಮಾತ್ರ ಅವರ ದನೀನೆ ಬದ್ಲಾಗಿದೆ ನೋಡು. ನೀವು ಹಂಗಂದ್ರೆ ಸರ್ಕಾರದವ್ರು ಬಿಡ್ಬೇಕಲ್ಲ? ಮನೆ ಜಪ್ತಿ ಮಾಡಿಸ್ತಾರೆ, ಜಮೀನ್ ಹರಾಜಾಕ್ತಾರೆ.

ವ್ಯಕ್ತಿ2 : ಅವ್ರೇನ್ಬೇಕಾದ್ರು ಮಾಡ್ಲಿ. ಕಂದಾಯ ಕೊಡಕ್ಕಾಗಕ್ಕಿಲ್ಲ.

ಶಾನುಭೋಗ : ಯಾವನೋ? ಯಾವನೋ ಅಂಗಂದವ್ನು. ಹೇ ರಂಗ ಕಟ್ಹೋ ಆ ನನ್ ಮಗನ್ನ ಕಂಬಕ್ಕೆ.
(ರಂಗ, ಒಬ್ಬನನ್ನು ಹಿಡಿಯಲು ಮುಂದಾದಾಗ ಜನರೆಲ್ಲರು ರಂಗನನ್ನು ತಡೆದು ಅವನಿಗೆ ಬೆದರಿಕೆಯನ್ನು ಹಾಕುತ್ತಾರೆ. ಇದನ್ನು ಕಂಡು ಶಾನುಭೋಗರು ಅವಾಕ್ಕಾಗುತ್ತಾರೆ. ಅದೇ ಸಮಯಕ್ಕೆ ಮಂಜುನಾಥ ಅಲ್ಲಿಗೆ ಬರುವುದನ್ನು ನೋಡಿ ಈತನೇ ಇದಕ್ಕೆಲ್ಲ ಕಾರಣ ಎಂಬ ನಿರ್ಧಾರಕ್ಕೆ ಬಂದು)
.. ಓ ತಮ್ದೋ ಈ ಚಿತಾವಣೆ.

ವ್ಯಕ್ತಿ1 : ಶ್ಯಾನ್ಭೋಗ್ರೆ ಏನ್ ಹೇಳದಿದ್ರು ನಮ್ಗೇಳಿ.
(ಜನರೆಲ್ಲರು ಹೌದು ಹೌದು ಎಂದು ಶಾನುಭೋಗರ ಮೇಲೆ ಹೌಹಾರುತ್ತಾರೆ.)

ಶಾನುಭೋಗ : ನಾನೇನ್ ಹೇಳ್ಬೇಕು, ಯಾರಿಗ್ ಹೇಳ್ಬೇಕು, ನೀವ್ ಹೇಳೋ ಹಾಗಾಯ್ತ? ಇಲ್ಕೇಳಿ, ಮರ್ಯಾದಿಯಾಗಿ ಕಂದಾಯ ಕೊಡ್ತೀರೋ ಇಲ್ವೋ?

ಜನರು : (ಆಕ್ರೋಶದಿಂದ) ಇಲ್ಲ ಇಲ್ಲ ಕೊಡಾಕಿಲ್ಲ.
(ಮಂಜುನಾಥ ಮಧ್ಯ ಪ್ರವೇಶಿಸಿ)



ಮಂಜುನಾಥ : ಮಾವ ದುಡುಕ್ಬೇಡಿ. ಪರಿಸ್ಥಿತಿ ಅರ್ಥ ಮಾಡ್ಕೊಳಿ. ಇಡೀ ದೇಶ್ದಲ್ ಆಗ್ತಾಯಿರೋದೆ ಇಲ್ಲೂ ಆಗ್ತಾಯಿದೆ.

ಶಾನುಭೋಗ : ಏನಾಗ್ತಾಯಿದೆ? ಮಾವ ಅಂತೆ ಮಾವ. ನಾನಿನ್ ಮಾವನೂ ಅಲ್ಲ, ನೀ ನನ್ ಅಳಿಯನೂ ಅಲ್ಲ.

(ಜನರತ್ತ ಕೈ ತೋರಿಸಿ)

.. ಇವ್ರಿಂದ ಉಗ್ಸ್ಕೊಂಡಿದ್ದೇ ಸಾಕು. ಈಗ್ ನಿನ್ನಿಂದ ಏನು ಕೇಳ್ಬೇಕಾಗಿಲ್ಲ. ಇದಕ್ಕೇನ್ ಮಾಡ್ಬೇಕು ನನಿಗ್ ಗೊತ್ತು.

ಜನರು : ಭಾರತ್ ಮಾತಾ ಕೀ

ಜನರು : ಜೈ..

(ಎಂದು ಘೋಷಣೆ ಕೂಗಿದಾಗ ಶಾನುಭೋಗರು ಬೆಪ್ಪಾಗಿ ಹೊರಟುಹೋಗುತ್ತಾರೆ. ಜನರು ಘೋಷಣೆಗಳನ್ನು ಕೂಗುವುದನ್ನು ಮುಂದುವರೆಸುತ್ತಾರೆ)



# ದೃಶ್ಯ–47

*ಹಗಲು – ಶಾನುಭೋಗರ ಮನೆಯ ಹೊರಗೆ*

(ಶಾನುಭೋಗರ ಮನೆಯಿಂದ ಕಬ್ಬಿಣದ ಪೆಟ್ಟಿಗೆಯೊಂದು ಹೊರಗಡೆ ಬೀಳುತ್ತದೆ. ಮನೆ ಒಳಗಡೆಯಿಂದ ಶಾನುಭೋಗರು ಕುಪಿತರಾಗಿ ಮಂಜುನಾಥನ ಸಾಮಾನುಗಳನ್ನೆಲ್ಲ ಹೊರಗೆ ಎಸೆಯುತ್ತಿದ್ದಾರೆ)

ಶಾನುಭೋಗ : ಹಾಲ್ತಂದು ಹಾವಿಗೆರ್ದಂಗಾಯ್ತು. ಇವನ್ನ ಮನೇಲ್ ಇಟ್ಕೊಂಡು ಮಗ್ಳನ್ ಕೊಟ್ಟೆ. ನನಿಗೇ ನನಿಗೇ ಬುದ್ಧಿ ಹೇಳೋಕ್ ಬರ್ತಾನೆ. ಊರ್ ಜನಾಕ್ಕ ದೊಡ್ಡ ಬೋರೇಗೌಡ ಆಗ್ಬೇಕು, ಮನೇಲ್ ಇದ್ದೋರು ಏನಾದ್ರು ಸರಿ.

(ಪದ್ಮ ಬಂದು ತಂದೆಯನ್ನು ತಡೆಯುತ್ತಾಳೆ)

ಪದ್ಮ : ಅಪ್ಪಯ್ಯ, ಯಾಕ್ ಹೀಗೆಲ್ಲ ಆಡ್ತಿದಿರ? ಇವತ್ತೇನಾಗಿದೆ ನಿಮ್ಗೆ?

ಶಾನುಭೋಗ : ದೆವ್ವ, ದೆವ್ವ ಹಿಡ್ದಿದೆ. ಹಟ ಮಾಡಿ ಅವನನ್ನ ಮದ್ವೆ ಮಾಡ್ಕೊಂಡೆ ಈಗದ್ರ ಪಾಪ ತೊಳ್ಕೊತಿದಿನಿ.

ಪದ್ಮ : ಅವ್ರೇನ್ಮಾಡುದ್ರು ಅಂತ ಹೀಗ್ಮಾಡ್ತಿದಿರ? ಈಗೇನಾಯ್ತು?


ಶಾನುಭೊಗ : ಹಳ್ಳಿಯಲ್ ನನ್ ಮಾನ ಮೂರ್ ಕಾಸಿಗ್ ಹರಾಜಾಗ್ಹೋಯ್ತು. ತಾತ–ಮುತ್ತಾತನ ಕಾಲ್ದಿಂದ ಈ ಊರಾಳ್ತಾಬಂದ್ ನಾವು ಮನೆ ಅಳಿಯನಿಂದ ತಲೆ ತಗ್ಗಿಸ್ಬೇಕಾಯ್ತು.

ಪದ್ಮ : ಕೋಪ ಮಾಡ್ಕೋಬೇಡಿ ಅಪ್ಪಯ್ಯ. ಅವ್ರಿಗ್ ನಾನ್ ಬುದ್ಧಿ ಹೇಳ್ತಿನಿ.

ಶಾನುಭೋಗ : ನೀನು? ನೀನ್ ಬುದ್ಧಿ ಹೇಳ್ತೀಯ? ಆದ್ರೆ ಅದನ್ನ ಕೇಳೋ ಅಷ್ಟು ಮೂರ್ಖನ ಅವ್ನು. ಹೇಳ್ತಾಳಂತೆ. ಈವತ್ತೆರೆಡ್ರಲ್ ಒಂದ್ ಇತ್ಯರ್ಥ ಆಗ್ಲೇಬೇಕು. ಹೇಳ್ದಾಗ್ ಕೇಳ್ಕೊಂಡ್ ಇರೋ ಹಾಗಿದ್ರೆ ಇರ್ಲಿ, ಇಲ್ಲಾಂದ್ರೆ ಎಲ್ಲಾದ್ರು ಹಾಳಾಗ್ಹೋಗ್ಲಿ.

(ಎನ್ನುವಷ್ಟರಲ್ಲಿ ಮಂಜುನಾಥ ಅಲ್ಲಿಗೆ ಬರುತ್ತಾನೆ. ಶಾನುಭೋಗರು ಎಸೆಯುವ ಹಾಳೆಗಳು ಮಂಜುನಾಥನ ಮೇಲೆ ಬೀಳುತ್ತದೆ. ಮಂಜುನಾಥ ಬಂದಿದ್ದನ್ನು ಗಮನಿಸುವ ಶಾನುಭೋಗರು ಮತ್ತು ಪದ್ಮ

ಸುಮ್ಮನಾಗುತ್ತಾರೆ. ಮಂಜುನಾಥ ಮನೆಯ ಮೆಟ್ಟಿಲಿನ ಮೇಲೆ ಕಾಲಿಡುವ ಸಂದರ್ಭದಲ್ಲಿ ಶಾನುಭೋಗರು ಅವನನ್ನು ತಡೆದು;)



..ನಿಲ್ಲು, ಈ ಮೆಟ್ಟಿಲು ಹತ್ತೋಕ್ಮುಂಚೆ ನಿನ್ ಭವಿಷ್ಯಾನ್ ನಿರ್ಧರಿಸ್ಕೊಂಡ್ ಹೆಜ್ಜೆ ಇಡು.

| | | |
|---|---|---|
| ಮಂಜುನಾಥ | : | (ಆಘಾತದಿಂದ) ಮಾವಯ್ಯ..! |
| ಶಾನುಭೋಗ | : | ಮಾವಯ್ಯ ಅಂತೆ ಮಾವಯ್ಯ. ಊರ್ ಜನ್ರ ಮುಂದೆ ಸತ್ಹೋದ ಇವ್ನು. |
| ಪದ್ಮ | : | (ಓಡಿ ಬಂದು ತಂದೆಯನ್ನು ಸಾವಧಾನಿಸುವಂತೆ) ಅಪ್ಪಯ್ಯ.. |
| ಮಂಜುನಾಥ | : | ಹಾಗನ್ಬೇಡಿ ಮಾವಯ್ಯ. ದೇಶಕ್ ದೇಶಾನೆ ಹತ್ತಿ ಉರಿತಿರ್ಬೇಕಾದ್ರೆ ನಾನ್ ಹ್ಯಾಗ್ ಸುಮ್ನಿರ್ಲಿ? |
| ಶಾನುಭೋಗ | : | ಅದೆಲ್ಲ ಕಥೆ ಬೇಡ. ನಿನ್ ನಿರ್ಧಾರ ಹೇಳು. ಮನೇನಾ? ದೇಶಾನ? (ಪದ್ಮ ಅಪ್ಪನ ಮಾತುಗಳಿಂದ ವಿಚಲಿತಳಾಗುತ್ತಾಳೆ ಆಗ ಮಂಜುನಾಥ ನಗುತ್ತ) |
| ಮಂಜುನಾಥ | : | ನನ್ ನಿರ್ಧಾರ ಏನು ಅಂತ ನಿಮ್ಗೀಗಾಗ್ಲೇ ಗೊತ್ತಾಗಿರ್ಬೇಕಲ್ಲ. (ಎಂದಾಗ ಶಾನುಭೋಗರು ಗಟ್ಟಿಮನಸ್ಸಿನವರಂತೆ) |
| ಶಾನುಭೋಗ | : | ನಿನ್ನಿಷ್ಟ. ಇನ್ನೀ ದಿಕ್ಕಿಗೆ ತಲೆಹಾಕಿ ಕೂಡ ಮಲಗ್ಬೇಡ. |



| | | |
|---|---|---|
| ಪದ್ಮ | : | ಅಪ್ಪಯ್ಯ..! (ಎಂದು ಅಚ್ಚರಿಪಡುವಳು. ಮಂಜುನಾಥ ಪದ್ಮಾಳನ್ನು ದಿಟ್ಟಿಸಿ ನೋಡಿ ಹೊರಡಲು ಅನುವಾದಾಗ ಪದ್ಮ ಅವನನ್ನು ತಡೆಯಲು ಬರುತ್ತಿರುವಾಗ ಶಾನುಭೋಗರು) |
| ಶಾನುಭೋಗ | : | ಪದ್ಮ.. (ಅವಳನ್ನು ತಡೆಯುತ್ತಾರೆ. ಪದ್ಮ ಚಲಿಸದೆ ಅಲ್ಲೇ ನಿಂತಿರುವಾಗ ಮಂಜುನಾಥ ಕಣ್ಣ ಸನ್ನೆಯಲ್ಲಿ ಹೋಗು ಎನ್ನುವ ಸಂಜ್ಞೆಯನ್ನು ಮಾಡಿ ಹೊರಟುಹೋಗುತ್ತಾನೆ. ಶಾನುಭೋಗರ ತಮ್ಮ ಪಾಡಿಗೆ ತಾವು ಹೊರಡುತ್ತಾರೆ. ಪದ್ಮ ದುಃಖಿಸುತ್ತ ಅಳತೊಡಗುತ್ತಾಳೆ.) |



**ನಿರ್ದೇಶಕರ ಟಿಪ್ಪಣಿ:**

ಶಂಕರ ಪಾಟೀಲರೊಡನೆ ಜೈಲು ಸೇರಿದ್ದ ಮಂಜುನಾಥನ ಬದುಕಿನ ಗತಿ ಬದಲಾಗುತ್ತದೆ ಮತ್ತು ಚಳುವಳಿಯ ತೀವ್ರತೆ ಹೆಚ್ಚುತ್ತಾ ಹೋಗುತ್ತದೆ. ತನಗರಿವಿಲ್ಲದೆ ಮಂಜುನಾಥ ಒಂದು ನಿರ್ಧಾರದ ಕಡೆ ಬರುತ್ತಿದ್ದಾನೆ. ಚಳುವಳಿ ಅವನನ್ನು ಸೆಳೆಯ ತೊಡಗುತ್ತದೆ. ಭಾರತದ ಸ್ವಾತಂತ್ರ್ಯ ಸಂಗ್ರಾಮ ಈ ರೀತಿ ಹಲವು ಮನಸ್ಸುಗಳನ್ನು ಒಗ್ಗೂಡಿಸಿದಂತಹ ಒಂದು ಬೃಹತ್ ಪ್ರಕ್ರಿಯೆ. ಆ ಪ್ರಕ್ರಿಯೆಯಲ್ಲಿ ಮಂಜುನಾಥನು ತೊಡಗಿಕೊಳ್ಳುವಂತಹ ಪರಿಸ್ಥಿತಿಗಳು ಅವನೆದುರಿಗೆ ಬರುತ್ತವೆ. ಶಾನುಭೋಗರು ಅಮಲ್ದಾರರು ಜಮಾಬಂಧಿಗೆ ಬರುವುದರಿಂದಾಗಿ ಎಲ್ಲ ರೈತಾಪಿ ಜನರನ್ನು ಕಂದಾಯ ವಸೂಲಿಗಾಗಿ ಕರೆಯುತ್ತಾನೆ ಅತ್ತ ಮಂಜುನಾಥ ಅದೇ ರೈತರೊಡನೆ ಚಳುವಳಿಯ ದಿಕ್ಸೂಚಿಗಳನ್ನು ತಿಳಿಸತೊಡಗುತ್ತಾನೆ. ಇವರಿಬ್ಬರ ಮುಖಾಮುಖಿ ಹಳ್ಳಿಯವರ ಸಮ್ಮುಖದಲ್ಲೇ ನಡೆದಾಗ ದೇಶದ ಒಳಗಿನ ಅಧಿಕಾರ ಮತ್ತು ಅಧಿಕಾರೇತರ ಮುಖಾಮುಖಿಯಷ್ಟೇ

ಆಗುವುದಿಲ್ಲ ಅದು ಒಂದು ಕುಟುಂಬದ ಮುಖಾಮುಖಿಯೂ ಆಗುತ್ತದೆ. ಭಾರತವೇ ಒಂದು ಕುಟುಂಬವಾದರೆ ಇದು ಈ ರೀತಿಯ ರೂಪಕವನ್ನು ಸೃಷ್ಟಿಸುತ್ತದೆ. ಇದರ ನಂತರದ ದೃಶ್ಯದಲ್ಲಿ ಮಂಜುನಾಥನ ಎಲ್ಲ ಸಾಮಾಗ್ರಿಗಳನ್ನು ಹೊರಗೆ ಬಿಸಾಡುತ್ತಿರುವ ಶಾನುಭೋಗರು ಪದ್ಮಳ ಭವಿಷ್ಯವೇನು ಎನ್ನುವಂತೆ ಮಾತನಾಡತೊಡಗುತ್ತಾರೆ. ಮನೆಗೆ ಬಂದ ಮಂಜುನಾಥ ಮೆಟ್ಟಿಲೇರದೆ ತನ್ನ ನಿರ್ಧಾರವನ್ನು ದೇಶದ ಕಡೆ ತಿರುಗಿಸುತ್ತ ತಾನೂ ಹಿಂದಿರುಗುತ್ತಾನೆ. ಪದ್ಮಾಳ ಸ್ಥಿತಿ ಅತಂತ್ರವಾಗುತ್ತದೆ. ಮಂಜುನಾಥನ ಮುಖದ ಮೇಲೆ ಬಿಸಾಡಿದ್ದ ಅವನ ಕವನದ ಹಾಳೆಗಳು ಪದ್ಮಳ ಸುತ್ತ ಹರಡಿಕೊಂಡಿರುತ್ತದೆ. ಅದನ್ನು ಪದ್ಮಾಳ ತಂಗಿ ತುಂಗೆ ನಿಧಾನವಾಗಿ ಹೆಕ್ಕಿಕೊಳ್ಳತೊಡಗುತ್ತಾಳೆ. ಹಲವು ಕುಟುಂಬಗಳ (ಹಲವು ಸಹಸ್ರಾರು ಕಥೆಗಳನ್ನು ಕೇಳಿರುವ) ಈ ಸಾಮಾಜಿಕ ಬದ್ಧತೆ ಸ್ವಾತಂತ್ರ್ಯ ಸಂಗ್ರಾಮದ ಅಡಿಯಲ್ಲಿ ನಡೆದಂತಹ ಹಲವು ಉದ್ವಿಘ್ನ ಮನಸ್ಸುಗಳ ವೈರುದ್ಧದ ದಾಖಲಾತಿಗಳನ್ನು ನಾವು ಇಲ್ಲಿ ಸ್ಮರಿಸಬಹುದು. ಇಲ್ಲಿ ಶಾನುಭೋಗರಾಗಲೀ ಅಥವಾ ಮೇಷ್ಟರು ಮಂಜುನಾಥನಾಗಲೀ ತಮ್ಮ ತಮ್ಮ ಬದ್ಧತೆಯನ್ನು ಪ್ರಕಟಿಸಿದರೆ ಪದ್ಮಳಂತಹ ಮನಸ್ಸೊಂದು ಆ ಎರೆಡನ್ನೂ ಬಿಟ್ಟುಕೊಡಲಾರದಂತಹ ಪರಿಸ್ಥಿತಿಯಲ್ಲಿ ಒದ್ದಾಡುತ್ತದೆ ಎಂಬ ಚಿತ್ರಣವಿದೆ. ಕಟ್ಟುವ ಕ್ರಿಯೆಯನ್ನು ನೀವು ಗಮನಿಸಿದಾಗ ಸಂಭಾಷಣೆ ಬಹಳ ಕಡಿಮೆಯೇ ಇದ್ದು ಭಾವಾಭಿನಯ ಹಾಗೂ ಪರಿಕರಪೂರ್ವಕವಾದಂತಹ ದೃಶ್ಯಸೃಷ್ಟಿಯನ್ನು ಇಲ್ಲಿ ಕಾಣುತ್ತೇವೆ. ಇದೂ ಕೂಡ ಒಂದು ಕ್ಲಾಸಿಕಲ್ ಚಲನಚಿತ್ರದ ಪ್ರಯೋಗ ಅನ್ನುವುದನ್ನು ಪ್ರೇಕ್ಷಕರು ಮತ್ತು ಓದುಗರು ಗಮನಿಸಬೇಕು. ಸ್ವಾತಂತ್ರ್ಯ ಚಳುವಳಿಯ ಹಲವು ರೀತಿಯ ಅನುಷ್ಠಾನಗಳನ್ನು ಇಲ್ಲಿ ಹಲವು ರೀತಿಯಲ್ಲಿ ಅಳವಡಿಸಿಕೊಳ್ಳಲು ಪ್ರಯತ್ನಿಸಲಾಗಿದೆ. ನಿರಶನ, ಸತ್ಯಾಗ್ರಹ ಅಲ್ಲದೇ ಬೇರೆ ಬೇರೆ ರೀತಿಯಲ್ಲಿ ಅಂದಿನ ಕಾಲಮಾನದಲ್ಲಿ ನಡೆದಂತಹ ಹಲವು ವಿದ್ಯಮಾನಗಳನ್ನು ಎಷ್ಟು ಸಾಧ್ಯ ಅಷ್ಟು ಈ ಪಾತ್ರಗಳ ಮುಖಾಂತರ ಬಿಂಬಿಸಲಿಕ್ಕೆ ಸಾಧ್ಯವೂ ಮತ್ತು ಘಟನೆಗಳ ಮುಖಾಂತರ ಆ ಅರಿವನ್ನು ಮೂಡಿಸಲು ಸಾಧ್ಯವೋ ಅವುಗಳನ್ನು ಅಳವಡಿಸಿಕೊಳ್ಳಲಾಗಿದೆ. ಚಿತ್ರಕಥೆಯ ಒಟ್ಟಾರೆ ಸ್ವರೂಪದಲ್ಲಿ ಇದು ಒಂದು ರೀತಿಯ ರಾಷ್ಟ್ರೀಯ ಆಂದೋಲನವನ್ನು ಕಟ್ಟಿಕೊಡುತ್ತ ಅದರ ಜೊತೆಯಲ್ಲೇ ವೈಯಕ್ತಿಕ ಭಾವನೆಗಳು ಹೇಗೆ ನಲುಗಿ ಹೋಗುತ್ತವೆ ಮತ್ತು ಹೇಗೆ ಗೊಂದಲಮಯವಾಗುತ್ತದೆ ಎಂಬುದನ್ನು ಕೂಡ ಸೃಷ್ಟಿಸಲಾಗಿದೆ.



## ದೃಶ್ಯ–48

*ಹಗಲು – ಬಯಲು ಪ್ರದೇಶ*

(ಚಳುವಳಿಕಾರರೆಲ್ಲ ಸೇರಿ ವಿದೇಶಿ ಬಟ್ಟೆಗಳನ್ನು ಸುಟ್ಟುಹಾಕುತ್ತಿದ್ದಾರೆ.)

ಪಾಟೀಲರು : (ಪ್ರಮಾಣವನ್ನು ಮಾಡುತ್ತ)
ಇಂದಿನಿಂದ ನಾವು ಸ್ವದೇಶಿ ವಸ್ತ್ರಗಳನ್ನೇ ತೊಡುವುದು.

ಹಿಂಬಾಲಕರು : ಇಂದಿನಿಂದ ನಾವು ಸ್ವದೇಶಿ ವಸ್ತ್ರಗಳನ್ನೇ ತೊಡುವುದು.

ಪಾಟೀಲರು : ವಿದೇಶಿ ವಸ್ತ್ರಗಳನ್ನ ತೊಡುವುದಿಲ್ಲ.

ಹಿಂಬಾಲಕರು : ವಿದೇಶಿ ವಸ್ತ್ರಗಳನ್ನ ತೊಡುವುದಿಲ್ಲ.

ಪಾಟೀಲರು : ಸ್ವಾತಂತ್ರ್ಯವೇ ನಮ್ಮ ಗುರಿ.

ಹಿಂಬಾಲಕರು : ಸ್ವಾತಂತ್ರ್ಯವೇ ನಮ್ಮ ಗುರಿ.

ಪಾಟೀಲರು : ವಂದೇ..

ಹಿಂಬಾಲಕರು : ಮಾತರಂ

ಪಾಟೀಲರು : ವಂದೇ..

ಹಿಂಬಾಲಕರು : ಮಾತರಂ

ಪಾಟೀಲರು : ಮಹಾತ್ಮ ಗಾಂಧೀಕಿ..

ಹಿಂಬಾಲಕರು : ಜೈ

ಪಾಟೀಲರು : ಇಲ್ಕೇಳಿ. ನಾವು ಚಳುವಳಿ ಒಂದು ಘಟ್ಟ ತಲ್ಪೀವಿ. ಮಹಾತ್ಮ ಗಾಂಧಿಯವ್ರು ನಮ್ಗ ಕರೆ ಕೊಟ್ಟಾರ. ಸಂಪೂರ್ಣ ಸ್ವಾತಂತ್ರ್ಯವೇ ನಮ್ಮ ಗುರಿ. ಅದಕ್ಕಾಗಿ ನಮ್ಮ ಕಾರ್ಯಗಳನ್ನ ಬ್ಯಾರೆ ಬ್ಯಾರೆ ರೀತಿಗಳಲ್ಲಿ ನಾವು ನಡೆಸ್ಕೊಂಡ್ ಹೋಗ್ಬೇಕು. ಇದ್ ತಾ
(ಎಂದು ತನ್ನ ಪಕ್ಕದಲ್ಲಿ ಬಾವುಟವನ್ನು ಹಿಡಿದು ನಿಂತಿದ್ದ ವ್ಯಕ್ತಿಗೆ ಕೇಳುತ್ತಾರೆ.)
.. ಈ ಧ್ವಜ ನಮ್ಮ ಸ್ವಾತಂತ್ರ್ಯದ ಸಂಕೇತ. ನಮ್ಮ ಆಶೋತ್ತರಗಳ ಸಂಕೇತ. ಶ್ರೀನಿವಾಸ, ಪುರುಷೋತ್ತಮ, ರಾಘವ, ಮಂಜು
(ಎಂದು ಅವರವರಿಗೆ ಕೈ ತೋರಿಸುತ್ತ ಕರೆದು)
.. ಇಲ್ಲಿ ಬರ್‍ರಿ, (ಅವರು ಹತ್ತಿರ ಬಂದ ನಂತರ)
.. ನಾಳೆ ಬ್ರಿಟೀಷ್ ರಾಜನ ಹುಟ್ಟುಹಬ್ಬದ ದಿನ ಎಲ್ಲಾ ಸರ್ಕಾರಿ ಕಛೇರಿಗಳ ಮೇಲೆ ಅವರ ಧ್ವಜ ಹಾರಾಡ್ತವ. ಅದಕ್ಕ ಬದ್ಲು ಈ ನಮ್ಮ ಧ್ವಜ ಹಾರಾಡ್ಬೇಕು. ಈ ಜವಾಬ್ದಾರಿ ನಿಮ್ಮದು.

(ಎಂದು ಮಂಜುನಾಥನ ಕೈಗೆ ಆ ಬಾವುಟವನ್ನು ಕೊಡುತ್ತಾರೆ)
.. ನೀವ್ ಮೂರೂ ಜನ ಇವನ್ ಕೂಡ ಹೊರಡ್ರಿ.
(ಎಲ್ಲರತ್ತ ಕೈ ತೋರಿಸಿ)
.. ಉಳಿದವ್ರು ನಾಳೆ ಚಿತ್ತೂರಿನಾಗ್ ನಡೆಯೋ ಪ್ರಭಾತ್ ಪೇರಿಗೆ ಮೆರವಣಿಗೆಗೆ ಸಿದ್ಧತೆ ನಡೆಸ್ರಿ. ಯಾವ ಮುನ್ಸೂಚ್ನಾನೂ ಇಲ್ದೆ ಈ ಕಾರ್ಯ ಹಠಾತ್ತಾಗ್ ನಡದ್ಹೋಗ್ಬೇಕು. ನೀವಿನ್ನು ಹೊರಡ್ರಿ.
(ಬಾವುಟದೊಡನೆ ಮಂಜುನಾಥನ ಗುಂಪು ನಡೆಯುತ್ತದೆ)



## ದೃಶ್ಯ–49

*ಹಗಲು – ಜಿಲ್ಲಾಧಿಕಾರಿಗಳ ಕಛೇರಿಯ ಹೊರಗೆ*

(ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಅಧಿಕಾರಿಯೊಬ್ಬರು ಆಗಮಿಸಿದಾಗ ಪೋಲೀಸ್ ಪೇದೆಗಳೆಲ್ಲ ಅವರಿಗೆ ಗೌರವ ಸೂಚಿಸುತ್ತಾರೆ. ಅಧಿಕಾರಿಗಳು ಒಳಗೆ ಹೋದ ನಂತರ ಕಟ್ಟಡದ ಹೊರಗೆ ಶ್ರೀನಿವಾಸ, ಪುರುಷೋತ್ತಮ, ರಾಘವ, ಮಂಜುನಾಥ ಅಲ್ಲಿಗೆ ಬಂದು ಬಾವುಟವನ್ನು ಕಟ್ಟಡದ ಮೇಲೆ ಹಾರಿಸುವುದಕ್ಕೆ ಸಿದ್ಧತೆಯನ್ನು ನಡೆಸಿ ನಂತರ ಮಂಜುನಾಥ ಬಾವುಟವನ್ನು ತನ್ನ ಹೆಗಲ ಮೇಲೆ ಹಾಕಿಕೊಂಡು ಕಟ್ಟಡವನ್ನೇರುತ್ತಾನೆ. ಕಟ್ಟಡವನ್ನೇರಿ ಆಂಗ್ಲ ಬಾವುಟವನ್ನು ಕೆಳಗಿಳಿಸಿ ಕೇಸರಿ, ಬಿಳಿ ಮತ್ತು ಹಸಿರಿನ ಬಾವುಟವನ್ನು ಹಾರಿಸುತ್ತಾನೆ. ಶ್ರೀನಿವಾಸ, ಪುರುಷೋತ್ತಮ ಮತ್ತು ರಾಘವ ಮೂವರು ಕೆಳಗೆ ನೋಡುತ್ತಾ ನಿಂತಿರುತ್ತಾರೆ. ಧ್ವಜ ಹಾರಿಸಿದ ನಂತರ ಮಂಜುನಾಥ)

ಮಂಜುನಾಥ : ಭಾರತ್ ಮಾತಾಕೀ..

ಶ್ರೀನಿವಾಸ ಮತ್ತು ಪುರುಷೋತ್ತಮ : ಜೈ..
(ಎಂದಾಗ ಕೂಗಬೇಡಿರಿ ಎನ್ನುವಂತೆ ರಾಘವ ಅವರನ್ನು ತಡೆಯುತ್ತಾನೆ)

ಮಂಜುನಾಥ : ಭಾರತ್ ಮಾತಾಕೀ.. ಜೈ..
ಇನ್ಕಿಲಾಬ್ ಜಿಂದಾಬಾದ್
(ಜಯಕಾರ ಹಾಕುತ್ತಿರುವ ಮಂಜುನಾಥನನ್ನು ಪೋಲೀಸ್ ಪೇದೆಗಳು ನೋಡುತ್ತ ನಿಂತಿರುತ್ತಾರೆ ಆಗ ಅಧಿಕಾರಿ ಬಂದು)

ಅಧಿಕಾರಿ : ಕೆಳಗಿಳುಸ್ರೋ ಆ ಸೂಳೆ ಮಗನ್ನ
(ಎನ್ನುತ್ತಿದ್ದಂತೆ ಪೇದೆಗಳೆಲ್ಲ ಅವನನ್ನು ಹಿಡಿಯಲು ಓಡುತ್ತಾರೆ. ಶ್ರೀನಿವಾಸ, ಪುರುಷೋತ್ತಮ ಮತ್ತು ರಾಘವ ಪೋಲೀಸರು ಹೋಗುತ್ತಿರುವುದನ್ನು ನೋಡಿ ಭಯಭೀತರಾಗುತ್ತಾರೆ.)

ಪೋಲೀಸ್ : ಒದ್ದು ಕೆಳ್ಗಡೆ ಇಳ್ಸ್ರೋ. ಎಳ್ಕಂಡ್ ಬರ್ರೀ. ಬಾವುಟ ಹಾರಿಸ್ತಾನೆ ಸುವರ್ ಕೆ ಬಚ್ಚೆ. ಘೋಷಣೆ ಕೂಗ್ತಿರೇನೋ?
(ಎಂದು ಮಂಜುನಾಥನಿಗೆ ಹೊಡೆಯುತ್ತಿರುವುದನ್ನು

ನೋಡಿ ಶ್ರೀನಿವಾಸ ಅವನ ಬಳಿ ಓಡಲು ಪ್ರಯತ್ನಿಸಿದಾಗ ರಾಘವ ಅವನನ್ನು ತಡೆಯುತ್ತಾನೆ)
.. ಒದಿ ಸೂಳೆಮಗಂಗೆ, ಘೋಷ್ಣೆ ಕೂಗ್ತೀರೇನೋ? ಎಷ್ಟೋ ಕೊಬ್ಬು ನಿಮ್ಗೇ? ಬಾ ಇವತ್ತ್ ನಿನ್ ಚರ್ಮ ಸುಲೀತೀನ್ ಇವತ್ತು..
(ಹೊಡೆಯುತ್ತಿದ್ದರು ಮಂಜುನಾಥ ಘೋಷಣೆಯನ್ನು ಕೂಗುತ್ತಲೇ ಇರುತ್ತಾನೆ.)
.. ನಮ್ಮ ಕಛೇರಿ ಮೇಲತ್ತಿ ಭಾವುಟ ಹಾರುಸ್ತೀಯೇನೋ? ಎಷ್ಟೋ ಕೊಬ್ಬು ನಿಂಗೆ? ಸೂಳೆ ಮಗ್ನೆ ಚರ್ಮ ಸುಲೀತಿನಿ ಬಾ.
(ಎಂದು ಎಳೆದು ತರುತ್ತ ಮಂಜುನಾಥನಿಗೆ ಹೊಡೆಯುತ್ತ ಬಯ್ಯುತ್ತ ಜಿಲ್ಲಾಧಿಕಾರಿಯ ಮುಂದೆ ಕರೆತರುತ್ತಾನೆ. ಕೆಳಗೆ ಬಿದ್ದಿದ್ದ ಮಂಜುನಾಥ ಅವರ ಮುಂದೆ)

ಮಂಜುನಾಥ : ಭಾರತ್ ಮಾತಾಕೀ ಜೈ.. ಭಾರತ್ ಮಾತಾಕೀ ಜೈ..
(ಎಂದು ಘೋಷಣೆ ಕೂಗುತ್ತಾನೆ. ಕುಪಿತಗೊಂಡ ಜಿಲ್ಲಾಧಿಕಾರಿ ಅವನನ್ನು ಹಿಡಿದು ಮೇಲೆತ್ತಿ)

ಜಿಲ್ಲಾಧಿಕಾರಿ : ಸ್ವಾತಂತ್ರ್ಯ ಬೇಕೇನೋ? ಯು ವಾಂಟ್ ಫ್ರೀಡಮ್? ಟೇಕ್ ಹಿಮ್ ಟು ದ ಬೆಂಗ್ಳೂರ್ ಜೈಲ್.

ಪೋಲೀಸ್ : ಆಗ್ಲೀ ಸ್ವಾಮಿ.
(ಪೋಲೀಸರು ಮಂಜುನಾಥನನ್ನು ವ್ಯಾನಿನ ಬಳಿ ಕರೆತರುತ್ತಿರುವಾಗಲೂ ಆತ)

ಮಂಜುನಾಥ : ವಂದೇ ಮಾತರಂ.. ವಂದೇ ಮಾತರಂ..
(ಎಂಬ ಘೋಷವಾಕ್ಯವನ್ನು ಕೂಗುತ್ತಿರುತ್ತಾನೆ. ವ್ಯಾನಿನ ಬಳಿ ಬಂದಾಗ ಆತನನ್ನು ಒಳಗೆ ಕೂರಿಸುತ್ತಾರೆ. ಮಂಜುನಾಥ ಒಳಗೆ ನರಳುತ್ತ ಕುಳಿತುಕೊಳ್ಳುತ್ತಾನೆ)



## ದೃಶ್ಯ–50

*ಹಗಲು – ಶಾನುಭೋಗರ ಮನೆಯ ಒಳಗೆ*

(ಊಟ ಮುಗಿಸಿ ಶ್ಯಾಮರಾಯರು ಮತ್ತು ಶಾನುಭೋಗರು ಎಲೆ ಅಡಿಕೆ ತಿನ್ನುತ್ತಾ ಕುಳಿತಿರಬೇಕಾದರೆ ರಂಗ ಕೂಗಿಕೊಂಡು ಓಡಿಬರುತ್ತಾನೆ)

ರಂಗ : ಅಯ್ನೋರೆ.. ಅಯ್ನೋರೆ.. ಮಂಜುನಾಥ್ನಪ್ಪನೋರ್ನ ಪೋಲೀಸ್ನೋರ್ ಹಿಡ್ಕಂಡ್ ಹೋದ್ರು.

ಶಾನುಭೋಗ : ಏನು?
(ಪದ್ಮ ನೀರಿನ ಚೊಂಬನ್ನು ಹಿಡಿದುಕೊಂಡು ರಂಗ ಹೇಳುವ ಮಾತುಗಳನ್ನು ಕೇಳಿಸಿಕೊಳ್ಳುವಳು)

ರಂಗ : ಜಿಲ್ಲಾ ಕಛೇರಿ ಮೇಲೆ ಬಾವುಟ ಹಾರ್ಸ್ತಿದ್ದಾಗ.

ಶ್ಯಾಮರಾಯರು : ಅಯ್ಯಯ್ಯೋ.
(ಎನ್ನುತ್ತಿದ್ದಂತೆ ಗಾಬರಿಯಿಂದ ಕೈಲಿದ್ದ ಚೊಂಬನ್ನು ಕೆಳಗೆ ಬೀಳಿಸುವ ಪದ್ಮಳನ್ನು, ಶಾನುಭೋಗರು ಮತ್ತು ಶ್ಯಾಮರಾಯರು ಗಾಬರಿಯಿಂದ ನೋಡುತ್ತಾರೆ. ಪದ್ಮ ದುಃಖ ತಪ್ತಳಾಗಿ ಒಳಗೆ ಹೋಗುತ್ತಾಳೆ)

## ದೃಶ್ಯ–51

*ರಾತ್ರಿ – ಶಾನುಭೋಗರ ಮನೆಯ ಒಳಗೆ*
*ಹಾಡು: ದೀಪವು ನಿನ್ನದೆ ಗಾಳಿಯೂ ನಿನ್ನದೆ..*

ದೀಪವು ನಿನ್ನದೆ ಗಾಳಿಯೂ ನಿನ್ನದೆ
ಆರದಿರಲಿ ಬೆಳಕು
ಕಡಲೂ ನಿನ್ನದೆ ಹಡಗೂ ನಿನ್ನದೆ
ಮುಳುಗದಿರಲಿ ಬದುಕು

(ಪೋಲೀಸ್ ವ್ಯಾನ್ ಹೋಗುವ ದಾರಿಯಲ್ಲಿ ಅಡ್ಡಲಾಗಿ ಮರದ ದಿಮ್ಮಿಗಳನ್ನು ರಾಘವ, ಶ್ರೀನಿವಾಸ, ಶ್ರೀನಿವಾಸ ಮತ್ತು ಸಂಗಡಿಗರು ಜೋಡಿಸುತ್ತಿದ್ದಾರೆ)

ಬೆಟ್ಟವು ನಿನ್ನದೆ ಬಯಲೂ ನಿನ್ನದೆ
ಹಬ್ಬಿನಗಲಿ ಪ್ರೀತಿ
ನೆರಳೋ ಬಿಸಿಲೋ ಎಲ್ಲವು ನಿನ್ನದೆ
ಇರಲೀ ಏಕ ರೀತಿ

(ಪೋಲೀಸ್ ವ್ಯಾನು ದಾರಿಗೆ ಅಡಚಣೆ ಉಂಟುಮಾಡಿದ್ದ ಜಾಗದಲ್ಲಿ ಬಂದು ನಿಲ್ಲುತ್ತದೆ. ಪೋಲೀಸಿನವರು ದಾರಿಯನ್ನು ಮುಕ್ತಗೊಳಿಸುವುದಕ್ಕೆ ಇಳಿದಾಗ ರಾಘವ, ಶ್ರೀನಿವಾಸ, ಶ್ರೀನಿವಾಸ ಮತ್ತು ಸಂಗಡಿಗರು ವ್ಯಾನಿನ ಹಿಂಬಾಗಿಲಿಗೆ ಬಂದು ಮಂಜುನಾಥನನ್ನು ಬಿಡಿಸಿಕೊಂಡು ಅಲ್ಲಿದ್ದ ಪೋಲೀಸರಿಗೆ ಹೊಡೆದು ಕರೆದೊಯ್ಯುತ್ತಾರೆ. ಪೆಟ್ಟುತಿಂದ ಪೋಲೀಸನವರಲ್ಲೊಬ್ಬ ದಾರಿಯನ್ನು ಮುಕ್ತಗೊಳಿಸುತ್ತಿದ್ದ ಪೋಲೀಸರಿಗೆ ನಡೆದ ವಿಷಯವನ್ನು ತಿಳಿಸಿದಾಗ ಎಲ್ಲರೂ ಮಂಜುನಾಥನನ್ನು ಹಿಂಬಾಲಿಸಿ ಹೋಗುತ್ತಾರೆ.)

ಆಗೊಂದು ಸಿಡಿಲು ಈಗೊಂದು ಮುಗಿಲು
ನಿನಗೆ ಅಲಂಕಾರ
ಅಲ್ಲೊಂದು ಹಕ್ಕಿ ಇಲ್ಲೊಂದು ಮುಗುಳು
ನಿನಗೆ ನಮಸ್ಕಾರ



ಅಲ್ಲಿ ರಣದುಂದುಭಿ ಇಲ್ಲೊಂದು ವೀಣೆ
ನಿನ್ನ ಪ್ರತಿಧ್ವನಿ
ಆ ಮಹಾಕಾವ್ಯ ಈ ಭಾವಗೀತೆ
ನಿನ್ನ ಪದಧ್ವನಿ

(ಹಾಡಿನ ಮುಕ್ತಾಯದಲ್ಲಿ ಶಾನುಭೋಗರು ಪದ್ಮಾಳನ್ನು ಅಪ್ಪಿ ಸಮಾಧಾನಪಡಿಸಿ ಮಲಗುವ ಹಾಸಿಗೆಯತ್ತ ಕರೆತರುತ್ತಾರೆ)

ಪದ್ಮ : ಅಪ್ಪಯ್ಯ
ಶಾನುಭೋಗ : ಮಲ್ಕೋ ಪದ್ಮ.. ಮಲ್ಕೋ
(ಪದ್ಮ ಅಳುತ್ತ ಮಲಗುತ್ತಾಳೆ)

**ನಿರ್ದೇಶಕರ ಟಿಪ್ಪಣಿ:**
ಶಂಕರ ಪಾಟೀಲರ ಪ್ರಭಾವಕ್ಕೆ ಬಿದ್ದಂತಹ ಮಂಜುನಾಥ ಮತ್ತು ಉಳಿದವರು ಹೇಗೆ ತಮ್ಮನ್ನು ತಾವು ಸ್ವಾತಂತ್ರ್ಯ ಚಳುವಳಿಗೆ ಒಪ್ಪಿಸಿಕೊಳ್ಳುತ್ತಾರೆ. ತನು, ಮನ, ಧನ ಸಹಿತವಾಗಿ ಎಂಬುದನ್ನು ಇಲ್ಲಿ ಬಿಂಬಿಸಲಾಗಿದೆ. ಅಂದಿನ ಕಾಲದ ಕಾಂಗ್ರೆಸ್ ಬಾವುಟ ಮತ್ತು ಆ ಉದ್ದೇಶಗಳು ಹೇಗೆ ಬ್ರಿಟೀಷ್ ರಾಜನ ಹುಟ್ಟುಹಬ್ಬದ ದಿನ ಜಿಲ್ಲಾ ಕಛೇರಿಯ ಮೇಲೆ ಆ ಬಾವುಟವನ್ನು ಹಾರಿಸುವ ಯೋಜನೆಯನ್ನು ಹಾಕುವುದು ಮತ್ತು ಪ್ರಭಾತಪೇರಿಗಳನ್ನು ನಡೆಸುವುದು ಮತ್ತು ಸ್ವದೇಶಿ ವಸ್ತುಗಳನ್ನು ಮಾತ್ರ ಬಳಸುವುದು, ವಿದೇಶಿ ವಸ್ತುಗಳನ್ನು ಸುಡುವುದು ಹೀಗೆ ಹತ್ತು ಹಲವು ಆಯಾಮಗಳಲ್ಲಿ ಚಳುವಳಿಯ ಯೋಜನೆಗಳನ್ನು ಬಿಂಬಿಸಲಾಗಿದೆ. ಮಂಜು ಮತ್ತು ಆತನ ಮೂರು ಜನ ಸಂಗಡಿಗರು ಜಿಲ್ಲಾ ಕಛೇರಿಯ ಮೇಲೆ ಬಾವುಟವನ್ನು ಹಾರಿಸುವ ಕೆಲಸಕ್ಕೆ ನಿಯುಕ್ತರಾದಾಗ ಮಂಜುನಾಥ ಸಕ್ರಿಯವಾಗಿ ಚಳುವಳಿಯಲ್ಲಿ ಭಾಗವಹಿಸಿದ್ದಾನೆ ಎಂಬುದನ್ನು ಬಿಂಬಿಸಲಾಗಿದೆ. ಕಛೇರಿಯ ಮೇಲೆ ಬಾವುಟ ಹಾರಿಸುವ ಪ್ರಯತ್ನದಲ್ಲಿ ಮಂಜುನಾಥ ಯಶಸ್ವಿಯಾಗುತ್ತಾನೆ ಆದರೆ ಅದರಿಂದಾಗಿ ಬಂಧಿತನೂ ಆಗುತ್ತಾನೆ. ಅವನನ್ನು ಬೆಂಗಳೂರಿನ ಕಾರಾಗೃಹಕ್ಕೆ ವರ್ಗಾಯಿಸಲಾಗುತ್ತದೆ. ಈ ಸುದ್ದಿಯನ್ನು ಹಳ್ಳಿಗನೊಬ್ಬ ಬಂದು ಶಾನುಭೋಗರಿಗೆ ತಿಳಿಸುತ್ತಾನೆ. ಇದನ್ನು ಕೇಳಿದ ಪದ್ಮ ಆಘಾತಕ್ಕೆ ಒಳಗಾಗುತ್ತಾಳೆ. ಕಥೆಯ ಹಲವು ತಿರುವುಗಳಲ್ಲಿ ಬಹಳ ಮುಖ್ಯವಾದಂತಹ ತಿರುವಿನಲ್ಲಿ ಇದೂ ಕೂಡ ಒಂದು. ಹೇಗೆ ಮನೆಯೊಳಗಿನ ಭಾವನೆಗಳು ಇಡೀ ದೇಶವನ್ನು ಆವರಿಸಿರುವ ಭಾವನೆಗಳಿಗಿಂತ ಆಪ್ತವಾಗುತ್ತದೆ ಎನ್ನುವುದನ್ನು ಹೇಳಲಾಗುತ್ತದೆ. ಆಶಯ ಬಹಳ ದೊಡ್ಡದು, ಸ್ವಾತಂತ್ರ್ಯ ಸಂಗ್ರಾಮ. ಗುರಿ ಬಹಳ ದೊಡ್ಡದು ಅದೇ ಸ್ವಾತಂತ್ರ್ಯ ಆದರೆ ವ್ಯಯುಕ್ತಿಕ ಬಲಿದಾನಗಳು, ವ್ಯಯುಕ್ತಿಕ ಮನಕ್ಷೋಭೆಗಳು ಒಂದು ರೀತಿ ಕಥೆಯ ಪೂರಕ ಅಂಶಗಳಾಗಿ ಬೆಳೆಯುತ್ತ ಹೋಗುತ್ತವೆ. ಅಂತಹ ಸಮಯದಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ ಬೇರೆ ಯಾರನ್ನು

ತಾನೆ ಪ್ರಾರ್ಥಿಸುತ್ತಾನೆ. ಆ ಪರಿಸ್ಥಿತಿಯ ಗಹನತೆಯನ್ನು ಆತ ಹೇಗೆ ಹೇಳಿಕೊಳ್ಳುತ್ತಾನೆ. ಇವೆಲ್ಲವನ್ನು ಬಹಳ ಅದ್ಭುತವಾಗಿ ಒಂದು ಹಾಡಿನ ಮೂಲಕ ಚಿತ್ರಿಸಲಾಗಿದೆ. ಈ ಕವನದ ಸಾಲು "ದೀಪವು ನಿನ್ನದೆ, ಗಾಳಿಯು ನಿನ್ನದೆ, ಆರದಿರಲಿ ಬೆಳಕು" ಹೇಗೆ ಒಂದು ಕವನ ತನ್ನ ಒಂದು ರೂಪಕಗಳ ಜೊತೆಯಲ್ಲಿ, ತನ್ನ ಉಪಮೆಗಳ ಜೊತೆಯಲ್ಲಿ ಕಾವ್ಯಮಯವಾಗುತ್ತ ಹೋಗುತ್ತದೆಯೋ ಆ ಕಾವ್ಯ ಪ್ರಿಯತೆಯನ್ನು ದೃಶ್ಯ ಪ್ರಿಯತೆಯಾಗಿ ಮಾರ್ಪಡಿಸುವಲ್ಲಿ ನಾವು ಹಲವಾರು ಸವಾಲುಗಳನ್ನು ಎದುರಿಸಬೇಕಾಗಿತ್ತು. ಒಂದು, ಕಥೆಯ ಮುನ್ನೋಟ, ಕಥೆಯ ಓಟ, ಹಾಗೆಯೇ ಪ್ರತಿಯೊಂದು ಪಾತ್ರದ ಭಾವನಾತ್ಮಕವಾದಂತಹ ಮುನ್ನಡೆ ಅಲ್ಲದೆ ದೃಶ್ಯಕ್ಕೆ ಪೂರಕವಾಗುವಂತಹ ಚಿತ್ರಿಕೆಗಳು. ಇವುಗಳನ್ನು ಹುಡುಕಾಡುತ್ತ ಅವುಗಳ ಮುಖಾಂತರ "ದೀಪವು ನಿನ್ನದೆ" ಒಂದು ಕವನವಾಗಿ, ಚಿತ್ರಗೀತೆಯಾಗಿ ಎಲ್ಲಕ್ಕಿಂತ ಹೆಚ್ಚಾಗಿ ಒಂದು ದೃಶ್ಯ ರೂಪಕವಾಗಿ ನಿಲ್ಲುತ್ತದೆ. ಇದಕ್ಕೆ ಕಾರಣಕರ್ತರಾದವರು ಒಂದು ಛಾಯಾಗ್ರಾಹಕ ಬಿ.ಸಿ.ಗೌರಿಶಂಕರ, ಎರೆಡು ಹಾಡನ್ನು ಹಾಡಿದ ಎಸ್.ಜಾನಕಿ. ಇವರಿಬ್ಬರನ್ನು ಇಲ್ಲಿ ಸ್ಮರಿಸಲೇಬೇಕು. ಕಾರಣ ಜಾನಕಿಯವರು ಈ ಹಾಡನ್ನು ಎಷ್ಟು ಭಾವಪೂರ್ಣವಾಗಿ ಹಾಡಿದ್ದಾರೆ ಎಂಬುದಕ್ಕೆ ಸಾಕ್ಷಿಯಾಗಿ ಆ ಹಾಡು ಜನಜನಿತವಾಗಿದೆ. ಹಾಗೆಯೇ ಗೌರಿಶಂಕರ ಕೇವಲ ಒಂದು ದೀಪವನ್ನು ಬಳಸಿ ತನ್ನ ಕ್ಯಾಮೆರಾದ ಮೂಲಕ ಹೇಗೆ ಪ್ರಯೋಗಗಳನ್ನು ಸಾರ್ಥಕಗೊಳಿಸಿಕೊಂಡಿದ್ದಾನೆ ಎಂಬುದಕ್ಕೆ ಅವನ ಚಿತ್ರಿಕೆಗಳೇ ಇವೆ. ಅಶ್ವಥ್, ಎಸ್.ಜಾನಕಿ, ಗೌರಿಶಂಕರ ಮತ್ತು ಕಲಾನಿರ್ದೇಶನ ಮಾಡಿದಂತಹ ಶಶಿಧರ ಅಡಪ ಇವರೆಲ್ಲರ ಸಂಯೋಜಿತ ಕಾರ್ಯವಾಗಿ ಈ ಹಾಡು ಮೂಡಿ ಬಂದಿದೆ.

ಮಂಜುನಾಥನನ್ನು ಬಂಧಿಸಿ ಬೆಂಗಳೂರಿನ ಕಡೆಗೆ ಕಾರಾಗೃಹಕ್ಕೆ ಕಳುಹಿಸಿದ್ದ ಪೋಲೀಸರು ದಾರಿಯಲ್ಲಿ ಅವನ ಸ್ನೇಹಿತರ ಯೋಜನೆಯಿಂದಾಗಿ ಆ ವ್ಯಾನನ್ನು ಅಡ್ಡಗಟ್ಟಿ ಮಳೆಯಲ್ಲಿಯೇ ಅವನನ್ನು ಬಿಡಿಸಿಕೊಂಡು ಹೋಗುತ್ತಾರೆ. ಈ ಕ್ರಿಯೆ ನಡೆಯುವಾಗಲೇ ಇತ್ತ ಇಡೀ ಹಾಡಿನ ಸೊಲ್ಲು ಪದ್ಮಳ ಸೊಲ್ಲಾಗಿ ಅವಳ ಮನದಾಳದ ದುಃಖವನ್ನು ಹೊರಗೆಡವುತ್ತ ಹೋಗುತ್ತದೆ. ಕಾವ್ಯದ ಅದ್ಭುತ ರೂಪಕ ಶಕ್ತಿ ದೃಶ್ಯದಲ್ಲೂ ಮೂಡಿಬಂದಿರುವುದು ಇದರ ಹೆಗ್ಗಳಿಕೆ. ಶಾನುಭೋಗರ ಮಗಳ ಬಗ್ಗೆ ತಾಳುವ ಕಾಳಜಿಯೂ ಕೂಡ ಆ ಪಾತ್ರದ ಪೋಷಣೆಯಲ್ಲಿ ಬಹಳ ಮುಖ್ಯವಾದ ತಿರುವೊಂದನ್ನು ಪಡೆಯುತ್ತದೆ.



# ದೃಶ್ಯ-52

*ಹಗಲು - ತಾಲ್ಲೂಕು ಕಛೇರಿಯ ಒಳಗೆ*

ಅಮಲ್ದಾರ : (ದಫೇದಾರ ಮತ್ತು ಪೋಲೀಸರಿಗೆ)
ಅಲ್ರೀ ಹತ್ತು ಜನ ಪೋಲೀಸ್ರ ಮಧ್ಯದಿಂದ ತಪ್ಪಿಸ್ಕೊಂಡ್ಹೋಗಿದಾನೆ ಅಂತ ಹೇಳ್ತಿದ್ದೀರಲ್ಲ, ನಾಚ್ಕೆಯಾಗೋದಿಲ್ಲ ನಿಮ್ಗೆ?

ದಫೇದಾರ : ಅಲ್ಲಾ ಸ್ವಾಮಿ, ಅವ್ನು ರಸ್ತೆ ಮಧ್ಯದಲ್ಲಿ ಕಲ್ಲಿಟ್ಟು
(ಎಂದು ಮುಂದುವರೆಸುವಷ್ಟರಲ್ಲೆ)

ಅಮಲ್ದಾರ : ರಸ್ತೆ ಮಧ್ಯದಲ್ಲೆ ಕಲ್ಲಿಟ್ಟಾಗ್ಲೇ ಇದ್ಯಾರ್ದ್ದೋ ಕಿತಾಪತಿ ಅನ್ನೋ ಎಚ್ಚರಿಕೆ ನಿಮ್ಗಿರ್ಬೇಕಾಗಿತ್ತು. ಬೇಡಿ ತೊಡ್ಸಿ ಕೈಲಿ ಹಿಡ್ಕೊಂಡಿದ್ರೆ ಅವ್ನೆಲ್ರಿ ಹಾಳಾಗ್ ಹೋಗ್ತಿದ್ದ.

ದಫೇದಾರ : ಸತ್ಯಾಗ್ರಹಿ ತಾನೆ, ಕ್ರಿಮಿನಲ್ ಅಲ್ವಲ್ಲ. ಎಲ್ಲಿತಪ್ಪಿಸ್ಕೊಂಡ್ ಹೋಗ್ತಾನೆ ಅಂತ

ಅಮಲ್ದಾರ : ಮಾಡೋದನ್ನ ಸರಿಯಾಗ್ ಮಾಡ್ದೆ, ಎಲ್ಲ ನೀವೇ ಅನ್ಕೋತೀರ. ಹೋಗ್ಲಿ ಅವನ್ಯಾರೂಂತನಾದ್ರುಗೊತ್ತಾಯ್ತ?

ಪೋಲೀಸ್ : ಗೊತ್ತಾಯ್ತು ಸ್ವಾಮಿ. ನವಿಲೂರ್ ಶಾನುಭೋಗರ ಅಳಿಯ ಮಂಜುನಾಥ

ಅಮಲ್ದಾರ : (ಆಶ್ಚರ್ಯದಿಂದ)
ನವಿಲೂರ್ ಶಾನುಭೋಗರ ಅಳಿಯ ಮಂಜುನಾಥ!

ಪೋಲೀಸ್ : ಹೌದು ಸ್ವಾಮಿ.

ಅಮಲ್ದಾರ : (ತೀವ್ರವಾಗಿ ಆಲೋಚಿಸುತ್ತ)
ಅಂಥ ಹುಡ್ಗ ಅಲ್ವಲ್ಲ ಅವ್ನು. ಆಯ್ತು ಎಲ್ಲಿದ್ರು ಹುಡ್ಕಿ ತಂದು ನನ್ಮುಂದೆ ನಿಲ್ಸಿ.
(ಪೋಲೀಸ್ ಮತ್ತು ದಫೇದಾರ ಸೆಲ್ಯೂಟ್ ಹೊಡೆದು ಹೊರಡಬೇಕೆನ್ನುವಷ್ಟರಲ್ಲಿ ಅಮಲ್ದಾರ)
.. ನೋಡೀ ಇಡೀ ತಾಲೂಕಲ್ಲಿ ಎಲ್ಲೂ ಸಭೆ, ಮೆರವಣಿಗೆ ಮಾಡ್ಕೂಡ್ದು ಅಂತ ಮ್ಯಾಜಿಸ್ಟ್ರೇಟ್ ಆಜ್ಞೆ ಮಾಡಿದ್ದಾರಂತ ಹೋಗ್ ಹೇಳಿ. ಹೊರ್ಡಿ.
(ಪೋಲೀಸ್ ಮತ್ತು ದಫೇದಾರ ಹೊರಡುವರು. ಅಮಲ್ದಾರರ ಚಿಂತಾಕ್ರಾಂತ ಮುಖದ ಮೇಲೆ ಚಿತ್ರಿಕೆ ಕೊನೆಯಾಗುತ್ತದೆ.)

## ದೃಶ್ಯ–53

**ಹಗಲು – ಹೊರಗೆ**

(ಚಳುವಳಿಕಾರರೆಲ್ಲ ಬಾವುಟವನ್ನು ಹಿಡಿದು ಬರುತ್ತಿದ್ದಾರೆ)

ವ್ಯಕ್ತಿ : ಮಾಡು..

ಜನರು : ಇಲ್ಲವೇ ಮಡಿ

ವ್ಯಕ್ತಿ : ಬಿಡುಗಡೆಗಾಗಿಯೇ ಯುದ್ಧ..

ಜನರು : ಮಾಡುವುದಂತೂ ಸಿದ್ಧ

ವ್ಯಕ್ತಿ : ವಂದೇ..

ಜನರು : ಮಾತರಂ

ವ್ಯಕ್ತಿ : ವಂದೇ..

ಜನರು : ಮಾತರಂ

(ಅವರ ಹಿಂದೆಯೇ ತುಸು ದೂರದಲ್ಲಿ ಪಾಟೀಲರು ಬರುತ್ತಿದ್ದಾರೆ. ಅವರೊಂದಿಗೆ ಬರುತ್ತಿರುವವರು ರಘುಪತಿ ರಾಘವ ರಾಜಾರಾಮ್ ಹಾಡನ್ನು ಹಾಡುತ್ತ ಬರುತ್ತಿದ್ದಾರೆ)

ವ್ಯಕ್ತಿ : ಇನ್‌ಕ್ವಿಲಾಬ್..

ಜನರು : ಜಿಂದಾಬಾದ್

(ಪೋಲೀಸ್ ಜೀಪೊಂದು ಪ್ರದಕ್ಷಿಣೆಗೆಂದು ಬಂದಾಗ ಈ ಚಳುವಳಿಕಾರರ ಗುಂಪೊಂದು ಚಳುವಳಿ ಮಾಡುತ್ತಿರುವುದು ತಿಳಿದು ಅಲ್ಲಿಗೆ ಬರುತ್ತಾರೆ. ಚಳುವಳಿಗಾರರ ದಾರಿಗೆ ಅಡ್ಡಲಾಗಿ ಪೋಲೀಸರು ಶಸ್ತ್ರಸಜ್ಜಿತರಾಗಿ ನಿಲ್ಲುತ್ತಾರೆ. ಘೋಷವಾಕ್ಯಗಳನ್ನು ಕೂಗುತ್ತಾ ಬರುವ ಚಳುವಳಿಕಾರರನ್ನು ತಡೆಯುವ ದಫೇದಾರ)

ದಫೇದಾರ : ನಿಲ್ಲಿ, ಸಭೆ–ಮೆರವಣಿಗೆಗಳನ್ನ ನಿಷೇಧಿಸಲಾಗಿದೆ. ನೀವು ಜಿಲ್ಲಾ ಕಛೇರಿ ಮುಂದೆ ಪಿಗೆಟಿಂಗ್ ಮಾಡೋಕೆ ಸಾಧ್ಯ ಇಲ್ಲ. ಮುಂದೆ ಹೋಗ್ಲೂ ಸಾಧ್ಯ ಇಲ್ಲ.

(ಹೀಗೆ ಹೇಳಿದ್ದನ್ನು ಗಮನಿಸುವ ಶ್ರೀನಿವಾಸ ಹಿಂದೆ ಹೋಗಿ ಪಾಟೀಲರಿಗೆ ಸುದ್ದಿ ಮುಟ್ಟಿಸಿದಾಗ)

ಶ್ರೀನಿವಾಸ : ಈಗೇನ್ಮಾಡೋದು?

ಪಾಟೀಲರು : ಮಾಡು ಇಲ್ಲವೇ ಮಡಿ

(ಎಂದು ಮುಂದೆ ಹೋಗುವಂತೆ ಸೂಚನೆ ನೀಡುತ್ತಾರೆ. ಸೂಚನೆ ನೀಡುತ್ತಿದ್ದಂತೆಯೇ ಎಲ್ಲರೂ ಮುನ್ನುಗ್ಗಿ ಬರುವಾಗ ಅವರಿಗೆ ಪೋಲೀಸರು ಲಾಟಿಯಿಂದ



ಹೊಡೆಯಲು ಪ್ರಾರಂಭಿಸುತ್ತಾರೆ. ಮುಂದೆ ಬಂದವರನ್ನೆಲ್ಲ ಹೊಡೆದು ಬೀಳಿಸಿದ ನಂತರ ಪಾಟೀಲರು ಒಬ್ಬಂಟಿಗರಾಗಿ ಮುಂದೆ ಬರುತ್ತಿರುವುದನ್ನು ಗಮನಿಸಿದ ದಫೇದಾರ ಅವರನ್ನು ತಡೆಯುತ್ತಾನೆ ಆದರೆ ಪಾಟೀಲರು ಮುಂದೆ ಹೋಗುವ ಪ್ರಯತ್ನ ಮಾಡಿದಾಗ ಅವರಿಗೆ ಲಾಟಿಯಿಂದ ತಲೆಗೆ ಜೋರಾಗಿ ಹೊಡೆಯುತ್ತಾರೆ. ಜೊತೆಗೆ ಪೋಲೀಸ್ ಪೇದೆಗಳೂ ಅವನೊಡಗೂಡಿ ಹೊಡೆತಗಳನ್ನು ಹೊಡೆಯುತ್ತಾರೆ. ನರಳುತ್ತ, ಘೋಷವಾಕ್ಯಗಳನ್ನು ಕೂಗುತ್ತಾ ಬೀಳುವ ಅವರನ್ನು ನೋಡುವ ಅವರ ಸಂಗಡಿಗರು ಓಡಿ ಬಂದು ಅವರನ್ನು ಪೋಲೀಸರಿಂದ ರಕ್ಷಿಸಿ ಪಕ್ಕಕ್ಕೆ ಕರೆದೊಯ್ಯುತ್ತಾರೆ. ಪಾಟೀಲರು ತೀವ್ರ ಅಸ್ವಸ್ಥರಾಗಿ ನೋವನ್ನು ಅನುಭವಿಸುತ್ತಿರುತ್ತಾರೆ.)

ಮಂಜುನಾಥ : ಪಾಟೀಲ್ರೇ.. ಪಾಟೀಲ್ರೇ..

(ಕೂಗಿದಾಗ ಪ್ರತಿಕ್ರಿಯೆ ನೀಡದಿರುವುದನ್ನ ನೋಡಿ ಮಂಜುನಾಥ, ಶ್ರೀನಿವಾಸ ದುಃಖಿತಪ್ತರಾಗುತ್ತಾರೆ. ಆಗ ಪಾಟೀಲರು ಆ ನೋವಿನಲ್ಲೂ)

ಪಾಟೀಲರು : ವಂದೇ ಮಾತರಂ..

(ಎಂದು ಮೃದುವಾಗಿ ಘೋಷಣೆ ಕೂಗಿ ತಮ್ಮ ಪ್ರಾಣತ್ಯಜಿಸುತ್ತಾರೆ. ಇದರಿಂದ ಕುಪಿತಗೊಳ್ಳುವ ಶ್ರೀನಿವಾಸ ರೊಚ್ಚಿಗೆದ್ದು ಅವನ ಸಂಗಡಿಗರಿಗೆ)

ಶ್ರೀನಿವಾಸ : ಚೆಚ್ರೋ. ಹೊಡಿರೋ ಹೊಡೀರಿ. ವಂದೇ ಮಾತರಂ..

(ಎಂದು ಜನರೊಳಗೆ ನುಗ್ಗಿ ಕಲ್ಲನ್ನು ತೂರಲು ಪ್ರಾರಂಭಿಸುತ್ತಾನೆ. ಜನರೆಲ್ಲರೂ ರೊಚ್ಚಿಗೆದ್ದು ಪೋಲೀಸರತ್ತ ಕಲ್ಲು ತೂರಾಟವನ್ನು ಮಾಡುತ್ತ, ಅವರಿಗೆ ಹೊಡೆಯುತ್ತ ತಮ್ಮ ಉದ್ರಿಕ್ತ ಮನೋಭಾವವನ್ನು ತೋರಿಸುತ್ತಾರೆ. ಪೋಲೀಸರು ಚಳುವಳಿಕಾರರ ಪ್ರತಿರೋಧವನ್ನು ತಾಳಲಾರದೆ ಹಿಮ್ಮೆಟ್ಟುತ್ತಾರೆ. ಇವನ್ನೆಲ್ಲ ಮಂಜುನಾಥ, ಪಾಟೀಲರ ಬಳಿಯಿಂದಲೇ ಕುಳಿತು ನೋಡುತ್ತ ನಡೆದ ಅನ್ಯಾಯ ಮತ್ತು ಪಾಟೀಲರ ಸಾವಿನ ಬಗೆಗೆ ಯೋಚಿಸುತ್ತ ಕುಳಿತುಕೊಳ್ಳುತ್ತಾನೆ)

# ದೃಶ್ಯ–54

*ಹಗಲು – ಹೊರಗೆ*

(ಪೋಲೀಸ್ ಠಾಣೆಯೊಂದಕ್ಕೆ ಮುತ್ತಿಗೆ ಹಾಕುವ ಚಳುವಳಿಕಾರರನ್ನು ಪೋಲೀಸ್ ಪೇದೆಯೊಬ್ಬ ಬಂದೂಕು ತೋರಿಸಿ ಬೆದರಿಸುತ್ತಿರುವಾಗ;)

ಪೇದೆ : ಹೇಯ್ ಹೇಯ್ ನಿಂತ್ಕೊಳಿ ಸುಟ್ಬಿಡ್ತೀನಿ.

(ಹಿಂದಿನಿಂದ ಬರುವ ಮತ್ತಷ್ಟು ಚಳುವಳಿಕಾರರು ಅವನಿಗೆ ಹೊಡೆದು ಅವನ ಬಳಿಯಿದ್ದ ಬಂದೂಕನ್ನು ವಶಪಡಿಸಿಕೊಂಡು ಪೋಲೀಸ್ ಠಾಣೆಯೊಳಗಿದ್ದ ಪೇದೆಯ ಮೇಲೂ ಹಲ್ಲೆ ಮಾಡಿ ಅಲ್ಲಿರುವ ಬಂದೂಕುಗಳನ್ನು ವಶಪಡಿಸಿಕೊಳ್ಳುತ್ತಾರೆ.)



# ದೃಶ್ಯ–54ಅ

*ರಾತ್ರಿ – ಹೊರಗೆ*

(ಚಳುವಳಿಕಾರು ದೂರವಾಣಿ ಕಂಬವನ್ನೇರಿ ಸಂಪರ್ಕವನ್ನು ಕಡಿತಗೊಳಿಸುತ್ತಾರೆ)

## ದೃಶ್ಯ–54ಆ

*ಹಗಲು – ಹೊರಗೆ*

(ರಸ್ತೆಯಲ್ಲಿ ಬರುತ್ತಿರುವ ಪೋಲೀಸ್ ವ್ಯಾನನ್ನು ಪೋಲೀಸ್ ವೇಷದಲ್ಲಿರುವ ಚಳುವಳಿಕಾರ ತಡೆದು)

ಶ್ರೀನಿವಾಸ : ಮುಂದಕ್ ರಸ್ತೆ ಸರಿಯಿಲ್ಲ.

ಚಾಲಕ : ಹೌದ..?

(ಎನ್ನುವಷ್ಟರಲ್ಲೆ ಚಳುವಳಿಕಾರರು ಬಂದೂಕನ್ನಿಡಿದು ಬಂದು ಚಾಲಕನನ್ನು ಬಂಧನಕ್ಕೊಳಪಡಿಸುತ್ತಾರೆ. ನಿಲ್ಲುತ್ತಾರೆ. ವ್ಯಾನಿನಲ್ಲಿರುವ ಪೆಟ್ಟಿಗೆಯನ್ನು ತಗೆದುಕೊಂಡು ಹೋಗುತ್ತಾರೆ)



## ದೃಶ್ಯ–55

*ಹಗಲು – ಮ್ಯಾಜಿಸ್ಟ್ರೇಟರ ಕಛೇರಿಯ ಒಳಗೆ*

**(ಹಿನ್ನಲೆಯಲ್ಲಿ ಮ್ಯಾಜಿಸ್ಟ್ರೇಟ್ ಧ್ವನಿ)**

ಮ್ಯಾಜಿಸ್ಟ್ರೇಟ್ : ಸಾರ್ವಜನಿಕ ಆಸ್ತಿ–ಪಾಸ್ತಿಗಳನ್ನು ನಾಶಪಡಿಸಿ, ಪೋಲೀಸ್ ಠಾಣೆ, ಸರ್ಕಾರಿ ಖಜಾನೆಗಳನ್ನು ಲೂಟಿ ಮಾಡಿದ ಆಪಾದನೆಯ ಮೇಲೆ ರಾಘವೇಂದ್ರ, ಮಂಜುನಾಥ, ಪುರುಷೋತ್ತಮ, ಶ್ರೀನಿವಾಸ, ಇವರುಗಳನ್ನು ಅಪರಾಧಿಗಳೆಂದು ಪರಿಗಣಿಸಿ ಅವರನ್ನು ಕಂಡಲ್ಲೇ ಬಂಧಿಸುವ ಆಜ್ಞೆ ಹೊರಡಿಸಿದೆ.

# ದೃಶ್ಯ–56

ಹಗಲು – ಹೊರಗೆ

(ಚಳುವಳಿಕಾರರೆಲ್ಲ ಒಂದು ದೇವಾಲಯದಲ್ಲಿ ಬಿಡಾರ ಹೂಡಿದ್ದಾರೆ. ಅಲ್ಲಿ ಶ್ರೀನಿವಾಸ ಅಚ್ಚನ್ನು ಒತ್ತುತ್ತ ಕುಳಿತಿದ್ದಾನೆ. ಅಚ್ಚನ್ನು ಒತ್ತಿ ಮುಗಿದ ನಂತರ;)

ಶ್ರೀನಿವಾಸ : (ಏದುಸಿರು ಬಿಡುತ್ತ)
ಅಬ್ಬ, ಸದ್ಯ ಮುಗೀತಲ್ಲ.

ಮಂಜುನಾಥ : ಎಲ್ ಮುಗೀತು? ಇನ್ನು ಇಷ್ಟ್ ಇದ್ಯಲ್ಲ..
(ಎಂದು ಒಂದಷ್ಟು ಹಾಳೆಗಳನ್ನು ತೋರಿಸುತ್ತಾನೆ. ಶ್ರೀನಿವಾಸ ಅವಾಕ್ಕಾಗುತ್ತಾನೆ. ಸುತ್ತಮುತ್ತಲಿದ್ದವರೆಲ್ಲರೂ ಕೇಕೆ ಹಾಕುತ್ತಾರೆ. ಆಗ ರಾಘವ ಬಂದು ಶ್ರೀನಿವಾಸನಿಗೆ)

ರಾಘವ : ಹೇಯ್ ಸೋಂಬೇರಿ.
(ಶ್ರೀನಿವಾಸ ಯಾರಿಗೆಂದು ಸುತ್ತಮುತ್ತ ನೋಡುವಾಗ ರಾಘವ ಶ್ರೀನಿವಾಸನಿಗೆ)
.. ನೀನೆ!

ಶ್ರೀನಿವಾಸ : ನಾನಾ?

ರಾಘವ : ಹ್ಹಾ ನೀನೆ. ನಿನ್ಗೇ ಬೇರೆ ಕೆಲ್ಸ ಕೊಡ್ತೀನಿ. ಕಲ್ಲಚ್ಚಿಂದ ಹೆಚ್ಚಿಗೆ ಪ್ರತಿ ತೆಗ್ಯೋದು ದೊಡ್ಡ ಕೆಲ್ಸ ಅಲ್ಲ. ಹಾಗೇ ಹಂಚೋದು ಕೂಡ. ಜಾಸ್ತಿ ಜನ ಇರೋ ಕಡೆ ಬಹಳ ಸುಲಭವಾಗ್ ಹಂಚ್ಬಹುದು.

ಮಂಜುನಾಥ : ಆದ್ರೆ ಎಚ್ಚರಿಕೆ ಇರ್ಲಿ.

ರಾಘವ : (ಹೌದು ಎನ್ನುವಂತೆ ಸಂಜ್ಞೆಮಾಡಿ)
.. ಹೇ ಪುರ್ಷಿ.
(ಎಂದು ಪುರುಷೋತ್ತಮನನ್ನು ಕರೆಯುತ್ತಾನೆ)

ಪುರುಷೋತ್ತಮ : ಬಂದೆ.

ರಾಘವ : ನೀನು ಸಾಗರದ ಕಡೆ ಹೋಗು. ಸೀನ, ನೀನು ಮಂಗ್ಳೂರ್ ಕಡೆ ಹೋಗು. ನಾನು ಶಿವಮೊಗ್ಗ ಕಡೆ ಹೋಗ್ತಿನಿ.
(ಎಂದು ಮಂಜುನಾಥನಿಂದ ಪ್ರತಿಗಳನ್ನು ರಾಘವ ಮತ್ತು ಪುರುಷೋತ್ತಮ ತಗೆದುಕೊಳ್ಳುತ್ತಾರೆ. ರಾಘವ ಪುರುಷೋತ್ತಮನಿಗೆ)
.. ಹೇಯ್ ಸ್ವಲ್ಪ ತಗೊಳೋ ನೀನು.
(ಅಷ್ಟರಲ್ಲಿ ಮಂಜುನಾಥ ಎಲ್ಲರಿಗು;)

ಮಂಜುನಾಥ : ಇಲ್ಕೇಳಿ..



(ಎಂದು ತಾನು ಬರೆದಿರುವುದನ್ನು ಹೇಳಲು ಪ್ರಾರಂಭಿಸುತ್ತಾನೆ)

*ಕೆಂಪು ಕೋತಿಯ ಕರುಳು..*
*ನೆಚ್ಚಿಕೊಂಡರೆ ಮರುಳು..*

(ಎಲ್ಲರೂ ನಗುವರು ನಂತರ ಅವರೆಲ್ಲರು;)

ಎಲ್ಲರು : *ಕೆಂಪು ಕೋತಿಯ ಕರುಳು..*
*ನೆಚ್ಚಿಕೊಂಡರೆ ಮರುಳು..*

(ಎಂದು ಮತ್ತೆ ಜೋರಾಗಿ ಕೇಕೆ ಹಾಕಿ ನಗುವರು)

# ದೃಶ್ಯ–57

***ಹಗಲು – ಹೊರಗೆ***

(ಒಬ್ಬ ವ್ಯಕ್ತಿ ಮಂಜುನಾಥ ಬರೆದಿರುವ ಕವನಗಳನ್ನು ಓದುತ್ತಿದ್ದಾನೆ)

ವ್ಯಕ್ತಿ : ಕೆಂಪು ಕೋತಿಯ ಕರುಳು
(ಶ್ರೀನಿವಾಸ ಒಬ್ಬ ವ್ಯಕ್ತಿಗೆ ಪತ್ರವನ್ನು ಹಂಚುತ್ತ)

ಶ್ರೀನಿವಾಸ : ದಯವಿಟ್ಟು ಇದನ್ನ ಓದಿ, ಉಳಿದವರಿಗೂ ಓದಿ ಹೇಳಿ.

ವ್ಯಕ್ತಿ1 : ಆಯ್ತು ಸ್ವಾಮಿ
(ಎಂದು ಪ್ರತಿಯನ್ನು ತಗೆದುಕೊಂಡು ಹೋಗುವನು. ನಂತರ ಶ್ರೀನಿವಾಸ ತನ್ನೆದುರಿಗೆ ಪೋಲೀಸರು ಬರುತ್ತಿರುವುದನ್ನು ಗಮನಿಸುತ್ತಾನೆ. ಅವರು ಬರುವುದನ್ನು ನೋಡಿ ಗಾಬರಿಗೊಳ್ಳುವ ಶ್ರೀನಿವಾಸ ಒಂದು ಅಂಗಡಿಯ ಕಡೆಗೆ ತಿರುಗಿ ಅಂಗಡಿಯವನಿಗೆ;)

ಶ್ರೀನಿವಾಸ : ಇದಕ್ಕೆಷ್ಟು?

ಅಂಗಡಿಯವ : ಒಂದು ರುಪಾಯಿ ಹನ್ನೆರಡಾಣೆ.
(ಎನ್ನುವಷ್ಟರಲ್ಲಿ ಇತ್ತ ಬರುತ್ತಿದ್ದ ಪೋಲೀಸರು ಅತ್ತೆತ್ತಲೋ ಹೋಗುತ್ತಾರೆ. ಪೋಲೀಸರು ಬರುವುದನ್ನು ನೋಡಿ ಜನರೆಲ್ಲರು ತಮಗೆ ಕೊಡಲಾಗಿದ್ದ ಪ್ರತಿಗಳನ್ನು ಮರೆಮಾಚಿಕೊಂಡಿರುವುದನ್ನು ನೋಡುವ ಪೋಲೀಸರು ಅವರಲ್ಲಿ ಬಂದು ಪರಿಶೀಲಿಸಲು ಪ್ರಾರಂಭಿಸುತ್ತಾರೆ. ಒಬ್ಬ ವ್ಯಕ್ತಿಗೆ)

ಪೋಲೀಸ್ : ಹೇಯ್ ಕೈ ತೋರ್ಸೋ, ಕೈ ತೋರ್ಸೋ

ವ್ಯಕ್ತಿ : ಏನಿಲ್ಲ ಸ್ವಾಮಿ, ಏನಿಲ್ಲ
(ಎಂದು ಭಯಭೀತನಾಗಿ ತನ್ನೆರೆಡು ಕೈಗಳನ್ನು ತೋರಿಸುತ್ತಾನೆ. ಆಗ ಅಲ್ಲಿಯೇ ಇದ್ದ ಇನ್ನೊಬ್ಬ ವ್ಯಕ್ತಿಯನ್ನು ಹಿಡಿದು)

ಪೋಲೀಸ್ : ಹೇಯ್ ನೀನ್ತೋರ್ಸೋ
(ಎಂದು ಅವನ ಕೈಯಲ್ಲಿದ್ದ ಪ್ರತಿಯನ್ನು ತಗೆದುಕೊಂಡು ಓದಿ)
..ಎಲ್ಲಿತ್ತೋ ಇದು?

ವ್ಯಕ್ತಿ1 : ಗೊತ್ತಿಲ್ಲ ಸ್ವಾಮಿ.

ಪೋಲೀಸ್ : ಯಾರ್ ಕೊಟ್ರೋ ಇದನ್ನ?

ವ್ಯಕ್ತಿ1 : ಗೊತ್ತಿಲ್ಲ ಸ್ವಾಮಿ



(ಎಂದ ತಕ್ಷಣ ಪೋಲೀಸ್ ಅವನ ಕೆನ್ನಗೆ ಹೊಡೆದು ಪೇದೆಗಳಿಗೆ)

ಪೋಲೀಸ್ : ಹೇಯ್ ಎಳ್ಕಂಡ್ ಹೋಗ್ರೋ ಇವನ್ನ.
(ಎಂದಾಗ ವ್ಯಕ್ತಿ ಬೆದರಿ ರೋಧಿಸುತ್ತ)

ವ್ಯಕ್ತಿ : ಇಲ್ಲ ಸ್ವಾಮಿ, ಗೊತ್ತಿಲ್ಲ ಸ್ವಾಮಿ.
(ಎಂದು ಮುಂದೆ ನಿಂತಿದ್ದ ಶ್ರೀನಿವಾಸನನ್ನು ನೋಡಿ ಪೋಲೀಸರಿಗೆ)
.. ಅಲ್ಲಿ, ಅಲ್ಲಿ, ಅವ್ನೆ ಅವ್ನೆ
(ಎಂದು ತೋರಿಸುತ್ತಾನೆ. ಶ್ರೀನಿವಾಸ ತಕ್ಷಣ ಓಡಲು ಪ್ರಾರಂಭಿಸುತ್ತಾನೆ. ಆಗ ಪೋಲೀಸ್ ಅವನ ಹಿಂದೆ ಓಡುತ್ತ;)

ಪೋಲೀಸ್ : ಅರೆ ವೋ ಸಾಲೇಕೋ ಪಕಡೋ.
(ಎಂದು ಅವನು ಮತ್ತು ಪೇದೆಗಳೆಲ್ಲ ಶ್ರೀನಿವಾಸನನ್ನು ಅಟ್ಟಿಸಿಕೊಂಡು ಬರುವಾಗ ನೋಡುವ ಬಳೆಗಾರ ಚೆನ್ನಯ್ಯ ಅವನು ಓಡುವಾಗ ತನ್ನ ಕೈಚಳಕದಿಂದ ಅವನ ಬ್ಯಾಗನ್ನು ಕಸಿದುಕೊಂಡು ಅಲ್ಲಿದ್ದ ಪ್ರತಿಗಳನ್ನು ಎಗರಿಸಿಬಿಡುತ್ತಾನೆ. ಬ್ಯಾಗನ್ನು ಕಳೆದುಕೊಂಡ ಶ್ರೀನಿವಾಸ ಬ್ಯಾಗನ್ನು ಕೊಡುವಂತೆ ವಾಪಾಸ್ ಬಂದಾಗ ಚೆನ್ನಯ್ಯ ಕೊಟ್ಟು ಕಳುಹಿಸುತ್ತಾನೆ. ಪೋಲೀಸ್ ಓಡಿಬರುತ್ತಿದ್ದಾಗ ಅಡ್ಡ ನಿಂತಿದ್ದ ಚೆನ್ನಯ್ಯನಿಗೆ)
.. ಅರೆ ವೋ ಚೆನ್ನಯ್ಯ ಅಟೋ
(ಎಂದು ದಾರಿ ಬಿಡಿಸಿಕೊಂಡು ಶ್ರೀನಿವಾಸನ ಬಳಿ ಹೋಗಿ)
.. ಹೇಯ್ ತಪ್ಪಿಸ್ಕೊಳ್ಳೋಕ್ ಬಿಡ್ಬೇಡಿ. ಹಿಡಿರೋ ಹಿಡಿರೋ. ಅರೆ ಸಾಲೆ.
(ಎಂದು ಅವನನ್ನು ತಬ್ಬಿಹಿಡಿದು ನಂತರ ಪೇದೆಗಳಿಗೆ)
.. ಹೇಯ್ ಈ ಸೂಳೆಮಗನ್ನ ತಲಾಷ್ ಮಾಡ್ರೋ. ಓಡ್ತಾನೆ.
(ಪೇದೆ ಅವನ ಬ್ಯಾಗನ್ನು ಕಿತ್ತುಕೊಳ್ಳಲು ಹೋದಾಗ ಕೊಡದಿರುವ ಅವನನ್ನು;)

ಪೇದೆ : ಬಿಡೋ ಬೋಳೀ ಮಗ್ನೇ ಬಿಡು. ಮತ್ತೇನ್ ಮಾರಿ ನೋಡ್ತಿ.

ಪೋಲೀಸ್ : ಅರೇ ತಲಾಷ್ ಕರೋ.
(ಪೇದೆ ಅವನ ಬ್ಯಾಗನ್ನೆಲ್ಲ ಪರಿಶೀಲಿಸಿದ ಮೇಲೆ ಏನೂ

ಇಲ್ಲದ್ದನ್ನು ಕಂಡು)

ಪೇದೆ : ಇಲ್ಲಾ ಸ್ವಾಮಿ.
(ಚೆನ್ನಯ್ಯ ನಿಟ್ಟುಸಿರು ಬಿಡುತ್ತಾನೆ. ನಂತರ ಪೋಲೀಸ್)

ಪೋಲೀಸ್ : ಏನೂ ಇಲ್ವಾ?!
(ಎಂದು ಶ್ರೀನಿವಾಸನಿಗೆ)
.. ಹೇಯ್ ಮತ್ಯಾಕೋ ಓಡ್ಕೊಂಡ್ ಬಂದೆ?

ಶ್ರೀನಿವಾಸ : (ಏನೂ ಗೊತ್ತಿಲ್ಲದವನಂತೆ)
ಮತ್ಯಾಕ್ ನೀವ್ ಅಟ್ಟಿಸ್ಕೊಂಡ್ ಬಂದ್ರಿ ಅದಿಕ್ಕೆ.
(ಕುಪಿತನಾದ ಪೋಲೀಸ್ ಅವನನ್ನು ಕೆಳಗೆ ತಳ್ಳಿ)

ಪೋಲೀಸ್ : ಹೇಯ್ ಥತ್ತೇರಿ. (ಸ್ವಗತ) ಏನೂ ಇಲ್ವಾ? (ಪೇದೆಗಳಿಗೆ)
.. ಈ ಗಲಾಟೇಲಿ ನಿಜ್ವಾಗ್ಲೂ ಹಂಚ್ತೇದ್ದೋನೆಲ್ಲೋ ತಪ್ಪುಸ್ಕೊಂಡ್‌ಬಿಟ್ನಲ್ಲೋ.
(ಎಂದು ಅತ್ತ ನೋಡಿದಾಗ ಒಂದು ಗುಂಪು ಪ್ರತಿಗಳನ್ನು ಓದುತ್ತ ನಿಂತಿರುತ್ತದೆ. ಪೋಲೀಸ್ ಅವರತ್ತ ನೋಡಿ ಅವನ ಪೇದೆಗಳಿಗೆ)
.. ಹೇಯ್ ಅಲ್ನೋಡ್ರೋ
(ಕೈ ತೋರಿಸಿ ಹೌಹಾರಿ)
.. ಹೇಯ್
(ಎಂದು ಪೇದೆಗಳೊಳಗೂಡಿ ಅವರಲ್ಲಿಗೆ ಓಡುತ್ತಾನೆ. ಶ್ರೀನಿವಾಸ ಬಟ್ಟೆಗಳನ್ನೆಲ್ಲ ಮತ್ತೆ ತನ್ನ ಬ್ಯಾಗಿಗೆ ಹಾಕಿಕೊಳ್ಳುತ್ತಾನೆ. ಇತ್ತ ಪೋಲೀಸ್ ಬರುತ್ತಿರುವುದನ್ನು ನೋಡಿದ ಗುಂಪಿನವರೆಲ್ಲರು ಚೆಲ್ಲಾಪಿಲ್ಲಿಯಾಗಿ ಓಡಿಹೋಗುತ್ತಾರೆ.)

ಗುಂಪಿನವರು : ಹೇಯ್ ಪೋಲೀಸ್ ಬಂದ್ರು ಓಡ್ರೋ ಓಡ್ರೋ

ಪೋಲೀಸ್ : ಅರೆ ಹರಾಮ್ಕೋರ್ ನಿಲ್ರೋ
(ಎಂದು ಅವರನ್ನು ಅಟ್ಟಿಸಿಕೊಂಡು ಹಿಂದೆಯೇ ಓಡಿಹೋಗುತ್ತಾನೆ ಇತ್ತ ಚೆನ್ನಯ್ಯ ಹುಸಿನಗುತ್ತ ನಿಲ್ಲುತ್ತಾನೆ. ಶ್ರೀನಿವಾಸ ಆ ಪ್ರತಿಗಳನ್ನು ತಾನು ಎಲ್ಲಿ ಕಳವು ಮಾಡಿಕೊಂಡೆ ಎಂದು ಯೋಚಿಸುತ್ತ ಭಯಭೀತನಾಗಿ ಹುಡುಕಾಡುತ್ತಿರುವಾಗ ಚೆನ್ನಯ್ಯ ಅವನಿಗೆ)

ಚೆನ್ನಯ್ಯ : ಬಾ ಮಗಾ ಬಳೆ ಬೇಕಾ?

ಶ್ರೀನಿವಾಸ : ಬೇಡ
(ಎಂದು ತನ್ನ ಹುಡುಕಾಟವನ್ನು ಮುಂದುವರೆಸುತ್ತಾನೆ)

ಚೆನ್ನಯ್ಯ : ಏನ್ ಹುಡುಕ್ತಾಯಿದ್ದೀಯ?



ಶ್ರೀನಿವಾಸ : (ಸಿಡುಕಿನಿಂದ) ಏನು ಇಲ್ಲ ಬಿಡು

ಚೆನ್ನಯ್ಯ : ಏನಾರು ಕಳ್ಕೊಂಡಿದ್ದೀಯ? ಹೇ ಬಾರ್ಲಾ
(ಎಂದು ಅವನ ಕೈ ಹಿಡಿದು ಎಳೆದುಕೊಂಡು ಹೋಗುತ್ತ;)
.. ಸಂತೆನಾಗೆ ಯಾರ್ ಏನ್ ಕಳ್ಕೊಂಡೋರೆ, ಏನಾಗ್ತೈತೆ ಎಲ್ಲ ಗೊತ್ತೈತೆ ಹೇಳ್ತಿನಿ ಬಾ
(ಎಂದು ಒಂದು ಕಡೆ ಬಂದು ನಿಂತು ತನ್ನ ಜೋಳಿಗೆಯಲ್ಲಿದ್ದ ಕವನದ ಪ್ರತಿಗಳನ್ನು ತೋರಿಸುತ್ತಾನೆ. ಖುಷಿಯಿಂದ ಉಬ್ಬುವ ಶ್ರೀನಿವಾಸ ಅದನ್ನು ತಗೆದುಕೊಳ್ಳಲು ಹೋದಾಗ ಚೆನ್ನಯ್ಯ ಮತ್ತೆ ಅದನ್ನು ತನ್ನ ಬ್ಯಾಗಿನಲ್ಲಿಟ್ಟುಕೊಳ್ಳುತ್ತಾನೆ. ಆಗ ಶ್ರೀನಿವಾಸ)

ಶ್ರೀನಿವಾಸ : ನಿನ್ ಕೈಲ್ ಹೇಗ್ ಸಿಕ್ತು?

ಚೆನ್ನಯ್ಯ : ನೋಡಿದ್ಯಾ ನನ್ ಕೈ ಚಳ್ಕಾ? ನಿನ್ನ ಪಾರ್ಮಾಡುದ್ದೋ ಇಲ್ವೋ ಹೇಳು ಮೊದ್ಲು? ಹೌದೂ ನಮ್ ನವ್ಲೂರ್ ಮಂಜುನಾಥಪ್ನೋರು ಎಲ್ಲವ್ರೆ?
(ಆವೇಶಭರಿತವಾಗಿ ಕೇಳುತ್ತಾನೆ ಆಗ ಶ್ರೀನಿವಾಸ ಮೆಲ್ಲಗೆ ಹೇಳುವಂತೆ ಸೂಚಿಸುತ್ತಾನೆ ನಂತರ ಮತ್ತೆ ಚೆನ್ನಯ್ಯ ಕಡಿಮೆ ಧ್ವನಿಯಲ್ಲಿ)
.. ನಮ್ ನವಿಲೂರ್ ಮಂಜುನಾಥಪ್ನೋರು ಎಲ್ಲವ್ರೆ?

ಶ್ರೀನಿವಾಸ : ನವಿಲೂರು ಮಂಜುನಾಥಪ್ಪ ನಿನಗೇನ್ ಆಗ್ಬೇಕ್ಹೇಳು
(ಕುತೂಹಲದಿಂದ ಕೇಳುತ್ತಾನೆ)

ಚೆನ್ನಯ್ಯ : ಹೇಯ್ ಪರ್ವಾಗಿಲ್ಲ ಹೇಳು. ನಮ್ ಪೈಕಿನೇ ಅವ್ರು

ಶ್ರೀನಿವಾಸ : (ಮೆಲು ಧ್ವನಿಯಲ್ಲಿ)
ಹೇಳ್ತಿನಿ ಆದ್ರೆ ಬಹಳ ಗುಟ್ಟಾಗಿರ್ಬೇಕು

ಚೆನ್ನಯ್ಯ : ಹೇಳಪ್ಪ, ಹೇಳು

ಶ್ರೀನಿವಾಸ : ಮಂಜುನಾಥಪ್ಪನವರು, ಕಳಸಾಪುರದ ಹನುಮನ ಹಟ್ಟೀಲೆಲ್ಲೋ ಇದ್ದಾರೆ. ಆದ್ರೆ ಯಾರ್ ಮನೇಲ್ ಇದ್ದಾರೆ ಗೊತ್ತಿಲ್ಲ.

ಚೆನ್ನಯ್ಯ : ಬ್ಹಾಳ ಉಪ್ಕಾರ ಆಯ್ತ್ ಮಗ. ನಿನ್ ಜೀವ ತಣ್ಣಗಿರ್ಲಿ.
(ಎಂದು ಜೋಳಿಗೆಯಲ್ಲಿ ಇಟ್ಟುಕೊಂಡಿದ್ದ ಕವನದ ಪ್ರತಿಗಳನ್ನು ವಾಪಾಸ್ ಕೊಡುತ್ತ)
.. ತಗೋ, ಜೋಪಾನ್ವಾಗ್ ಇಟ್ಕೋ.
(ಶ್ರೀನಿವಾಸ ಅದನ್ನು ತನ್ನ ಬ್ಯಾಗಿನೊಳಗೆ ಎಚ್ಚರಿಕೆಯಿಂದ ಇಟ್ಟಕೊಳ್ಳುತ್ತಾನೆ ನಂತರ ಚೆನ್ನಯ್ಯ;)
.. ಪೋಲೀಸ್ರ ಕಣ್ ತಪ್ಪಿಸಿ ಓಡಾಡೋ.

ಶ್ರೀನಿವಾಸ : ತುಂಬ ಉಪ್ಕಾರ ಆಯ್ತು.
(ಎಂದು ಹೋಗುತ್ತಿದ್ದವನು ಮತ್ತೆ ಮರಳಿ ಬಂದು ಚೆನ್ನಯ್ಯನನ್ನು;) .. ನಿಮ್ ಹೆಸ್ರೇನು?

ಚೆನ್ನಯ್ಯ : ಬಳೆಗಾರ ಚೆನ್ನಯ್ಯ
(ಶ್ರೀನಿವಾಸ, ಧೈನ್ಯತಾ ಮನೋಭಾವದಿಂದ ಅವನ ಕೈ ಹಿಡಿದು ಕಣ್ಣಲ್ಲೇ ಕೃತಜ್ಞತೆ ಸಲ್ಲಿಸಿ ಹೋಗುತ್ತಾನೆ. ಅವನು ಹೋದ ನಂತರ ಅವನನ್ನೇ ನೋಡುತ್ತ ಚೆನ್ನಯ್ಯ) .. ಕಳಸಾಪುರದ ಹನುಮನ ಹಟ್ಟಿ.

**ನಿರ್ದೇಶಕರ ಟಿಪ್ಪಣಿ:**

ಸ್ವಾತಂತ್ರ್ಯ ಚಳುವಳಿಯ ತೀವ್ರತೆ ಕೇವಲ ಸಾತ್ವಿಕವಾಗಿರದೆ ಕ್ರಾಂತಿಕಾರಕವಾಗಿಯೂ ಇತ್ತು ಎನ್ನುವುದರ ನಿದರ್ಶನಗಳನ್ನು ಉದಾಹರಣೆ ಯಾಗಿಟ್ಟುಕೊಂಡೆ ಕೆಲವು ಘಟನೆಗಳನ್ನು ಹೆಣೆಯಲಾಯಿತು. ಮಂಜು ಮತ್ತು ಅವನ ಸ್ನೇಹಿತರು ಶಂಕರ ಪಾಟೀಲರ ನೇತೃತ್ವದಲ್ಲಿ ನಡೆಸಿದ ಮೆರವಣಿಗೆ. ಆ ಗಲಭೆಯಲ್ಲಿ ಶಂಕರ ಪಾಟೀಲರ ಸಾವು, ನಂತರ ಆ ಪ್ರತಿಭಟನೆ ತೀವ್ರವಾಗುತ್ತ ಹೋಗುವ ಕ್ರಿಯೆ. ಪ್ರತಿಭಟನೆಯ ಆ ತೀವ್ರತೆಯನ್ನು ಘರ್ಷಣೆ ಮುಖಾಂತರ ಕೇವಲ ಸತ್ಯಾಗ್ರಹದಲ್ಲಿಂದ್ದಂತಹ ಗುಂಪು ನಿಧಾನವಾಗಿ ಪೋಲಿಸ್ ಠಾಣೆಗಳಿಗೆ ದಾಳಿಮಾಡುವುದು, ವಿದ್ಯುಚ್ಛಕ್ತಿಯನ್ನು ಕಡಿತಗೊಳಿಸುವುದು, ಸರ್ಕಾರಿ ಖಜಾನೆಯನ್ನು ಲೂಟಿಮಾಡುವುದು ಇತ್ಯಾದಿ ನೇರವಾದ ಕ್ರಾಂತಿಕಾರಕ ಕೆಲಸಗಳಲ್ಲಿ ತನ್ನನ್ನು ತಾನು ತೊಡಗಿಸಿಕೊಳ್ಳುತ್ತ ಹೋಗುತ್ತದೆ. ಹಾಗೆಯೇ ಹಳ್ಳಿ ಹಳ್ಳಿಗಳಲ್ಲಿ ಇದರ ಪ್ರಚಾರಕ್ಕಾಗಿ ಕಲ್ಲಚ್ಚಿನಲ್ಲಿ ತಯಾರಿಸಿದಂತಹ ಭಿತ್ತಿಪತ್ರಗಳನ್ನು ಹಂಚುವ ಕ್ರಿಯೆಯಲ್ಲಿ ಕೂಡ ತೊಡಗಿಕೊಳ್ಳುತ್ತ ಹೋಗುತ್ತದೆ. ಅಂದಿನ ಕಾಲದಲ್ಲಿ ನಡೆಸಿದಂತಹ ಹಲವು ವಿದ್ಯಮಾನಗಳನ್ನು ಒಟ್ಟಾರೆಯಾಗಿ ಪ್ರತಿಬಿಂಬಿಸುವ ಕೆಲಸವನ್ನು ಇಲ್ಲಿ ಮಾಡಲಾಗಿದೆ. ಮಂಜುನಾಥ ಅದಕ್ಕೆ ಸಂಬಂಧಪಟ್ಟ ಸಾಹಿತ್ಯಿಕ ಕೆಲಸಗಳನ್ನು ಮಾಡುತ್ತ, ಘೋಷಣಾವಾಕ್ಯಗಳನ್ನು ಬರೆಯುತ್ತ ಒಟ್ಟಾರೆಯಾಗಿ ಬರಹದ ಕೆಲಸಗಳನ್ನು ಮಾಡುತ್ತ ಅದರ ಬೆನ್ನೆಲುಬಾಗಿ ನಿಲ್ಲುತ್ತಾನೆ. ಇದರ ಉಸ್ತುವಾರಿಯಲ್ಲಿರುವ ಅಮಲ್ದಾರರಿಗೆ ಇದೊಂದು ರೀತಿಯ ಆಶ್ಚರ್ಯದ ಸಂಗತಿಯಾಗುತ್ತದೆ. ಕಾರಣ ಮಂಜುನಾಥ ಆ ತರಹದ ವ್ಯಕ್ತಿಯಲ್ಲವೆಂದು ಯೋಚಿಸಿ ಅಮಲ್ದಾರರು ಅವರನ್ನು ಎಲ್ಲೆಂದರಲ್ಲಿ ಕಂಡಲ್ಲಿ ಬಂಧಿಸುವ ಆದೇಶವನ್ನು ನೀಡುತ್ತಾರೆ. ಈ ಎಲ್ಲ ಕ್ರಿಯೆ-ಪ್ರಕ್ರಿಯೆಗಳು ಚಲನಚಿತ್ರದ ದ್ವಿತೀಯಾರ್ಧದಲ್ಲಿ ಬರುವುದರಿಂದ ಒಂದು ರೀತಿಯ ವೇಗವನ್ನು ಹಾಗೆಯೇ ಘರ್ಷಣೆಯ ಪ್ರಧಾನ ಅಂಶವನ್ನು ಪಡೆದು, ಸಂಘರ್ಷದ ಹಾದಿಯಲ್ಲಿಯೇ ಚಿತ್ರಕಥೆ ಸಾಗುತ್ತ ಹೋಗುತ್ತದೆ. ಈ ಮಧ್ಯೆ ಸಂತೆಯೊಂದರಲ್ಲಿ ಭಿತ್ತಿಪತ್ರವನ್ನು ಹಂಚುತ್ತಿದ್ದಾಗ ಬಳೆಗಾರ ಚೆನ್ನಯ್ಯ ಶ್ರೀನಿವಾಸನನ್ನು ಭೇಟಿಯಾಗಿ, ಅವನನ್ನು ಪೋಲಿಸರಿಂದ ರಕ್ಷಿಸಿ ಮಂಜುನಾಥನ ಬಗ್ಗೆ ವಿವರವನ್ನು ಪಡೆಯುತ್ತಾನೆ. ನಂತರ ತಾನು ಅತ್ತ ಹೆಜ್ಜೆಹಾಕುತ್ತಾನೆ.



## ದೃಶ್ಯ-58

*ಹಗಲು - ಹೊರಗೆ*
*ಹಾಡು: ಬಳೆಗಾರ ಚೆನ್ನಯ್ಯ ಬಾಗಿಲಿಗೆ ಬಂದಿಹೆನು*

(ಬಳೆಗಾರ ಚೆನ್ನಯ್ಯ ಮಂಜುನಾಥನ ವಿಳಾಸವನ್ನು ತಿಳಿದುಕೊಂಡು ಆ ಊರಿನಲ್ಲಿ ಬಳೆಯನ್ನು ಮಾರುತ್ತ ಜೊತೆಗೆ ಮಂಜುನಾಥನನ್ನು ಹುಡುಕುತ್ತಾ ಸಾಗುತ್ತಾನೆ)

ಬಳೆಗಾರ ಚೆನ್ನಯ್ಯ ಬಾಗಿಲಿಗೆ ಬಂದಿಹೆನು
ಒಳಗೆ ಬರಲಪ್ಪಣೆಯೇ ದೊರೆಯೇ
ನವಿಲೂರ ಮನೆಯಿಂದ ನುಡಿಯೊಂದ ತಂದಿಹೆನು
ಬಳೆಯ ತೊಡಿಸುವುದಿಲ್ಲ ನಿಮಗೆ

(ಮಂಜುನಾಥ ಒಂದು ಮನೆಯ ಮಹಡಿಯ ಮೇಲಿಂದ ಚೆನ್ನಯ್ಯನನ್ನು ನೋಡುತ್ತಾನೆ)

ಮುಡಿದ ಮಲ್ಲಿಗೆಯರಳು ಬಾಡಿಲ್ಲ ರಾಯರೆ
ತವರಿನಲಿ ತಾಯಿ ನಗುತಿಹನು

(ಮಾರುವೇಷದಲ್ಲಿರುವ ಮಂಜುನಾಥ ಚೆನ್ನಯ್ಯ ಬಳೆತೊಡಿಸುತ್ತಿರುವ ಜಾಗಕ್ಕೆ ಬರುತ್ತಾನೆ, ಚೆನ್ನಯ್ಯ ಮಂಜುನಾಥನನ್ನು ಉದ್ದೇಶಿಸಿಯೇ ಹಾಡನ್ನು ಮುಂದುವರೆಸುತ್ತಾನೆ)

ಕುಡಿದ ನೀರಲುಗಿಲ್ಲ ಕೊರಗದಿರಿ ರಾಯರೇ
ಅಮ್ಮನಿಗೆ ಬಳೆಯಾ ತೊಡಿಸಿದನು
ಅಂದು ಮಂಗಳವಾರ ನವಿಲೂರ ಕೇರಿಯಲಿ
ಓಲಗದ ಸದ್ದು ತುಂಬಿತ್ತು
ಬಳೆಯ ತೊಡಿಸಿದರಂದು ಅಮ್ಮನಿಗೆ ತವ್ರಿನಲಿ
ಅಂಗಳದ ತುಂಬಾ ಜನರಿತ್ತು.

(ಪದ್ಮಾಳಿಗೆ ಸೀಮಂತ ಮಾಡಿದ ಸುದ್ದಿಯನ್ನು ಚೆನ್ನಯ್ಯ ಹಾಡಿನ ಮೂಲಕ ಮಂಜುನಾಥನಿಗೆ ಹೇಳುತ್ತಾ ಸಾಗುತ್ತಾನೆ)

ಸಿರಿಗೌರಿಯಂತೆ ಬಂದರು ತಾಯಿ ಹಸೆಮಣೆಗೆ
ಸೆರಗಿನಲಿ ಕಣ್ಣೀರನೊರೆಸಿ
ಸುಖದೊಳಗೆ ನಿಮ್ಮ ನೆನೆದರು ತಾಯಿ ಗುಣವಂತೆ
ದೀಪದಲಿ ಬಿಡುಗಣ್ಣನಿರಿಸಿ
ಬೇಕಾದ ಹಣ್ಣಿಹುದು, ಹೂವಿಹುದು ತವ್ರಿನಲಿ
ಹೊಸ ಸೀರೆ ರತ್ನದಾಭರಣ
ತಾಯಿ ಕೊರಗುವರಲ್ಲಿ ನೀವಿಲ್ಲದೂರಿನಲಿ
ನಿಮಗಿಲ್ಲ ಒಂದು ಹನಿ ಕರುಣ



ದಿನವಾದ ಬಸುರಿ ಉಸ್ಸೆಂದು ನಿಟ್ಟುಸಿರೆಳೆದು
ಕುದಿಯಬಾರದು ನನ್ನ ದೊರೆಯೇ
ಗಿಂಡಬಾರದು ದುಂಡುಮಲ್ಲಿಗೆಯ ದಂಡೆಯನು
ಒಣಗಬಾರದು ಒಡಲ ಚಿಲುಮೆ
ಮುಳಿಸು ಮಾವನ ಮೇಲೆ ಮಗಳೇನ ಮಾಡಿದಳು
ನಿಮಗೇತಕೀ ಕಲ್ಲು ಮನಸ್ಸು
ಹೋಗಿ ಬನ್ನಿರಿ ಒಮ್ಮೆ
ಕೈ ಮುಗಿದು ಬೇಡುವೆನು
ಅಮ್ಮನಿಗೆ ನಿಮ್ಮದೇ ಕನಸು.........

**ನಿರ್ದೇಶಕರ ಟಿಪ್ಪಣಿ:**
ಕವಿ ಕೆ.ಎಸ್.ನ ಅವರ ಅದ್ಭುತ ಕವನಗಳಲ್ಲಿ ಒಂದು "ಬಳೆಗಾರ ಚೆನ್ನಯ್ಯ". ಈ ಕವನದ ಸಾಲುಗಳಲ್ಲಿ ಬರುವಂತಹ ನಾಟಕೀಯ ಅಂಶಗಳನ್ನು ಗಮನಿಸಿದಾಗ ನಮ್ಮ



ಚಿತ್ರಕಥೆಯ ಪಾತ್ರಪೋಷಣೆಯ ಈ ಘಟ್ಟದಲ್ಲಿ ಅದು ಎಷ್ಟು ಸಮಂಜಸವಾಗಿ, ಸದೃಶ್ಯವಾಗಿ ಒತ್ತಾಸೆಯಾಗಿ ನಿಲ್ಲುತ್ತದೆ ಎನ್ನುವುದನ್ನು ನಾವು ಇಲ್ಲಿ ಗಮನಿಸಬೇಕು. ಚಳುವಳಿಯ ಮುಂಚೂಣಿಯಲ್ಲಿರುವ ಮಂಜುನಾಥನಿಗೆ ಹಲವು ದಿನಗಳ, ಹಲವು ತಿಂಗಳುಗಳ ಚಳುವಳಿಯ ಕಾರ್ಯ ಮತ್ತು ಅತ್ತ ಪದ್ಮಳ ಸ್ಥಿತಿ ಏನಾಗಿರಬಹುದು ಎಂಬ ಕಲ್ಪನೆಯಿಲ್ಲದೆ ತನ್ನ ಚಳುವಳಿಯ ಕೆಲಸಗಳಲ್ಲಿ ತೊಡಗಿಸಿಕೊಂಡಿದ್ದಾನೆ. ಪ್ರೇಕ್ಷಕನೂ ಕೂಡ ಪದ್ಮ ಏನಾಗಿರಬಹುದೆಂದು ಯೋಚಿಸುವಷ್ಟರಲ್ಲಿ ಚೆನ್ನಯ್ಯನ ಮುಖಾಂತರ ಮತ್ತೆ ನಾವು ಪದ್ಮಳ ಆ ವಿರಹದ ಕಥೆಯನ್ನು ಜೊತೆಗೆ ಆಕೆ ಈಗ ಗರ್ಭಿಣಿ ಎಂಬ ಸಂಗತಿಯನ್ನು ಎಲ್ಲವನ್ನು ಒಂದು ಕವನದ ಮುಖಾಂತರ ತಿಳಿಸಲಾಗುತ್ತದೆ. ಈ ಘಟನೆಗೆ ಇದೇ ಕವನ ಪೂರಕವಾಗಿತ್ತು ಅದಕ್ಕೋಸ್ಕರವೇ ಈ ಹಾಡನ್ನು ಬರೆದಿದ್ದಾರೇನೋ ಎನ್ನುವಷ್ಟರ ಮಟ್ಟಿಗೆ ಈ ಕವನ ನಮ್ಮ ಚಿತ್ರಕಥೆಯ ಒಳಗೆ ಹರವಿಕೊಂಡಿದೆ. ಮೈಸೂರು ಮಲ್ಲಿಗೆಯ ಚಿತ್ರಬಂಧ ಈ ರೀತಿ ಗಟ್ಟಿಗೊಳ್ಳುವುದು ಈ ಸಕಾಲಿಕ ಸಾರ್ವಕಾಲಿಕ ಸತ್ಯಗಳನ್ನು ಸಾದರಪಡಿಸುವುದರಿಂದ. ಹಾಡಿನ ಕೊನೆಯಲ್ಲಿ ಬಳೆಗಾರ ಚೆನ್ನಯ್ಯ ಹಾಡಿನ ಪೂರ್ಣ ಪ್ರಮಾಣದಲ್ಲಿ ಹನುಮನ ಹಟ್ಟಿಯ ಪ್ರತಿಯೊಂದು ಮನೆಗೆ ಹೋಗುತ್ತ ಯಾವ ಮನೆಯಲ್ಲಿ ಮಂಜುನಾಥನಿದ್ದಾನೋ ಅಲ್ಲಿಯೂ ಹಾಡಿನ ಮುಖಾಂತರವೇ ಪದ್ಮಾಳ ಪರಿಸ್ಥಿತಿಯನ್ನು ವಿವರಿಸುತ್ತಾನೆ. ಕವನ ಮುಗಿದ ನಂತರ ಅವರಿಬ್ಬರ ಭೇಟಿಯಾಗುತ್ತದೆ.

# ದೃಶ್ಯ-59

*ಹಗಲು - ಹೊರಗೆ*

(ಮಂಜುನಾಥ ಊರಿನ ಹೊರಗೆ ಚೆನ್ನಯ್ಯನಿಗಾಗಿ ಕಾಯುತ್ತಾ ನಿಂತಿದ್ದಾನೆ. ಚೆನ್ನಯ್ಯ ಮಂಜುನಾಥನನ್ನು ನೋಡಿ ಓಡಿ ಬಂದು)

ಚೆನ್ನಯ್ಯ : ಮಂಜುನಾಥಪ್ಪ..
(ಹತ್ತಿರ ಬಂದು) ..ಹೆಂಗಿದಿರಿ ಒಡ್ಯಾ? ಹೆಂಗಿದಿರಿ?

ಮಂಜುನಾಥ : ಚೆನ್ನಾಗಿದ್ದಿನಿ ಚೆನ್ನಯ್ಯ.
(ಅವನ ಕೈ ಹಿಡಿದುಕೊಂಡು)
.. ನೀನ್ ಚೆನ್ನಾಗಿದ್ದೀಯ? ನಿನ್ ನೋಡ್ದಾಕ್ಷಣ ನಂಗ್ ನವಿಲೂರ್ನೇ ಕಂಡ್ಹಂಗಾಯ್ತು ಚೆನ್ನಯ್ಯ. ಎಲ್ರು ಹ್ಯಾಗಿದಾರೆ?

ಚೆನ್ನಯ್ಯ : (ಅಳುತ್ತ) ಚೆಂದಾಕ್ಕಿದಾರೆ ಒಡ್ಯಾ? ಚೆಂದಾಕಿದಾರೆ.

ಮಂಜುನಾಥ : ಯಾಕೆ? ಯಾಕ್ ಹೀಗಂತಿ? ಏನಾಯ್ತು ಚೆನ್ನಯ್ಯ?

ಚೆನ್ನಯ್ಯ : ಮತ್ತಿನ್ನೇನ್ ಹೇಳ್ಲಿ ಸ್ವಾಮಿ. ಆ ನನ್ ಕಂದ ಪದ್ಮವ್ವ.



ಮಂಜುನಾಥ : ನಾನೇನ್ಮಾಡ್ಲಿ ಚೆನ್ನಯ್ಯ. ನಂಗ್ ಬೇರೆ ದಾರಿ ಇಲ್ಲಿಲ್ಲ. ನಂಗೂ ಯಾವಾಗ್ ಪದ್ಮನ್ ನೋಡ್ತಿನೋ, ಮಾತಾಡ್ತಿನೋ ಅನ್ಸಿಬಿಟ್ಟಿದೆ.



ಚೆನ್ನಯ್ಯ : ಅಷ್ಟ್ ಮಾಡಿ ಸ್ವಾಮಿ. ನಿಮ್ಮನ್ ನೋಡಿದ್ರೆ ಆ ಜೀವಕ್ಕೆ ಅದೇಟೋ ನೆಮ್ದಿ ಸಿಕ್ತೈತೆ. ಒಂದ್ಸಲ ಬಂದ್ಹೋಗಿ ಸ್ವಾಮಿ.

ಮಂಜುನಾಥ : ಆದ್ರೆ ಹ್ಯಾಗ್ ಹೋಗ್ಲೀ ಚೆನ್ನಯ್ಯ. ಇಲ್ಲಿನ್ ಪರಿಸ್ಥಿತಿ ತುಂಬಾ ಕೆಟ್ಟಿದೆ.
(ಎಂದು ತನ್ನ ವೇಷವನ್ನೆಲ್ಲ ಕಳಚುವಾಗ ಒಂದಷ್ಟು ಕವನದ ಪ್ರತಿಗಳು ಸಿಗುತ್ತವೆ ಅದನ್ನು ಚೆನ್ನಯ್ಯನಿಗೆ ಕೊಟ್ಟು;)
.. ಚೆನ್ನಯ್ಯ, ಇದನ್ ತಗೋ, ಪದ್ಮನ್ ಕೈಗ್ ಕೊಡು. ಈ ಕವನಗಳ್ನ ಓದಿದ್ರೆ ಪದ್ಮ ತುಂಬ ಖುಷಿಪಡ್ತಾಳೆ. ಈ ಗಲಾಟೆಯೆಲ್ಲ ಮುಗುದ್ಮೇಲೆ ನಾ ಬರ್ತೀನಿ ಅಂತ ಹೇಳು.

ಚೆನ್ನಯ್ಯ : ಖಂಡಿತ ಬರ್ತೀರಾ ಸ್ವಾಮಿ?

ಮಂಜುನಾಥ : ಖಂಡಿತ ಬರ್ತೀನಿ ಚೆನ್ನಯ್ಯ. ಖಂಡಿತ ಬರ್ತೀನಿ.

ಚೆನ್ನಯ್ಯ : ಸರಿ ನಾ ಇನ್ ಬರ್ತೀನಿ. ಜೋಪಾನ್ವಾಗ್ ನೋಡ್ಕೊಳಿ.
(ಎಂದು ಹೊರಡುತ್ತಾನೆ. ಆದರೆ ಮಂಜುನಾಥನ ಮನಸ್ಸಿನಲ್ಲೂ ಪದ್ಮಳನ್ನು ಕಾಣುವ ತವಕ ಕಾಣುತ್ತದೆ)

**ನಿರ್ದೇಶಕರ ಟಿಪ್ಪಣಿ:**

ಬಳೆಗಾರ ಚೆನ್ನಯ್ಯನನ್ನು ಭೇಟಿಯಾದ ಮಂಜುನಾಥ ಅವಳಿಗಾಗಿ ಕೆಲವು ಕವನಗಳನ್ನು ಕಳುಹಿಸಿಕೊಡುತ್ತಾನೆ. ನಂತರ ಎಂದಾದರೊಂದು ದಿನ ಬಂದು ಹೋಗುವೆನೆಂದು ತಿಳಿಸುತ್ತಾನೆ. ಅದರ ಮುಂದಿನ ದೃಶ್ಯವೇ ನಮ್ಮ ಕಣ್ಣ ಮುಂದೆ ಮಂಜುನಾಥ ಅಲ್ಲಿಗೆ ಬರುವ ದೃಶ್ಯವಾಗುತ್ತದೆ. ಈಗಾಗಲೇ ಪೋಲಿಸರು ಆ ಮನೆಯನ್ನು ಕಾವಲು ಕಾಯುತ್ತಿದ್ದಾರೆ. ಅವರನ್ನು ಮನೆಯ ಮುಂಭಾಗದ ಪಡಸಾಲೆಯಲ್ಲಿ ಕಾವಲು ಕಾಯುವುದನ್ನು ತೋರಿಸುತ್ತ ಅಲ್ಲೂ ಕೂಡ ದಫೇದಾರ ಒಂದು ನಾಟಕದ ಕಂದಪದ್ಯವೊಂದನ್ನು ಹೇಳುತ್ತ ಆ ರಾತ್ರಿಯ ನಿದ್ರೆಯನ್ನು ಓಡಿಸುತ್ತಿರುತ್ತಾನೆ. ಆ ಸಮಯದಲ್ಲಿ ಬಂದ ಮಂಜುನಾಥ ಹಿಂಬಾಗಿಲಿನ ಗೋಡೆಯನ್ನು ಹಾರಿ ಮನೆಯನ್ನು ಪ್ರವೇಶಿಸಿ ಪದ್ಮಳನ್ನು ಭೇಟಿಯಾಗುತ್ತಾನೆ.

## ದೃಶ್ಯ-60

*ರಾತ್ರಿ - ಹೊರಗೆ*

(ಪೋಲೀಸ್ ಮತ್ತು ಪೇದೆಗಳು ಕುಡಿಯುತ್ತ ಹಾಡನ್ನು ಹಾಡುತ್ತ ಕುಳಿತಿದ್ದಾರೆ)

ಪೋಲೀಸ್ : ಭಲರೆ ಮೆರೆವೆ ಸುಖದೀ
ಈ ಧರೆಯೋಳ್ ಭಲರೆ ಭಲರೆ ಬಲು ಸಾಹಸದಿಂದಲಿ
ಭಲರೆ ಮೆರೆವೆ ಸುಖದೀ
ಧೀರ ವೀರರೊಳು ಘನಗುಣನೆನಿಸಿ
ತಾರಚರಿತ ಸಾಮ್ರಾಜ್ಯದ ಸಿರಿಯಲಿ
ತಾರಚರಿತ ಸಾಮ್ರಾಜ್ಯದ ಸಿರಿಯಲಿ
ನಿರುತವು ಧರೆಯಲಿ ಸುಖದೊಳು ಬಾಳುತೆ

(ಎಂದು ಜೋರಾಗಿ ಹಾಡುಹೇಳುತ್ತಿರುವಾಗ ಹಿಂದಿನ ಬಾಗಿಲ ಕಡೆಯಿಂದ ಮುಸುಕುಧಾರಿಯಾಗಿ ಬರುವ ಮಂಜುನಾಥ ಮನೆಯ ಕಿಟಕಿಯ ಕಡೆ ನೋಡುತ್ತಾನೆ)

.. ದುಶ್ಯಾಶನ, ಕೇಳು (ಪೇದೆಗೆ)
ಭುಜಬಲ ಪರಾಕ್ರಮ- ತೋರಿ, ಸಾರಿ
ಭುಜಬಲ ಪರಾಕ್ರಮ ತೋರಿ

(ನಂತರ ಪೇದೆಯೂ ಸೇರಿಕೊಳ್ಳುತ್ತಾನೆ)

.. ಘನಗುಣವನುನಾಂಬೀರಿ ಹಟಮಾರಿ

(ಎಂದು ಹಾಡನ್ನು ಮುಂದುವರೆಸುತ್ತಿರುತ್ತಾನೆ. ಇತ್ತ ಮಂಜುನಾಥ ಗೋಡೆಯನ್ನು ದಾಟಿ ಮನೆಯ ಹಿಂದಿನ ಬಾಗಿಲ ಬಳಿ ಬಂದು;)

ಮಂಜುನಾಥ : ಪದ್ಮ.. ಪದ್ಮ..
(ಎಂದು ಕಿಟಕಿ ಮತ್ತು ಬಾಗಿಲಿನ ಬಳಿ ಕೂಗುತ್ತಾನೆ. ಒಳಗಿನಿಂದ ಶ್ಯಾನುಭೋಗರು ಬಾಗಿಲನ್ನು ತೆರೆಯಲು ಬರುತ್ತಾರೆ. ಬಾಗಿಲನ್ನು ತೆರೆಯುತ್ತ;)

ಶ್ಯಾನುಭೋಗ : ಯಾರದು?



(ಬಾಗಿಲ ಬಳಿ ಮಂಜುನಾಥ ನಿಂತಿರುವುದನ್ನು ನೋಡಿ ಗಾಬರಿಗೊಳ್ಳುತ್ತಾರೆ ಅಷ್ಟರಲ್ಲಿ ಮಂಜುನಾಥ)
.. ಮಂಜು!

ಮಂಜುನಾಥ : ಮಾವಯ್ಯ, ಒಂದ್ಸಲ ಪದ್ಮನ್ನ ನೋಡ್ಕೊಂಡು
(ಎನ್ನುವಷ್ಟರಲ್ಲೆ ಅವನ ಕೈ ಹಿಡಿದು ಒಳಗೆ ಎಳೆದುಕೊಂಡು)
.. ಬಾ ಒಳಗೆ
(ಮಂಜುನಾಥ ಒಳಗೆ ಬಂದು ನಿಂತಾಗ ಪದ್ಮ ಬಂದು ಎದುರಿಗೆ ತನ್ನ ಗಂಡ ಇರುವುದನ್ನು ನೋಡಿ ಸಂತಸಗೊಳ್ಳುತ್ತಾಳೆ. ಮಂಜುನಾಥ, ಪದ್ಮಾಳನ್ನು ನೋಡಿ;)
.. ಪದ್ಮ.
(ಪದ್ಮ ದುಃಖಿಸುತ್ತ ಓಡಿಬಂದು ಮಂಜುನಾಥನ ಕೈ ಹಿಡಿದುಕೊಂಡು ನಿಲ್ಲುತ್ತಾಳೆ. ಮಂಜುನಾಥ ಅವಳ ಹೆಸರನ್ನು ಎರೆಡು ಮೂರು ಬಾರಿ ಕರೆಯುತ್ತಾನೆ ನಂತರ ಶ್ಯಾನುಭೋಗರು;)

ಶ್ಯಾನುಭೋಗ : ಎಚ್ಚರಿಕೆಯಿರ್ಲಿ. ಪೋಲೀಸ್ರಿದ್ದಾರೆ
(ಎಂದು ಅವರಿಬ್ಬರನ್ನು ಅಲ್ಲಿಯೇ ಬಿಟ್ಟು ಒಳಗೆ ಹೋಗುತ್ತಾರೆ. ನಂತರ ಪದ್ಮ, ಮಂಜುನಾಥನನ್ನು ಗಟ್ಟಿಯಾಗಿ ತಬ್ಬಿಕೊಂಡು ಅಳುತ್ತಾಳೆ.)

ಮಂಜುನಾಥ : (ಅಳುವುದನ್ನು ನೋಡಿ) ಯಾಕೆ? ಇಲ್ನೋಡು. ಪದ್ಮ.

ಪದ್ಮ : ಅಯ್ಯೋ ಎಂಥ ಹುಚ್ಚಿ ನಾನು. ಹ್ಯಾಗಿದ್ದೀರ ನೀವು? ಹೊತ್ತೊತ್ತಿಗ್ ಸರೀಗ್ ಊಟ ಮಾಡ್ತಿದ್ದೀರ? ಎಷ್ಟು ಸೊರ್ಗ್ಹೋಗಿದ್ದೀರ? ಬನ್ನಿ ಊಟ ಮಾಡಿ ನಡೀರಿ. ನಡೀರಿ. ಒಳ್ಗಡೆ ನಡೀರಿ

ಮಂಜುನಾಥ : ಬೇಡ್ವೆ ಪದ್ಮ

ಪದ್ಮ : (ಒಳಗೆ ಕರೆತರುತ್ತ)
ಬನ್ನಿ. ಇಷ್ಟ್ ದಿನ ಯಾವೂರಲ್ಲಿದ್ರಿ ನೀವು?

ಮಂಜುನಾಥ : ಹೊಸದುರ್ಗ

ಪದ್ಮ : ಅಯ್ಯೋ, ಬರೀ ಕಾಡು ಮೇಡು. ನಡ್ದು ನಡ್ದು ಎಷ್ಟು ಕಾಲ್ ನೋಯ್ತಿದ್ಯೋ ಏನೋ? ಕಪ್ಪುಗ್ ಬೇರೆ ಆಗ್ಬಿಟ್ಟಿದ್ದಿರ. ಕೂತ್ಕೊಳಿ
(ಎಂದು ಏನನ್ನೋ ತರಲು ಹೋಗುವ ಅವಳನ್ನು ಮಂಜುನಾಥ ತಡೆದು)

ಮಂಜುನಾಥ : ನೀನ್ ಬಾ ಪದ್ಮ

ಪದ್ಮ : ಸ್ವಲ್ಪ ಊಟ ಮಾಡಿ.
ಮಂಜುನಾಥ : ಊಟ ಬೇಡ. ಮಾತಾಡೋಣ.
ಪದ್ಮ : ಹೋಗ್ಲಿ ಒಂದ್ ಲೋಟ ಹಾಲಾದ್ರು ಕುಡೀಬೇಕು. ಇನ್ನೇನ್ ಕಾದ್ಬಿಡುತ್ತೆ.
(ಎಂದು ಹಾಲನ್ನು ತಗೆದುಕೊಳ್ಳಲು ಕುಳಿತುಕೊಂಡಾಗ ಹೊಟ್ಟೆ ನೋವಾಗಿ ಕೂಗುತ್ತಾಳೆ. ಮಂಜುನಾಥ ಗಾಬರಿಯಿಂದ ಅವಳನ್ನು ನೋಡಿದಾಗ ಪದ್ಮ ಏನೂ ಇಲ್ಲವೆಂದು ಸಂಜ್ಞೆಮಾಡಿ ಅವನನ್ನು ಕೂರಿಸುವಳು)
.. ಕೂತ್ಕೊಳಿ
(ಎಂದು ಕೂರಿಸಿ ಅವನ ಕೈಯನ್ನು ತನ್ನ ಹೊಟ್ಟೆಗೆ ಹಿಡಿಸಿ ಸಂತಸಪಡುತ್ತಾಳೆ. ಮಂಜುನಾಥನಿಗೆ ಈಗ ಆಕೆ ಗರ್ಭವತಿಯಾಗಿದ್ದಾಳೆಂದು ಅರಿವಾಗಿ;)
ಮಂಜುನಾಥ : (ಅಚ್ಚರಿಯಿಂದ) ..ಪದ್ಮ..!
ಪದ್ಮ : ಇಲ್ನೋಡಿ ಮಗು ಹ್ಯಾಗ್ ಒದೀತಾಯಿದೆ? ನೋಡಿ..
(ಮಂಜುನಾಥ ತನ್ನ ಕಿವಿಯನ್ನು ಅವಳ ಹೊಟ್ಟೆಗೆ ತಾಗಿಸಿ ಮಗುವಿನ ಸ್ಪರ್ಶಸುಖ ಪಡೆದುಕೊಂಡು ಸಂತೋಷಗೊಂಡು)
ಮಂಜುನಾಥ : ಹ್ಞಾಂ
ಪದ್ಮ : ಮಗೂಗ್ ಏನಂತ ಹೆಸ್ರಿಡೋಣ?
ಮಂಜುನಾಥ : (ಯೋಚಿಸಿ) ..ಹಮ್ ಭಾರತಿ
ಪದ್ಮ : (ಬೇಡವೆನ್ನುವಂತೆ ಸಂಜ್ಞೆಮಾಡಿ) .. ಭರತ್
ಮಂಜುನಾಥ : (ಯೋಚಿಸಿ)
.. ಭರತ್–ಭಾರತಿ
(ಎರಡೆರಡು ಎಂದು ಸಂಜ್ಞೆಮಾಡಿ ತಮಾಷೆಮಾಡುವನು. ನಂತರ ಪದ್ಮ ನಗುತ್ತ ಒಲೆಯ ಮೇಲಿರುವ ಹಾಲನ್ನು ಬರೀಗೈಯಲ್ಲೆ ಇಳಿಸಲು ಹೋದಾಗ ಕೈ ಸುಟ್ಟು ಪಾತ್ರೆಯನ್ನು ಕೆಳಗೆ ಹಾಕಿ ಜೋರಾಗಿ ಕಿರುಚಿಕೊಳ್ಳುತ್ತಾಳೆ. ಇತ್ತ ಕುಳಿತಿದ್ದ ಪೋಲೀಸರು ಎಚ್ಚೆತ್ತು;)
ಪೋಲೀಸ್ (ತನ್ನ ಪೇದೆಗೆ)
.. ಹೇಯ್ ಆರೆ
(ಎಂದು ಪಕ್ಕದಲ್ಲಿ ಮಲಗಿದ್ದ ಇನ್ನೊಬ್ಬ ಪೇದೆಯನ್ನು ಎಬ್ಬಿಸುತ್ತ)
.. ಅರೆ ವೋ ಕುತ್ತೆ ಆರೆ ಆರೆ.
(ಎಂದು ಶಾನುಭೋಗರ ಮನೆಯ ಬಾಗಿಲ ಬಳಿ ಬಂದು)
.. ಶಾನ್ಭೋಗ್ರೆ? ರೀ ಶಾನ್ಭೋಗ್ರೆ?



(ಪದ್ಮ ಮತ್ತು ಮಂಜುನಾಥ ಗಾಬರಿಗೊಳ್ಳುತ್ತಾರೆ)
.. ಶಾನ್ಭೋಗ್ರೆ ಬಾಗ್ಲು ತೆಗೀರ್ರೀ.
ಮಂಜುನಾಥ : ಪದ್ಮ, ಪೋಲೀಸ್ನೋರ್ ಬರೋಕ್ ಮುಂಚೇನೆ ಹೋಗ್ಬೇಕು
ಪದ್ಮ : ಈಗ್ ಬಂದ್ ಈಗ್ಲೇ?!
ಪೋಲೀಸ್ : ಬಾಗ್ಲು ತೆಗೀರ್ರೀ
(ಪೋಲೀಸ್ ಕೂಗಿಕೊಳ್ಳುತ್ತಲೇ ಇರುತ್ತಾನೆ)
ಮಂಜುನಾಥ : (ಪದ್ಮಾಳಿಗೆ) ..ನಾನ್ ಬರ್ಲಾ?
(ಪೋಲೀಸ್ ಬಾಗಿಲನ್ನು ಬಡಿಯುತ್ತಲೇ ಇರುತ್ತಾನೆ. ಶಾನುಭೋಗರು ಬಾಗಿಲನ್ನು ತೆರೆದು;)
ಪೋಲೀಸ್ : ಬಾಗ್ಲು ತೆಗೀರ್ರೀ
ಶಾನುಭೋಗ : ಏನದು ದಫೇದಾರ್ರೇ?
ಪೋಲೀಸ್ : ಏನ್ ಸ್ವಾಮಿ ಅದು ಅಂದರ್ ಆವಾಜ್ ಬಂತಲ್ಲ?
ಶಾನುಭೋಗ : ಹಾಲಿನ್ ನೆಲ್ವಿನ್ಮೇಲೆ ಬೆಕ್ಕ್ ಹಾರ್ತು ದಫೇದಾರ್ರೇ. ಮನೇಲ್ ಯಾರೂ ಇಲ್ಲ ನೋಡಿ, ಇರೋದ್ ಇಬ್ರು ಹುಡ್ಗೀರು ಅವ್ರೇ ದಡಾಬಡಾ ಓಡಾಡಿದಾರೆ
(ಇತ್ತ ಮಂಜುನಾಥನಿಗೆ ಪದ್ಮ ಬೀಳ್ಕೊಡುಗೆ ನೀಡುತ್ತಿದ್ದಾಳೆ.)
.. ಅವ್ರೇ ದಡಾಬಡಾ ಓಡಾಡಿದಾರೆ. ಅಡುಗೆ ಮನೇಲಿ ಹಾಲಿನ್ ಪಾತ್ರೆ ಬೀಳೋದ್ ಏನ್ ದೊಡ್ಡಲ್ಲ. ನಮ್ಮೇಲ್ ಅಷ್ಟೂ ನಂಬಿಕೆ ಇಲ್ವಾ ನಿಮ್ಗೆ?
ಪೋಲೀಸ್ : ಯಾವ್ದಕ್ಕು ಒಂದಪ ಅಂದರ್ ತಲಾಶ್ ಮಾಡೇ ಬುಡ್ತೀವಿ.
(ಒಳಗೆ ನುಗ್ಗುತ್ತಾನೆ. ಶಾನುಭೋಗರು ಅವನನ್ನು ತಡೆಯುತ್ತಾರೆ)
ಶಾನುಭೋಗ : ದಫೇದಾರ್ರೇ, ಒಳಗೆ ಬಸ್ರಿ ಹೆಂಗ್ಸು, ನಿಮ್ಗ್ ಹೊತ್ತು ಗೊತ್ತು ಇಲ್ವೇನ್ರಿ?
ಮಂಜುನಾಥ : ಬರ್ಲಾ ಪದ್ಮ
(ಎಂದು ಹೊರಡುತ್ತಾನೆ. ಪದ್ಮ ದುಃಖಿಸುತ್ತ ಅವನನ್ನು ಬೀಳ್ಕೊಡುತ್ತಾಳೆ. ಮಂಜುನಾಥ ಗೋಡೆಯನ್ನು ಹಾರಿ ಕಣ್ಮರೆಯಾಗುತ್ತಾನೆ)
ಪೋಲೀಸ್ : (ಪೇದೆಗಳಿಗೆ) ..ಹೇಯ್ ಬನ್ರೋ
(ಎಂದು ಒಳಗೆ ಬರುವಂತೆ ಆದೇಶ ಕೊಟ್ಟು ಒಳಗೆ ಹೋಗುತ್ತಾನೆ. ಒಳಗೆ ಬರುವ ಪೋಲೀಸ್ ಹಿಂದಿನ ಬಾಗಿಲ ಬಳಿ ಬಂದಾಗ, ಅದೇ ತಾನೆ ಬಾಗಿಲು

ಮುಚ್ಚಿ ನಿಂತಿದ್ದ ಪದ್ಮ ಬೇರೆ ಏನನ್ನೋ ಹುಡುಕುತ್ತಿದ್ದವಳಂತೆ ನಟಿಸುತ್ತಾಳೆ. ನಂತರ ನಿಟ್ಟುಸಿರು ಬಿಡುತ್ತ ಅಡುಗೆ ಮನೆಯೊಳಗೆ ಬಂದಾಗ ಮಂಜುನಾಥ ತನ್ನ ಬ್ಯಾಗನ್ನು ಬಿಟ್ಟುಹೋಗಿರುವುದನ್ನು ನೋಡಿ ದಿಗ್ಭ್ರಮೆಯಾಗುತ್ತಾಳೆ. ಪೋಲೀಸ್ ಬರುತ್ತಿರುವುದನ್ನು ಗಮನಿಸಿ ಬ್ಯಾಗನ್ನು ಒಲೆಯೊಳಗೆ ಹಾಕಿ ಅದರ ಮೇಲೆ ಹಾಲಿನ ಪಾತ್ರೆಯಿಟ್ಟು ಚೆಲ್ಲಿರುವ ಹಾಲನ್ನು ಒರೆಸಲು ಪ್ರಾರಂಭಿಸುತ್ತಾಳೆ. ಅಡುಗೆ ಮನೆ ಬಳಿ ಬರುವ ಪೋಲೀಸ್ ತನ್ನಷ್ಟಕ್ಕೆ ತಾನೆ;)

.. ನಿಜ, ಹಾಲ್ ಚೆಲ್ಲೋಗೈತೆ.

(ಎಂದು ಬೇರೆಡೆಗೆ ಪರಿಶೀಲನೆ ನಡೆಸಲು ಹೋಗುತ್ತಾನೆ. ಪದ್ಮ ತಕ್ಷಣ ಒಲೆಗೆ ಹಾಕಿದ್ದ ಬ್ಯಾಗನ್ನು ಆಚೆ ತಗೆದು ಅದಕ್ಕೆ ತಗುಲಿದ್ದ ಬೆಂಕಿಯನ್ನು ನಂದಿಸಲು ಪ್ರಯತ್ನಪಡುತ್ತಾಳೆ. ಪೋಲೀಸ್ ಇತ್ತ ಶಾನುಭೋಗರ ಬಳಿ ಬಂದು;)

.. ಹುಷಾರ್ ಸ್ವಾಮಿ, ಕಣ್ತಪ್ಪಿಸಿ ಏನೇನೋ ಮಾಡಕ್ಕೋಗಿಬಿಟ್ಟೇರಿ ಆಮೇಲೆ. ಒಂದ್ಹೋಗಿ ಇನ್ನೊಂದಾದೀತು

ಶಾನುಭೋಗ : ಅಂಥದ್ದೇನಿಲ್ಲ, ನೀವೇನು ಆ ಬಗ್ಗೆ ಯೋಚ್ನೆ ಮಾಡ್ಬೇಡಿ.

ಪೋಲೀಸ್ : ಮಾಫ್ ಕರ್‍ನಾ ಸ್ವಾಮಿ. ಬತ್ತೀನಿ.
(ಎಂದು ಹೊರಡುವನು)

ಶಾನುಭೋಗ : ನಮಸ್ಕಾರ.
(ಪ್ರತಿ ನಮಸ್ಕಾರ ಹೇಳಿ ಒಳಗೆ ಬರುವರು. ಇತ್ತ ಪದ್ಮ, ಮಂಜುನಾಥ ಬರೆದಿರುವ ಕವಿತೆಗಳನ್ನು ನೋಡುತ್ತ ದುಃಖಿಸುತ್ತಿರುವುದನ್ನು ತಂದೆ ಶಾನುಭೋಗರು ಮೂಕವಿಸ್ಮಿತರಾಗಿ ನೋಡುತ್ತಿರುತ್ತಾರೆ. ನಂತರ ಪದ್ಮ ತಂದೆಯ ಎದೆಗೊರಗಿ ಮತ್ತೂ ದುಃಖಿತಳಾಗುತ್ತಾಳೆ. ಶಾನುಭೋಗರು ಅವಳನ್ನು ತಬ್ಬಿ ಸಂತೈಸುತ್ತಾರೆ)



# ದೃಶ್ಯ–61

***ಹಗಲು–ಶಾನುಭೋಗರ ಮನೆ ಹೊರಗೆ***

(ಬಳೆಗಾರ ಚೆನ್ನಯ್ಯ ಶಾನುಭೋಗರ ಮನೆಗೆ ಬಂದು ಪೋಲೀಸರನ್ನು ನೋಡುತ್ತ;)

ಚೆನ್ನಯ್ಯ : ಇದೇನ್ ನಮ್ಮನೆ ಪೋಲೀಸ್ ಚೌಕಿ ಆಗ್ಹೋಗೈತಲ್ಲ?!
(ಚೆನ್ನಯ್ಯನನ್ನು ನೋಡಿದ ಪೋಲೀಸ್)

ಪೋಲೀಸ್ : ಅರೆ ಚೆನ್ನಯ್ಯ! ಆವೋ.

ಚೆನ್ನಯ್ಯ : ಇಲ್ಯಾಕ್ ಜಾಂಡಾ ಹಾಕಿದ್ದೀರಿ?
(ಪದ್ಮಾಳನ್ನು ನೋಡಿ)
.. ಪದ್ಮವ್ವಾ ಚೆಂದಾಕಿದ್ಯಾ ತಾಯಿ?

ಪದ್ಮ : ಚೆನ್ನಾಗಿದ್ದೀನ್ ಚೆನ್ನಯ್ಯ. ನೀನ್ಯಾವಾಗ್ ಬಂದೆ?

ಚೆನ್ನಯ್ಯ : ಈಗ್ತಾನೆ ಬಂದೆ ಕಣವ್ವ.
(ಪೋಲೀಸರನ್ನು ನೋಡುತ್ತ)
.. ಹೌದು ಕರೀಮ್ ಖಾನ್ರು ಏನ್ ನಡಸವ್ರೆ ಇಲ್ಲಿ?

ಪೋಲೀಸ್ : ಸರ್ಕಾರ್ ಕಾ ಕಾಮ್ ಕಣಯ್ಯ. ಪೇಟ್ ಕಾ ಸವಾಲ್. ಮಾಡ್ಲೇ ಬೇಕಲ್ಲ.

ಚೆನ್ನಯ್ಯ : ಹ್ಹಾ.. ಹ್ಹಾ.. ನಡ್ಸಿ.. ನಡ್ಸಿ..
ಪದ್ಮವ್ವ, ಬೀಗ್ರ ಮನೆತಾವ ಹೋಗಿದ್ದೆ ಕಣವ್ವ
(ಎಂದು ಉತ್ಸಾಹದಿಂದ ಹೇಳುತ್ತಾನೆ)
.. ನಿನ್ ತುಂಬಾ ಕೇಳುದ್ರು.
(ಪದ್ಮಾಳಿಗೆ ಅರ್ಥವಾಗದೆ)

ಪದ್ಮ : ಬೀಗ್ರು.!?
(ಯಾರೆಂದು ಯೋಚಿಸುತ್ತಿರಬೇಕಾದರೆ ಚೆನ್ನಯ್ಯ ಮತ್ತೆ;)

ಚೆನ್ನಯ್ಯ : ಬೀಗ್ರು.. ಬೀಗ್ರು..
(ಎಂದು ಅರ್ಥವಾಗುವ ರೀತಿಯಲ್ಲಿ ಪೋಲೀಸರಿಗೆ ತಿಳಿಯದ ಹಾಗೆ ಹೇಳಿದಾಗ ಪದ್ಮಾಳಿಗೆ ಅರ್ಥವಾಗಿ)

ಪದ್ಮ : ಓ ಬೀಗ್ರು!!
(ಅರ್ಥವಾಗಿ ಪೋಲೀಸರು ಇರುವುದನ್ನು ಗಮನಿಸಿ ಚೆನ್ನಯ್ಯನಿಗೆ)
.. ಚೆನ್ನಯ್ಯ ಒಳಗಡೆ ಬಾ, ಏನಾದ್ರು ತಗೊಂಡ್ ಹೋಗುವಂತೆ ಬಾ.

ಚೆನ್ನಯ್ಯ : ಆಯ್ತ್ ನಡಿಯವ್ವ, ನಡಿಯವ್ವ.
(ಎಂದು ಒಳಗೆ ಹೋಗುತ್ತಿದ್ದ ಚೆನ್ನಯ್ಯನನ್ನು ಪೋಲೀಸ್

ಪೇದೆ ತಡೆದು;)

ಪೇದೆ : ಚೆನ್ನಯ್ಯ, ನಿಂತ್ಕೋ. ನಿನ್ನ ತಪಾಸ್ಣೆ ಮಾಡ್ಬೇಕು.
(ಚೆನ್ನಯ್ಯ ತಬ್ಬಿಬ್ಬಾಗುವ ಸಂದರ್ಭದಲ್ಲಿ ಶಾನುಭೋಗರು ಪ್ರವೇಶಿಸಿ)

ಶಾನುಭೋಗ : ಏನು? ಎಂಥದದು ತಪಾಸ್ಣೆ ಮಾತು.

ಚೆನ್ನಯ್ಯ ಹೇಯ್ ನಂತಾವೇನೈತೆ ಸಿದ್ದಣ್ಣ? ಈ ಬಳೆ ಇದು
(ಎಂದಾಗ ಪೇದೆ ಪೋಲೀಸನ ಕಡೆ ನೋಡುತ್ತಾನೆ ಆಗ ದಫೇದಾರ)

ದಫೇದಾರ : ಚೆನ್ನಯ್ಯ. ಮನೆಯವ್ರನ್ನ ಬಿಟ್ಟು ದೂಸ್ರ ಯಾರೇ ಬಂದ್ರು ತಪಾಸ್ಣೆ ಮಾಡ್ಬೇಕೂಂತ ಆರ್ಡರ್ರಾಗೈತಪ್ಪ. ಶಾಸ್ತ್ರ ಮಾಡೇ ಬಿಡಾನ. ನೋಡೋ ಸಿದ್ದ.

ಶಾನುಭೋಗ : (ನಗುತ್ತ) .. ಅವನತ್ರ ಏನ್ ಸಿಗುತ್ತೆ ಕರೀಮ್? ಬರೀ ಬಳೆ ಅದ್ಬಿಟ್ರೆ, ಒಂದ್ಮೂರ್ರಾಕ್ ಹರ್ಕು-ಮುರ್ಕು ಬಟ್ಟೆ ಇರ್ಬಹುದು ಅಷ್ಟೆ.

ಪೇದೆ : ನಮ್ ಡ್ಯೂಟಿ ನಾವ್ ಮಾಡ್ಲೇಬೇಕಲ್ಲ ಸ್ವಾಮಿ.
(ಎಂದು ಚೆನ್ನಯ್ಯನ ಬ್ಯಾಗನ್ನು ಪರಿಶೀಲಿಸಲು ಆರಂಭಿಸುತ್ತಾನೆ. ಚೆನ್ನಯ್ಯ ಭಯಭೀತನಾಗಿ ಏನನ್ನೂ ಮಾಡದೆ ನಿಲ್ಲುತ್ತಾನೆ. ಪರಿಶೀಲಿಸಿದ ಬಳಿಕ ದಫೇದಾರನಿಗೆ)
.. ಏನಿಲ್ಲ
(ಎಂದಾಗ ಪದ್ಮ ಸಮಾಧಾನಗೊಳ್ಳುತ್ತಾಳೆ)

ಶಾನುಭೋಗ : ಹೇಳ್ಲಿಲ್ವ? ಬಾ
(ಎಂದು ಚೆನ್ನಯ್ಯನನ್ನು ಒಳಗೆ ಕರೆದೊಯ್ಯಲು ಹೋಗುವಾಗ ದಫೇದಾರ ತಡೆದು)

ದಫೇದಾರ : ಚೆನ್ನಯ್ಯ, ವಸಿ ನಿಂತ್ಕೊ.
(ಪೇದೆಗೆ) .. ಹೇ ಸಿದ್ದ, ಇನ್ನೊಂದನ್ನ ನಿಮ್ಮಪ್ಪಂಗ್ ಬಿಟ್ಟೇನೋ? ಅದನ್ನು ಹುಡ್ಕೋ
(ಎಂದಾಗ ಚೆನ್ನಯ್ಯ ಭಯಭೀತನಾಗಿ ಪೇದೆಯ ಹತ್ತಿರ ಬರುತ್ತಾನೆ. ಪೇದೆಗೆ ಮಂಜುನಾಥ ಕೊಟ್ಟ ಕವನದ ಪ್ರತಿಗಳು ಸಿಕ್ಕುತ್ತವೆ. ಪೇದೆಯ ಕೈಗೆ ಸಿಕ್ಕ ಕೂಡಲೆ ಪದ್ಮ ಗಾಬರಿ ಬೀಳುತ್ತಾಳೆ.)

ಪೇದೆ : ಕರೀಂ ಅಣ್ಣಾ..
(ಆಶ್ಚರ್ಯದಿಂದ ಆತನ ಹೆಸರನ್ನು ಕೂಗುವನು. ಶಾನುಭೋಗರು ಪೇದೆಯ ಬಳಿ ಬಂದು;)

ಶಾನುಭೋಗ : ಎಲ್ಲಿ..



(ಎಂದು ಅವನ ಕೈಲಿದ್ದ ಹಾಳೆಗಳನ್ನು ತಗೆದುಕೊಂಡು ನೋಡಿ;)
.. ಮಂಜುನಾಥಂದು!
(ಎಂದಾಗ ಪದ್ಮ ಅದನ್ನು ಕಿತ್ತುಕೊಂಡು ನೋಡಲು ತೊಡಗುತ್ತಾಳೆ ಆಗ ದಫೇದಾರ ಬಂದು;)

ದಫೇದಾರ : ಕೊಡು ಬೇಟಿ.
(ಪದ್ಮ ಕೊಡುವುದಿಲ್ಲವೆಂಬಂತೆ ದುಃಖಿಸುತ್ತ ಅದನ್ನು ಗಟ್ಟಿಯಾಗಿ ಎದೆಗಪ್ಪಿಕೊಳ್ಳುವಳು. ದಫೇದಾರ ಮತ್ತೆ;)
.. ಹಟ ಮಾಡ್ಬಾರ್ದು ಕೊಡು ಬೇಟಿ. ಈಗದು ನಮ್ ಸುಪರ್ದಿಗ್ ಸೇರಿದ್ದು.



ಶಾನುಭೋಗ : ಕೊಡಮ್ಮ. ಪದ್ಮ, ಕೊಡು.
(ಒಲ್ಲೆ ವೆಂದು ಹಟಮಾಡುತ್ತಲೇ ದುಃಖಿಸುತ್ತಿರುತ್ತಾಳೆ)
.. ಕೊಡ್ಬಿಡು.

ದಫೇದಾರ : ಕೊಡು ಬೇಟಿ. ಕೊಡು
(ಎಂದು ಬಲವಂತವಾಗಿ ಅವಳಿಂದ ತಗೆದುಕೊಳ್ಳುತ್ತಾನೆ ನಂತರ ತನ್ನ ಪೇದೆಗೆ)
.. ತಗೋ ಸಿದ್ದ. ಅದ್ರೊಳಗ್ ಹಾಕು. ಅದನ್ನು ತಗೋ
(ಎಂದು ಚೆನ್ನಯ್ಯನ ಬ್ಯಾಗನ್ನು ತಗೆದುಕೊಳ್ಳಲು ಹೇಳುತ್ತಾನೆ. ನಂತರ ಚೆನ್ನಯ್ಯನಿಗೆ)
.. ಚೆನ್ನಯ್ಯ ನಡಿ ನಮ್ ಜೊತೆ

| | | |
|---|---|---|
| ಶಾನುಭೋಗ | : | ಬಿಟ್ಟಿಡು ಕರೀಮ್. |
| ದಫೇದಾರ | : | (ಕೈ ಮುಗಿಯುತ್ತ)<br>.. ಮಾಫ್ ಕರ್ನಾ ಸ್ವಾಮಿ. ನಮ್ ಡ್ಯೂಟಿ ನಾವ್ ಮಾಡ್ತೀವಿ. ಖುದಾ ಹಿಂಗೇ ಆಗ್ಬೇಕು ಅಂತ ಬರ್ದಿದ್ರೆ ಅದಂಗೇ ನಡೀತದೆ. ಚೆನ್ನಣ್ಣ ನಡಿ ಹೋಗಣ.<br>(ಪದ್ಮ ಇನ್ನೂ ದುಃಖಿಸಲು ಆರಂಭಿಸುತ್ತಾಳೆ. ಚೆನ್ನಯ್ಯ ಅಳುತ್ತ) |
| ಚೆನ್ನಯ್ಯ | : | ಶಾನ್ಭೋಗ್ರೆ<br>(ಎಂದು ಹೋಗುವುದಾಗಿ ಸಂಜ್ಞೆಮಾಡಿ ಹೊರಡುತ್ತಾನೆ) |
| ಶಾನುಭೋಗ | : | ಚೆನ್ನಯ್ಯ (ಅವನನ್ನು ಬೀಳ್ಕೊಡುತ್ತಾರೆ) |
| ದಫೇದಾರ | : | ಸಲಾಮ್ ಸ್ವಾಮಿ.<br>(ಚೆನ್ನಯ್ಯ ಪದ್ಮಾಳತ್ತ ತಿರುಗಿ ದುಃಖಿಸುತ್ತಾನೆ) |
| ಚೆನ್ನಯ್ಯ | : | ಪದ್ಮವ್ವ<br>(ದಫೇದಾರ ಅವನನ್ನು ತಡೆಯುತ್ತ) |
| ದಫೇದಾರ | : | ಚೆನ್ನಣ್ಣ ನಡಿ ಹೋಗಣ<br>(ಅತಿಯಾಗಿ ದುಃಖಿಸುತ್ತಿರುವ ಅವಳನ್ನು ಸಂತೈಸಲಾಗದೆ ಶಾನುಭೋಗರು ಒಳಗೆ ಹೋಗುತ್ತಾರೆ.) |
| ಪದ್ಮ | : | ಚೆನ್ನಯ್ಯ<br>(ಎಂದಾಗ ಬಾಗಿಲ ಬಳಿ ಹೋಗುತ್ತಿದ್ದ ಆತ ಮತ್ತೆ ತಿರುಗಿ ಅವಳತ್ತ ದುಃಖದಿಂದ ನೋಡುತ್ತಾನೆ) |
| ದಫೇದಾರ | : | ಅಣ್ಣ ಜೆಲ್ದಿ ನಡಿಯಣ್ಣ ಹೋಗಣ<br>(ಎಂದು ಅವನನ್ನು ಕರೆದೊಯ್ದಾಗ ಪದ್ಮ ಅತೀವವಾಗಿ ದುಃಖಿಸುತ್ತ ಅಲ್ಲೇ ನಿಲ್ಲುತ್ತಾಳೆ) |

**ನಿರ್ದೇಶಕರ ಟಿಪ್ಪಣಿ:**

ಪ್ರತಿ ಚಿತ್ರದ ದ್ವಿತೀಯಾರ್ಧದಲ್ಲಿ ಬರಬೇಕಾಗಿದ್ದಂತಹ ಒತ್ತಡ, ಕುತೂಹಲ, ನಾಟಕೀಯ ಅಂಶಗಳೇನಿವೆ ಅವುಗಳನ್ನು ತರುವುದಕ್ಕೆ ಸಾಧ್ಯವಾಗಿದ್ದು ಸ್ವಾತಂತ್ರ್ಯ ಸಂಗ್ರಾಮದ ಕಾರಣದಿಂದಲೇ. ಮಂಜುನಾಥ ಪದ್ಮಳನ್ನು ನೋಡಲು ಬಂದಾಗ ಕಾರಣಾಂತರಗಳಿಂದ ಒಳಗೆ ಬರುವ ಪೋಲಿಸರು ಮತ್ತು ಅದೇ ಸಮಯಕ್ಕೆ ಮಂಜುನಾಥ ಪದ್ಮಳನ್ನು ಬಿಟ್ಟುಹೋಗುವ ಪರಿಸ್ಥಿತಿ, ಅಲ್ಲಿಗೆ ಬಂದರೂ ಮಾತನಾಡಲೂ ಆಗದೇ, ನೋಡಲೂ ಆಗದೇ, ಕೆಲವೇ ಕ್ಷಣಗಳಲ್ಲಿ ಮತ್ತೆ ತಿರುಗಿ ಹೋಗುವ ಪರಿಸ್ಥಿತಿ ನಿರ್ಮಾಣವಾಗಿ ಅದನ್ನು ನಿಭಾಯಿಸುವ ಚಾಕಚಕ್ಯತೆಯನ್ನು ಶಾನುಭೋಗರೇ ವಹಿಸುವುದು. ಇವು ಪರಿಸ್ಥಿತಿಯೊಂದಿಗೆ ಬದಲಾಗುತ್ತಿರುವ ಭಾವಗಳನ್ನು ಈ ದೃಶ್ಯ ಹಿಡಿದಿಡುತ್ತದೆ. ಅತ್ತ ಬಳೆಗಾರ ಚೆನ್ನಯ್ಯನಿಗೆ ಕವನಗಳನ್ನು ಕೊಟ್ಟು ಕಳುಹಿಸಿದ್ದರೂ ಕೂಡ ಇತ್ತ ತಡೆಯಲಾರದೆ ಬಂದು ಹೋಗುವ ಮಂಜುನಾಥನ ಮನಸ್ಥಿತಿಯೊಂದಿಗೆ ದೃಶ್ಯ ಕಳೆಗಟ್ಟುತ್ತದೆ. ಇಲ್ಲಿ ನವಿರಾದ ಭಾವನೆಗಳನ್ನು



ಹೇಗೆ ಪರಿಸ್ಥಿತಿ ವೈವಿಧ್ಯಪೂರ್ಣವಾಗಿಸುತ್ತದೆ ಎನ್ನುವುದು ಬಹಳ ಮುಖ್ಯ. ಬೆಳಗ್ಗೆ ಚೆನ್ನಯ್ಯ ಮಂಜು ಕೊಟ್ಟ ಪತ್ರಗಳ ಜೊತೆಯಲ್ಲಿ ಪದ್ಮಳ ಭೇಟಿಮಾಡಲು ಬರುತ್ತಾನೆ. ಆದರೆ ವಿಧಿಯ ವಿಪರ್ಯಾಸ ಚೆನ್ನಯ್ಯ ಕರೀಂಖಾನ್‌ರ ಕೈಗೆ ಸಿಕ್ಕಿಬೀಳುತ್ತಾನೆ, ಮಂಜುನಾಥನ ಆ ಪತ್ರಗಳ ದೆಸೆಯೊಂದಿಗೆ. ವಿಧಿಯಿಲ್ಲದೆ ಮನಸ್ಸಿಲ್ಲದ ಮನಸ್ಸಿನೊಂದಿಗೆ ಕರೀಂಖಾನ್ ತನ್ನ ಕರ್ತವ್ಯವನ್ನು ನಿಭಾಯಿಸಲು ಅವನನ್ನು ಕರೆದೊಯ್ಯುತ್ತಾನೆ. ಪದ್ಮ ಮತ್ತು ಶಾನುಭೋಗರಿಬ್ಬರು ದುಃಖಿತರಾಗುತ್ತಾರೆ. ಚಿತ್ರಕಥೆಯಲ್ಲಿ ಬಳೆಗಾರ ಚೆನ್ನಯ್ಯ ಹೇಗೆ ಒಬ್ಬ ದೇಶಭಕ್ತನಾಗಿ ರಾಷ್ಟ್ರೀಯ ಆಂದೋಲನದಲ್ಲಿ ತನ್ನ ಅಳಿಲು ಸೇವೆಯನ್ನು ಮಾಡಿದ ಎಂಬ ಪಾತ್ರ ಪೋಷಣೆಯನ್ನು ನಾವು ಗಮನಿಸಬಹುದು. ಬಳೆಗಾರ ಚೆನ್ನಯ್ಯ ಆತನ ಪೂರ್ವಾರ್ಧ ಮತ್ತು ಉತ್ತರಾರ್ಧದ ದೃಶ್ಯಗಳನ್ನು ಪಾತ್ರದ ನಡವಳಿಕೆಯ ಒಟ್ಟಾರೆ ಆಶಯವನ್ನು ಗಮನಿಸಿದಾಗ ಪ್ರತಿಯೊಬ್ಬ ವ್ಯಕ್ತಿಯು ತನ್ನ ನಡವಳಿಕೆಗಳಿಂದ ಮತ್ತು ಆ ಸಂದರ್ಭದ ಸಾಂದರ್ಭಿಕ ಅನುಸಂಧಾನಗಳಿಂದ ಹೇಗೆ ಒಟ್ಟಾರೆ ಆಶಯಗಳ ಕಡೆಗೆ ಪಾತ್ರಗಳು ಕೆಲಸಮಾಡುತ್ತದೆ ಎಂಬುದನ್ನು ನಾವು ಬಳೆಗಾರ ಚೆನ್ನಯ್ಯನ ಪಾತ್ರದ ಮೂಲಕ ಚರ್ಚಿಸಬಹುದು.

## ದೃಶ್ಯ–62

*ಹಗಲು – ಜಿಲ್ಲಾಧಿಕಾರಿಗಳ ಕಛೇರಿಯ ಒಳಗೆ*

(ಕಛೇರಿಯಲ್ಲಿ ಅಧಿಕಾರಿಗಳು ಚೆನ್ನಯ್ಯನಿಗೆ ಚಿತ್ರಹಿಂಸೆ ಕೊಡುತ್ತ ಮಂಜುನಾಥನ ಬಗ್ಗೆ ಮಾಹಿತಿ ಕೇಳುತ್ತಿದ್ದಾರೆ. ಆದರೆ ಚೆನ್ನಯ್ಯ ಹೊಡೆತಗಳನ್ನು ತಿನ್ನುತ್ತಿದ್ದಾನೆಯೇ ಹೊರತು ಮಾಹಿತಿಯನ್ನು ಕೊಡುತ್ತಿಲ್ಲ)

ಅಧಿಕಾರಿ : ಗೊತ್ತಿಲ್ಲ..? (ಎಂದು ಕೇಳುತ್ತ ಹೊಡೆಯುತ್ತಾನೆ)

ಚೆನ್ನಯ್ಯ : ಗೊತ್ತಿಲ್ಲ ಬುದ್ಧಿ.. (ನರಳುತ್ತಾ ಹೇಳುತ್ತಾನೆ)

ಅಧಿಕಾರಿ : ಆ ಮಂಜುನಾಥ ಎಲ್ಲಿದ್ದಾನಂತ ಹೇಳ್ತೀಯೋ ಇಲ್ವೋ? (ಮತ್ತೆ ಹೊಡೆಯುವನು)

ಚೆನ್ನಯ್ಯ : ಗೊತ್ತಿಲ್ಲ ಬುದ್ಧಿ, ನಂಗೊತ್ತಿಲ್ಲ ಬುದ್ಧಿ.

ಅಧಿಕಾರಿ : ಗೊತ್ತಿಲ್ಲ? ಆ ಪತ್ರಗಳು ನಿನ್ ಕೈಗ್ ಹ್ಯಾಗ್ ಬಂತು? (ಎಂದು ಆತನನ್ನು ಕೆಳಗೆ ದಬ್ಬುತ್ತಾನೆ)

ಚೆನ್ನಯ್ಯ : (ಕೆಳಗೆ ಬಿದ್ದಲ್ಲಿಂದಲೇ)
ಗೊತ್ತಿಲ್ಲ ಬುದ್ಧಿ, ನಂಗೊತ್ತಿಲ್ಲ ಬುದ್ಧಿ.

ಅಧಿಕಾರಿ : ಗೊತ್ತಿಲ್ಲ..? (ಮೇಲೆಳೆದೆತ್ತುತ್ತ)

ಚೆನ್ನಯ್ಯ : ಇಲ್ಲ ನಿಮ್ ಪಾದದಾಣೆಗೂ ನಂಗೊತ್ತಿಲ್ಲ ಬುದ್ಧಿ.

ಅಧಿಕಾರಿ : ಗೊತ್ತಿಲ್ವ? ನಿನ್ ಬಾಯ್ ಹ್ಯಾಗ್ ಬಿಡಿಸ್ಬೇಕು ಅಂತ ನನಿಗ್ ಚೆನ್ನಾಗ್ ಗೊತ್ತು
(ಎಂದು ಅವನನ್ನು ದೂಡಿ, ಪೇದೆಗಳಿಗೆ)
.. ಹಾಕ್ರೋ ಒಳಗೆ ಅವನ್ನ.

ಚೆನ್ನಯ್ಯ : ಗೊತ್ತಿಲ್ಲ ಬುದ್ಧಿ. ನನ್ ಬುಟ್ಬುಡಿ ಬುದ್ಧಿ.
(ಎಂದು ಅಂಗಲಾಚುತ್ತಿರುತ್ತಾನೆ. ದಫೇದಾರ ಅವನನ್ನು ತಳ್ಳಿ ಸೆರೆಮನೆಯ ಬಾಗಿಲನ್ನು ಹಾಕುತ್ತಾನೆ)

ಅಧಿಕಾರಿ : ಸಂಜೆ ತನ್ಕ ಬಾಯ್ ಬಿಡ್ಲಿಲ್ಲಾಂದ್ರೆ ಏರೋಪ್ಲೇನ್ ಹತ್ಸಿ ಮೆಣ್ಸಿನ್ಕಾಯ್ ಹೊಗೆ ಹಾಕಿಸ್ತೀನಿ. ರ್‍ಯಾಸ್ಕಲ್
(ಎಂದು ಹೊರಡುತ್ತಾನೆ)

ಚೆನ್ನಯ್ಯ : (ಅವರಿಗೆ ಕೇಳಿಸುವಂತೆ)
ಯಾಕ್ ನನ್ ಪ್ರಾಣ ತಿಂತೀರಿ ಸ್ವಾಮಿ. ಗೊತ್ತಿಲ್ಲ
(ಎಂದು ಅಳುತ್ತಾನೆ)

ಅಧಿಕಾರಿ : ಏನ್ಮಾಡಿದ್ರು ಬಾಯೇ ಬಿಡೋದಿಲ್ಲ ಅಂತಾನೆ ಬೋಳೀಮಗ. ಇಷ್ಟ್ ವಯಸ್ಸಾದ್ರು ಒಳ್ಳೆ ಗೊಬ್ಳಿ ಕೊಂಟ್ ಇದ್ದಾಗ್ ಇದ್ದಾನೆ.
(ದಫೇದಾರನಿಗೆ)
.. ಅವನ್ನ ಸರಿಯಾಗ್ ವಿಚಾರುಸ್ಕೋ.

ದಫೇದಾರ : ಆಯ್ತು ಸ್ವಾಮಿ.
(ಎಂದು ಸಲಾಮ್ ಹೊಡೆಯುತ್ತಾನೆ. ಅಧಿಕಾರಿಯ ವ್ಯಾನು ಹೊರಡುತ್ತದೆ)

# ದೃಶ್ಯ–63

**ರಾತ್ರಿ – ಪಾಳು ದೇವಾಲಯದ ಒಳಗೆ**

(ಶ್ರೀನಿವಾಸ ಕುಪಿತನಾಗಿ ಹೋಗುತ್ತಿದ್ದಾನೆ. ಅವನ ಹಿಂದೆ ರಾಘವ;)

ರಾಘವ : ಮಂಜುನಾಥ ಬರೋವರ್ಗು ತಡಿಯೋ, ಏನಾದ್ರು ಒಂದ್ ತೀರ್ಮಾನ ಮಾಡೋಣ

ಶ್ರೀನಿವಾಸ : ಅಷ್ಟೊತ್ತಿಗೆ ಚೆನ್ನಯ್ಯನ ಹೆಣ ಬಿದ್ದಿರುತ್ತೆ ಅಷ್ಟೆ. ಪೋಲೀಸ್ರ ಕೈಗ್ ಸಿಕ್ಕಿದ್ರೆ ಏನ್ಗತಿ ಅಂತ ಗೊತ್ತಲ್ಲ ನಿನ್ಗೆ? ಹೇಗಾದ್ರು ಮಾಡಿ ಚೆನ್ನಯ್ಯನ್ನ ಉಳುಸ್ಲೇಬೇಕು. ನಾನಂತು ಹೋಗ್ತೋನೇ

ರಾಘವ : (ಅವನನ್ನು ತಡೆಯುವಂತೆ) ..ನೋಡೋ

ಶ್ರೀನಿವಾಸ : (ಅವನ ಕೈಯನ್ನು ಬಿಡಿಸಿಕೊಂಡು)
.. ನೀನು ಬರೋದಾದ್ರೆ ಬಾ.

ರಾಘವ : ನಿಲ್ಲೋ ನನ್ ಮಾತ್ಕೇಳೋ
(ಏನು ಹೇಳಿದರೂ ಲೆಕ್ಕಿಸದೆ ಶ್ರೀನಿವಾಸ ಬಚ್ಚಿಟ್ಟಿದ್ದ ಬಂದೂಕುಗಳನ್ನು ಹೊರಗೆ ತಗೆಯುತ್ತಾನೆ.)
.. ಯಾಕ್ ಹೀಗ್ ಮಾಡ್ತೀಯೋ? ಸೀನ, ಲೇ ಸೀನ. ಮಂಜುನಾಥ ಬರೋವರ್ಗೂ ತಡಿಯೋ.

ಶ್ರೀನಿವಾಸ : (ಉಗ್ರನಾಗಿ) ..ಇಲ್ಲ ಸಾಧ್ಯ ಇಲ್ಲ.

ರಾಘವ : ಬ್ಯಾಡ ಕಣೋ, ಇಲ್ನೋಡು ಶ್ರೀನಿವಾಸ ಲೇ ಶ್ರೀನಿವಾಸ..
(ಹೆಸರು ಕೂಗುತ್ತಿರುವಾಗಲೇ ಬಂದೂಕುಗಳನ್ನು ತನ್ನ ಸಹಚರರಿಗೆ ನೀಡುತ್ತಾನೆ. ಎಲ್ಲರನ್ನು ನೋಡಿ ರಾಘವ)
.. ಬ್ಯಾಡ ಕಣೋ ಬ್ಯಾಡ.
(ಶ್ರೀನಿವಾಸ ತನ್ನವರಿಗೆ ಹೊರಡುವಂತೆ ಸೂಚನೆಕೊಟ್ಟು ಹೊರಡಲುನುವಾಗುತ್ತಾನೆ)
.. ನೋಡು, ಶ್ರೀನಿವಾಸ ತಡಿಯೋ, ಆತ್ರ ಮಾಡ್ಬೇಡ್ವೋ, ತಡಿಯೋ, ಲೇ ಇಲ್ಕೇಳೋ ಇಲ್ಲಿ
(ಎಂದು ಎಷ್ಟೇ ಹೇಳಿದರೂ ಶ್ರೀನಿವಾಸ ಕೇಳದೆ ಹೊರಟೇ ಬಿಡುತ್ತಾನೆ. ರಾಘವ ಅಸಹಾಯಕನಾಗಿ ಅಲ್ಲೇ ನಿಲ್ಲುತ್ತಾನೆ)



# ದೃಶ್ಯ–64

**ರಾತ್ರಿ – ಪೋಲೀಸ್ ಠಾಣೆಯ ಬಳಿ**

(ಶ್ರೀನಿವಾಸ ಮತ್ತು ಆತನ ಸಹಚರರು ಬಂದೂಕುಧಾರಿಗಳಾಗಿ ಪೋಲೀಸ್ ಠಾಣೆಯ ಬಳಿ ಬಂದು ಆಕ್ರಮಣಕ್ಕೆ ಹೊಂಚು ಹಾಕುತ್ತಿದ್ದಾರೆ. ಪೋಲೀಸ್ ಅತ್ತ ಇತ್ತ ಓಡಾಡುತ್ತಿರುವುದನ್ನು ಗಮನಿಸಿಕೊಂಡು ಗಿಡಗಳಲ್ಲಿ ತಮ್ಮನ್ನು ತಾವು ಮರೆಮಾಚಿಕೊಂಡು ಬರುತ್ತಿರುವಾಗ ಪೇದೆಗೆ ಅನುಮಾನ ಬಂದು ಆತ ಹತ್ತಿರ ಬಂದಾಗ ಅವನ ಮೇಲೆ ಹಲ್ಲೆ ಮಾಡುತ್ತಾರೆ. ಒಳಗೆ ದಫೇದಾರ ಎಚ್ಚೆತ್ತುಕೊಂಡು ಬರುವಷ್ಟರಲ್ಲಿ ಶ್ರೀನಿವಾಸನ ಕಡೆಯವರು ಎಚ್ಚೆತ್ತು ಅವನ ಮೇಲೂ ಆಕ್ರಮಣ ಮಾಡುತ್ತಾರೆ. ಠಾಣೆಯೊಳಗೆ ಆಕ್ರಮಣ–ಪ್ರತಿ ಆಕ್ರಮಣ ನಡೆದು ಬೆಂಕಿ ಹತ್ತಿಕೊಳ್ಳುವ ಅನಾಹುತಕ್ಕೆ ತಲುಪುತ್ತದೆ. ಅತ್ತ ರಾಘವ ಮತ್ತು ಮಂಜುನಾಥ ಪೋಲೀಸ್ ಠಾಣೆಯತ್ತ ಬರುತ್ತಾರೆ. ಒಳಗೆ ಸೆರೆಮನೆ ವಾಸಿಯಾಗಿದ್ದ ಚೆನ್ನಯ್ಯ ಬೆಂಕಿಯನ್ನ ಕಂಡು;)

ಚೆನ್ನಯ್ಯ : ಅಯ್ಯೋ ದೇವ್ರೆ, ಬೆಂಕಿ! ಹುಡುಗ್ರ ಬೆಂಕಿ..
(ಎಂದಾಗ ಶ್ರೀನಿವಾಸ ಸೆರಮನೆಯ ಬಳಿ ಹೋದರು ಬೆಂಕಿಯ ಪ್ರಮಾಣ ಹೆಚ್ಚಾಗುತ್ತಿದ್ದರಿಂದ ಸಹಚರರ ಕೂಗಿನ ಮೇರೆಗೆ ಬಾಗಿಲನ್ನು ತೆರೆಯದೆ, ಸಹಚರರನ್ನು ಕರೆದುಕೊಂಡು ಹೊರಟು ಹೋಗುತ್ತಿರುವಾಗ ಮಂಜುನಾಥ ಅವರನ್ನು ತಡೆದು;)

ಮಂಜುನಾಥ : ಹೇಯ್ ಚೆನ್ನಯ್ಯ ಎಲ್ಲೋ? ಹೇಯ್ ಸೀನ ಚೆನ್ನಯ್ಯ ಎಲ್ಲೋ?
(ಯಾರೂ ಹೇಳದಿದ್ದನ್ನು ಗಮನಿಸಿ ಠಾಣೆಯೊಳಗೆ ಬೆಂಕಿಯಿರುವುದನ್ನೂ ಲೆಕ್ಕಿಸದೆ ಒಳಗೆ ಹೋಗುತ್ತಾನೆ. ಮಂಜುನಾಥ ಒಳಗೆ ಹೋಗಿದ್ದನ್ನು ನೋಡಿ ರಾಘವ)

ರಾಘವ : ಮಂಜುನಾಥ.. ಬೆಂಕಿ..
(ಮಂಜುನಾಥ ಒಳಗೆ ಬಂದು ಚೆನ್ನಯ್ಯನಿರುವ ಸೆರೆಮನೆಯ ಬಾಗಿಲಿಗೆ ಬಂದು ಬೀಗವನ್ನು ಬಂದೂಕಿನಿಂದ ಒಡೆದುಹಾಕಲು ಆರಂಭಿಸುತ್ತಾನೆ. ಇತ್ತ ರಾಘವ, ಶ್ರೀನಿವಾಸ ಎಲ್ಲರೂ ಮಂಜುನಾಥನನ್ನು

ಕರೆಯುತ್ತಿರುತ್ತಾರೆ.

ಎಲ್ಲರೂ : ಮಂಜು.. ಬಾ ಮಂಜು..
(ಎಂದು ಕೂಗುತ್ತಿರುತ್ತಾರೆ. ನಂತರ ಶ್ರೀನಿವಾಸ ರಾಘವನನ್ನು ಎಳೆದೊಯ್ಯಲು ಮುಂದಾದಾಗ ರಾಘವ ಅವನಿಂದ ಬಿಡಿಸಿಕೊಂಡು ಮಂಜುನಾಥನನ್ನು ಕೂಗುತ್ತಲೇ ಇರುತ್ತಾನೆ. ಮಂಜು, ಚೆನ್ನಯ್ಯನನ್ನು ಕರೆದುಕೊಂಡು ಬರುವುದಕ್ಕೂ, ಅತ್ತ ಪೋಲೀಸ್ ವಾಹನ ಬರುವುದಕ್ಕೂ ಒಂದಾಗಿ ರಾಘವ;)

ರಾಘವ : ಪೋಲೀಸ್ ಬರ್ತಿದ್ದಾರೆ ಬೇಗ ಬಾರೋ.

ಶ್ರೀನಿವಾಸ : ನೀನ್ ಬಾರೋ

ರಾಘವ : ನೀನ್ ಹೋಗೋ.
(ಕರೆದೊಯ್ಯಲು ಬರುವ ಶ್ರೀನಿವಾಸನಿಗೆ)
.. ಮಂಜು ಬಾರೋ ನೀನು. ಪೋಲೀಸರು ಬರ್ತಿದ್ದಾರೆ ಬಾರೋ..
(ಎಂದು ಓಡಿ ಹೋಗುತ್ತಾನೆ. ಬೆಂಕಿಯು ಠಾಣೆಯನ್ನೆಲ್ಲ ಬೃಹದಾಕಾರವಾಗಿ ಆವರಿಸಿಕೊಳ್ಳಲಾರಂಭಿಸಿರುತ್ತದೆ. ಮಂಜು, ಚೆನ್ನಯ್ಯನನ್ನು ಹೊರಗೆ ಕರೆತರುವುದಕ್ಕು, ಪೋಲೀಸ್ ವಾಹನ ಠಾಣೆಯ ಮುಂದೆ ಬಂದು ನಿಲ್ಲುವುದಕ್ಕು ಒಂದಾಗುತ್ತದೆ. ಠಾಣೆ ಬೆಂಕಿಯಲ್ಲಿ ಹೊತ್ತು ಉರಿಯುತ್ತಿರುವುದನ್ನು ಗಮನಿಸಿ ಅಧಿಕಾರಿ ಮಂಜುನಾಥನ ಗುಂಪಿನ ಮೇಲೆ ಗುಂಡಿನ ದಾಳಿಯನ್ನು ಮಾಡಲು ಆದೇಶ ನೀಡುತ್ತಾನೆ.)

ಅಧಿಕಾರಿ : ಫೈರ್..
(ಗುಂಡಿನ ದಾಳಿ ಆರಂಭವಾಗುತ್ತದೆ. ಮಂಜುನಾಥನ ಕಡೆಯವರೂ ಪ್ರತಿದಾಳಿಯನ್ನು ಮಾಡುತ್ತಾರೆ. ಮಂಜುನಾಥ, ಚೆನ್ನಯ್ಯನನ್ನು ಹೊತ್ತು ಒಯ್ಯುತ್ತಲೇ ಇದ್ದಾನೆ. ಈ ಮಧ್ಯೆ ಚೆನ್ನಯ್ಯನಿಗೆ ಪೋಲೀಸರು ಹೊಡೆಯುವ ಒಂದು ಗುಂಡು ಅವನ ಬೆನ್ನಿಗೆ ತಗಲುತ್ತದೆ. ಚೆನ್ನಯ್ಯ ಜೋರಾಗಿ ನರಳುವುದನ್ನು ಕಂಡ ಮಂಜುನಾಥ ಅವನನ್ನು ಇಳಿಸಿ;)

ಮಂಜುನಾಥ : ಚೆನ್ನಯ್ಯ.. ಚೆನ್ನಯ್ಯ.. (ಅತ್ತ ಶ್ರೀನಿವಾಸ)

ಶ್ರೀನಿವಾಸ : ಮಂಜು.. ಮಂಜು ಏನಾಯ್ತು ಮಂಜು..
(ಮಂಜುನಾಥ ಚೆನ್ನಯ್ಯನನ್ನು ಕೆಳಗಿಳಿಸಿ)

ಮಂಜುನಾಥ : ಚೆನ್ನಯ್ಯ..

ಚೆನ್ನಯ್ಯ : ನಾ ಓಯ್ತಿನಿ. ನಮ್ ಪದ್ಮವ್ವನ್ ಮನಸ್ ನೋಯಿಸ್ಬ್ಯಾಡ.



(ಪೋಲೀಸರತ್ತ ನೋಡಿ)
.. ನೀ ಹೋಗು, ದಾರಿ ಕಾಯ್ತಿರ್ತಾಳ್ ಹೋಗು.

ಮಂಜುನಾಥ : ಹಾಗನ್ಬೇಡ ಚೆನ್ನಯ್ಯ. ನಾನ್ ಸತ್ರು ನಿನ್ ಬಿಟ್ಟು ಹೋಗಲ್ಲ. ಖಂಡಿತ ಹೋಗಲ್ಲ.

ಚೆನ್ನಯ್ಯ : ನಮ್ ಪದ್ಮವ್ವ... ಪಾ..
(ಏನನ್ನೋ ಹೇಳಲಾಗದೆ ಪ್ರಾಣ ಬಿಡುತ್ತಾನೆ)

ಮಂಜುನಾಥ : (ದುಃಖದಿಂದ) ..ಚೆನ್ನಯ್ಯ
(ಅತ್ತ ಶ್ರೀನಿವಾಸ ಕೂಗಿ ಕರೆಯುತ್ತ ಓಡಿಹೋಗುತ್ತಾನೆ)

ವ್ಯಕ್ತಿ1 : ಮಂಜು ಓಡ್ಬಾ...
(ಎಂದು ಆತನೂ, ರಾಘವನೂ ಓಡಿಹೋಗುತ್ತಾರೆ. ಪೋಲೀಸರ ಗುಂಡಿನ ಮಳೆ ಮುಂದುವರಿಯುತ್ತಲೇ ಇರುವಾಗ ಶ್ರೀನಿವಾಸ ಮಂಜುನಾಥನ ಬಳಿ ಬಂದು;)

ಶ್ರೀನಿವಾಸ : ಮಂಜು.. ಮಂಜೂ.. ಆಗಿದ್ದಾಗ್ಹೋಯ್ತು. ಬಾ.
(ಎಂದು ಮಂಜುನಾಥನನ್ನು ಎಬ್ಬಿಸಿ ಓಡಿ ಹೋಗುತ್ತಾನೆ. ನಂತರ ಮಂಜುನಾಥ ಚೆನ್ನಯ್ಯನನ್ನೇ ನೋಡುತ್ತ ಮಂದಗತಿಯಲ್ಲಿ ಸಾಗುತ್ತಿರುವಾಗ ಪೋಲೀಸರು ಹೊಡೆಯುವ ಗುಂಡು ಮಂಜುನಾಥನಿಗೆ ಬೀಳುತ್ತದೆ. ಮಂಜುನಾಥ ಕೆಳಗೆ ಬಿದ್ದು ಸ್ವಲ್ಪ ದೂರ ಉರುಳಿ ಪದ್ಮಾಳ ಹೆಸರನ್ನು ಕರೆದು ಪ್ರಜ್ಞಾಹೀನನಾಗುತ್ತಾನೆ)

**(ಚಿತ್ರದ ಮೊದಲ ದೃಶ್ಯದಿಂದ ಆರಂಭವಾಗುವ ಹಿನ್ನೋಟ/ಫ್ಲ್ಯಾಶ್‌ಬ್ಯಾಕ್ ಇಲ್ಲಿಗೆ ಮುಕ್ತಾಯವಾಗುತ್ತದೆ.)**

# ದೃಶ್ಯ–65

*ಹಗಲು – ಬಸ್ಸು ಪ್ರಯಾಣ*

(ಹಿಂದಿನ ಚಿತ್ರಣವನ್ನು ನೆನೆಸಿಕೊಳ್ಳುತ್ತಿದ್ದ ಮಂಜುನಾಥನಿಗೆ ವಾಹನ ಶಬ್ದದಿಂದ ಎಚ್ಚರವಾಗುತ್ತದೆ. ಎಚ್ಚರಗೊಂಡು ಪಕ್ಕದಲ್ಲೇ ಮಕ್ಕಳು ಭಾರತದ ಧ್ವಜವನ್ನು ಹಿಡಿದು ಸಂಭ್ರಮಾಚರಣೆ ಮಾಡುತ್ತಿರುವುದನ್ನು ನೋಡುತ್ತಾನೆ. ನಂತರ ಬಸ್ ನಿರ್ವಾಹಕ;)

ನಿರ್ವಾಹಕ : ಯಾರ್ರೀ ನವ್ಲೂರು, ಇಳ್ಕೊಳ್ರಿ ನವ್ಲೂರು ನವ್ಲೂರು. ಬನ್ರಿ.. ಬೇಗ ನವ್ಲೂರು.. ನವ್ಲೂರು..

(ಮಂಜುನಾಥ ಬಸ್ ಇಳಿದು ನಡೆಯುತ್ತಿರುವ ಸಂಭ್ರಮಾಚರಣೆಯನ್ನು ನೋಡುತ್ತ ಊರೊಳಗೆ ಪ್ರವೇಶಮಾಡುತ್ತಾನೆ. ದಾರಿಯಲ್ಲಿ ಹೋಗುತ್ತಿದ್ದ ಮಂಜುನಾಥನಿಗೆ ಊರಿನವರೊಬ್ಬರು ಕರೆದು;)

ಊರಿನವ : ಸ್ವಾಮಿ, ಬನ್ನಿ ಸ್ವಾಮಿ. ಸ್ವಾತಂತ್ರ್ಯದ ಸಿಹಿ ತಗೋಳಿ, ಪರ್ವಾಗಿಲ್ಲ ತಗೋಳಿ.

(ಎಂದು ಸಿಹಿ ನೀಡುತ್ತಾರೆ. ಮಂಜುನಾಥ ಸಿಹಿ ಸ್ವೀಕರಿಸಿ, ನಮಿಸಿ ಹೋಗುತ್ತಾನೆ)

**ನಿರ್ದೇಶಕರ ಟಿಪ್ಪಣಿ:**

ಚೆನ್ನಯ್ಯನನ್ನು ಬಂಧಿಸಿದ್ದ ಪೋಲಿಸರು ಅವನನ್ನು ತೀವ್ರ ತಪಾಸಣೆಗೆ ಒಡ್ಡಿದಾಗಲೂ ಆತ ಮಂಜುನಾಥನ ಇರುವನ್ನು ತಿಳಿಸುವುದಿಲ್ಲ. ಅವನನ್ನು ಬಂಧೀಖಾನೆಯಲ್ಲಿ ಹಾಕಿ ತೀವ್ರ ನಿಗಾ ಇಡಲು ತಿಳಿಸಿ ಹೊರಟ ಪೋಲೀಸನಿಗೆ ಅತ್ತ ಚೆನ್ನಯ್ಯನನ್ನು ಉಳಿಸಿಕೊಳ್ಳುವ ಯೋಚನೆಯಲ್ಲಿ ಶ್ರೀನಿವಾಸ ಕಾರ್ಯತತ್ಪರನಾಗುತ್ತಾನೆ. ಮಂಜುನಾಥ ಬರುವವರೆಗೂ ಕಾಯದೆ, ರಾಘವೇಂದ್ರ ಎಷ್ಟೇ ಹೇಳಿದರೂ ಕೇಳದೆ ಬಂದೂಕುಗಳ ಸಹಿತವಾಗಿ ಪೋಲಿಸ್ ಠಾಣೆಯನ್ನು ಮುತ್ತಿಗೆ ಹಾಕುತ್ತಾನೆ. ತೀವ್ರಗತಿಯಲ್ಲಿ ಸಾಗುವ ಈ ಕ್ರಿಯೆ ಚಲನಚಿತ್ರದ ಒಟ್ಟಾರೆ ಅಂತಿಮ (ಕ್ಲೈಮಾಕ್ಸ್) ಎನ್ನುವಂತಹ ಘಟ್ಟವನ್ನು ಮುಟ್ಟುವಂತಹ ಪರಿಸ್ಥಿತಿಗೆ ಬರತೊಡಗುತ್ತದೆ. ಯಾವುದೇ ಚಿತ್ರದ ಕೊನೆ ಕ್ಷಣಗಳಲ್ಲಿ ಬರುವಂತಹ ತೀವ್ರ ಚಲನೆ ಹಾಘೂ ಕ್ರಿಯೆ–ಪ್ರತಿಕ್ರಿಯೆಗಳು ಇಲ್ಲೂ ಕೂಡ ಆಗುತ್ತ ಹೋಗುತ್ತದೆ. ಪೋಲೀಸರನ್ನು ಎದುರಿಸಿ ಚೆನ್ನಯ್ಯನನ್ನು ಬಿಡಿಸಿಕೊಳ್ಳುವ ನಿಟ್ಟಿನಲ್ಲಿ ಹೋರಾಟ ಮಾಡುವಾಗ ಠಾಣೆಗೆ ಬೆಂಕಿ ಬೀಳುವುದು. ಆ ಬೆಂಕಿಯ ನಡುವೆಯೂ ಮಂಜುನಾಥ ಚೆನ್ನಯ್ಯನನ್ನು ರಕ್ಷಿಸಿ ಹೊರಗೆ ಕರೆತರುವುದು. ನಂತರದ ಗುಂಡಿನ ಕಾಳಗದಲ್ಲಿ ಚೆನ್ನಯ್ಯ ಸಾವನ್ನಪ್ಪುವುದು ಹಾಗೂ ಮಂಜುನಾಥನ ಭುಜಕ್ಕೆ ತೀವ್ರವಾದ



ಪೆಟ್ಟಾಗಿ ಪ್ರಜ್ಞೆ ತಪ್ಪುವುದು. ಘಟನೆಗಳ ಜೊತೆಯಲ್ಲಿ ಸ್ವಾತಂತ್ರ್ಯ ಸಂಗ್ರಾಮದ ಒಟ್ಟಾರೆ ಆಶಯವನ್ನು ಮತ್ತು ಅದಕ್ಕೆ ಪೂರಕವಾಗಿ ಪ್ರತಿಯೊಬ್ಬ ಭಾರತೀಯನೂ ತನ್ನ ವಿಶಿಷ್ಟವಾದ ಕೊಡುಗೆಗಳನ್ನು ನೀಡಿದ ಪರಿಯನ್ನು ಆಯಾ ಪಾತ್ರಗಳು ನಿಭಾಯಿಸುವಂತಹ ಕರ್ತವ್ಯ ಪ್ರಜ್ಞೆಯ ಜೊತೆಗೆ ಭಾವಪ್ರಜ್ಞೆಯನ್ನೂ ಕೂಡ ಇದು ಒಂದುಗೂಡಿದೆ ಮತ್ತು ಒಟ್ಟಾಗಿ ಗ್ರಹಿಸುವ ರೀತಿಯಲ್ಲಿ ನಮ್ಮ ಕಣ್ಣುಮುಂದೆ ಬಂದು ನಿಲ್ಲುತ್ತದೆ. ಗುಂಡಿನೇಟಿಂದಾಗಿ ಪ್ರಜ್ಞೆ ತಪ್ಪುವ ಮಂಜುನಾಥನ ಕೊನೆಯ ಪದಗಳು ಪದ್ಮ ಎಂದಾಗಿರುತ್ತದೆ. ಪದ್ಮಳನ್ನೇ ನೆನೆಯುತ್ತ ಜ್ಞಾನ ತಪ್ಪುವ ಮಂಜುನಾಥ ಮತ್ತೆ ತನ್ನ ಇಡೀ ಹಿಂದಣ ಕಥೆಯನ್ನು ಮುಗಿಸಿ ಈಗ ಅದೇ ಬಸ್ಸಿನಲ್ಲಿ ಪಯಣಿಸುತ್ತಿದ್ದಾನೆ. ಭಾರತ ಸ್ವಾತಂತ್ರ ಪಡೆದಿದೆ. ಸ್ವಾತಂತ್ರ್ಯೋತ್ಸವದ ದಿನದಂದು ತನ್ನ ಹಳ್ಳಿಯತ್ತ ಪಯಣಿಸುತ್ತಿರುವ ಬಸ್ಸಿನಲ್ಲಿರುವ ಪಯಣಿಗರ ಜೊತೆಯಲ್ಲಿ ತನ್ನ ಇಡೀ ಕಥೆಯನ್ನು ಅವಲೋಕಿಸಿದ್ದಾನೆ. ನವಿಲೂರಿನ ಬಸ್ಸು ನಿಲ್ದಾಣದಲ್ಲಿ ಸ್ವಾತಂತ್ರ ದಿನದ ಸಂಭ್ರಮವನ್ನು ಆಚರಿಸುತ್ತಿರುವ ಆ ಮಕ್ಕಳ ಮಧ್ಯದಲ್ಲಿ ಬಸ್ಸೊಂದು ಬಂದು ನಿಲ್ಲುತ್ತದೆ. ಮಂಜುನಾಥ ಅದರಿಂದಿಳಿದು ತನ್ನ ಮನೆಯತ್ತ ಹೆಜ್ಜೆ ಹಾಕತೊಡಗುತ್ತಾನೆ. ತನ್ನೂರಿನ ಮಧ್ಯಭಾಗಕ್ಕೆ ಬಂದಾಗ ಕಾಳಿಂಗರಾಯರು ಸಂಯೋಜಿಸಿದ 'ನೀನಲ್ಲವೇ' ಹಾಡು ಗ್ರಾಮಫೋನಿನಿಂದ ಬರುತ್ತ ಆ ಕಾಲಮಾನವನ್ನು ತಿಳಿಸುವಂತೆ ಪರಿಸರವೊಂದನ್ನು ನಿರ್ಮಾಣ ಮಾಡುತ್ತದೆ. ಮಂಜುನಾಥ ನೇರವಾಗಿ ಶಾನುಭೋಗರ ಮನೆಗೆ ಬರುತ್ತಾನೆ. ಆದರೆ ಶಾನುಭೋಗರ ಮನೆ ಹಾಳಾಗಿರುತ್ತದೆ.

## ದೃಶ್ಯ-66

*ಹಗಲು - ಶಾನುಭೋಗರ ಮನೆಯ ಹೊರಗೆ*

(ನವಿಲೂರಿನ ಮಾವನ ಮನೆಯನ್ನು ಪ್ರವೇಶಿಸುವ ಮಂಜುನಾಥ, ಮನೆಯಲ್ಲಿ ಯಾರೂ ಇರದೆ ಪಾಳು ಬಿದ್ದಿರುವುದನ್ನು ಗಮನಿಸಿ ಚಿಂತಿತನಾಗುತ್ತಾನೆ. ನಂತರ ಮನೆಯವರೆಲ್ಲ ಎಲ್ಲಿ ಹೋದರೆಂದು ಯೋಚಿಸುತ್ತ ನಂತರ ಏನೋ ಹೊಳೆದವನಂತೆ ಹೊರಡುತ್ತಾನೆ)



## ದೃಶ್ಯ-67

*ಹಗಲು – ಶ್ಯಾಮರಾಯರ ಮನೆಯ ಒಳಗೆ*

(ದೃಷ್ಟಿಯನ್ನು ಕಳೆದುಕೊಂಡ ಶ್ಯಾಮರಾಯರು ಮಂಜುನಾಥ ಬಂದಿರುವುದನ್ನು ಕಂಡು ಭಾವುಕರಾಗುತ್ತಾರೆ. ನಂತರ ಮಂಜುನಾಥ;)

ಮಂಜುನಾಥ : ಶ್ಯಾಮರಾಯ್ರೇ ಪದ್ಮ, ತುಂಗೆ, ಶಾನ್ಭೋಗ್ರು, ಇವ್ರೆಲ್ಲ ಎಲ್ಲಿ?

ಶ್ಯಾಮರಾಯರು : ನೀನು ಗುಂಡ್ ತಗ್ಲಿ ಸತ್ತ್ಹೋದೆ ಅಂತ ಸುದ್ದಿ ಕೇಳಿದ್ ತಕ್ಷಣ ಶಾನ್ಭೋಗ್ರು ಹಾಸಿಗೆ ಹಿಡಿದು ಮಲ್ಗೇಬಿಟ್ರು ಅಷ್ಟೆ. ಒಂದಿನ ಬೆಳಗ್ಗೆ ಎದ್ದು ನೋಡುವಾಗ ಇನ್ನೆಲ್ಲಿ ಶಾನ್ಭೋಗ್ರು? ತುಂಗ ಭದ್ರೇನ ಅವಳ್ ಸೋದರ ಮಾವ ಬಂದು ಕರ್ಕೊಂಡ್ ಹೋದ. ಪಾಪ ಪದ್ಮ ಯಾರಿಗೂ ಹೇಳ್ದೆ ಹೊರ್ಟೇ ಹೋಗ್ಬಿಟ್ಲು.
(ಮಂಜುನಾಥ ದಿಗ್ಭ್ರಾಂತಿಗೊಳ್ಳುತ್ತಾನೆ)
.. ಅದೇನೋ ನಗರದಲ್ಲಿದ್ದಾಳೆ ಅಂತ ಸುದ್ದಿ. ಎಲ್ಲಿದ್ದಾಳೋ? ಹೇಗಿದ್ದಾಳೋ? ಆ ಹಸುಳೆ ಕಂದಮ್ಮನ್ನ ಕಟ್ಕೊಂಡು ಹ್ಯಾಗ್ ಜೀವ್ನ ಸಾಗಿಸ್ತಾಳೋ? ಆ ದೇವ್ರಿಗೇ ಗೊತ್ತು.
ಮಂಜು.. (ಹತ್ತಿರ ಇಲ್ಲದ್ದನ್ನು ಕಂಡು) ..ಮಂಜು

ಮಂಜುನಾಥ : (ಹತ್ತಿರಬಂದು) ಶ್ಯಾಮರಾಯ್ರೇ, ನಾನ್ ಪದ್ಮನ್ ಹುಡುಕ್ಕೊಂಡ್ ಬರ್ತಿನಿ. ನಂಗ್ ಆಶಿರ್ವಾದ ಮಾಡಿ.

ಶ್ಯಾಮರಾಯರು : ಹಾಗೇ ಆಗ್ಲಪ್ಪ. ನಿಂಗ್ ಒಳ್ಳೇದ್ ಆಗ್ಲಿ.
(ಆಶೀರ್ವದಿಸುವರು. ಮಂಜುನಾಥ ಹೊರಡುವನು)

**ನಿರ್ದೇಶಕರ ಟಿಪ್ಪಣಿ:**
ಶಾನುಭೋಗರ ಮನೆ ಪಾಳುಬಿದ್ದಿರುತ್ತದೆ. ಅಲ್ಲಿಯ ನೆನಪುಗಳೊಂದಿಗೆ ಶಾಮರಾಯರ ಮನೆಗೆ ಬಂದಾಗ ಅರೆಗಣ್ಣಾವಸ್ಥೆಯಲ್ಲಿರುವಂತಹ ಶಾಮರಾಯರು ಶಾನುಭೋಗರು ತೀರಿಕೊಂಡದ್ದನ್ನು, ತುಂಗ ಚಿಕ್ಕಪ್ಪನ ಮನೆಗೆ ಹೋಗಿದ್ದನ್ನು, ಪದ್ಮ ಊರು ಬಿಟ್ಟು ತನ್ನ ಮಗುವಿನೊಂದಿಗೆ ನಗರವನ್ನು ಸೇರಿದ್ದನ್ನು ತಿಳಿಸುತ್ತಾರೆ. ಮಂಜುನಾಥನ ಪ್ರಯಾಣ ಪದ್ಮಳ ಹುಡುಕಾಟದತ್ತ ಸಾಗುತ್ತದೆ. ಕಥೆಯ ಓಟವನ್ನು ಗಮನಿಸಿದಾಗ ಚಿತ್ರಕಥೆಯ ಈ ಹಂತದಲ್ಲಿ ಮಂಜುನಾಥ ಎತ್ತ ಸಾಗಿದ್ದಾನೆ ಎಂಬ ಪ್ರಶ್ನೆ ಮೂಡುತ್ತದೆ. ಮೈಸೂರು ಮಲ್ಲಿಗೆಯ ಕವನಗಳ ನಿಜವಾದ ಆಶಯಗಳನ್ನು ಗುರುತಿಸುವ ಈ ನಿಟ್ಟಿನಲ್ಲಿ ಕಥೆ ಇನ್ನೊಂದು ತೀವ್ರ ಸ್ವರೂಪವನ್ನು ಪಡೆಯುವ ಹಂತವನ್ನು ಈಗ ಪಡೆಯುತ್ತದೆ.

# ದೃಶ್ಯ–68

*ಹಗಲು – ನವಿಲೂರಿನ ಹೋಟೆಲ್*

(ಹೋಟೆಲ್ಲಿನಲ್ಲಿ ಹಾಡೊಂದು ಪ್ರಸಾರವಾಗುತ್ತಿದೆ. ಮಂಜುನಾಥ ಯೋಚಿಸುತ್ತ ಟೀ ಕುಡಿಯುತ್ತ ಕುಳಿತಿದ್ದಾನೆ.)

ಮಾಲೀಕ : ಮಂಜ.. ಒಂದ್ ಕಾಫಿ ತಂದ್ಕೊಡೋ ಇಲ್ಲಿ.

ಮಂಜ : ಬಂದೆ..
(ಮಾಲೀಕ ಕಾಸನ್ನು ಎಣಿಸುತ್ತ ಮುಂದೆ ಇದ್ದ ಸಿಹಿತಿನಿಸಿನ ಮೇಲೆ ಕುಳಿತುಕೊಳ್ಳುತ್ತಿದ್ದ ನೊಣಗಳ ಮೇಲೆ ರೇಗುತ್ತ ಪತ್ರಿಕೆಯೊಂದರಿಂದ ಅವುಗಳನ್ನು ಓಡಿಸುತ್ತಿರುತ್ತಾನೆ)
.. ಹಾಳ್ ನೊಣ.
(ಮಂಜುನಾಥ ಟೀ ಕುಡಿದು ಹಣ ಪಾವತಿಸಲು ಬರುತ್ತಾನೆ)

ಮಂಜುನಾಥ : ಎಷ್ಟಾಯ್ತಪ್ಪ?

ಮಾಲೀಕ : ಒಂದ್ ಕಾಸು
(ಮಂಜುನಾಥ ಕಾಸನ್ನು ಕೊಟ್ಟು ಅಲ್ಲೇ ಮೇಜಿನ ಮೇಲೆ ಇದ್ದ ಕೊಡಚಾದ್ರಿ ಪತ್ರಿಕೆಯನ್ನು ನೋಡುತ್ತಾನೆ. ಅದರಲ್ಲಿ ಪ್ರಕಟವಾಗಿರುವ "ಮೈಸೂರ ಮಲ್ಲಿಗೆ" ಅಂಕಣವನ್ನು ನೋಡಿ ಓದ ತೊಡಗುತ್ತಾನೆ)

ಮಂಜುನಾಥ : ಮೈಸೂರ ಮಲ್ಲಿಗೆ. ಕವನ ಸಂಕಲನ ಬಿಡುಗಡೆ. ಸಂಜೆ ಐದಕ್ಕೆ ನಗರದ ಪುರಭವನದಲ್ಲಿ.
(ಸಂತಸಗೊಂಡು ನಂತರ ಮಾಲೀಕನಿಗೆ)
.. ಇವತ್ತು 26ನೇ ತಾರೀಖಲ್ವ?

ಮಾಲೀಕ : ಹೌದು.

ಮಂಜುನಾಥ : ಈಗ ನಗರಕ್ಕ್ ಯಾವ್ದಾದ್ರು ಬಸ್ ಇದ್ಯಾ?

ಮಾಲೀಕ : ಅಯ್ಯೋ ಊರಿಗ್ ಒಂದೇ ಬಸ್ಸು. ಅದೂ ನೀವ್ ಬಂದದ್ದು. ಇನ್ನ್ ನಾಳೆ ಬೆಳಗ್ಗೇನೆ.

ಮಂಜುನಾಥ : ನಾನು ಆದಷ್ಟು ಬೇಗ ನಗರಕ್ಕ್ ಹೋಗ್ಬೇಕು. ಏನಾದ್ರು ಬೇರೆ ದಾರಿ ಇದ್ಯಾ?

ಮಾಲೀಕ : (ಸ್ವಲ್ಪ ಯೋಚಿಸಿ)
.. ಸ್ವಲ್ಪ ಮುಂದ್ಹೋಗಿ. ಇಲ್ಲೇ ಓಡಾಡೋಕೆ ಅಂತ ಒಂದ್ ಕುದ್ರೆ ಗಾಡಿ ಇದೆ. ಸಿಕ್ರು ಸಿಗ್ಬಹುದು.



ಮಂಜುನಾಥ : ತುಂಬ ಉಪ್ಕಾರ ಆಯ್ತು.
(ಎಂದು ನಮಿಸಿ ಹೊರಡುತ್ತಾನೆ)

ಮಾಲೀಕ : ನಮಸ್ಕಾರ.
(ಅವನು ಹೋದತ್ತಲೇ ನೋಡುತ್ತಾ ಗಲ್ಲಾಪೆಟ್ಟಿಗೆ ಸರಿ ಪಡಿಸತೊಡಗುತ್ತಾನೆ.)

**ನಿರ್ದೇಶಕರ ಟಿಪ್ಪಣಿ:**
ಅಲ್ಲಿದ್ದ ಪುಟ್ಟ ಹೋಟೆಲಿನಲ್ಲಿ ಕಾಫಿ ಕುಡಿದು ಹೊರಡುವಾಗ ಮಂಜುನಾಥನ ಕಣ್ಣಿಗೆ ಬೀಳುವುದು ಕೊಡಚಾದ್ರಿ ಪತ್ರಿಕೆಯಲ್ಲಿ ಮೈಸೂರು ಮಲ್ಲಿಗೆ ಕವನ ಸಂಕಲನದ ಬಿಡುಗಡೆಯ ಸಮಾರಂಭ ಪುರಭವನದಲ್ಲಿ ನಡೆಯಲಿದೆ ಎಂಬ ಜಾಹೀರಾತು. ಮಂಜುನಾಥನಿಗೆ ಆಸರೆಯಾಗಿ ಈ ಪತ್ರಿಕೆಯ ಜಾಹಿರಾತು ಕಣ್ಣಿಗೆ ಬೀಳುತ್ತದೆ. ತಕ್ಷಣ ಮಂಜುನಾಥ ಬಸ್ಸು ಇಲ್ಲದ ಕಾರಣವಾಗಿ ಬೇರೆ ವ್ಯವಸ್ಥೆಯೊಡನೆ ಅತ್ತ ಧಾವಿಸುತ್ತಾನೆ.


ಮೈಸೂರು ಮಲ್ಲಿಗೆ ಚಿತ್ರದ ರಜತ ಮಹೋತ್ಸವ ಸಮಾರಂಭ

# ದೃಶ್ಯ-69

*ಹಗಲು – ಪುರಭವನದ ಒಳಗೆ*

(ಮೈಸೂರ ಮಲ್ಲಿಗೆ ಕವನ ಸಂಕಲನ ಬಿಡುಗಡೆ ಸಮಾರಂಭ ಪುರಭವನದಲ್ಲಿ ಆರಂಭವಾಗಿದೆ)

ನಿರೂಪಕ : ಮಹನೀಯರೆ ಮತ್ತು ಮಹಿಳೆಯರೆ.. ದಿವಂಗತ ಮಂಜುನಾಥ ಅವರು ಬರೆದ "ಮೈಸೂರು ಮಲ್ಲಿಗೆ" ಕವನ ಸಂಕಲನದ ಬಿಡುಗಡೆ ಸಮಾರಂಭಕ್ಕೆ ನಿಮ್ಮೆಲ್ಲರನ್ನು ನಾನು ಸ್ವಾಗತಿಸುತ್ತೇನೆ.

(ಮಂಜುನಾಥನ ಭಾವಚಿತ್ರಕ್ಕೆ ಹೂವಿನ ಮಾಲೆಯನ್ನು ಸಮರ್ಪಿಸಿ ಪಕ್ಕದಲ್ಲೇ ಇಟ್ಟಿರಲಾಗುತ್ತದೆ.)



.. ಸುಪ್ರಸಿದ್ದ ಸಾಹಿತಿಗಳಾದ ಶ್ರೀ ಸೀತಾರಾಮ್ ಆಚಾರ್ಯರು ಕವನ ಬಿಡುಗಡೆ ಮಾಡಲು ಒಪ್ಪಿರುತ್ತಾರೆ. ಅವರಿಗು ಆದರದ ಸ್ವಾಗತ.

**(ಇಂಟರ್ ಕಟ್)**

(ಮಂಜುನಾಥ ಕುದುರೆ ಗಾಡಿಯಲ್ಲಿ ಬರುತ್ತಿದ್ದಾನೆ)



**(ಇಂಟರ್ ಕಟ್)**

ನಿರೂಪಕ2 : ಕವಿಯಾಗಿ ತನ್ನ ಕವನಗಳ ಮೂಲಕ ಜನರ ನಾಡಿಯನ್ನು ಸ್ವಾತಂತ್ರ್ಯದ ಕಡೆಗೆ ತಿರುಗಿಸಿದಂಥ ಪುಣ್ಯಾತ್ಮ ನಿಜಕ್ಕೂ ದೊಡ್ಡ ಮನುಷ್ಯ. ಇವತ್ತು ಮಂಜುನಾಥ ನಮ್ಮೊಡನೆ ಇಲ್ಲ. ಆದ್ರೆ ಆತ ಎಲ್ಲರ ಮನಸ್ಸಿನಲ್ಲೂ ಜೀವಿಸ್ಕೊಂಡಿದ್ದಾನೆ. ಈ ಕವನಗಳ ಮೂಲಕ ಆತ ನಮ್ಮೆಲ್ಲರ ಹೃದಯ, ಮನಸ್ಸುಗಳನ್ನ ಆವರಿಸಿಕೊಂಡಿದ್ದಾನೆ. ಇಂತಹ ಅಪೂರ್ವವಾದ ಕವನ ಸಂಕಲನವನ್ನು ತಂದಂಥಹ ಮಂಜುನಾಥನ ಪತ್ನಿ ಪದ್ಮಮ್ಮ, ಇವರೂ ಕೂಡ ತಮ್ಮ ಅಗಲಿದ ಪತಿಯಂತೆ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಧುಮುಕಿದವರು. ಹೆಣ್ಣು ಮಕ್ಕಳಲ್ಲಿ ಚಳುವಳಿಯ ಕಿಡಿಯನ್ನು ಬಿತ್ತಿದವರು, ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅಪಾರ ಕಷ್ಟನಷ್ಟಗಳನ್ನು ಉಂಡವರು. ಅವರನ್ನ ವ್ಯಯಕ್ತಿಕವಾಗಿ ಕಂಡಂಥ ಯಾರ್ಗೇ ಆದ್ರು ಅವರ ಬಗ್ಗೆ ಅಭಿಮಾನ ಮೂಡ್ದೇ ಇರಲಾರ್ದು. ನಾನು ಈ ಸಂದರ್ಭದಲ್ಲಿ ಅವರ ಈ ಅಮೋಘವಾದ ಕೆಲಸಕ್ಕೆ ಅವರನ್ನ ಹೃತ್ಪೂರ್ವಕವಾಗಿ ವಂದಿಸುತ್ತೇನೆ.

**(ಇಂಟರ್ ಕಟ್)**

(ಮಂಜುನಾಥ ಕುದುರೆ ಗಾಡಿಯಲ್ಲಿ ಬರುತ್ತಿದ್ದಾನೆ)

**(ಇಂಟರ್ ಕಟ್)**

(ಸಾಹಿತಿಗಳಾದ ಶ್ರೀ ಸೀತಾರಾಮ್ ಆಚಾರ್ಯರು ಕವನ ಬಿಡುಗಡೆಯನ್ನು ನೆರವೇರಿಸುತ್ತಾರೆ.)

**(ಇಂಟರ್ ಕಟ್)**

(ಮಂಜುನಾಥ ಕುದುರೆ ಗಾಡಿಯಲ್ಲಿ ಪುರಭವನಕ್ಕೆ ಬರುತ್ತಾನೆ. ಬಂದು ಭಾವ ತುಂಬಿ ಒಳಗೆ ಪ್ರವೇಶಿಸುತ್ತಾನೆ. ಅಲ್ಲಿ ತನ್ನ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿರುವುದನ್ನು ನೋಡುತ್ತಾನೆ)

*ಹಾಡು: ಆಕಾಶಕ್ಕೆದ್ದುನಿಂತ ಪರ್ವತ ಹಿಮ ಮೌನದಲ್ಲಿ*

ಆಕಾಶಕ್ಕೆದ್ದುನಿಂತ ಪರ್ವತ ಹಿಮ ಮೌನದಲ್ಲಿ
ಕರಾವಳಿಗೆ ಮುತ್ತನಿಡುವ ಪೆದ್ದರೆಗಳ ಗಾನದಲ್ಲಿ
ಬಯಲ ತುಂಬ ಹಸಿರ ದೀಪ ಹಚ್ಚಿಹರಿವ ನದಿಗಳಲ್ಲಿ
ನೀಲಿಯಲ್ಲಿ ಹೊಗೆಯ ಚೆಲ್ಲಿ ಯಂತ್ರಘೋಷವೇಳುವಲ್ಲಿ
ಕಣ್ಣು ಬೇರೆ, ನೋಟ ಒಂದು
ನಾವು ಭಾರತೀಯರು

ನಾಡಿನೆಲ್ಲ ಗಡಿಗಳಲ್ಲಿ ಬಾನಿನಲ್ಲಿ ಕಡಲಿನಲ್ಲಿ
ನಮ್ಮ ಯೋಧರೆತ್ತಿ ಹಿಡಿದ ನಮ್ಮ ಧ್ವಜದ ನೆರಳಿನಲ್ಲಿ
ಒಂದೆ ನೆಲದ ತೊಟ್ಟಿಲಲ್ಲಿ ಬೆಳೆದ ನಮ್ಮ ಕೊರಳಿನಲ್ಲಿ
ನಮ್ಮ ಯುಗದ ದನಿಗಳಾಗಿ ಮೂಡಿದೆಲ್ಲ ಹಾಡಿನಲ್ಲಿ
ಭಾಷೆ ಬೇರೆ ಭಾವ ಒಂದು ನಾವು ಭಾರತೀಯರು

ನಾಡಿಗಾಗಿ ತನುವ ತೆತ್ತ ಹುತಾತ್ಮರ ಸ್ಮರಣೆಯಲ್ಲಿ
ನಮ್ಮ ಕಷ್ಟದಲ್ಲು ನೆರೆಗೆ ನೆರಳ ನೀವ ಕರುಣೆಯಲ್ಲಿ
ಭಾರಿಬಡತಿ ಏರುವಲ್ಲಿ ಬಿರುಗಾಳಿಯೆ ಒಣಗುವಲ್ಲಿ
ನಮ್ಮ ಗುರಿಯ ಬೆಳಕಿನೆಡೆಗೆ ನಡೆವ ಧೀರ ಪಯಣದಲ್ಲಿ
ಎಲ್ಲೆ ಇರಲಿ ನಾವು ಒಂದು ನಾವು ಭಾರತೀಯರು
ನಾವು ಭಾರತೀಯರು.. ನಾವು ಭಾರತೀಯರು..

**ನಿರ್ದೇಶಕರ ಟಿಪ್ಪಣಿ:**

ಈ ಹಾಡಿನ ಆಶಯಕ್ಕೆ ತಕ್ಕೆ ಹಾಗೆ ಮಂಜುನಾಥನ ಸ್ನೇಹಿತರಾದ ಶ್ರೀನಿವಾಸ, ರಾಘವ ಮತ್ತು ನೃತ್ಯ ತಂಡ ಹೆಜ್ಜೆ ಹಾಕುತ್ತದೆ. ತನ್ನ ಹಾಡಿನ ಸಾಲಿನ ದೃಶ್ಯ ವೈಭವವನ್ನು ಕಣ್ತುಂಬಿ ನೋಡುವ ಮಂಜುನಾಥ ಭಾವುಕನಾಗುತ್ತಾನೆ.



# ದೃಶ್ಯ-70

*ಹಗಲು – ಪುರಭವನದ ಒಳಗೆ*

ನಿರೂಪಕ : ಮಹನೀಯರೆ ಈ ಶುಭ ಸಂದರ್ಭದಲ್ಲಿ ದಿವಂಗತ ಕವಿಯ ಬಂಧುಗಳಿಗೆ ಒಂದು ನೆನಪಿನ ಕಾಣಿಕೆಯನ್ನ ಕೊಡಬೇಕೂಂತ ಇಚ್ಛಿಸ್ತೀವಿ. ಮಂಜುನಾಥನ ಮಗಳು ಕುಮಾರಿ ಭಾರತಿ ಈ ವೇದಿಕೆಗೆ ಬಂದು ಅದನ್ನು ಸ್ವೀಕರಿಸಬೇಕಾಗಿ ವಿನಂತಿ.
(ಮಂಜುನಾಥ ಅತ್ಯಾಶ್ಚರ್ಯವಾಗಿ ಮಗಳು ಕಾಣಿಕೆಯನ್ನು ತಗೆದುಕೊಳ್ಳುವುದನ್ನು ನೋಡುತ್ತಾನೆ. ನಂತರ ಅವಳ ಹತ್ತಿರ ಬರುವುದಕ್ಕೆಂದು ಕೆಳಗೆ ಇಳಿದು ಜನರ ಬಳಿ;)

ಮಂಜುನಾಥ : ಸ್ವಲ್ಪ ಜಾಗ ಬಿಡಿ. ನಾನಲ್ಲೋೋಗ್ಬೇಕು.
(ಜಾಗವನ್ನು ಬಿಡದಿದ್ದಾಗ ಮಗಳ ಹೆಸರನ್ನು ಜೋರಾಗಿ ಕೂಗಿ ಕರೆಯುತ್ತಾನೆ)
.. ಭಾರತಿ
(ಎಂದಾಗ ಪದ್ಮ ಥಟ್ಟನೆ ಹಿಂತಿರುಗಿ ನೋಡುತ್ತಾಳೆ, ರಾಘವ, ಶ್ರೀನಿವಾಸ ಮತ್ತಿತರೂ ಅಚ್ಚರಿಯಿಂದ ನೋಡ ತೊಡಗುತ್ತಾರೆ. ನಂತರ ಮಂಜುನಾಥ ಮತ್ತೆ ಜನರ ಮಧ್ಯೆ ಬಿಡಿಸಿಕೊಳ್ಳಲು ಪ್ರಯತ್ನಿಸುತ್ತ)
.. ಪದ್ಮಾ, ಜಾಗ ಬಿಡಿ..
(ಜಾಗ ಬಿಡಿಸಿಕೊಳ್ಳಲಾಗದೆ ಹಿಂದೆ ಬೀಳುತ್ತಾನೆ. ಪದ್ಮ, ಮಗಳನ್ನು ವೇದಿಕೆಯ ಮೇಲೆ ಎತ್ತುತಂದು ಜನರತ್ತ ನೋಡುತ್ತ)

ಪದ್ಮ : ಮಂಜುನಾಥ್..
(ಮಂಜುನಾಥನತ್ತ ನೋಡುತ್ತಿದ್ದ ಜನರೆಲ್ಲರು ಪದ್ಮಾಳತ್ತ ನೋಡತೊಡಗುತ್ತಾರೆ)
.. ಮಂಜೂ
(ಎಂದು ಭಾವುಕಳಾಗಿ ಕೂಗುತ್ತಾಳೆ. ಒಂದು ಕ್ಷಣದ ಮೌನದ ನಂತರ ಮಂಜುನಾಥ ಹಾಡಲು ಆರಂಭಿಸುತ್ತಾನೆ)


ಮಂಜುನಾಥ : *ಮಣ್ಣಿನ ಕೊಡುಗೆಗೆ..*
*ನೋವಿಗೆ ನಲಿವಿಗೆ..*
*ಕನ್ನಡಿ ಹಿಡಿವಾಸೆ*

| | | |
|---|---|---|
| ಪದ್ಮ | : | *ಮಣ್ಣಿನ ಕೊಡುಗೆಗೆ..*<br>*ನೋವಿಗೆ ನಲಿವಿಗೆ..*<br>*ಕನ್ನಡಿ ಹಿಡಿವಾಸೆ*<br>(ಭವನದ ಒಳಗೆ ಪ್ರವೇಶಿಸುತ್ತ, ಪದ್ಮಾಳಿಗೆ ಎದುರಾಗುತ್ತ) |
| ಮಂಜುನಾಥ | : | *ಮಾನವ ಹೃದಯದ ಕರುಣೆಗೆ..*<br>*ಒಲವಿಗೆ ದನಿಗೂಡಿಸುವಾಸೆ..* |
| ಪದ್ಮ | : | *ಮಾನವ ಹೃದಯದ ಕರುಣೆಗೆ..*<br>*ಒಲವಿಗೆ ದನಿಗೂಡಿಸುವಾಸೆ..* |
| ಮಂಜು ಮತ್ತು ಪದ್ಮ | : | *ದನಿಗೂಡಿಸುವಾಸೆ..*<br>(ಮಂಜುನಾಥ ಮತ್ತು ಪದ್ಮ ಪರಸ್ಪರ ನೋಡಿ ಅತ್ಯಾನಂದವನ್ನು ಹೊಂದುತ್ತಾರೆ. ನಂತರ ಶ್ರೀನಿವಾಸ ಮತ್ತು ರಾಘವ ಓಡಿ ಬಂದು ಮಂಜುನಾಥನನ್ನು ಎತ್ತಿಕೊಂಡು) |
| ಶ್ರೀನಿವಾಸ | : | ಸ್ವಾತಂತ್ರ್ಯ ಹೋರಾಟಗಾರ ಮಂಜುನಾಥನಿಗೆ.. |
| ಜನರು | : | ಜಯವಾಗಲಿ.. |
| ಶ್ರೀನಿವಾಸ | : | ನೆಚ್ಚಿನ ನಾಯಕ ಮಂಜುನಾಥನಿಗೆ.. |
| ಜನರು | : | ಜಯವಾಗಲಿ.. |
| ಶ್ರೀನಿವಾಸ | : | ಪ್ರೀತಿಯ ಕವಿ ಮಂಜುನಾಥನಿಗೆ.. |
| ಜನರು | : | ಜಯವಾಗಲಿ..<br>(ಎಂದು ಹೊತ್ತು ತಂದು ವೇದಿಕೆಯ ಮೇಲೆ ಪದ್ಮಾಳ ಬಳಿ ತಂದು ಬಿಡುತ್ತಾರೆ. ಮಂಜುನಾಥ ತನ್ನ ಮಗಳನ್ನು ಅಕ್ಕರೆಯಿಂದ ಎತ್ತಿಕೊಂಡು, ಪದ್ಮಾಳನ್ನು ಅಪ್ಪಿಕೊಂಡು ನಿಲ್ಲುತ್ತಾನೆ ಚಿತ್ರದ ಟಿಪ್ಪಣಿಗಳು ಬರತೊಡುತ್ತವೆ) |

**ನಿರ್ದೇಶಕರ ಟಿಪ್ಪಣಿ:**

ಪುರಭವನದಲ್ಲಿ ನಡೆಯುತ್ತಿರುವ ಮೈಸೂರು ಮಲ್ಲಿಗೆ ಕವನ ಸಂಕಲನದ ಬಿಡುಗಡೆಯ ಸಮಾರಂಭವನ್ನು ಒಂದು ಹಾಡಿನ ಮೂಲಕ ಆರಂಭಿಸಲಾಗುತ್ತದೆ. ಆ ಹಾಡಿನ ಆಶಯವನ್ನು ಹೇಳುವ ಮೂಲಕ ಇಡೀ ಚಿತ್ರದ ಆಶಯವನ್ನು ಕೂಡ ಅದು ಹೇಳುತ್ತದೆ. ಇದು "ನಾವು ಭಾರತೀಯರು" ಎಂಬ ಕವನ ಸಂಕಲನದಿಂದ ಆಯ್ದು ಕವನಗೀತೆಯಾಗಿದೆ. ನರಸಿಂಹಸ್ವಾಮಿಯವರ ಬೇರೆ ಬೇರೆ ಕವನ ಸಂಕಲನಗಳಿಂದ ಕೂಡ ಕವನಗಳನ್ನು ತಗೆದುಕೊಂಡು ಒಟ್ಟಾರೆ ಈ ಚಿತ್ರದ ಆಶಯಗಳನ್ನಾಗಿಸಿಕೊಂಡು ಹೋಗಿದ್ದೇವೆ. ಇಡೀ ಹಾಡು ನಮ್ಮ ಅಂದಿನ ಕಾಲಮಾನದಲ್ಲಿ ಸಾತಂತ್ರ್ಯಾನಂತರದ ದಿನಗಳಲ್ಲಿದ್ದಂತಹ ಆಸೆ, ಆಶಯ, ಗುರಿ, ಕನಸು ಇವುಗಳೆಲ್ಲವನ್ನು ಸಾಂಕೇತಿಕವಾಗಿ ಹೇಳುತ್ತ ಅದರ ಮುಖಾಂತರ ನಮ್ಮ ಬದುಕು ಹೀಗಿರಬಹುದು ಎಂಬ ನಂಬಿಕೆಯೊಂದಿಗೆ ನಾವು ಇಂದು ಸ್ವಾತಂತ್ರ್ಯವನ್ನು ಅನುಭವಿಸುತ್ತಿದ್ದೇವೆ. ಅಂದಿನ ಎಲ್ಲ ಹುತಾತ್ಮರ ನೆನಪಿನ ಜೊತೆಯಲ್ಲೇ ನಮ್ಮ ಸ್ವಾತಂತ್ರ್ಯದ ಬುತ್ತಿಯನ್ನು ಇಂದು ನಾವು ಉಣ್ಣುತ್ತಿದ್ದೇವೆ. ಮಂಜುನಾಥನ ಮನಸ್ಥಿತಿಯನ್ನು ಗಮನಿಸಿದಾಗ ಇಡೀ ಹಾಡಿನ ಮಧ್ಯದಲ್ಲಿ ಬರುವ ಹಿಂದಿನ ತುಣುಕುಗಳು ಇಡೀ ಚಿತ್ರವನ್ನು ಮತ್ತೊಮ್ಮೆ ನೆನಪಿಗೆ ತರಿಸುತ್ತ, ಮಂಜುನಾಥನ ಪಯಣವನ್ನು ದಾಖಲಿಸುತ್ತ ಅದರ ಮುಖಾಂತರ ಆ ಭಾವಗಳ ಮೇಲಾಟವನ್ನು ಗುರುತಿಸುತ್ತ ಹೋಗುತ್ತದೆ. ನೆನಪಿನ ಕಾಣಿಕೆಯನ್ನು ಪಡೆಯಲು ಬರುವ ಮಂಜುನಾಥನ ಮಗಳು "ಭಾರತಿ"ಯ ಮುಖಾಂತರ ಮಂಜುನಾಥ ಮತ್ತೆ ತನ್ನ ಪದ್ಮಳನ್ನು ಪಡೆಯಲು ಮುಂದಾಗುತ್ತಾನೆ. ಆದರೆ ಗಲಾಟೆಯಲ್ಲಿ ಆತ ಎಲ್ಲೋ ಹಿಂದೆ ಬೀಳುತ್ತಾನೆ. ಆದರೆ ಅವನ ದನಿಯನ್ನು ಗುರುತಿಸಿದ ಪದ್ಮ ವೇದಿಕೆಗೆ ಬಂದು ಮಂಜುನಾಥನನ್ನು ಕರೆಯುತ್ತಾಳೆ. ಮಂಜುನಾಥ ತನ್ನೆರೆಡು ಸಾಲುಗಳನ್ನು ಹೇಳುವುದರ ಮುಖಾಂತರ ಆ ಸಾಲಿಗೆ ಉತ್ತರವಾಗಿ ಪದ್ಮ ಇನ್ನೆರೆಡು ಸಾಲುಗಳನ್ನು ಒಂದಾಗಿಸುತ್ತಾಳೆ. ಇಬ್ಬರು ಮತ್ತೆ ಒಂದಾಗುತ್ತಾರೆ. ಸ್ನೇಹಿತರು ಮತ್ತು ಅಪಾರ ಬಂಧುಬಳಗ ಮತ್ತು ಆತನ ಎಲ್ಲ ಅಭಿಮಾನಿಗಳು ಆನಂದಿಸುತ್ತಾರೆ. ಪದ್ಮ ಮಂಜುನಾಥ ಮಗಳು ಭಾರತಿಯೊಡನೆ ಒಂದಾಗುತ್ತಾರೆ. ಇಡೀ ಚಿತ್ರದ ಈ ಪಯಣ, ಈ ಯಾನ, ಕವನಗಳ ಜೊತೆಯಲ್ಲೇ ನಡೆಯುವುದರಿಂದ ಕವಿ ಹೃದಯ ಕಾವ್ಯ ಸಮಯವನ್ನು ಮತ್ತು ಕಾವ್ಯ ಸ್ಫೂರ್ತಿಯನ್ನು ಹೇಗೆ ಬಳಸಿಕೊಂಡಿದೆಯೊ ಅದನ್ನು ದೃಶ್ಯ ಸ್ಫೂರ್ತಿಯಾಗಿ, ದೃಶ್ಯ ಸಮಯವಾಗಿ ಕಟ್ಟಿಕೊಡುವ ನಿಟ್ಟಿನಲ್ಲಿ ಮೈಸೂರು ಮಲ್ಲಿಗೆ ಇಡೀ ಭಾರತೀಯ ಚಿತ್ರರಂಗದ ಇತಿಹಾಸದಲ್ಲಿ ಒಂದು ವಿಶಿಷ್ಟ ಪ್ರಯೋಗವಾಗಿ ದಾಖಲಾಗುತ್ತದೆ. ಅಲ್ಲದೆ ಅಂತಹ ಇನ್ನೊಂದು ಕೃತಿ ಭಾರತೀಯ ಚಲನಚಿತ್ರ ಇತಿಹಾಸದಲ್ಲಿ ಇಲ್ಲ, ಇದುವರೆಗೆ ಎನ್ನುವ ಹೆಮ್ಮೆಯನ್ನು ಕನ್ನಡ ಚಲನಚಿತ್ರ ರಂಗ ತನ್ನದಾಗಿಸಿಕೊಂಡಿದೆ. ಇದಕ್ಕೆ ಕಾರಣಕರ್ತರಾದ ಪ್ರತಿಯೊಬ್ಬ ತಂತ್ರಜ್ಞ ಹಾಗೂ ನಟ–ನಟಿಯರ ಸಮೂಹ ಹಾಗೂ ಒಂದು ಸಾಂಘಿಕ ಕನ್ನಡದ ಮನಸ್ಸು ಏನು ಕೆಲಸಮಾಡಿದೆಯೋ ಅದು ಮುಂದಿನ ಪೀಳಿಗೆಗೆ ಒಂದು ವಿದ್ಯಾಭ್ಯಾಸದಂತೆ, ಶಿಕ್ಷಣದ ವಿಷಯದಂತೆ ಕಂಡರೆ ನಮ್ಮ ಈ ಪ್ರಯತ್ನ ಸಾರ್ಥಕ.

## ಮುಕ್ತಾಯ



ಕೆ.ಎಸ್. ನರಸಿಂಹಸ್ವಾಮಿಯವರೊಂದಿಗೆ ಮೈಸೂರು ಮಲ್ಲಿಗೆ ಚಿತ್ರತಂಡ



ಮೈಸೂರು ಮಲ್ಲಿಗೆ ಚಿತ್ರದ ರಜತ ಮಹೋತ್ಸವ ಸಮಾರಂಭ





## ನಮ್ಮ ಪ್ರಕಟಣೆಗಳು

| | | |
|---|---|---|
| 1 ಸಮುದಾಯದ ಮೂರು ನಾಟಕಗಳು | : ಶಶಿಧರ್ ಭಾರಿಘಾಟ್ | : ನಾಟಕ |
| 2 ಸುತ್ತಿಕೊಂಡರೆ ಸರ್ಪ | : ಡಾ.ಹೆಚ್.ವಿ.ವೇಣುಗೋಪಾಲ್ | : ನಾಟಕ |
| 3 ನೀರು | : ಪ್ರೊ.ನಗರಗೆರೆ ರಮೇಶ್ | : ನಾಟಕ |
| 4 ದಿಶಾಂತರ | : ಡಿ.ಎಸ್.ಚೌಗಲೆ | : ನಾಟಕ |
| 5 ಬಾರಮ್ಮ ಭಾಗೀರತಿ | : ಡಾ.ಕೆ.ವೈ.ನಾರಾಯಣಸ್ವಾಮಿ | : ನಾಟಕ |
| 6 ಹೂಬಿಟ್ಟಮರದ ನೆರಳು | : ಡಾ.ಜೆ.ಶ್ರೀನಿವಾಸ ಮೂರ್ತಿ | : ಚಿಂತನಮಾಲಿಕೆ |
| 7 ಚಿಕ್ಕವೀರರಾಜೇಂದ್ರ | : ಶ್ರೀನಿವಾಸ ಜಿ. ಕಪ್ಪಣ್ಣ | : ನಾಟಕ |
| 8 ಎನ್ನ ಮನದಂಗಳ | : ಟಿ.ಲಕ್ಷ್ಮೀನಾರಾಯಣ್ | : ಕವನ ಸಂಕಲನ |
| 9 ಸಾಯುವನೇ ಚಿರಂಜೀವಿ | : ಶಶಿಧರ್ ಭಾರಿಘಾಟ್ | : ನಾಟಕ |
| 10 ಮನುಷ್ಯ ಯುದ್ಧದ ಬಣ್ಣಗಳು | : ಮಂಜುನಾಥ .ಎಸ್ | : ಕವನ ಸಂಕಲನ |
| 11 ಯುಯುತ್ಸು | : ಹರಿಕೃಷ್ಣ | : ನಾಟಕ |
| 12 ಕಥೆಗೆ ಸಾವಿಲ್ಲ | : ಬಿ.ಎಂ.ಗಿರಿರಾಜ್ | : ಕಾದಂಬರಿ |
| 13 ಮಾವೋ | : ಮಂಗಳೂರು ವಿಜಯ | : ಚಿಂತನ ಸಾಹಿತ್ಯ |
| 14 ಕಸಿಮಡಗಿದ ಕಣ್ಣು | : ಲಕ್ಷ್ಮೀಪತಿ ಕೋಲಾರ | : ಲೇಖನಗಳು |
| 15 ಭರತವಾಕ್ಯ | : ಡಾ.ನಾ.ದಾಮೋದರ ಶೆಟ್ಟಿ | : ನಾಟಕ |
| 16 ತಟ್ಟೆಯೊಳಗಿನ ಜೀವ | : ಡಾ.ನಾ.ದಾಮೋದರ ಶೆಟ್ಟಿ | : ಕವನ ಸಂಕಲನ |
| 17 ಹುಟ್ಟು ಸಾವಿನ ಸತ್ಯ | : ಕೆ.ಶ್ರೀಕಂಠ ಪುತ್ತೂರು | : ಕಥಾಸಂಕಲನ |
| 18 ಅನ್ನದಾತ | : ಪ್ರೊ.ಎಸ್.ಜಿ.ಸಿದ್ಧರಾಮಯ್ಯ | : ನಾಟಕ |
| 19 ಯಡೆಸಾಲು | : ಪ್ರೊ.ಎಸ್.ಜಿ.ಸಿದ್ಧರಾಮಯ್ಯ | : ವಿಮರ್ಶಾ ಲೇಖನ |
| 20 ಚಂದ್ರಗಿರಿ(ಸಾರಾ ಅಭಿನಂದನ ಗ್ರಂಥ) | : ಸಂ–ಡಾ. ಸಬಿಹಾ | : ವಿಮರ್ಶಾ ಲೇಖನ |
| 21 ಕಲ್ಯಾಣದ ಕೊನೆ ದಿನಗಳು | : ಪ್ರೊ.ಕ.ವೆಂ.ರಾಜಗೋಪಾಲ | : ನಾಟಕ |
| 22 ಜನರ ನಡುವೆ | : ಸಂ:ಹೆಚ್.ವಿ.ವೇಣುಗೋಪಾಲ್ | : ನಾಟಕ ಸಂಕಲನ |
| 23 ಕೈವಾರ ನಾರಾಯಣ | : ಡಾ.ಕೆ.ವೈ.ನಾರಾಯಣಸ್ವಾಮಿ | : ನಾಟಕ |
| 24 ತುಂಗ ಮಡಿಲ ಜನಪದ | : ಡಾ. ಗೀತಾ ಬಿ.ವಿ. | : ಜನಪದ ಲೇಖನಗಳು |
| 25 ಮೋಡ ನೆರಳ ನಿರಾಳ | : ಕಾ ತ ಚಿಕ್ಕಣ್ಣ | : ಕಥಾ ಸಂಕಲನ |
| 26 ಗಳಿಗೆಬಟ್ಟಲ ತಿರುವುಗಳಲ್ಲಿ | : ರೂಪ ಹಾಸನ್ | : ಕವನ ಸಂಕಲನ |
| 27 ಆಯಾತಪ್ಪಿದ ರಥ | : ಕೆ.ಶ್ರೀಕಂಠ ಪುತ್ತೂರು | : ಕಥಾ ಸಂಕಲನ |
| 28 ಒಂದೊಂದು ಮುಖದ ಒಂದೊಂದು ಮುಖ | : ಡಾ.ನಾ.ದಾಮೋದರ್ ಶೆಟ್ಟಿ | : ವ್ಯಕ್ತಿ ಚಿತ್ರ |
| 29 ನೆಲದ ದನಿ | : ರವಿ.ರಾ.ಅಂಚನ್ | : ಲೇಖನಗಳು |
| 30 ನೀರೊಳಗಣ ಬೆಳಕು | : ಹೆಚ್.ದಂಡಪ್ಪ | : ವಿಮರ್ಶಾ ಲೇಖನ |

| | | | |
|---|---|---|---|
| 31 | ವಿವೇಕ ಚಿಂತನೆ | : ರವಿ.ರಾ.ಅಂಚನ್ | : ಲೇಖನಗಳು |
| 32 | ಹೋರಾಟದ 2 ನಾಟಕಗಳು | : ಟಿ.ಲಕ್ಷ್ಮಿನಾರಾಯಣ | : ನಾಟಕ ಸಂಕಲನ |
| 33 | ಥಾಯ್‌ಲ್ಯಾಂಡ್ ಎಂಬ ಮುಗುಳ್ನಗ | : ಡಾ.ಸಿ.ಜಿ.ಲಕ್ಷ್ಮೀಪತಿ | : ಪ್ರವಾಸ ಕಥನ |
| 34 | ಬೆಳಕಿನ ಹಣತೆ | : ಹುಲಿಕಟ್ಟಿ ಚನ್ನಬಸಪ್ಪ | : ಕವನ ಸಂಕಲನ |
| 35 | Mayandal | : Ravi R.Anchan | : Story |
| 36 | Kalutti & Kalkuda | : Dr.K.Savitri | : Story |
| 37 | ಶಿವತೀರ್ಥನ್ ಸಮಗ್ರ ಗ್ರಂಥ | : ಕೆ.ನ.ಶಿವತೀರ್ಥನ್ | : ಲೇಖನಗಳು |
| 38 | ಮಾಯಂದಾಲ್ | : ರವಿ.ರಾ.ಅಂಚನ್ | : ಕಥಾ ಸಂಕಲನ |
| 39 | ಕಲ್ಲುರ್ಟಿ – ಕಲ್ಕುಡ | : ಕೆ.ಸಾವಿತ್ರಿ | : ಕಥಾ ಸಂಕಲನ |
| 40 | ಸಾಹಿತ್ಯಕ್ಕಿಂತ ಸಮಾಜ ದೊಡ್ಡದು | : ದಿನೇಶ್ ಅಮಿನ್ ಮಟ್ಟು | : ಅಧ್ಯಕ್ಷ ಭಾಷಣ |
| 41 | ಹನಗವಾಡಿ | : ಪ್ರೊ.ಜಿ.ಬಿ.ಶಿವರಾಜು | : ಲೇಖನಗಳು |
| 42 | ಭೂಮಿ ಜೀವ | : ಎಚ್.ಸಿ.ಚಿದಾನಂದ ಮೂರ್ತಿ | : ನಾಟಕ |
| 43 | ಮುತ್ತು ಬಂದಿದೆ ಕೇರಿಗೆ | : ಡಾ.ಎನ್.ಸುರೇಶ್ ನಾಗಲಮಡಿಕೆ | : ಸಾಂಸ್ಕೃತಿಕ ಅಧ್ಯಯನ |
| 44 | ಕಂದನಿಂದ ಕಿಶೋರನವರೆಗು | : ಡಾ.ಸೋಮಶೇಖರ್ | : ವಿಜ್ಞಾನ ಬರಹ |
| 45 | ಕಾಡು ಕಣಿವೆಯ ಹಾಡು | : ಜಿ.ಪಿ.ಬಸರಾಜು | : ಪ್ರವಾಸ ಕಥನ |
| 46 | ಕುಂತಿಮನಸು | : ಎನ್.ಜೆ.ರವಿಶೇಖರ್ | : ಕವನ ಸಂಕಲನ |
| 47 | ಅಂತರಂಗದ ಕಥೆಗಳು | : ಕೆ.ಶ್ರೀಕಂಠ ಪುತ್ತೂರು | : ಕಥೆಗಳು |
| 48 | ಸಾವಿರದ ಪದಗಳು | : ಪ್ರೊ.ಯು.ನಾರಾಯಣ ಶರ್ಮಾ | : ಪದಗಳ ಸಂಗ್ರಹ |
| 49 | ಜಂಗ್ಲಿ ಜಗ್ಗಿಯ ಅವಾಂತರಗಳು | : ಬಿ.ಎಸ್.ಪರಮೇಶ್ವರ (ಪಮ್ಮಿ) | : ಹಾಸ್ಯ ಲೇಖನ |
| 50 | ಉತ್ತರಾರ್ಧ | : ಜಿ.ಹೆಚ್.ನಾಯಕ | : ವಿಮರ್ಶಾ ಲೇಖನ |
| 51 | ತುಳುವರ ಯುಗಯಾತ್ರೆ | : ರವಿ.ರಾ.ಅಂಚನ್ | : ಲೇಖನಗಳು |
| 52 | ಸಮಗ್ರ ನಾಯಕತ್ವ | : ಡಾ.ಡ್ಯಾನಿಯಲ್ ಫರ್ನಾಂಡಿಸ್.ಎಸ್.ಜೆ | : ಕಥಾನಕ |
| 53 | ಹಾದಿಬಳ್ಳಿ | : ಜಿ.ದಕ್ಷಿಣಮೂರ್ತಿ | : ಕವನಸಂಕಲನ |
| 54 | ಅಲ್ಲಾರಾಮ | : ಹೆಚ್.ಸಿ.ಚಿದಾನಂದಮೂರ್ತಿ | : ನಾಟಕ |
| 55 | ಮೌಲ್ಯ ಮಾರ್ಗ | : ಜಿ.ಹೆಚ್.ನಾಯಕ | : ಸಂಪುಟ 1–5 |
| 60 | ಮೌನ ಮುರಿದಾಗ | : ಕೆ.ಸಾವಿತ್ರಿ | : ಲೇಖನಗಳು |
| 61 | ಒಂದಿಷ್ಟು ಹಸಿ ಮಣ್ಣು | : ರೂಪ ಹಾಸನ | : ಕವನಸಂಕಲನಗಳು |
| 62 | ಮನಸಿನಂಗಳ | : ಡಾ.ಪ್ರಮೀಳಾ ಮಾಧವ್ | : ಕಥಾಸಂಕಲನ |
| 63 | ಅಲೆ ಅಲೆದಾಟ | : ಜಿ.ಪಿ.ಬಸರಾಜು | : ಸಂಪುಟ 1–2 |
| 65 | ನಾದಾಲೋಕ | : ಡಾ.ಎಂ.ಮೋಹನ ಆಳ್ವ | : ಅಭಿನಂದನಾಗ್ರಂಥ |
| 66 | ನಾಟಕದ ಅಮೃತ ವಿಮರ್ಶೆಯ ಗರುಡ | : ಡಾ.ನಾ.ದಾಮೋದರ ಶೆಟ್ಟಿ | : ರಂಗ ವಿಮರ್ಶೆ |
| 67 | ಕಣ್ಣ ಕನವರಿಕೆ | : ರವಿ ಜಡಿಗೇನಹಳ್ಳಿ | : ಕವನ ಸಂಕಲನ |
| 68 | ಬದುಕಿಗೆ ಗೋಡೆಗಳಿಲ್ಲ | : ಹೆಚ್.ಎಂ.ಮುಜೀಬ್ ಅಹಮದ್ | : ಕವನ ಸಂಕಲನ |
| 69 | ನೇಗಿಲು | : ಪಿ.ಎನ್.ನಾಗೇಂದ್ರ ಶಿರಸಿ | : ಲೇಖನಗಳು |
| 70 | ಏಕಾದಶಾನನ ಹಾಗೂ ಸರದಾರನ ಸ್ವಗತ | : ಶಶಿರಾಜ್ ರಾವ್ ಕಾವೂರ್ | : ನಾಟಕಗಳು |
| 71 | ದಿಶಾಂತರ | : ಡಿ.ಎಸ್.ಚೌಗಲೆ | : ನಾಟಕ |
| 72 | ನಿಮಗೊಂದು ಕನಸಿದೆಯಾ | : ಶೈಲಜಾವಿಜಯಕುಮಾರ್ | : ಕಥೆಗಳು |
| 73 | ಗೆರೆಗಳು | : ಡಾ.ಸಬಿಹಾ ಭೂಮೀಗೌಡ | : ಕಥಾ ಸಂಕಲನ |
| 74 | ಅರಿವೆಂಬ ಅಲ್ಲಮ | : ಯು.ಎನ್.ಸಂಗನಾಳಮಠ | : ಲೇಖನಗಳು |
| 75 | ಕನ್ನಡ ದಲಿತ ಸಾಹಿತ್ಯ | : ಡಿ.ಎಸ್.ಚೌಗಲೆ | : ನಾಟಕ |
| 76 | ಆಚಾರ–ವಿಚಾರ | : ಪಿ.ಎನ್.ನಾಗೇಂದ್ರ ಶಿರಸಿ | : ಲೇಖನಗಳು |
| 77 | ಸಖೀಗೀತ | : ಜ್ಯೋತಿ ಬೊಮ್ಮನಹಳ್ಳಿ | : ಲೇಖನಗಳು |
| 78 | ಡಿ.ಎಸ್.ಚೌಗಲೆ ಅವರ ಏಳು ನಾಟಕಗಳು | : ಡಿ.ಎಸ್.ಚೌಗಲೆ | : ನಾಟಕಗಳು |
| 79 | ಚದುರಂಗ ಮತ್ತು ಕತ್ತೆ | : ಡಿ.ಎಸ್.ಚೌಗಲೆ | : ನಾಟಕ |
| 80 | ಶುದ್ಧವಂಶ | : ಡಿ.ಎಸ್.ಚೌಗಲೆ | : ನಾಟಕ |
| 81 | ಮೂರು ಹೆಜ್ಜೆ ಮೂರು ಲೋಕ | : ಡಾ.ನಾ.ದಾಮೋದರ ಶೆಟ್ಟಿ | : ನಾಟಕ |
| 82 | ಕಸಿಮಡಗಿದ ಕಣ್ಣು | : ಲಕ್ಷ್ಮೀಪತಿ ಕೋಲಾರ | : ಲೇಖನಗಳು |
| 83 | ಎಪ್ಪತ್ತೇಳು ಲೀಲೆಗಳು | : ಡಾ.ವೆಂಕಟೇಶ್ ಇಂದ್ವಾಡಿ | : ಕವನಗಳು |
| 84 | ಕಾಮಾಕ್ಷಿ ಸಂಸಾರನೌಕೆ | : ಲಕ್ಷ್ಮಣ ಕೊಡಸೆ | : ಕಾದಂಬರಿ |
| 85 | ಅಂದಮಾನಿನ ಎಳೆಯನು ಹಿಡಿದು | : ಡಾ.ಲತಾ ಗುತ್ತಿ | : ಪ್ರವಾಸ ಕಥನ |
| 86 | ಅಲೆಮಾರಿ ನಾಗತಿಹಳ್ಳಿ ಚಂದ್ರಶೇಖರ | : ಚಿನ್ನೇನಹಳ್ಳಿ ಸ್ವಾಮಿ | : ಪ್ರ.ಕೃ.ಅಧ್ಯಯನ |
| 87 | ಇಸ್ಕಿಲಾರ್ | : ಚಂದ್ರಕಾಂತ ಪೋಕಳೆ | : ಕಥೆಗಳು |
| 88 | ಕೀಲಿಕೈ ಮತ್ತು ಇತರ ಪ್ರಬಂಧಗಳು | : ಸಬಿಹಾ ಭೂಮೀಗೌಡ | : ಪ್ರಬಂಧಗಳು |
| 89 | ಹಾಡುಗಬ್ಬ | : ಎಸ್.ಜಿ. ಸಿದ್ಧರಾಮಯ್ಯ | : ಕವನಗಳು |
| 90 | ಜಾತಿ | : ವಿಜಯಮೋಹನ್ | : ಕಥೆಗಳು |
| 91 | ಹುತ್ತವ ಕಟ್ಟಿ ಅಡಗಿತ್ತು ನೋವು | : ಕೇಶವ ಕುಡ್ಲ | : ಕಥಾ ಸಂಕಲನ |
| 92 | ಗತಿ (ಇಂಗ್ಲಿಷ್) | : ಬಿ.ಟಿ. ಲಲಿತಾನಾಯಕ್ | : ಕಥಾ ಸಂಕಲನ |
| 93 | ದೇಹ–ಮೈಮನಗಳ ಸಂಬಂಧ | : ಎಚ್.ಎಲ್.ಪುಷ್ಪ | : ಲೇಖನಗಳು |
| 94 | ಹೊಸ ಹೆಜ್ಜೆ | : ಶೈಲಜವಿಜಯಮೋಹನ್ | : ಕಥಾ ಸಂಕಲನ |
| 95 | ನೀಲಿಗ್ಯಾನ | : ಹುಲಿಕುಂಟೆ ಮೂರ್ತಿ | : ಪದ್ಯಗಳು |
| 96 | ತಲ್ಲಣ | : ವೆಂಕೋಬ ರಾವ್ | : ಲೇಖನಗಳು |
| 98 | ಗಾಂಧಿ ಹೋದರು | : ಚಂದ್ರಶೇಖರ್ ತಾಳ್ಯ | : ಲೇಖನಗಳು |
| 99 | Women in Transition | : Shailajavijayakumar | : Stories |
| 100 | ಹಾಸುಹೊಕ್ಕು | :ನಾಡೋಜ ಪ್ರೊ.ಕೆ.ಜಿ.ನಾಗರಾಜಪ್ಪ | : ಸಾಧನೆ–ಸಂಭ್ರಮ |
| 101 | ಅಲ್ಲಿಗೆ ಹೋದರು ಇಲ್ಲಿಯ ಚಿಂತೆ | : ಎಸ್.ಜಿ. ಸಿದ್ಧರಾಮಯ್ಯ | : ಪ್ರವಾಸ ಕಥನ |
| 102 | ವ್ಯೂಹ | : ಶ್ರೀನಾಥ್ ವಸಿಷ್ಠ | : ಪತ್ತೇದಾರಿ ನಾಟಕ |
| 103 | ಬೆವರ ದನಿಗಳು..., | : ಬಿ.ಆರ್. ಭಾಸ್ಕರ್ ಪ್ರಸಾದ್<br>ನಾಗರಾಜ್ ಹೆತ್ತೂರ್<br>ಅಪ್ಪಗೆರೆ ಡಿ.ಟಿ.ಲಂಕೇಶ್ | : ಕವನಸಂಕಲನ |

| | | |
|---|---|---|
| 104 ಭಿತ್ತಿಚಿತ್ರ | : ರಮ್ಯವರ್ಷಿಣಿ | : ಕವನಸಂಕಲನ |
| 105 ಬಸವಣ್ಣನ ಪುರಾತ ದಾಸಿಮಯ್ಯ | : ಗೊರೂರು ಸೋಮಶೇಖರ | : ಲೇಖನಗಳು |
| 106 ಬಯಲು ಸೀಮೆ ಬೆಂಕಿ ಬೆಳಕು | : ಬಾ.ಮ. ಬಸವರಾಜಯ್ಯ | : ಕಥಾ ಸಂಕಲನ |
| 107 ಭ್ರಮರ ಮತ್ತು ಕೀಟ | : ಎಚ್.ದಂಡಪ್ಪ | : ಲೇಖನಗಳು |
| 108 ವಸಂತಸ್ಮೃತಿ | : ಡಿ.ಆರ್.ನಾಗರಾಜ್ | : ಕವನಸಂಕಲನ |
| 109 ಶೂಲಿಹಬ್ಬ | : ಉಷಾ ಎಂ. | : ನಾಟಕ |
| 110 ವಚನಗಳ ಪ್ರಾಯೋಗಿಕ ವಿಮರ್ಶೆ | : ಡಾ.ಬಸವರಾಜ ಸಬರದ | : ವಿಮರ್ಶೆ |
| 111 ಜನುಮದ ಜೋಡಿ | : ಟಿ.ಎಸ್.ನಾಗಾಭರಣ | : ಚಿತ್ರಕಥೆ |
| 112 ಮೈಸೂರು ಮಲ್ಲಿಗೆ | : ಟಿ.ಎಸ್.ನಾಗಾಭರಣ | : ಚಿತ್ರಕಥೆ |
| 113 ಮಹಿಳೆ, ಚಳುವಳಿ ಮತ್ತು ರಾಜಕಾರಣ | : ಡಾ.ಕೆ.ಷರೀಫಾ | : ವಿಮರ್ಶೆ |

## ನಮ್ಮಲ್ಲಿ ದೊರೆಯುವ ಇತರೆ ಕೃತಿಗಳು

| | | |
|---|---|---|
| 1 ಶರಣ ಸಂಕುಲಕ್ಕೆ ಅಕ್ಕ | : ಸಂಗನಾಳಮಠ ಯು.ಎನ್. | : ಲೇಖನಗಳು |
| 2 ನೆಲಗಂಪು | : ಪೇತ್ರಿ ವಿಶ್ವನಾಥ ಆರ್. ಶೆಟ್ಟಿ | : ಕವನಗಳು |
| 3 ಶರಂತಿ ಮೌನಿ ಮಾತೆ | : ಶಕುಂತಲ ಆರ್. ಪ್ರಭು | : ಆತ್ಮಕಥನ 4 |
| ಸಾಮಾಜಿಕ ಕ್ರಾಂತಿ ಜ್ಯೋತಿ ಮಹಾತ್ಮ ಜ್ಯೋತಿಬಾ ಫುಲೆ | : ರವಿ. ರಾ. ಅಂಚನ್ | : ಲೇಖನಗಳ |
| 5 ಬೆವರಿನ ಮುಖಗಳು | : ಪಿ.ಎನ್. ನಾಗೇಂದ್ರ, ಶಿರಸಿ | : ಕೃಷಿ ಲೇಖನಗಳು |
| 6 ಬದುಕು ಬಿನ್ನಾಣ | : ಪಿ.ಎನ್. ನಾಗೇಂದ್ರ, ಶಿರಸಿ | : ಲೇಖನಗಳು |
| 7 ಗಾಂಧಿ ವಿಚಾರಣೆ | : ಕ.ವೆಂ. ರಾಜಗೋಪಾಲ | : ನಾಟಕ |
| 8 ಭಗತ್ ಸಿಂಗ್ ವಿಚಾರಣೆ | : ಕ.ವೆಂ. ರಾಜಗೋಪಾಲ | : ನಾಟಕ |
| 9 ಉಪನಿಷತ್ತುಗಳ ಸಾರೋದ್ಧಾರ ಹಾಗೂ ಸಾಧನ ಮಾರ್ಗ | ಸ್ವಾಮಿ ಯೋಗೇಶ್ವರಾನಂದ : ಸರಸ್ವತಿ | : ಲೇಖನಗಳು |
| 10 ಗಾದೆಗಳ ಅಂತರಂಗ | : ಸಿ.ಕೆ.ಪರಶುರಾಮಯ್ಯ | : ಗಾದೆಗಳ ವಿಶ್ಲೇಷಣೆ |
| 11 ಸಂತ ತ್ಯಾಗರಾಜರ ಆಧ್ಯಾತ್ಮಿಕ ಪರಂಪರೆ | : ಎಂ.ವಿ. ವಸಂತಕುಮಾರಿ | : ಸಂಪ್ರಬಂಧ |